ಸಂಚಿಕೆ 16 । ಆಗಸ್ಟ್ 2023
ತ್ರೈಮಾಸಿಕ / ಕನ್ನಡ ಆವೃತ್ತಿ / ಬೆಂಗಳೂರು

Azim Premji University

ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ

# ಲರ್ನಿಂಗ್ ಕರ್ವ್

ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಒಂದು ಪ್ರಕಟಣೆ



## ಬೋಧನ ವಿಧಾನದ ಅನುಸಂಧಾನವಾಗಿ ಕಥೆ ಹೇಳುವಿಕೆ

## ಸಂಪಾದಕ ಮಂಡಳಿ

**ಪ್ರೇಮಾ ರಘುನಾಥ್,** ಮುಖ್ಯ ಸಂಪಾದಕರು
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125
prema.raghunath@azimpremjifoundation.org

**ಶೆಫಾಲಿ ತ್ರಿಪಾಠಿ ಮೆಹ್ತಾ,** ಸಹ ಸಂಪಾದಕರು
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125
shefali.mehta@azimpremjifoundation.org

**ಚಂದ್ರಿಕಾ ಮುರಳೀಧರ್**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125
chandrika@azimpremjifoundation.org

**ನಿಮ್ರತ್ ಖಂಡ್‌ಪುರ್**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125
nimrat.kaur@azimpremjifoundation.org

**ಶೋಭಾ ಲೋಕನಾಥನ್ ಕವೂರಿ**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125
shobha.kavoori@azimpremjifoundation.org

**ಸಲಹೆಗಾರರು**
ಹೃದಯಕಾಂತ್ ದಿವಾನ್
ಸಚಿನ್ ಮುಲೆ
ಎಸ್.ಗಿರಿಧರ್
ಸುಧೀಶ್ ವೆಂಕಟೇಶ್
ಉಮಾಶಂಕರ್ ಪೆರಿಯೋಡಿ

---

**ಕನ್ನಡ ಸಂಚಿಕೆಯ ಸಂಪಾದಕರು**
ಎಸ್.ವಿ. ಮಂಜುನಾಥ್
ಮಧುಕರ ಪುಟ್ಟಿ
ರಾಘವೇಂದ್ರ ಹೆರ್ಳೆ

**ಪ್ರಕಾಶನ ಸಂಯೋಜಕರು**
ಶಾಂತ ಕೆ
ಶಹನಾಜ್ ಬೇಗಂ

**ಸಂಪಾದಕೀಯ ಕಾರ್ಯಾಲಯ**
ಸಂಪಾದಕರು, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು – 562125
ದೂರವಾಣಿ: 080 6614 4900
ಇಮೇಲ್: publications@apu.edu.in
ವೆಬ್‌ಸೈಟ್: www.azimpremjiuniversity.edu.in

**ಮುಖಪುಟ ಛಾಯಾಚಿತ್ರಗ್ರಾಹಕರು**
HITEC ಟೀಮ್, ಏಕಲವ್ಯ, ಹೋಶಂಗಾಬಾದ್

**ವಿನ್ಯಾಸ**
ಬ್ಯಾನಿಯನ್ ಟ್ರೀ
+91 9845864765

**ಕನ್ನಡ ಆವೃತ್ತಿ ವಿನ್ಯಾಸ**
ಫ್ಲವರ್‌ಗ್ರಾಫಿಕ್ ಡಿಸೈನ್ ಸ್ಟುಡಿಯೋ
080 26643097 / 9880288378
info@flowergrafic.com


ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಲರ್ನಿಂಗ್ ಕರ್ವ್' ಎಂಬುದು ಶಿಕ್ಷಣವನ್ನು ಕುರಿತಾದ ಪ್ರಕಟಣೆಯಾಗಿದೆ. ಇದು ಸಾರ್ವಕಾಲಿಕ ಮಹತ್ವ ಮತ್ತು ಮೌಲ್ಯವುಳ್ಳ ಸಾಂದರ್ಭಿಕ ಹಾಗೂ ನಿರ್ದಿಷ್ಟ ವಿಷಯಾಧಾರಿತ ಚರ್ಚಾ ವಿಷಯಗಳನ್ನು ಶಿಕ್ಷಕರು, ಶಿಕ್ಷಕ ಶಿಕ್ಷಕರು, ಶಾಲಾ ಮುಖ್ಯಸ್ಥರು, ಶಿಕ್ಷಣ ಕಾರ್ಯಕರ್ತರು, ಪೋಷಕರು ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ತಲುಪಿಸುವ ಮಹತ್ತರ ಆಶಯವನ್ನು ಹೊಂದಿದೆ. ಇದು ವಿಭಿನ್ನ ಅಭಿಪ್ರಾಯಗಳನ್ನು ಮತ್ತು ದೃಷ್ಟಿಕೋನಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ಒದಗಿಸುವುದಲ್ಲದೆ ಹೊಸ ಹೊಸ ಮತ್ತು ತಜ್ಞ ವಿಚಾರಧಾರೆಗಳನ್ನು, ಆಲೋಚನೆಯನ್ನು ಪ್ರಚೋದಿಸುವ ದೃಷ್ಟಿಕೋನಗಳನ್ನು ಹಾಗೂ ನವೀನ ಬೋಧನ ವಿಧಾನಗಳ ಕಥನಗಳನ್ನು ಹಂಚಿಕೊಳ್ಳಲು ಉತ್ತೇಜಿಸುತ್ತದೆ. ಶೈಕ್ಷಣಿಕ ರಂಗದ ಈ ವಿಚಾರಮಂಥನದಲ್ಲಿ ಶೈಕ್ಷಣಿಕ ಜ್ಞಾನ ಮತ್ತು ಪ್ರಾಯೋಗಿಕ ಅನುಭವಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಯತ್ನ ನಮ್ಮದಾಗಿದೆ.

ಈ ಸಂಚಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಆಯಾ ಲೇಖಕರದ್ದೇ ಆಗಿರುತ್ತವೆ ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧಿಕೃತ ಕಾರ್ಯನೀತಿ ಅಥವಾ ನಿಲುವನ್ನು ಪ್ರತಿಬಿಂಬಿಸುವುದಿಲ್ಲ.

# ಸಂಪಾದಕರ ಮಾತು



ಒಳ್ಳೆಯ ಕಥೆಯೆಂದರೆ ಎಲ್ಲರಿಗೂ ಇಷ್ಟ.

ಬಾಲ್ಯದಲ್ಲಿ ನಮ್ಮ (ಹೆಚ್ಚಾಗಿ) ಅಜ್ಜಿಯರಿಂದ ಕಥೆಗಳನ್ನು ಕೇಳುವುದರಲ್ಲಿನ ಖುಷಿ ನಮಗೆಲ್ಲರಿಗೂ ತಿಳಿದಿದೆ. ಹಾಗಾದರೆ, ಪ್ರತಿ ಪೀಳಿಗೆಗೂ ಈ ರೀತಿಯ ಆಕರ್ಷಣೆಯನ್ನು ಹೊಂದಿರುವ ಕಥೆಗಳಲ್ಲಿ ಅಂತಹುದೇನಿದೆ? ನಾವು ಕೆಲವು ಕಥೆಗಳನ್ನು ಪದೇಪದೇ ಕೇಳಬಯಸುತ್ತೇವೆ ಮತ್ತು ರೋಮಾಂಚನ–ಗೊಳ್ಳುತ್ತೇವೆ, ಉತ್ಸುಕರಾಗುತ್ತೇವೆ, ದುಃಖಿತರಾಗುತ್ತೇವೆ ಹಾಗೂ ಸಂತೋಷಪಡುತ್ತೇವೆ. ಕಥೆ ಏನಾಗಬಹುದಿತ್ತು, ನಾವು ಅಂತ್ಯವನ್ನು ಹೇಗೆ ಬದಲಾಯಿಸುತ್ತಿದ್ದೆವು ಅಥವಾ ಪಾತ್ರಗಳು ಏನು ಮಾಡಿದವು ಅಥವಾ ಹೇಳಿದವು ಮತ್ತು ನಾವು ಒಪ್ಪಿದ್ದೇವೆಯೇ ಅಥವಾ ಇಲ್ಲವೇ ಎಂಬುದರ ಕುರಿತು ನಾವು ಯೋಚಿಸಬಯಸುತ್ತೇವೆ.ಮಕ್ಕಳೂ ವಯಸ್ಕರಂತೆಯೇ ಅವೇ ಕಾರಣಗಳಿಗಾಗಿ ಕಥೆಗಳನ್ನು ಇಷ್ಟಪಡುತ್ತಾರೆ. ಆದರೆ ಮಕ್ಕಳೊಂದಿಗೆ ಮಾಡುವ ಎಲ್ಲದರಲ್ಲೂ ಇರುವಂತೆ ಕಥೆ ಹೇಳುವುದರಲ್ಲಿ ಹೆಚ್ಚಿನ ಬದ್ಧತೆ, ತೊಡಗುವಿಕೆ ಮತ್ತು ಭಾಗವಹಿಸುವಿಕೆ ಇರುತ್ತದೆ. ಮಕ್ಕಳು ಕಥೆಯನ್ನು ಕೇಳುವಾಗ, ಅವರು ಸಂಪೂರ್ಣ ತಲ್ಲೀನರಾಗಿ ಕೇಳುತ್ತಾರೆ, ಕೆಲವೊಮ್ಮೆ ಕಥೆ ಹೇಳುವವರು ಯಾವುದೇ ವಿವರವನ್ನು ಬಿಟ್ಟುಹೋದರೆ ಅಥವಾ ಬದಲಾಯಿಸಿದರೆ ಕಥೆಗಾರರನ್ನು ಎಡವಿಸುತ್ತಾರೆ! ಅದೇ ಕಥೆಯನ್ನು ಮತ್ತೊಮ್ಮೆ ಹೇಳಿದರೆ, 'ಆದರೆ ನೀವು ಕಳೆದ ಬಾರಿ ಹೀಗೆ ಹೇಳಿದ್ದೀರಿ...' ಎನ್ನುತ್ತಾರೆ. ಇಂದು ಶಾಲೆಗಳಲ್ಲಿ, ಅದೂ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ, ಆರಂಭದಲ್ಲಿ ಪುಟ್ಟ ಮಕ್ಕಳಿಗಾಗಿ ಜಗತ್ತನ್ನು ಸಂಘಟಿಸುವ ಸಾಧನವಾಗಿ ಕಥೆ ಹೇಳುವುದು ಬಹಳ ಜನಪ್ರಿಯ ಮಾಧ್ಯಮವಾಗಿದೆ. ಉದಾಹರಣೆಗೆ ಬಾಯಾರಿದ ಕಾಗೆಯ ಕಥೆಯನ್ನೇ ತೆಗೆದುಕೊಳ್ಳಿ. ಕಾಗೆಗಳು ಪ್ರಪಂಚದ ಪ್ರತಿಯೊಂದು ಭಾಗದಲ್ಲೂ ಎಷ್ಟು ಚಿರಪರಿಚಿತವೆಂದರೆ, ಅವಕ್ಕೆ ಯಾವುದೇ ವರ್ಣನೆಯ ಅಗತ್ಯವಿಲ್ಲ. ಆದ್ದರಿಂದ, ನಿರೂಪಕರು ನೇರವಾಗಿ ಕಥೆಯೊಳಕ್ಕೆ ಧುಮುಕಬಹುದು. ಆರಂಭದಲ್ಲಿ, ಕಾಗೆಯು ಯಾವುದೇ ಕಥೆಯ ಮುಖ್ಯ ಪಾತ್ರ ಹೇಗಾಗಲು ಸಾಧ್ಯ ಎಂದು ಮಕ್ಕಳು ಆಶ್ಚರ್ಯ ಪಡುತ್ತಾರೆ. ಆದರೆ ಬಾಯಾರಿದ ಕಾಗೆ? ಪಕ್ಷಿಗಳಿಗೆ ಬಾಯಾರಿಕೆಯಾಗಿದೆ ಎಂದು ಯಾರಿಗೂ ತಿಳಿದಿರಲಿಲ್ಲ. ಈ ರೋಚಕ ಸಂಗತಿಯಿಂದ ಸಾಕಷ್ಟು ಮಾತುಗಳು ಹುಟ್ಟಿಕೊಳ್ಳುತ್ತವೆ– ಅವು ತುಂಬಾ ಹಾರುತ್ತವೆ; ಅವಕ್ಕೂ ನಮ್ಮಂತೆ ಬಾಯಾರಿಕೆಯಾಗುತ್ತಿರಬೇಕು.

ಈ ಕಾಗೆ ಯೋಚಿಸಬಲ್ಲದು– ನೀರಿನ ಮಟ್ಟವು ಕಡಿಮೆಯಾಗಿದ್ದು, ಭಾರವಾದ ವಸ್ತುಗಳನ್ನು ವ್ಯವಸ್ಥಿತವಾಗಿ ಹೂಜಿಯೊಳಗೆ ಸೇರಿಸಿದರೆ ಅದನ್ನು ಹೆಚ್ಚಿಸಬಹುದು: ಕಾಗೆ ಕಲ್ಲುಗಳನ್ನು ಹುಡುಕುತ್ತದೆ ಮತ್ತು ಅವುಗಳನ್ನು ಒಂದೊಂದಾಗಿ ಹೂಜಿಯೊಳಕ್ಕೆ ಹಾಕುತ್ತದೆ. ಇಡೀ ಪ್ರಕ್ರಿಯೆಯಲ್ಲಿ ಸಾಕಷ್ಟು ಸಣ್ಣ ಪಾಠಗಳಿವೆ, ಆದರೆ ಪ್ರಾಯಶಃ ಪ್ರಮುಖವಾದವುಗಳೆಂದರೆ ತಾಳಿದವರು ಬಾಳಿಯಾರು ಮತ್ತು ಎಲ್ಲಾ ಜೀವಿಗಳು ನಮ್ಮಂತೆಯೇ ಇವೆ, ನಾವು ನಮ್ಮ ಸಂಪನ್ಮೂಲಗಳನ್ನು ಹಂಚಿಕೊಳ್ಳಬೇಕು ಮತ್ತು (ಬಹುಶಃ ನಂತರ) ನಾವು ನಮ್ಮ ಗ್ರಹವನ್ನು ಅವುಗಳೊಂದಿಗೆ ಹಂಚಿಕೊಳ್ಳಬೇಕು. ಒಬ್ಬ ಬೋಧಕ/ಕಥೆಗಾರ ಚರ್ಚೆ ಮತ್ತು ಭಾಗವಹಿಸುವಿಕೆಯ ಮೂಲಕ ಇವನ್ನೆಲ್ಲ ಹೊರತರಬಹುದು. ಇದು ನಮ್ಮನ್ನು ನಮ್ಮ ವಿಷಯಕ್ಕೆ ತರುತ್ತದೆ – ಶಿಕ್ಷಣಶಾಸ್ತ್ರದ ಒಂದು ವಿಧಾನವಾಗಿ ಕಥಾನಿರೂಪಣೆ. ಕಥೆಗಳು ಮತ್ತು ಕಥೆ ಹೇಳುವಿಕೆಯು ತರಗತಿಯಿಂದ ಹೊರಗಿರಿಸಲಾಗದಷ್ಟು ಮೌಲ್ಯಯುತವಾದ ಸಾಧನವಾಗಿರುವುದರಿಂದ ಇದನ್ನು ಆಯ್ಕೆ ಮಾಡಲಾಗಿದೆ. ಎಷ್ಟೊಂದು ವಿಚಾರಗಳನ್ನು ಕಲಿಸಲಾಗುತ್ತದೆ ಹಾಗೂ ಕಲಿಯಲಾಗುತ್ತದೆ ಮತ್ತು ಒಂದೇ ರೀತಿಯ ಅನುಭವಗಳಿಗೆ ಎಷ್ಟೊಂದು ವ್ಯಾಖ್ಯಾನಗಳಿವೆಯೆಂದರೆ, ಜೀವನದುದ್ದಕ್ಕೂ ಆಗುವ ಕಲಿಕೆಗೆ ಅಗತ್ಯವಿರುವ ಪ್ರತಿಭೆಗಳಾದ ಆಲಿಸುವ ಮತ್ತು ಒಳನೋಟದ ಕೌಶಲಗಳೂ ಸೇರಿದಂತೆ ಇತರ ವಿಷಯಗಳನ್ನು ಕಲಿಸಲು ಇರುವ ಬಹುಮುಖ ಮಾಧ್ಯಮಗಳಲ್ಲಿ ಇದೂ ಒಂದಾಗಿದೆ. ನಮ್ಮ ಈ ಸಂಚಿಕೆಯಲ್ಲಿ ಗಣಿತ, ಭೌತಶಾಸ್ತ್ರ, ಸಾಮಾಜಿಕ ಅಧ್ಯಯನ ಮತ್ತು ಎಲ್ಲೆಡೆ ಶಾಲೆಗಳಲ್ಲಿ, ಗ್ರಾಮೀಣ ಅಥವಾ ನಗರದಲ್ಲಿ, ಒಳಗೊಳಿಸುವಿಕೆಯಂತಹ ವೈವಿಧ್ಯಮಯ ವಿಷಯಗಳಲ್ಲಿ ಉತ್ತಮ ಯಶಸ್ಸಿಗೆ ಕಥೆ ಹೇಳುವಿಕೆಯನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ತೋರಿಸುವ ಲೇಖನಗಳು


ಇವೆ. ಒಂದೇ ಕಥೆಯನ್ನು ಕಲಿಕೆಯ ಸಾಧನವಾಗಿ ಹೇಗೆ ಬಳಸಬಹುದೆಂದು ಮೂರು ಲೇಖನಗಳು ನಮಗೆ ತೋರಿಸಿದರೆ, ಇತರ ಲೇಖನಗಳು ಕೆಲವು ಪ್ರಮುಖವಾದ ತಿಳುವಳಿಕೆಯನ್ನು ತಲುಪಲು ಚರ್ಚೆಯನ್ನು ಹೇಗೆ ಕೌಶಲ್ಯದಿಂದ ಬಳಸಬಹುದು ಎಂಬುದನ್ನು ವಿವರಿಸುತ್ತವೆ, ಉದಾಹರಣೆಗೆ, ಗಣಿತದಲ್ಲಿ – ಮುತ್ತಜ್ಜಿಯ ವಯಸ್ಸನ್ನು ಕಂಡುಹಿಡಿಯಲು ಪ್ರಯತ್ನಿಸುವುದು ಒಂದು ಪ್ರಕರಣವಾಗಿದೆ. ಭಾರತೀಯ ಭಾಷೆಗಳಲ್ಲಿ ಕಥೆಗಳ ಸಂಪತ್ತು ಇದ್ದು, ನಾವು ಅವುಗಳನ್ನು ಬಳಸಲು ಮಾತ್ರ ಕಾಯುತ್ತಿವೆ.

ಇವೆಲ್ಲವೂ ಸೇರಿ ವಯಸ್ಸಿನ ಗುಂಪುಗಳು ಮತ್ತು ಹಿನ್ನೆಲೆಗಳನ್ನು ದಾಟಿ ವಿನಿಮಯದ ಹಾದಿಯನ್ನು ತೆರೆಯುತ್ತದೆ ಮತ್ತು ಕಥೆಗಳ ಮಾಯಾ ಜಗತ್ತಿನಲ್ಲಿ ಸಾಮಾನ್ಯ ನೆಲೆಯನ್ನು ಕಂಡುಕೊಳ್ಳುತ್ತದೆ. ನೀವು ಈ ಹೂರಣವನ್ನು ಆನಂದಿಸುವಿರಿ ಮತ್ತು ನಿಮ್ಮ ತರಗತಿಯಲ್ಲಿ ಇದು ಉಪಯುಕ್ತವಾಗುತ್ತವೆ ಎಂದು ನಾವು ಭಾವಿಸುತ್ತೇವೆ.

ನಮ್ಮ ಓದುಗರಿಗೆ ಒಂದು ಅಂತಿಮ ಮಾತು, ಸಂಚಿಕೆಯ ನೋಟವು ಬದಲಾವಣೆಗೆ ಒಳಗಾಗಿದೆ ಎಂದು ನೀವು ಗಮನಿಸಿರಬಹುದು. ಇದು ಬಹಳಷ್ಟು ಯೋಚಿಸಿದ ನಂತರ ತೆಗೆದುಕೊಂಡ ನಿರ್ಧಾರ. ಆದಾಗ್ಯೂ, ತೊಡಗಿಸಿಕೊಳ್ಳಲು ನಮ್ಮಲ್ಲಿರುವ ಬದ್ಧತೆ ಬದಲಾಗದೇ ಉಳಿದಿರುವಂತೆಯೇ ವಿಷಯದ ಗುಣಮಟ್ಟವು ಸಹ ಹಾಗೆಯೇ ಇದೆ. ಎಂದಿನಂತೆ, ಕೆಳಗೆ ನೀಡಿರುವ ಇಮೇಲ್ ಐಡಿಗೆ ನಿಮ್ಮ ಪ್ರತಿಕ್ರಿಯೆಯನ್ನು ನಾವು ಸ್ವಾಗತಿಸುತ್ತೇವೆ.

**ಪ್ರೇಮಾ ರಘುನಾಥ್**
ಪ್ರಧಾನ ಸಂಪಾದಕರು

prema.raghunath@azimpremjifoundation.org




# ಪರಿವಿಡಿ


ಕಥೆಗಳು ಮಕ್ಕಳ ಪೋಷಣೆಗೆ ಹೇಗೆ ಸಹಾಯಕ? 03
ವ್ಯಾಲೆಂಟೀನಾ ತ್ರಿವೇದಿ

ಕಥೆಗಳ ಮೂಲಕ ಅರ್ಥಪೂರ್ಣ ಸಂವಾದ 03
ಧ್ರುವ ದೇಸಾಯಿ

ಕಲೆಯ ಮೂಲಕ ಕಥೆ ಹೇಳುವುದು 03
ಅಭಿಲಾಷಾ ಅವಸ್ಥಿ

ಬೋಧನೆಯ ವಿಧಾನವಾಗಿ ಕಥೆ ಹೇಳುವುದು 03
ಗಾಯತ್ರಿ

ಕಥೆಯ ಮೂಲಕ ಮೌಲ್ಯಗಳನ್ನು ಬಿತ್ತುವುದು | ನನ್ನ ಅನುಭವಗಳು 03
ಇಮಾನ್ ಶರ್ಮಾ

ಕಥೆ ಹೇಳುವುದು: ತರಗತಿಯ ಅನುಭವ 03
ಇಶಾ ಬಡ್ಕಸ್

ಗಣಿತ ತರಗತಿಯೊಳಗೆ ಕಥೆಗಳು ಬಂದಾಗ 03
ಮಾಲಾ ಕುಮಾರ್

ತರಗತಿಯೊಳಗೆ ಕಥೆ ಹೇಳುವ ಚಟುವಟಿಕೆಗಳು 03
ನಬನಿತಾ ದೇಶಮುಖ್


## ಧ್ವನಿಗಳು


ಧಾನಿಯ ಮೂವರು ಮಿತ್ರರು | ತರಗತಿಯಲ್ಲಿ ಕಥೆ 03
ಅನುಜಾ ಹಲ್ದಾರ್

ಲೈಟ್ನಿಂಗ್ (ಬಿಗ್ಬುಕ್) | ತರಗತಿಯಲ್ಲಿ ಕಥೆ 03
ಕಮಲೇಶ್ ಚಂದ್ರ ಜೋಶಿ

# ಪರಿವಿಡಿ


ಪಠ್ಯಕ್ರಮದ ವಿಷಯವನ್ನು ಕಥೆಗಳೊಂದಿಗೆ ಬೆಸೆಯುವುದು | ನನ್ನ ಅನುಭವಗಳು 03
ಮಧುಮಿತಾ ಆರ್.

ಕಥೆಗಳ ಮೂಲಕ ಕಲಿಯುವುದು 03
ಪದ್ಮಾ ಬಿ.ಎಂ.

ಕಥೆಗಳು ಸಂಬಂಧಗಳನ್ನು ಸೃಷ್ಟಿಸುತ್ತವೆ | ನನ್ನ ಅನುಭವಗಳು 03
ರಜನಿ ದ್ವಿವೇದಿ

ಕಥೆಗಳ ಮೂಲಕ ಗಣಿತದ ಪರಿಕಲ್ಪನೆಗಳನ್ನು ಕಲಿಸುವುದು 03
ರಂಗನಾಥ್

ಬಕೆಟ್ಟಿನಲ್ಲಿ ಸಮುದ್ರ | ತರಗತಿಯಲ್ಲಿನ ಕಥೆ 03
ಶ್ವೇತಾ ವಿಶ್ವಕರ್ಮ

ವಿಜ್ಞಾನ ತರಗತಿಯಲ್ಲಿ ಜನಪ್ರಿಯ ಕಥೆಗಳು 03
ವೆಂಕಟ ನಾಗ ವಿನಯ ಸುರಂ

ಉತ್ತಮ ಕತೆ ಹೇಳುವವರಾಗುವುದು ಹೇಗೆ? 03
ರಾಜೇಶ್ ಉತ್ಸಾಹಿ

ಭಾಷಾ ಕಲಿಕೆಯಲ್ಲಿ ಕಥೆಗಳ ಶಕ್ತಿ 03
ಶರೂನ್ ಸನ್ನಿ

ಕಥಾವನ | ಕಥೆಗಳು ಮತ್ತು ಕಥೆ ಹೇಳುವಿಕೆಗೆ ಒಂದು ಅವಕಾಶದ ನಿರ್ಮಾಣ 03
ಸೋನಿಕಾ ಪರಾಶರ್

ಕತೆಗಳ ಮೂಲಕ ವಿಜ್ಞಾನವನ್ನು ಮಾನವೀಯಗೊಳಿಸುವುದು 03
ವೀಣಾ ಪ್ರಸಾದ್

# ಕಥೆಗಳು ಮಕ್ಕಳ ಪೋಷಣೆಗೆ ಹೇಗೆ ಸಹಾಯಕ?

ವ್ಯಾಲೆಂಟೀನಾ ತ್ರಿವೇದಿ

ಜಗತ್ತು ಮನುಷ್ಯನ ಊಹೆಗೂ ನಿಲುಕದಂತೆ ನಾಗಾಲೋಟದಲ್ಲಿ ಬದಲಾಗುತ್ತಿದೆ. ಇಂತಹ ಕಾಲಘಟ್ಟದಲ್ಲಿ ಖುಷಿ ಹಾಗೂ ಯಶಸ್ವೀ ಜೀವನವನ್ನು ನಡೆಸಬೇಕಾದರೆ ನಮಗೆ ಸರಿಯಾದ ಸಾಧನದ ಅಗತ್ಯವಿದೆ ಎಂಬುದು ಸತ್ಯ. ಕಥೆಗಳೊಂದಿಗೆ ತೊಡಗಿಕೊಳ್ಳುವ ಮೂಲಕ ಇಂತಹ ಸಾಧನಗಳನ್ನು ಪಡೆದುಕೊಳ್ಳಲು ಸಾಧ್ಯವಿದೆ ಎನ್ನುವ ಅಚ್ಚರಿಯ ಸಂಗತಿ ಅನೇಕರಿಗೆ ತಿಳಿದಿರುವುದಿಲ್ಲ. ಕಥೆಗಳನ್ನು ಹೇಳುವ ಪರಿಪಾಠ ಎಲ್ಲ ಸಂಸ್ಕೃತಿಗಳಲ್ಲಿಯೂ ಇದೆ. ಅದು ಕೇವಲ ಜ್ಞಾನವನ್ನು ಮಾತ್ರವಲ್ಲ ಜಾಣ್ಮೆಯನ್ನು ಕೂಡ ಹಂಚುವ ಪ್ರಾಥಮಿಕ ವಿಧಾನ. ದುರದೃಷ್ಟವಶಾತ್ ಅಕಾಡೆಮಿಕ್ ಕೋರ್ಸ್‌ಗಳಿಗೆ ಸಂಬಂಧಿಸಿದ ವಿಷಯದ ಹೊರೆ ಹೆಚ್ಚಿರುವುದರಿಂದ ಅದು ಕಲಿಕೆಯನ್ನು ಪ್ರೋತ್ಸಾಹಿಸುವ ಬಹುಮುಖ್ಯ ಸಾಧನ ಎಂಬುದು ದೂರವಾಗುತ್ತಿದೆ. ಸಂಕೀರ್ಣವಾದ ಪಠ್ಯಕ್ರಮವು ಶಾಲೆಗಳು ಹೆಚ್ಚು ಬೋಧನೆಯ ಕಡೆಗೆ ಗಮನ ಹರಿಸುವಂತೆ ಮಾಡಿರುವುದರಿಂದ ಕಥೆಗಳೊಂದಿಗೆ ಕಳೆದುಕೊಂಡಿರುವ ಕಲಿಕೆಯ ಅಂತರ ಹೆಚ್ಚುತ್ತ ಹೋಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯಲ್ಲಿ ಕಥೆ ಹೇಳುವುದನ್ನು ಕೂಡ ಒಂದು ಸಾಧನವಾಗಿ ಪ್ರಸ್ತಾಪ ಮಾಡಿರುವುದರಿಂದ ಅದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿದೆ. " ಕಲಿಕೆ ಯಾವತ್ತೂ ಸಮಗ್ರವಾಗಿ, ಪರಿಪೂರ್ಣವಾಗಿ, ಆನಂದದಾಯಕವಾಗಿ ಮತ್ತು ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ರೀತಿಯಲ್ಲಿ ಇರಬೇಕು. ಶಿಕ್ಷಣದ ಗುರಿ ಜ್ಞಾನಗ್ರಹಣದ ಬಲವರ್ಧನೆ ಮಾತ್ರವಲ್ಲ ನಮ್ಮ ನಡೆವಳಿಕೆಯ ಸುಧಾರಣೆ ಕೂಡ ಹೌದು. ಜೊತೆಗೆ 21ನೇ ಶತಮಾನದ ಪ್ರಮುಖ ಕೌಶಲಗಳೊಂದಿಗೆ ಸಮಗ್ರ ಹಾಗೂ ಪರಿಪೂರ್ಣವಾದ ವ್ಯಕ್ತಿಗಳನ್ನು ಸಿದ್ಧಪಡಿಸುವುದು ಕೂಡಾ ಶಿಕ್ಷಣದ ಉದ್ದೇಶವಾಗಿದೆ" ಎಂದು ಈ ನೀತಿಯಲ್ಲಿ ತಿಳಿಸಲಾಗಿದೆ. ಇದು ಬಹಳ ದೊಡ್ಡ ಕೆಲಸವೆಂದು ಕಾಣುವುದೇ? ನಿಜಕ್ಕೂ ಇಲ್ಲ, ನೀವು ಕಥೆಗಳೊಂದಿಗೆ ನಿರಂತರ ತೊಡಗಿಸಿಕೊಂಡರೆ ಇದು ದೊಡ್ಡ ಕಾರ್ಯಭಾರವೆಂದು ಅನಿಸುವುದೇ ಇಲ್ಲ. ಇದರಲ್ಲಿ ಕಿರು- ಮಧ್ಯಮ- ಮತ್ತು ದೀರ್ಘಾವಧಿಯ ಪ್ರಯೋಜನಗಳನ್ನು ಹೊಂದಿದೆ. ಅಲ್ಪಾವಧಿಯ ಪ್ರಯೋಜನ ಕೂಡ ಮಧ್ಯಮ ಹಾಗೂ ಸುದೀರ್ಘಾವಧಿ ಪ್ರಯೋಜನಕ್ಕೆ ಬಾಗಿಲು ತೆರೆಯುವಂತೆ ಮಾಡುತ್ತದೆ!

## ಕಥೆ ಹೇಳುವುದು ಪರಸ್ಪರ ಸಂಬಂಧವನ್ನು ಬೆಸೆಯುತ್ತದೆ

ಹೀಗೆ ನಾವು ಕಥೆಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಜನಪದ ಕಥೆಗಳು ಈಗಲೂ ಪ್ರಸ್ತುತ ಎಂಬುದನ್ನು ಮರೆಯಬಾರದು. ಜನರು ಕಥೆಗಳ ಹಿಂದಿನ ಮೌಲ್ಯ ಏನು ಎಂಬುದನ್ನು ಅರ್ಥ ಮಾಡಿಕೊಂಡಿದ್ದರು. ಜನಪದ ಕಥೆಗಳು, ಐತಿಹ್ಯಗಳು, ಪುರಾಣ ಕಥೆಗಳ ಮಾಧ್ಯಮದ ಮೂಲಕವೇ ನಮ್ಮಲ್ಲಿರುವ ಜ್ಞಾನವು ತಲೆಮಾರುಗಳಿಂದ ತಲೆಮಾರಿಗೆ ವರ್ಗಾವಣೆಯಾಗುತ್ತಿದೆ. ಇಂತಹ ಒಂದು ಮಾಧ್ಯಮದ ಮೂಲಕ, ನಾವು ಆ ಸಂಸ್ಕೃತಿಗೆ ಸೇರಿದವರೆನ್ನುವ ಭಾವ, ಇನ್ನೊಬ್ಬರ ಸಂಸ್ಕೃತಿಯ ಮಹತ್ವವನ್ನು ಹಂಚಿಕೊಳ್ಳುವ, ಅವರಲ್ಲಿರುವ ಭಿನ್ನತೆ ಮತ್ತು ಸಮಾನತೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿತ್ತು.

ಅವರಿರುವ ಪರಿಸರಕ್ಕೆ ಹೆಚ್ಚು ಸಾಮೀಪ್ಯವನ್ನು ಹೊಂದಿರುವ ಕಥೆಗಳನ್ನು ಹೇಳಿದರೆ ಅದರಿಂದ ಮಕ್ಕಳ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆಗಳು ಹೆಚ್ಚು. ಜನಪದ ಕಥೆಗಳು ಸಾಮಾನ್ಯವಾಗಿ ತಮ್ಮ ಪ್ರದೇಶದ, ಅಲ್ಲಿನ ಜನರ, ಸಂಪ್ರದಾಯಗಳು, ನಂಬಿಕೆಗಳು ಹಾಗೂ ಸಂವೇದನೆಗಳನ್ನು ಬಿಂಬಿಸುತ್ತವೆ. ತಮ್ಮದೇ ನೆಲದ ಅಥವಾ ತಮ್ಮದೇ ಪರಿಸರದ ಜನಪದ ಕಥೆಗಳನ್ನು ಕೇಳುತ್ತ ಹೋದ ಹಾಗೆ ಅದು ತಮಗೇ ಸಂಬಂಧಿಸಿದ್ದೇನೋ ಎಂಬ ಭಾವನೆ ಗಟ್ಟಿಯಾಗುತ್ತ ಹೋಗುತ್ತದೆ ಹಾಗೂ ಒಬ್ಬರ ಅಸ್ತಿತ್ವವನ್ನು ಕೂಡ ಬಲಪಡಿಸುತ್ತದೆ. ಒಬ್ಬ ವ್ಯಕ್ತಿ ಎಷ್ಟೇ ಎತ್ತರಕ್ಕೆ ಏರಿದರೂ ಕೂಡ ಆತ ಗಾಳಿಯ ಅಧೀನಕ್ಕೆ ಸಿಕ್ಕಿ ಹಗ್ಗ ತುಂಡಾದ ಗಾಳಿಪಟದಂತೆ ಅಲ್ಲ ಎಂಬ ಖಾತರಿಯನ್ನು ಒದಗಿಸುತ್ತದೆ. ಇನ್ನೊಂದು ಪ್ರದೇಶದ ಅಥವಾ ಇನ್ನೊಂದು ಸಮುದಾಯದ ಜನಪದ ಕಥೆಗಳನ್ನು ಕೇಳುವುದು ಅಥವಾ ಓದುವುದು ಇನ್ನೊಂದು ಸಂಸ್ಕೃತಿಗೆ ಕಿಂಡಿಯಿದ್ದಂತೆ. ಇನ್ನೊಂದು ಪ್ರದೇಶದ ಸಂಪ್ರದಾಯಗಳು ಹಾಗೂ ನಂಬಿಕೆಗಳನ್ನು ವಿವರಿಸುವುದರಿಂದ ಜಗತ್ತಿನ ನಾನಾ ಭಾಗಗಳಲ್ಲಿ ಇರುವ ಜನರು ಒಂದೇ ರೀತಿ ಇರುವುದಿಲ್ಲ ಎಂಬ ಮೂಲಭೂತ ಸಂಗತಿಯನ್ನು ಬೋಧಿಸುತ್ತದೆ. ಹಾಗಾಗಿ ನಾವು ಮನುಷ್ಯರು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಲಿಸಿದರೆ ಪರಸ್ಪರ ಭಿನ್ನ ಸಂಸ್ಕೃತಿ – ಸಂಪ್ರದಾಯವನ್ನು ಹೊಂದಿದ್ದೇವೆ ಎಂಬುದನ್ನು ಮಗು ಕಲಿಯುತ್ತದೆ. ಕಥೆಗಳನ್ನು ಓದುವುದು ಮತ್ತು ಕೇಳುವುದರಿಂದ ವೈವಿಧ್ಯ ಎನ್ನುವುದು ಸಹಜವಾದ ಪ್ರಕ್ರಿಯೆ ಎಂದು ಸಹಿಸಿಕೊಳ್ಳುವುದು ಮಾತ್ರವಲ್ಲದೆ, ಗೌರವಿಸಲು ಹಾಗೂ ಖುಷಿಪಡಲು ದಾರಿ ಮಾಡುತ್ತದೆ. ಹೀಗೆ ಕಥೆಗಳಲ್ಲಿ ತೊಡಗಿಕೊಳ್ಳುವುದರಿಂದ 'ವಿಭಿನ್ನತೆ' ಯನ್ನು ಮೀರುವ 'ಸಹಿಷ್ಣುತೆ'ಯನ್ನು ತರುತ್ತದೆ.

### ಬುದ್ಧಿವಂತಿಕೆ ಮತ್ತು ಸಾಮಾನ್ಯ ಪ್ರಜ್ಞೆಯ ಕಥೆಗಳು:

ಭಾರತದಲ್ಲಿ ಪಕ್ಷಿಗಳು, ಪ್ರಾಣಿ, ಮರಗಳು, ಪರ್ವತಗಳು, ರಾಜರು, ಸನ್ಯಾಸಿಗಳು, ಮಹಿಳೆಯರು ಮತ್ತು ಪುರುಷರ ಕುರಿತು ಸಾವಿರ ಸಾವಿರ ಕಥೆಗಳ ಸಾಗರವೇ ಇದೆ. ಇವೆಲ್ಲವೂ ಮನುಷ್ಯನ ಜಾಣ್ಮೆಯನ್ನು ಹಂಚುವ ಪ್ರಯತ್ನ ಮಾಡುತ್ತವೆ. ಹೀಗೆ ಅಪಾರ ಬುದ್ಧಿವಂತಿಕೆಯನ್ನು ಒಳಗೊಂಡ ಸಣ್ಣ ಹಾಗೂ ಸರಳ ಜನಪದ ಕಥೆಗಳ ಕೆಲವು ಉದಾಹರಣೆಗಳನ್ನು ಇಲ್ಲಿ ನೀಡಲಾಗಿದೆ. ಜನಪದ ಕಥೆಗಳು ಎಲ್ಲ ಕಾಲಕ್ಕೂ ಪ್ರಸ್ತುತ ಎಂಬುದನ್ನು ಇವು ಸಾಬೀತುಪಡಿಸುತ್ತವೆ:

#### ಮೂರ್ಖ ರಾಜ

ರಾಜ ತನ್ನ ಅರಮನೆಯ ಉದ್ಯಾನವನದಲ್ಲಿ ಸುತ್ತಾಡುತ್ತಿದ್ದಾಗ ಚೆಂದದ ಹಕ್ಕಿಯೊಂದನ್ನು ನೋಡಿದ. ತಕ್ಷಣ ಅದನ್ನು ಆತ ಹಿಡಿದುಕೊಂಡ. ತನ್ನನ್ನು ಬಿಟ್ಟುಬಿಡುವಂತೆ ಆ ಹಕ್ಕಿ ಪರಿಪರಿಯಾಗಿ ಬೇಡಿಕೊಂಡಿತು. ಆದರೂ ಬಿಡಲಿಲ್ಲ. ಆಗ ರಾಜನಿಗೆ ತನ್ನನ್ನು ಬಿಟ್ಟರೆ ಮೂರು ಮುತ್ತಿನಂತಹ ಮಾತುಗಳನ್ನು ಹೇಳುವುದಾಗಿ ಆ ಪಕ್ಷಿ ತಿಳಿಸಿತು. ರಾಜ ಅದಕ್ಕೆ ಒಪ್ಪಿದಾಗ ಈ ಕೆಳಗಿನ ಮೂರು ಮುತ್ತಿನಂತಹ ಮಾತುಗಳನ್ನು ಹೇಳಿತು:

1. ಆಗಿ ಹೋಗಿರುವ ಘಟನೆಗೆ ಯಾವತ್ತೂ ಮರುಗದಿರು.
2. ನಿನಗೆ ಸಿಗದೆ ಇರುವುದಕ್ಕೆ ಯಾವತ್ತೂ ಹಂಬಲಿಸದಿರು
3. ಯಾವುದು ಅಸಾಧ್ಯವೋ ಅದನ್ನು ಎಂದೂ ನಂಬಬೇಡ.

ಈ ಮೂರು ಮುತ್ತಿನಂತಹ ಮಾತುಗಳನ್ನು ಕೇಳಿದ ಬಳಿಕ ಅವು ತುಂಬಾ ಚೆನ್ನಾಗಿವೆ ಎಂದು ಹೇಳಿ ಹಕ್ಕಿಯನ್ನು ಬಂಧನದಿಂದ ಮುಕ್ತಗೊಳಿಸಿದ. ರಾಜನ ಕೈಗೆ ಸಿಗಲಾರದಷ್ಟು ದೂರ ಹಾರಿಹೋದ ಹಕ್ಕಿಯು ಗಹಗಹಿಸಿ ನಗತೊಡಗಿತು.

"ಭಾರೀ ಸುಲಭದಲ್ಲಿ ನಾನು ಬಂಧಮುಕ್ತನಾದೆ" ಎಂದು ಹೇಳಿದ ಅದು ಮತ್ತೆ ಮುಂದುವರಿದು ಹೇಳಿತು: 'ನನ್ನ ಹೊಟ್ಟೆಯಲ್ಲಿ ನಿನ್ನ ಮುಷ್ಟಿಯಷ್ಟು ಗಾತ್ರದ ವಜ್ರವಿದೆ' ಎಂದಿತು.

ತಕ್ಷಣ ತನ್ನ ಕೈಯಿಂದ ಹಾರಿಹೋದ ಪಕ್ಷಿಗಾಗಿ ಪರಿತಪಿಸುತ್ತ, ತನ್ನ ಬಳಿ ಬಂದರೆ ನಿನಗೆ ವೈಭೋಗದಿಂದ ಕೂಡಿದ ಜೀವನವನ್ನು ನೀಡುವುದಾಗಿ ಭರವಸೆ ಕೊಟ್ಟ.

ರಾಜನನ್ನು ಹಂಗಿಸುವಂತೆ ನೋಡಿದ ಪಕ್ಷಿಯು, "ಅಯ್ಯೋ ಮೂರ್ಖ ರಾಜನೇ, ನಾನು ನಿನಗೆ ಈಗಷ್ಟೇ ಹೇಳಿದ ಮೂರು ಮುತ್ತಿನಂತಹ ಮಾತುಗಳನ್ನು ಮರೆತುಬಿಟ್ಟೆಯಾ! ನನ್ನನ್ನು ಕಳೆದುಕೊಂಡ ನೀನು ಈಗ ಪಶ್ಚಾತ್ತಾಪಪಡುತ್ತಿರುವೆ. ನಾನು ನಿನ್ನ ಕೈಗೆ ಎಟುಕದೇ ಇರುವಷ್ಟು ದೂರ ಹೋದ ಬಳಿಕವೂ ನನ್ನನ್ನು ಪಡೆಯಲು ಬಯಸುತ್ತಿರುವೆ. ನನ್ನಂತಹ ಪುಟ್ಟ ಹಕ್ಕಿ ನಿನ್ನ ಮುಷ್ಟಿ ಗಾತ್ರದ ವಜ್ರವನ್ನು ನುಂಗಲು ಸಾಧ್ಯವೇ ಮತ್ತು ನುಂಗಿಯೂ ಹೇಗೆ ಬದುಕಿರಲು ಸಾಧ್ಯ?" ಎಂದು ಹೇಳುತ್ತ ದೂರ ಹಾರಿಹೋಯಿತು.

### ಈ ಕಥೆಯಲ್ಲಿ ಬರುವ ಕೆಲವು ವಿಚಾರಗಳನ್ನು ಗಮನಿಸೋಣ:

- ಸ್ವಾತಂತ್ರ್ಯದ ಬೆಲೆ.
- ಅಪಾಯದ ಹೊತ್ತಿನಲ್ಲೂ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಳ್ಳದೆ ಚತುರತೆ ಮತ್ತು ಬುದ್ಧಿವಂತಿಕೆಯನ್ನು ಉಪಯೋಗಿಸುವುದು.
- ಬುದ್ಧಿವಂತಿಕೆ ಎನ್ನುವುದು ಕೇವಲ ಗಾತ್ರ, ಶಕ್ತಿ ಅಥವಾ ಸಂಪತ್ತಿಗೆ ಸಂಬಂಧಿಸಿದ್ದಲ್ಲ.
- ಅಸ್ತಿತ್ವದಲ್ಲೇ ಇಲ್ಲದ ವಜ್ರವನ್ನು ಪ್ರಸ್ತಾಪ ಮಾಡುವ ಮೂಲಕ, ದೊಡ್ಡ ವಜ್ರವು ರಾಜನನ್ನು ಇನ್ನಷ್ಟು ಶ್ರೀಮಂತನನ್ನಾಗಿ ಮಾಡಬಹುದೇ ಅಥವಾ ಈ ಮುತ್ತಿನಂತಹ ಮಾತುಗಳನ್ನು ಅಳವಡಿಸಿಕೊಳ್ಳುವುದರಿಂದ ಶ್ರೀಮಂತನಾಗುತ್ತಾನೆಯೇ? ಎಂದು ಅಚ್ಚರಿಪಡುವಂತೆ ಮಾಡುತ್ತದೆ.

ಇಲ್ಲಿ ಇನ್ನೂ ಕೆಲವು ಅಂಶಗಳನ್ನು ಗಮನಿಸಬಹುದು; ಪ್ರಾಣಿಗಳಿಗೆ ನೀಡುವ ಹಿಂಸೆ, ಪ್ರಕೃತಿಗೆ ಕೊಡಬೇಕಾದ ಗೌರವ ಮತ್ತು ಅಧಿಕಾರ ಶಕ್ತಿಯ ಸಮೀಕರಣಗಳು. ಒಂದೇ ಒಂದು ಕಥೆಯಿಂದ ಅನೇಕ ರೀತಿಯ ಕಲಿಕೆಯ ಎಳೆಗಳು ನಮಗೆ

ಸಿಗುತ್ತವೆ ಎಂಬುದಕ್ಕೆ ಇದು ತಕ್ಕ ಉದಾಹರಣೆ. ಇದು ಕೇವಲ ಒಂದು ಪುಟ್ಟ ಹಕ್ಕಿಯ ಕಿರುಗಥೆ! ಇಂತಹ ಒಂದು ಸಣ್ಣ ತುಣುಕಿನಿಂದ ಅತ್ಯಂತ ಮೌಲ್ಯಯುತವಾದ ಕಲಿಕೆಯನ್ನು ಬೇರೆ ಇನ್ನಾವುದೇ ಮೂಲದಿಂದ ಕಲಿಯಲು ಸಾಧ್ಯವೆಂದು ನಿಮಗೆ ಅನ್ನಿಸುತ್ತದೆಯೇ?!

ಮಕ್ಕಳು ತಮ್ಮ ಸುತ್ತಲಿನ ಪ್ರಪಂಚದಲ್ಲಿ ಇರುವ ಇಂತಹ ಗುಣಗಳನ್ನು ಗುರುತಿಸುವುದಕ್ಕೂ ಮೊದಲು ಕಥೆಗಳಲ್ಲಿರುವ ಒಳ್ಳೆಯತನ, ಹಾಸ್ಯ, ಬುದ್ಧಿವಂತಿಕೆ, ಧೈರ್ಯ ಮತ್ತು ಗುಣಗಳನ್ನು ಶ್ಲಾಘಿಸಲು ಶುರುಮಾಡುತ್ತಾರೆ. ಹಾಗಾಗಿ ಇಂತಹ ಕಥೆಗಳು ಮಕ್ಕಳ ಬದುಕಿನಲ್ಲಿ ಮೌಲ್ಯಗಳನ್ನು ಬಿತ್ತಬಲ್ಲವು ಮತ್ತು ಉತ್ತಮ ಮೌಲ್ಯದ ಗಟ್ಟಿ ತಳಪಾಯವನ್ನು ನಿರ್ಮಿಸಬಲ್ಲವು. ಕಳೆದ ಕೆಲವು ವರ್ಷಗಳ ಅವಧಿಯಲ್ಲಿ ಕೋವಿಡ್‌-19 ನಿಭಾಯಿಸುತ್ತ ಹೋದ ಹಾಗೆ ಸ್ಥಿತಿಸ್ಥಾಪಕತ್ವದ ಮೌಲ್ಯ ಏನು ಎಂಬುದು ಅರಿವಾಗಿದೆ. ಇಂತಹ ಒಂದು ಕಲಿಕೆಯನ್ನು ನಾವು ಪಠ್ಯಪುಸ್ತಕದಿಂದ ಪಡೆದುಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಚೇತರಿಸಿಕೊಳ್ಳುವುದು ಹೇಗೆ ಎಂಬುದನ್ನು ಕಥೆಗಳಲ್ಲಿನ ಪಾತ್ರಗಳ ರೂಪದಲ್ಲಿ ತಿಳಿಸುವುದು ಹೆಚ್ಚು ಪರಿಣಾಮಕಾರಿ. ಅಂತಹ ಗುಣಗಳನ್ನು ಸಹಜ ವಿಧಾನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ.

## ಆಲಿಸುವುದನ್ನು ಕಲಿಯುವುದು

ಶಾಲೆಗೆ ಹೋಗಲು ಕಾತರದಿಂದ ಕಾಯುತ್ತಿದ್ದ ಹುಡುಗಿಯೊಬ್ಬಳ ಕಥೆಯಿದು. ಶಾಲೆಗೆ ಹೋಗುವ ದಿನ ಬಂದಾಗ ಆಕೆ ಹೊಸ ಬ್ಯಾಗ್ ಮತ್ತು ಟಿಫಿನ್ ಬಾಕ್ಸ್ ಹಿಡಿದು ಶಾಲೆಯ ಬಸ್ ಹತ್ತಿದಳು. ಆದರೆ ಜೋತುಬಿದ್ದ ಮುಖದೊಂದಿಗೆ ಮನೆಗೆ ಬಂದ ಆಕೆ, 'ನೀನು ನನ್ನನ್ನು ಶಾಲೆಗೆ ಕಳುಹಿಸಬಾರದಿತ್ತು' ಎಂದು ತಾಯಿಗೆ ಹೇಳಿದಳು. ಗಾಬರಿಗೊಂಡ ತಾಯಿ ಯಾಕೆ ಎಂದು ಕೇಳಿದಳು. ಕಣ್ಣಲ್ಲಿ ನೀರು ತುಂಬಿಕೊಂಡ ಆಕೆ ಹೇಳಿದಳು; 'ನನಗೆ ಓದಲು–ಬರೆಯಲು ಬರುವುದಿಲ್ಲ. ಅವರು ನನಗೆ ಮಾತನಾಡಲು ಬಿಡುವುದಿಲ್ಲ!'

ತರಗತಿಯಲ್ಲಿ ಮಕ್ಕಳು ಏನನ್ನು ಮಾಡಲು ನಾವು ಬಿಡುತ್ತಿಲ್ಲ ಅಥವಾ ಬಿಡುತ್ತೇವೆ ಎಂಬುದನ್ನು ಆಕೆ ತನ್ನ ಸರಳ ಉತ್ತರದ ಮೂಲಕ ಹೇಳಿದ್ದಾಳೆ. ನಾವು ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದರ (Listening, Speaking, Reading, Writing-LSRW) ಮೇಲೆ ಗಮನ ಹರಿಸುತ್ತೇವೆ. ಆದರೆ ಸಾಮಾನ್ಯವಾಗಿ ಬರೆಯುವುದನ್ನು ಕಲಿಸುವ ತರಾತುರಿಯಲ್ಲಿ ಆಲಿಸುವ ಮತ್ತು ಮಾತನಾಡುವುದನ್ನು ಕಲಿಸಲು ಮರೆಯುತ್ತೇವೆ. ತರಗತಿಯಲ್ಲಿ ಮಾತನಾಡುವುದನ್ನು ಅಶಿಸ್ತಿನ ನಡೆವಳಿಕೆ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ನಾವು ಮಕ್ಕಳನ್ನು ಮೌನವಾಗಿ ಕುಳಿತುಕೊಳ್ಳುವಂತೆ ಮಾಡುತ್ತೇವೆ. 'ಗಮನವಿಟ್ಟು ಕೇಳಿ' ಮತ್ತು 'ಸುಮ್ಮನೆ ಕೇಳಿಸಿಕೊಳ್ಳಿ/ಆಲಿಸಿ' ಎಂಬ ಶಿಕ್ಷಕರ ಮಾತುಗಳು ತರಗತಿಯಲ್ಲಿ ಆಗಾಗ ಕೇಳಿ ಬರುತ್ತವೆ. ಮಕ್ಕಳು ಏನನ್ನು ಹೇಳಲು ಬಯಸುತ್ತಿದ್ದಾರೆ ಎಂಬುದನ್ನು ಆಲಿಸಲು ನಾವು ಸಿದ್ಧರಿಲ್ಲ, ಆದರೂ ನಾವು ಹೇಳುವ ಮಾತನ್ನು ಅವರು ಆಲಿಸಬೇಕು ಎಂದು ಬಯಸುತ್ತೇವೆ. ಆದರೆ ಗಮನವಿಟ್ಟು ಕೇಳುವುದು ಅಂದರೆ ಏನು ಎಂಬುದನ್ನು ನಾವು ಮಕ್ಕಳಿಗೆ ತಿಳಿಸದೇ ಹೋದರೆ ಅವರು ಅದನ್ನು ಅಭ್ಯಾಸ ಮಾಡುತ್ತಾರೆ ಎಂದು ಹೇಗೆ ನಿರೀಕ್ಷೆ ಮಾಡಲು ಸಾಧ್ಯ?

ಮಕ್ಕಳು ಅತ್ಯಂತ ಆಸಕ್ತಿಯಿಂದ ಕೇಳುವಂತೆ ಮಾಡುವ ಪರಿಣಾಮಕಾರಿ ಮಾರ್ಗವೆಂದರೆ ತರಗತಿಯಲ್ಲಿ ಕಥೆ ಹೇಳುವುದು. ಕಥೆಗಳನ್ನು ಕೇಳುವಂತೆ ಮಾಡುವುದರಿಂದ ಮಕ್ಕಳು ಸ್ವಾಭಾವಿಕವಾದ ರೀತಿಯಲ್ಲಿ ಆಲಿಸುವ ಕಲೆಯನ್ನು ಕರಗತ ಮಾಡಿಕೊಳ್ಳುತ್ತಾರೆ. ಇದು ಮಕ್ಕಳ ಏಕಾಗ್ರತೆ, ಗ್ರಹಣಶಕ್ತಿ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಜೊತೆಗೆ ವಿದ್ಯಾರ್ಥಿಗಳ ಇತರ ಎಲ್ಲ ವಿಷಯಗಳ ನಿರ್ವಹಣೆಯಲ್ಲಿ ಪೂರಕ ಪರಿಣಾಮ ಬೀರುತ್ತದೆ. ಶೈಕ್ಷಣಿಕವಾಗಿ ಉತ್ತಮ ಪ್ರದರ್ಶನ ತೋರದೇ ಇರುವ ಮಗುವು ಕೂಡ ಯಾವುದೇ ಕೀಳರಿಮೆ ಇಲ್ಲದೆ ಕಥೆಯನ್ನು ಆಲಿಸಬಲ್ಲುದು. ಒಂದು ಕಥೆಯನ್ನು ಹೇಳಿದ ತಕ್ಷಣ ಯಾವುದೇ ಬೋಧನೆಯನ್ನು ಮಾಡಿದರೆ ಅದರಿಂದ ಉತ್ತಮ ಪರಿಣಾಮ ಉಂಟಾಗುತ್ತದೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ ಕೂಡ. ತರಗತಿ ಆರಂಭವಾಗುವುದಕ್ಕೂ ಮುನ್ನ ಎರಡು ನಿಮಿಷ ಯಾವುದಾದರೂ ಕಥೆಯನ್ನು ಹೇಳಿದರೆ ಮಕ್ಕಳ ಏಕಾಗ್ರತೆ ಹೆಚ್ಚುತ್ತದೆ ಮತ್ತು ಅವರು ಅಧ್ಯಯನದ ಮೇಲೆ ಹೆಚ್ಚು ಗಮನವಿಡುತ್ತಾರೆ. ಇಂತಹದೊಂದು ಅಭ್ಯಾಸವನ್ನು ಅಳವಡಿಸಿಕೊಂಡ ಮೂರನೇ ತರಗತಿ ಶಿಕ್ಷಕಿಯೊಬ್ಬರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಹಾಗೆ ಮಾಡಿದ ಎರಡೇ ವಾರಕ್ಕೆ ಶಿಕ್ಷಕಿ ತರಗತಿಯನ್ನು ಪ್ರವೇಶಿಸುವುದಕ್ಕೆ ಮೊದಲೇ ಮಕ್ಕಳು ಜಾಗೃತರಾಗಿ ತಾವಾಗಿಯೇ ಅತ್ಯಂತ ಏಕಾಗ್ರತೆಯಿಂದ ಕೇಳಲು ಸಿದ್ಧವಾಗುತ್ತಿದ್ದರು!

ಆಲಿಸುವ ಕೌಶಲ ಸುಧಾರಿಸುತ್ತ ಹೋದ ಹಾಗೆ ಅದರಿಂದ ಇನ್ನಿತರ ಪ್ರಯೋಜನಗಳು ಕಾಣಿಸಿಕೊಳ್ಳುತ್ತವೆ. ಉಳಿದವರು ಮಾತನಾಡಲು ಅವಕಾಶ ನೀಡಲು, ಮಾತುಗಳ ನಡುವಿನ ಮೌಲ್ಯವನ್ನು ಅರ್ಥಮಾಡಿಕೊಳ್ಳಲು, ಇತರರ ದೃಷ್ಟಿಕೋನಗಳನ್ನು ಶ್ಲಾಘಿಸಲು ಸಾಧ್ಯವಾಗುತ್ತದೆ. ಇದರಿಂದ ಪರಾನುಭೂತಿಯಂತಹ ಅತ್ಯುತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ವೇದಿಕೆ ಕಲ್ಪಿಸಿದಂತಾಗುತ್ತದೆ. ಇಲ್ಲದೇ ಹೋದರೆ ಇವೆಲ್ಲವನ್ನೂ ಕಲಿಸಲು ಸಾಧ್ಯವಾಗುವುದಿಲ್ಲ. ತರಗತಿಯಲ್ಲಿ ಕಥೆಗಳನ್ನು ಹೇಳುವುದರಿಂದ ಅಂತಹ ಕಥೆಗಳ ಸುತ್ತ ಚರ್ಚೆ ಹುಟ್ಟುಹಾಕಲು ಅವಕಾಶ ಮಾಡಿದಂತಾಗುತ್ತದೆ. ಜೊತೆಗೆ

ಸಾಮಾಜಿಕ ಕೌಶಲಗಳೂ ಬೆಳೆಯುತ್ತವೆ. ಇದರಿಂದ ಸುದೀರ್ಘಾವಧಿಯಲ್ಲಿ ವೈಯಕ್ತಿಕ ಹಾಗೂ ವೃತ್ತಿಪರ ಸಂಬಂಧಗಳು ಕೂಡ ಸುಧಾರಿಸುತ್ತವೆ. ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಮೂಲ ಏನೆಂದರೆ ಸರಿಯಾಗಿ ಕೇಳಿಸಿಕೊಳ್ಳದೆ ಇರುವುದು ಎಂದು ನನ್ನ ನಂಬಿಕೆ. ನಾನಾ ಸಮುದಾಯಗಳು, ಧರ್ಮಗಳು ಮತ್ತು ನಾನಾ ದೇಶಗಳ ಜನರು ಪರಸ್ಪರ ಆಲಿಸದೇ ಇರುವುದರಿಂದ ಸಂಘರ್ಷಗಳಿಗೆ ಕಾರಣವಾಗಿದೆ. ಏಕೆಂದರೆ, ಹವಾಮಾನ ಬಿಕ್ಕಟ್ಟಿನ (climate crisis) ನಡುವೆ ಇರುವ ಮಾನವ ಪ್ರಾಣಿಗಳಾದ ನಾವು ನಮ್ಮ ಚೆಂದದ ಗ್ರಹದ ಮಾತನ್ನು ಕೂಡ ಕೇಳುತ್ತಿಲ್ಲ.

## ಕಥೆ ಕೇಳುತ್ತಿರುವಾಗ ನಮ್ಮ ಮೆದುಳಿನಲ್ಲಿ ಏನಾಗುತ್ತದೆ?

ಒಂದಾದ ಬಳಿಕ ಇನ್ನೊಂದರಂತೆ ಘಟನೆಗಳು ತೆರೆದುಕೊಳ್ಳುವ ಒಂದು ಕಥೆಯ ಸ್ವರೂಪದಿಂದ ಕಲಿಕೆಯ ಮೇಲೆ ಅಷ್ಟೊಂದು ಪರಿಣಾಮಕಾರಿಯಾದ ಪ್ರಭಾವ ಯಾಕೆ ಉಂಟಾಗುತ್ತದೆ? ಒಂದು ವೇಳೆ ನಾವು ಒಬ್ಬ ಶಿಕ್ಷಕಿಯ ಉಪನ್ಯಾಸವನ್ನು ಕೇಳಿದರೆ ಅಥವಾ ಬುಲೆಟ್ ಪಾಯಿಂಟ್‌ಗಳಿರುವ ಪವರ್ ಪಾಯಿಂಟ್ ಪ್ರಸ್ತುತಿಯನ್ನು ವೀಕ್ಷಿಸಿದರೆ, ಅಲ್ಲಿ ಪದಗಳನ್ನು ಅರ್ಥಕ್ಕಾಗಿ ವಿಸಂಕೇತಿಸುತ್ತೇವೆ (decode), ಆಗ ನಮ್ಮ ಮೆದುಳಿನಲ್ಲಿರುವ ಭಾಷಾ ಸಂಸ್ಕರಣೆಯ ಪ್ರದೇಶ ಮಾತ್ರ ಸಕ್ರಿಯವಾಗುವುದು ಬಿಟ್ಟರೆ ಬೇರೇನೂ ಸಂಭವಿಸುವುದಿಲ್ಲ.

ಆದರೆ ನಾವು ಒಂದು ಕಥೆಯನ್ನು ಕೇಳಿದಾಗ ನಮ್ಮಲ್ಲಿ ನಾಟಕೀಯ ಬದಲಾವಣೆಗಳು ಉಂಟಾಗುತ್ತ ಹೋಗುತ್ತವೆ. ಒಂದು ಕಥೆಯ ಘಟನೆಗಳನ್ನು ನಾವು ಅನುಭವಿಸುವ ಸಂದರ್ಭದಲ್ಲಿ ನಮ್ಮ ಮೆದುಳಿನಲ್ಲಿ ಕೇವಲ ಭಾಷಾ ಸಂಸ್ಕರಣ ಭಾಗಗಳು ಮಾತ್ರ ಸಕ್ರಿಯಗೊಳ್ಳದೆ ಇತರ ಭಾಗಗಳು ಕೂಡ ಸಕ್ರಿಯಗೊಳ್ಳುತ್ತ ಹೋಗುತ್ತವೆ. ಒಂದು ಬಗೆಯ ಆಹಾರ ಎಷ್ಟು ರುಚಿಯಾಗಿದೆ ಎಂದು ಯಾರಾದರೂ ನಮಗೆ ಹೇಳಿದರೆ ನಮ್ಮ ಸಂವೇದನೆಯ ಕವಚ (sensory cortex) ಚುರುಕಾಗುತ್ತದೆ. ಅದು ಚಲನೆಗೆ ಸಂಬಂಧಿಸಿದ್ದಾಗಿದ್ದರೆ ನಮ್ಮ ಚಲನಾ ಕವಚ (motor cortex) ಚುರುಕುಗೊಳ್ಳುತ್ತದೆ. ಗೆಳೆಯನೊಬ್ಬ ಪರ್ವತ ಶ್ರೇಣಿಯಲ್ಲಿ ಕಳೆದ ರಜಾದಿನದ ಬಗ್ಗೆ ಹೇಳಿದರೆ ನಾವು ಅದೇ ಪರ್ವತಗಳಲ್ಲಿ ಕಳೆದ ರಜಾದಿನಗಳನ್ನು ನೆನಪಿಸಿಕೊಳ್ಳುತ್ತೇವೆ.

ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಈ ಕಥೆಗಳು ಉಂಟುಮಾಡುವ ಇನ್ನೊಂದು ಅದ್ಭುತ ಸಂಗತಿ ಏನೆಂದರೆ ಅವರು ಹೊಸದನ್ನು ಆಲೋಚಿಸುವಂತೆ ಮಾಡುತ್ತವೆ; ಇಂತಹ ಆಲೋಚನೆಗಳು ಸರಿ–ತಪ್ಪುಗಳ ಭಾರವನ್ನು ಮೀರಿದ ಸಂಗತಿಗಳಾಗಿವೆ. ಇದು ಮನಸ್ಸು ಯಾವುದೇ ಅಡೆತಡೆ ಇಲ್ಲದೆ ಮುಕ್ತವಾಗಿ ಸಂಚರಿಸುವಂತೆ ಮಾಡುತ್ತದೆ ಮತ್ತು ಹೀಗೆ ಸಂಚರಿಸುತ್ತ ತನ್ನದೇ ಆದ ಕಲಿಕೆಯ ಪದರವನ್ನು ಸೃಷ್ಟಿಸುತ್ತದೆ. ಮಕ್ಕಳು ನಿಯಮಿತವಾಗಿ ಕಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರೆ ಅತ್ಯಂತ ಸಂಕೀರ್ಣವಾದ ಜ್ಞಾನಗ್ರಹಣ ಪ್ರಕ್ರಿಯೆಗಳಿಗೂ ಚಾಲನೆ

‘ಕಥೆಯನ್ನು ಹೇಳುವ ವ್ಯಕ್ತಿ ಮತ್ತು ಅದನ್ನು ಆಲಿಸುವ ವ್ಯಕ್ತಿಯ ಮಿದುಳುಗಳು ಪರಸ್ಪರ ಏಕೀಭವಿಸಬಹುದು’ ಎಂದು ಪ್ರಿನ್ಸ್‌ಟನ್‌ನಲ್ಲಿರುವ ಮನೋವಿಜ್ಞಾನಿ ಮತ್ತು ನರವಿಜ್ಞಾನದ ಪ್ರೊಫೆಸರ್ ಯೂರಿ ಹಸನ್ ಹೇಳುತ್ತಾರೆ. ಇದರಿಂದ ಎರಡು ನಿರ್ದಿಷ್ಟವಾದ ಪ್ರಯೋಜನಗಳಿವೆ. ಮೊದಲನೆಯದು, ಒಂದು ಕಥೆಯನ್ನು ಕೇಳುವುದರಿಂದ ಮಿದುಳಿನ ಅನೇಕ ಪ್ರದೇಶಗಳು ಪ್ರಚೋದನೆಗೆ ಒಳಗಾಗುತ್ತವೆ. ಇದು ಒಂದು ನಿರ್ದಿಷ್ಟ ಜಾಗದಲ್ಲಿ ಅತ್ಯಂತ ಜಡವಾಗಿ ಕುಳಿತು ಕೇಳುವುದಕ್ಕಿಂತ ಹೆಚ್ಚು ಗಾಢವಾದ ಅನುಭವವನ್ನು ನೀಡುತ್ತದೆ. ಎರಡನೆಯದಾಗಿ ಒಂದು ಕಥೆ ಅದನ್ನು ಹೇಳುವ ಮತ್ತು ಕೇಳುವವರ ನಡುವೆ ಒಂದು ಬಾಂಧವ್ಯವನ್ನು ಸೃಷ್ಟಿಸುತ್ತದೆ ಮತ್ತು ಇದು ಕಥೆ ಮುಗಿದ ಬಳಿಕವೂ ಉಳಿಯುತ್ತದೆ. ಶಿಕ್ಷಕ–ವಿದ್ಯಾರ್ಥಿಯ ನಡುವಿನ ಬಾಂಧವ್ಯಕ್ಕೆ ಇದಕ್ಕಿಂತ ಅದ್ಭುತವಾದ ಸ್ವರೂಪ ಬೇಕಿಲ್ಲ!

ಸಿಕ್ಕಂತಾಗುತ್ತದೆ ಮತ್ತು ಅವರು ತಮ್ಮ ಕಲಿಕೆಯ ಮೇಲೆ ಸ್ವತಃ ಹಿಡಿತವನ್ನು ಸಾಧಿಸುತ್ತಾರೆ. ಇದರಿಂದಾಗಿ ಕೇವಲ ಪರೀಕ್ಷೆಗಳನ್ನು ಪಾಸ್ ಮಾಡುವ ಉದ್ದೇಶದಿಂದ ತರಗತಿಯಲ್ಲಿ ಕೇವಲ ಪಠ್ಯಪುಸ್ತಕಗಳು ಮತ್ತು ನೋಟ್ ಬುಕ್‌ಗಳಂತಹ ಸಿದ್ಧ ಸಾಧನಗಳಲ್ಲಿ ತೊಡಗಿಕೊಂಡ ಮಕ್ಕಳು ನಿರಾಳತೆಯನ್ನು ಕಾಣುತ್ತಾರೆ. ತರಗತಿ ಅವರ ಜಗತ್ತನ್ನು ವಿಸ್ತರಿಸುತ್ತದೆ ಮತ್ತು ಕಲಿಕೆಯು ಜಗತ್ತಿನಲ್ಲಿ ಅವರ ಅನುಭವವನ್ನು ಕೂಡ ಒಳಗೊಳ್ಳುವಂತೆ ಮಾಡುವಲ್ಲಿ ಸಹಾಯ ಮಾಡುತ್ತದೆ. ಜೀವಮಾನವಿಡೀ ಕಲಿಯುವುದು ಮುಗಿಯುವುದಿಲ್ಲ ಎಂಬ ಮಾತಿನ ಹಿನ್ನೆಲೆಯಲ್ಲಿ ಅವರು ಮಾನವಜೀವಿಗಳಾಗಿ ತಮ್ಮ ಕೌಶಲಗಳನ್ನು ಮತ್ತು ಸಂವೇದನೆಗಳನ್ನು ಇನ್ನಷ್ಟು ಹರಿತಗೊಳಿಸುತ್ತ ನಿರಂತರ ಕಲಿಕೆಯ ದಾರಿಯನ್ನು ತೆರೆಯುವಂತೆ ಮಾಡುತ್ತಾರೆ. ಒಬ್ಬ ಶಿಕ್ಷಕಿ ಇದಕ್ಕಿಂತ ಉತ್ತಮವಾದ ಕೊಡುಗೆಯನ್ನು ಮತ್ತೇನು ಕೊಡಬಲ್ಲರು?

## ಕಥೆಗಳು ಎಲ್ಲಿ ಸಿಗುತ್ತವೆ?

ಹಾಗಾದರೆ ಕಥೆಗಳು ಎಲ್ಲಿ ಸಿಗುತ್ತವೆ? ಈ ಪ್ರಶ್ನೆಗಳನ್ನು ಶಿಕ್ಷಕರು ಆಗಾಗ ನನ್ನನ್ನು ಕೇಳುತ್ತಿರುತ್ತಾರೆ. ನಿಜಕ್ಕೂ ಹೇಳಬೇಕೆಂದರೆ ನಮ್ಮ ಸುತ್ತಲೂ ಕಥೆಗಳಿವೆ.

ಎಲ್ಲಕ್ಕಿಂತ ಮುಖ್ಯವಾಗಿ ನೀವು ಯಾವಾಗಲೂ ಸುದೀರ್ಘವಾದ ಕಥೆಯನ್ನು ಹೇಳಬೇಕಾಗಿಲ್ಲ. ಕೆಲವನ್ನು ನೀವೇ ಕಟ್ಟಬಹುದು. ಅದು ಯಾವುದೇ ವಿಷಯದ ಮೇಲಾಗಿರಬಹುದು; ತರಗತಿಗೆ ನಡೆದು ಹೋಗುತ್ತಿದ್ದಾಗ ಸಣ್ಣಕಲ್ಲು ನಿಮ್ಮೊಂದಿಗೆ ಏನು ಮಾತನಾಡಿತು ಎಂತಲೋ, ಎರಡು ಹಕ್ಕಿಗಳು ಅಥವಾ ಎರಡು

ಅಳಲುಗಳು ಪರಸ್ಪರ ಮಾತನಾಡಿಕೊಂಡವು ಅಥವಾ ಎಲೆಯೊಂದು ಮರದಿಂದ ಯಾಕೆ ಬೀಳಲು ಬಯಸಿತು ಎಂತಲೋ, ಕಥೆ ಕಟ್ಟಿ ಹೇಳಬಹುದಾಗಿದೆ. ಇಂತಹ ಕಥೆಗಳನ್ನು ಕಟ್ಟುವುದರಿಂದ ನಿಮ್ಮ ಸೃಜನಶೀಲತೆಯನ್ನು ಚಾಲ್ತಿಯಲ್ಲಿಡ-ಬಹುದು ಮತ್ತು ಪಠ್ಯ ವಿಷಯವನ್ನು ಹೊರತುಪಡಿಸಿದ ಸಂಗತಿಯನ್ನು ಹೇಳುತ್ತಿರುವುದರಿಂದ ಮಕ್ಕಳು ಅದನ್ನು ತುಂಬಾ ಇಷ್ಟಪಡುತ್ತಾರೆ. ಪ್ರತಿಯೊಬ್ಬರೂ ಕಥೆಯನ್ನು ಇಷ್ಟಪಡುತ್ತಾರೆ. ಯಾವುದೇ ಅರ್ಥಪೂರ್ಣ ಕಲಿಕೆಗೆ ಬೇಕಾಗಿರುವುದು ಕುತೂಹಲ, ಏಕಾಗ್ರತೆ ಮತ್ತು ಆಸಕ್ತಿ ಕೆರಳಿಸುವ ಮನಸ್ಥಿತಿ.

ಶಿಕ್ಷಕರು ತಮ್ಮದೇ ಪ್ರದೇಶದ ಕಥೆಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳಬೇಕು. ಇಂತಹ ಇನ್ನಷ್ಟು ಕಥೆಗಳು ಬೇಕಾಗಿದ್ದರೆ, ತಮ್ಮ ಊರಿನ ಕಥೆಗಳನ್ನು ಹೇಳುವಂತೆ ಪಾಲಕರನ್ನು ಕೇಳಿ ತಿಳಿದುಕೊಳ್ಳಲು ವಿದ್ಯಾರ್ಥಿಗಳಿಗೇ ಸೂಚಿಸಬಹುದು. ಕುಟುಂಬಗಳ ಕಥೆ ಹೇಳುವ ಸಂಪ್ರದಾಯಗಳನ್ನು ಗುರುತಿಸಿ ಅವನ್ನು ಪ್ರೋತ್ಸಾಹಿಸುವ ಅಗತ್ಯವಿದೆ. ಇಲ್ಲದೇ ಹೋದರೆ ಅವು ಸಂಪೂರ್ಣವಾಗಿ ನಶಿಸಿ ಹೋಗಬಹುದು. ಮುಂದಿನ ತಲೆಮಾರುಗಳಿಗೆ ಅದು ಲಭ್ಯವಾಗದೇ ಹೋಗಬಹುದು. ಇವುಗಳೊಂದಿಗೆ ತೊಡಗಿಸಿಕೊಳ್ಳಲು ಉತ್ತಮ ಸಾಹಿತ್ಯದ ಕೊರತೆಯಿಂದಾಗಿ ನಮ್ಮ ದೂರದರ್ಶನ ಮತ್ತು ದೂರವಾಣಿಗಳು 'ಹೊಸ ಕಥೆಗಳನ್ನು' ತುಂಬುತ್ತಿರುವುದು ದುರದೃಷ್ಟದ ಸಂಗತಿ.

ಭಾರತದ ಹಾಗೂ ವಿಶ್ವದ ನಾನಾ ಭಾಗದ ಜನಪದ ಕಥೆಗಳನ್ನು ಮಕ್ಕಳಿಗೆ ಓದಿ ಹೇಳುವುದು ಮತ್ತು ತಿಳಿಸಬೇಕಾದ ಅಗತ್ಯವಿದೆ. ನ್ಯಾಷನಲ್ ಬುಕ್ ಟ್ರಸ್ಟ್ ಅನೇಕ ಭಾರತೀಯ ಭಾಷೆಗಳಲ್ಲಿ ಹೊರತಂದಿರುವ ಕಥೆ ಪುಸ್ತಕಗಳು ಉತ್ತಮ ಸಂಪನ್ಮೂಲಗಳಾಗಿವೆ. ವಿಶೇಷವಾಗಿ ಎ. ಕೆ. ರಾಮಾನುಜನ್ ಅವರ ಭಾರತದ ಜನಪದ ಕಥೆಗಳು (Folktales from India); ಪ್ರಥಮ್ ಬುಕ್ಸ್ ನ ಅಂತರ್ಜಾಲ ಸಂಗ್ರಹದ ವೆಬ್‌ತಾಣ-storyweaver.org.in ಇದರಲ್ಲಿ 337 ಭಾಷೆಗಳ 55 ಸಾವಿರಕ್ಕೂ ಅಧಿಕ ಮಕ್ಕಳ ಕಥೆಗಳ ಸಂಗ್ರಹವಿದೆ. ಇವನ್ನು ನಾಲ್ಕು ವಿಭಿನ್ನ ಓದುವ ಹಂತಗಳಾಗಿ ವಿಂಗಡಿಸಲಾಗಿದೆ. ಜೊತೆಗೆ ಏಕಲವ್ಯ ಪ್ರಕಾಶನದ ಪುಸ್ತಕಗಳು ಮಕ್ಕಳ ಓದಿಗೆ ನಿಜಕ್ಕೂ ಅತ್ಯುತ್ತಮ.

## ಕೊನೆಯ ಮಾತು

ನೀವು ಪ್ರಸ್ತುತಪಡಿಸುವ ಕಥೆಗಳು ಹೊಸ ಸಾಧ್ಯತೆಗಳು ಹಾಗೂ ಪರ್ಯಾಯ ವಿಶ್ವವನ್ನು (alternate universes) ಅನಾವರಣ ಮಾಡುತ್ತವೆ. ಅದು ನಿಮ್ಮನ್ನು ಹೂದೋಟದ ಹಾದಿಗೆ ಕರೆದೊಯ್ಯುತ್ತದೆ, ನಿಮ್ಮ ಕಣ್ಣ ಮುಂದೆ ಬಣ್ಣಬಣ್ಣದ ಲೋಕವನ್ನು ತೋರಿಸುತ್ತವೆ. ಅನಿರೀಕ್ಷಿತ ಸಂಗತಿಗಳಿಗೆ ಮುಖಾಮುಖಿಯಾಗಬೇಕಾದ ಜನರ ಬಗ್ಗೆ ನೀವು ಕನಿಕರಗೊಳ್ಳುವಂತೆ ಮಾಡುತ್ತದೆ ಮತ್ತು ನೀವು ಎಂದೂ ಊಹಿಸದ ಸಾಧ್ಯತೆಗಳನ್ನು ಮತ್ತು ನೀವು ಯೋಜಿಸದೇ ಇದ್ದ ಅಂತ್ಯವನ್ನು ನಿಮ್ಮ ಮುಂದೆ ಮಂಡಿಸುತ್ತದೆ. ಒಂದು ಹಂತದಲ್ಲಿ ಇದು ಜೀವನದಲ್ಲಿ ಏರಿಳಿತದ ಹಾಗೂ ಅನಿರೀಕ್ಷಿತ ಫಲಿತಾಂಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಭಾಯಿಸಲು ಕಲಿಸುತ್ತದೆ. ಇನ್ನೊಂದು ರೀತಿಯಲ್ಲಿ ನಿಶ್ಚಿತವಲ್ಲದ ಸಾಧ್ಯತೆಗಳನ್ನು ನೋಡುವಂತೆ ಉತ್ತೇಜನ ನೀಡುತ್ತದೆ. ಎಲ್ಲಕ್ಕಿಂತ ಚೆಂದದ ಸಂಗತಿ ಏನೆಂದರೆ, ಇಂಥವನ್ನು ಜೀವನದಲ್ಲಿ ಬೆಳೆಸಿಕೊಳ್ಳುವುದರಿಂದ ನಾವು ಎದುರುಗೊಂಡ ಜನರಲ್ಲಿಯೂ ಇಂತಹ ಸಾಧ್ಯತೆಗಳನ್ನು ನೋಡುವಂತೆ ಮಾಡುತ್ತದೆ. ವಿಶೇಷವಾಗಿ ಒಬ್ಬ ಶಿಕ್ಷಕಿಯಾಗಿ, ನಿಮ್ಮ ವಿದ್ಯಾರ್ಥಿ ಈಗ ಹೇಗಿದ್ದಾರೆ ಎಂಬುದನ್ನು ಮಾತ್ರ ನೋಡದೆ ಅವ್ಯಕ್ತ, ಅಸ್ಪಷ್ಟ ಸಾಧ್ಯತೆಗಳನ್ನು ನೋಡುವ ಗುಣವನ್ನು ಬೆಳೆಸಿಕೊಂಡರೆ ಮತ್ತು ಅಂಥವನ್ನು ಗುರುತಿಸಿದರೆ ಅವುಗಳಿಗೆ ಇನ್ನಷ್ಟು ಹೊಳಪು ಬರುವ ಅವಕಾಶವಿರುತ್ತದೆ. ಕಥೆಗಳ ಜೊತೆ ತೊಡಗಿಕೊಳ್ಳುವುದರಿಂದ ಹೊಸ ಗ್ರಹಿಕೆಯ ಬಾಗಿಲು ತೆರೆದುಕೊಳ್ಳುತ್ತದೆ. ನಮ್ಮ ಸಂಕುಚಿತ ಮನೋಭಾವದಿಂದ ಹೊರಬಂದು ನಮ್ಮ ದರ್ಶನವನ್ನು, ದೃಷ್ಟಿಕೋನವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪ್ರತಿಯೊಂದು ಕಥೆಯ ಅಂತ್ಯವು ಇನ್ನಷ್ಟು ಕಥೆಗಳು ತೆರೆದುಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಪ್ರತಿಯೊಂದು ಅಂತ್ಯವೂ ಹೊಸ ಕುತೂಹಲಕ್ಕೆ ಒಳಪಡಿಸುತ್ತದೆ ಮತ್ತು ಇತರ ಕಥೆಗಳ ಬಗ್ಗೆ ಕಲ್ಪಿಸಿಕೊಳ್ಳುವಂತೆ ಮಾಡುತ್ತದೆ. "ಆ ಮುದುಕನಿಗೆ ಮುಂದೇನಾಯಿತು?" "ಆ ಪಯಣಿಗ ಇನ್ನೊಂದು ಪ್ರಯಾಣವನ್ನು ಆರಂಭಿಸಿದನೇ?" "ಡ್ರಾಗನ್ ಈಗಲೂ ಅಲ್ಲಿ ಹಾರಾಡುತ್ತಿದೆಯೇ?" ಇಂತಹ ಪ್ರಶ್ನೆಗಳು ಮತ್ತು ಕಲ್ಪಿತ ಪರಿಣಾಮಗಳಿಗೆ ಕೊನೆ ಎಂಬುದಿಲ್ಲ.



**ವ್ಯಾಲೆಂಟೀನಾ ತ್ರಿವೇದಿ** ಅವರು ಲೇಖಕರು, ಅಭಿನೇತ್ರಿ ಮತ್ತು ಶಿಕ್ಷಣತಜ್ಞೆ. ಇವರ ಸೃಜನಶೀಲತೆಯು ಅನೇಕ ಮಾಧ್ಯಮಗಳಲ್ಲಿ ವ್ಯಾಪಿಸಿಕೊಂಡಿದೆ: ಬರೆವಣಿಗೆ, ಅಭಿನಯ, ಕಿರು ಚಿತ್ರಗಳ ನಿರ್ದೇಶನ, ಸಂಪಾದನೆ, ಅನುವಾದ, ಕಥೆ ಹೇಳುವುದು, ಇತ್ಯಾದಿ. ಮಕ್ಕಳು ಮತ್ತು ಕಲಿಕೆಯ ಬಗ್ಗೆ ಅತೀವ ಆಸಕ್ತಿಯನ್ನು ಹೊಂದಿರುವ ತ್ರಿವೇದಿ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳ ದೃಷ್ಟಿಕೋನವನ್ನು ಅಳವಡಿಸಿಕೊಂಡವರು. ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ ಅವರಿಗೆ ಅನೇಕ ಶಿಕ್ಷಣ ಸಂಸ್ಥೆಗಳು ನಿರಂತರ ಆಹ್ವಾನ ನೀಡುತ್ತಿರುತ್ತವೆ. ದಾಸ್ತಾಂಗೊ (Dastango - 13ನೆಯ ಶತಮಾನದ ಮೌಖಿಕವಾಗಿ ಕಥೆ ಹೇಳುವ ಉರ್ದು ಕಲಾ ಪ್ರಕಾರ) ಇವರ ಅಭಿನಯದ ವೈಶಿಷ್ಟ್ಯ. ಔಪಚಾರಿಕ ಮತ್ತು ಅನೌಪಚಾರಿಕ ಎರಡೂ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಅವರನ್ನು storyweaverval@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಮಂಜುನಾಥ್ ಚಾಂದ್** | ಪರಿಶೀಲನೆ: **ನಾಗಮಣಿ ಎಸ್.ಎನ್.**

# ಕಥೆಗಳ ಮೂಲಕ ಅರ್ಥಪೂರ್ಣ ಸಂವಾದ

ಧ್ರುವ ದೇಸಾಯಿ

ಶಿಕ್ಷಣತಜ್ಞರು ಮತ್ತು ಬಹುಶಃ ಸಾಮಾನ್ಯವಾಗಿ ವಯಸ್ಕರಲ್ಲಿಯೂ ಇರುವ ಕಲ್ಪನೆ ಏನೆಂದರೆ, ಮಕ್ಕಳು "ಮುಗ್ಧರು" ಹಾಗೂ ಅವರನ್ನು ಪ್ರಪಂಚದ ಕಟು ವಾಸ್ತವಗಳಿಂದ 'ರಕ್ಷಿಸಬೇಕು' ಎಂಬುದಾಗಿದೆ. ಅಂತಹ ಕಟು ವಾಸ್ತವಗಳಲ್ಲಿ ಆಳವಾಗಿ ಒಳಗೊಂಡಿರುವ ಅಂಶಗಳೆಂದರೆ ಶೋಕ, ಕಳೆದುಕೊಂಡ ಭಾವ ಮತ್ತು ಉದ್ವೇಗದಂತಹ ವೈಯಕ್ತಿಕ ಭಾವನೆಗಳು ಹಾಗೂ ಜಾತಿ, ವರ್ಗ, ಲಿಂಗ ಅಥವಾ ಜನಾಂಗದಂತಹ ಸಾಮಾಜಿಕ ರಚನೆಯ ಅಂಶಗಳಲ್ಲಿಯ ಸಮಸ್ಯೆಗಳು.

ಕಳೆದ 10–12 ವರ್ಷಗಳಿಂದ ಶಿಕ್ಷಕನಾಗಿ ಬೇರೆಬೇರೆ ನೆಲೆಗಳಲ್ಲಿ ಕೆಲಸ ಮಾಡಿರುವ ನಾನು, ಶಿಕ್ಷಕರು ಜಾತಿ ಮತ್ತು ಲಿಂಗದಂತಹ ಜಟಿಲವಾದ ಸಮಸ್ಯೆಗಳ ಕುರಿತು ವರ್ತಿಸುವ ಎರಡು ಬಗೆಯನ್ನು ದೊಡ್ಡ ಪ್ರಮಾಣದಲ್ಲಿ ಗಮನಿಸಿದ್ದೇನೆ. ಮೊದಲನೆಯದು ಸಾಮಾನ್ಯವಾಗಿ ಕಾಣುವಂತಹುದು. ಅದೇನೆಂದರೆ, ಭಾರತೀಯ ಸಮಾಜದ ಬಹುಪಾಲು ಭಾಗದಲ್ಲಿ ಇನ್ನೂ ಕಾಣುವ, "ಹುಡುಗಿಯರೇಕೆ ಗಣಿತ ಕಲಿಯಬೇಕು" ಎಂದು ಬಹಿರಂಗವಾಗಿ ಲಿಂಗಭೇದ ಪ್ರತಿಕ್ರಿಯೆ ನೀಡುವುದು, ಮತ್ತೊಂದು "ಕೆಳಜಾತಿ"ಯ ಮಗು ಸಾರ್ವಜನಿಕ ಕೊಳಾಯಿಯಿಂದ ನೀರು ಕುಡಿಯಿತು ಎಂದು ಹಿಡಿದು ಹೊಡೆಯುವ, ಶಿಕ್ಷಿಸುವಂತಹ ವರ್ತನೆಗಳು. ತರಗತಿಯೊಳಗೆ ಪಕ್ಷಪಾತವನ್ನು ತೊಡೆದುಹಾಕುವ ಇನ್ನೊಂದು 'ಉನ್ನತ'ವಾದ ಬಗೆ ಹೇಗೆಂದರೆ, ತರಗತಿಗಳಲ್ಲಿ ಅಸಮಾನತೆ ಅಸ್ತಿತ್ವದಲ್ಲೇ ಇಲ್ಲ ಎಂದು ನಟಿಸುವ ಶಿಕ್ಷಕರ ಪಲಾಯನವಾದ! ಉದಾಹರಣೆಗೆ ಹೇಳುವುದಾದರೆ, "ಇದು ಲಿಂಗ ಸಮಾನತೆಯ ಸ್ಥಳ; ಇಲ್ಲಿ ಪ್ರತಿಯೊಬ್ಬರೂ ಪರಸ್ಪರ ಸಹಾನುಭೂತಿಯಿಂದಿದ್ದಾರೆ ಎಂಬ ಕಲ್ಪನೆ ಮೂಡಿಸಲು ನಾವು ಲಿಂಗ ಅಸಮಾನತೆಯ ಬಗ್ಗೆ ಮಾತನಾಡುವುದಿಲ್ಲ". ಇದು ಅರ್ಥಪೂರ್ಣ ಪ್ರಯತ್ನವೇ ಆಗಿರಬಹುದು. ಆದರೆ ಇವು, ಅಲ್ಪಸಂಖ್ಯಾತರು ಮತ್ತು ದಮನಿತ ಸಮುದಾಯಗಳು ಪ್ರತಿದಿನ ಎದುರಿಸುವ, ಅನುಭವಿಸುವ ತಾರತಮ್ಯದ, ಪೂರ್ವಾಗ್ರಹದ ಮತ್ತು ಮತಾಂಧತೆಯ ವಾಸ್ತವವನ್ನು ಪ್ರತಿನಿಧಿಸುವುದಿಲ್ಲ. ಅಸ್ತಿತ್ವದಲ್ಲಿರುವ ಪರಿಸ್ಥಿತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡದೇ ಇದ್ದಾಗ, ಅಲ್ಲೊಂದು ಸಾಂಸ್ಕೃತಿಕ ಪುನರುತ್ಪಾದನೆ ಕಾರ್ಯ ನಿರ್ವಹಿಸುತ್ತದೆ. ನನ್ನ ಪ್ರಕಾರ, ಈ ಮೂಲಕ, ಅಸ್ತಿತ್ವದಲ್ಲಿರುವ ರಚನೆಗಳು ಮತ್ತು ರೂಪಗಳು ತಾವಾಗಿ ಬಹುಕಾಲ ನಿಲ್ಲುತ್ತವೆ ಹಾಗೂ ಮರುಸೃಷ್ಟಿಯಾಗುತ್ತವೆ. ಈಗಿನ ತಲೆಮಾರುಗಳಲ್ಲಿ ಇರುವ ಜಾತೀಯತೆಯ ಕಲ್ಪನೆಗಳನ್ನು ನಾವು ಮುಕ್ತವಾಗಿ ಚರ್ಚೆಗೆ ಒಳಪಡಿಸದಿದ್ದರೆ, ಮುಂದಿನ ತಲೆಮಾರು ಅದೇ ಮಾದರಿಗಳನ್ನು ಅದೇ ಕಲ್ಪನೆಗಳನ್ನು ಪುನರಾವರ್ತಿಸುವ ಸಾಧ್ಯತೆ ಹೆಚ್ಚಿರುತ್ತದೆ.

ನಾವು ಅಂತಹ ಸ್ಥಳಗಳಲ್ಲಿ ಶಿಕ್ಷಕರಾಗಿ, ಕೆಲವೊಮ್ಮೆ ಅವು ಅಗೋಚರವಾಗಿದ್ದರೂ, ಅದರ ಅನುಭವಗಳು ನಮಗೆ ಗೋಚರವಾಗುವ ಕಾರಣ, ಈ ಅನುಭವಗಳಿಗೆ ಕಾರಣವಾಗುವ ಅಸಮಾನತೆಗಳನ್ನು ನಿರ್ಮೂಲನೆ ಮಾಡುವ ಪ್ರಕ್ರಿಯೆಯ ಮೊದಲ ಹೆಜ್ಜೆಯಾಗಿ, ಅದರ ಮೂಲವನ್ನು ಗೋಚರ–ವಾಗುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಅಂತಿಮವಾಗಿ – ಒಂದು ಆದರ್ಶ ಜಗತ್ತಿನಲ್ಲಿ – ಪ್ರಶ್ನಿಸುವುದನ್ನು ಕಲಿಯಬೇಕು ಮತ್ತು ಇಂತಹ ವರ್ತನೆಗಳಿಗೆ ಆಸ್ಪದ ಕೊಡುವ ಪೂರ್ವಾಗ್ರಹಗಳನ್ನು ನಿರ್ಮೂಲನೆ ಮಾಡಬೇಕು.

## ಇದನ್ನು ಪರಿಹರಿಸುವ ಒಂದು ಪ್ರಯತ್ನ

ಶಾಲೆಗಳು ಮತ್ತು ಇತರ ಸಾಂಸ್ಥಿಕ ವ್ಯವಸ್ಥೆಗಳಲ್ಲಿ, ಪೂರ್ವಾಗ್ರಹಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅವುಗಳನ್ನು ಕಡಿಮೆ ಮಾಡುವುದಕ್ಕಾಗಿ ಕೈಗೊಂಡಿರುವ ಪ್ರಯತ್ನಗಳನ್ನು ಅಧ್ಯಯನ ಮಾಡಿ, ಈ ಕ್ಷೇತ್ರದಲ್ಲಿ ನಡೆದಿರುವ ಕೆಲಸಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿಯೇ ತೊಡಗಿಸಿಕೊಳ್ಳಬೇಕಾದ ಉತ್ತಮ ಅವಕಾಶ ನನಗೆ ಒದಗಿ ಬಂದಿತ್ತು. ವಿವಿಧ ಸಾಮಾಜಿಕ ಮನೋವಿಜ್ಞಾನಿಗಳು ಮತ್ತು ಸಮಾಜಶಾಸ್ತ್ರಜ್ಞರ ಅಧ್ಯಯನಗಳಲ್ಲಿ ನಾನು, ಗೋರ್ಡನ್‌ಅಲ್‌ಪೋರ್ಟ್ ಅವರ ಅಧ್ಯಯನದ ಕಡೆ ಪದೇಪದೇ ಹೊರಳತೊಡಗಿದೆ. ಅವರ ಸಂಶೋಧನೆಯು, ನಿರ್ದಿಷ್ಟ ಪರಿಸ್ಥಿತಿಗಳಲ್ಲಿ, ಬೇರೆಬೇರೆ ಗುಂಪುಗಳ ಸದಸ್ಯರು ಪರಸ್ಪರ ಸಂಪರ್ಕದಲ್ಲಿರುವುದರಿಂದ, ಆ ಗುಂಪುಗಳು ಪರಸ್ಪರರ ಬಗ್ಗೆ ಹೊಂದಿರುವ ಪೂರ್ವಾಗ್ರಹಗಳನ್ನು ಕಡಿಮೆ ಮಾಡಲು ದಾರಿ ಮಾಡಿಕೊಡುತ್ತದೆ ಎಂದು ತಿಳಿಸುತ್ತದೆ. ಇದು, ಸಮನ್ವಯ ತರಗತಿಗಳು (inclusive Classrooms), ಕಾರ್ಯಾಗಾರಗಳು ಅಥವಾ ರಂಗ ಚಟುವಟಿಕೆಗಳಂತಹ ವಿವಿಧ ರೂಪಗಳಲ್ಲಿರಬಹುದು. ಆದರೂ, ಶಿಕ್ಷಕರಾಗಿ, ನಾವು ಪರಿಗಣಿಸಬೇಕಾದ ಕೆಲವು ನಿರ್ದಿಷ್ಟ ಪ್ರಾಯೋಗಿಕ ಸಂಗತಿಗಳಿವೆ.

ನಾವು ಒಂದು ನಿರ್ದಿಷ್ಟ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತೇವೆ. ಬೇರೆಬೇರೆ ಗುಂಪುಗಳು ನಮ್ಮೆದುರಿನ ಕಾರ್ಯಕ್ಷೇತ್ರದಲ್ಲಿ ಅಂದರೆ, ತರಗತಿಯೊಳಗೆ ಹಾಜರಿಲ್ಲದಿದ್ದರೆ ಒಬ್ಬರಿಗೆ ಅವುಗಳ ನಡುವೆ 'ಸಂಪರ್ಕ'ವನ್ನು ಹೇರುವುದು ಸಾಧ್ಯವಿಲ್ಲ. ನಾನು ಸಣ್ಣ ಹಳ್ಳಿಯೊಂದರ ನಿರ್ದಿಷ್ಟ ಜನಸಂಖ್ಯೆ ಇರುವ ಶಾಲೆಯಲ್ಲಿ ಪ್ರಸ್ತುತ

ಕೆಲಸ ಮಾಡುತ್ತಿದ್ದೇನೆ. ಅಂದರೆ, ಧಾರ್ಮಿಕ ಮತ್ತು ಭಾಷಾ ಏಕರೂಪತೆ ಅಲ್ಲದಿದ್ದರೂ, ಜಾತಿ ಮತ್ತು ಲಿಂಗಾಧಾರಿತ ವೈವಿಧ್ಯತೆ ಇದೆ. ಈ ಪರಿಸ್ಥಿತಿಯಲ್ಲಿ, ಆ ತರಗತಿಯಲ್ಲಿ ಕೇವಲ ಹಿಂದೂ ವಿದ್ಯಾರ್ಥಿಗಳು ಮಾತ್ರ ಇದ್ದಾರೆ ಎಂಬ ಸರಳ ಕಾರಣಕ್ಕೆ ನಾನು ಮುಸ್ಲಿಂ, ಹಿಂದೂ ಮತ್ತು ಕ್ರೈಸ್ತ ವಿದ್ಯಾರ್ಥಿಗಳ ನಡುವೆ ಮಾತುಕತೆಯನ್ನು ಒತ್ತಾಯಪೂರ್ವಕವಾಗಿ ನಡೆಸಲಾಗದು.

ಮೇಲೆ ಪ್ರಸ್ತಾವಿಸಿರುವಂತೆ ಇದಕ್ಕೆ, ಕಾರ್ಯಾಗಾರಗಳು, ಶಾಲಾವಧಿಯ ನಂತರದ ತರಗತಿಗಳು ಮುಂತಾದ ಪರ್ಯಾಯಗಳಿವೆ. ಆದಾಗ್ಯೂ, ಪಠ್ಯೇತರ ಚಟುವಟಿಕೆಗಳನ್ನು ಕೈಗೊಳ್ಳಲು ಸಮಯಾವಕಾಶ ಸಿಗುವುದೇ ಕಷ್ಟ. ವಿಶೇಷವಾಗಿ, ಹೆತ್ತವರಿಗೆ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯೇ ಮುಖ್ಯವಾದ ಕಾರಣ ಅವರ ಒತ್ತಡಗಳು ಹಾಗೂ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳಿಗೆ ಪರೀಕ್ಷೆಯ ಫಲಿತಾಂಶವೇ ಆದ್ಯತೆಯಾಗಿರುವುದು ಮತ್ತೊಂದು ರೀತಿಯ ಒತ್ತಡ. ಅದರೊಂದಿಗೆ, ಬಹುತೇಕ ಶಾಲಾ ವ್ಯವಸ್ಥೆಗಳಲ್ಲಿ ಸೀಮಿತ ಸಂಪನ್ಮೂಲಗಳಿದ್ದು, ಈ ಪರ್ಯಾಯ ಆಯ್ಕೆಗಳು ಹೆಚ್ಚಿನ ಶಿಕ್ಷಕರ ಕೈಗೆಟಕದಿರುವ ಸಂದರ್ಭವೇ ಹೆಚ್ಚು. ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ನಾನು, 'ವಿಸ್ತೃತ ಸಂಪರ್ಕ'ದೊಂದಿಗೆ ಕೆಲಸ ಮಾಡುವ ಆಯ್ಕೆ ಮಾಡಿಕೊಂಡೆ. ಅದೇನೆಂದರೆ, ಕಥೆಯ ಮಾಧ್ಯಮದ ಮೂಲಕ ಸಂಪರ್ಕವನ್ನು ಹುಟ್ಟುಹಾಕುವುದು. ಅಂದರೆ, ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಿರುವ ಕಥೆಗಳ ಮೂಲಕ ಇತರ ಸಂಸ್ಕೃತಿ ಮತ್ತು ಗುಂಪುಗಳ ಜನರಿಗೆ ಒಡ್ಡಿಕೊಳ್ಳುವುದು. ನಾನು ಸಚಿತ್ರ ಪುಸ್ತಕಗಳು ಮತ್ತು ಮಕ್ಕಳ ಸಾಹಿತ್ಯದೊಂದಿಗೆ ಕೆಲಸ ಮಾಡಿದೆ– ಇದಕ್ಕೆ ಸ್ವಲ್ಪಮಟ್ಟಿನ ಹಣ ಖರ್ಚಾದರೂ, ಇತರ ವಸ್ತುಗಳಾದ ಲ್ಯಾಪ್‌ಟಾಪ್ ಮತ್ತು ಟ್ಯಾಬ್ಲೆಟ್ ಅಥವಾ ಒಂದು ಪ್ರೊಜೆಕ್ಟರ್‌ಗೆ ಹೋಲಿಸಿದರೆ, ಇವು ಕಡಿಮೆ ಖರ್ಚಿನ ಸಂಪನ್ಮೂಲಗಳಾಗಿದ್ದವು. ಅಲ್ಲದೆ, ಇವು ಎಂದೂ ಅವಧಿ ಮೀರದ ಅಥವಾ ಉನ್ನತೀಕರಿಸಬೇಕಾದ ಅಥವಾ ನಿರ್ವಹಣೆ ಬೇಕಾಗುವ ಸಂಪನ್ಮೂಲಗಳಲ್ಲ. ಪೂರಕವಾಗಿ, ಸಚಿತ್ರ ಪುಸ್ತಕಗಳು ಮತ್ತು ಮಕ್ಕಳ ಸಾಹಿತ್ಯ (ಮತ್ತು ಇವುಗಳನ್ನು ಬಳಸಿ ಮಾಡುವ ಚಟುವಟಿಕೆಗಳು), ಭಾಷಾ ಬೋಧನೆಯ ಪಠ್ಯ ಉದ್ದೇಶವನ್ನೂ ಈಡೇರಿಸುತ್ತವೆ ಎಂಬುದು ಗಮನಾರ್ಹ.

## ಕೆಲವು ಅನುಭವಗಳು

ಕಳೆದ ವರ್ಷದಿಂದ ನಾನು ಮೂರು, ನಾಲ್ಕು ಮತ್ತು ಐದನೇ ತರಗತಿಗೆ ವಾರಕ್ಕೆ ಎರಡೋ, ಮೂರೋ ತರಗತಿಗಳನ್ನು ತೆಗೆದುಕೊಂಡು, ವಿವಿಧ ಸಚಿತ್ರ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಗಟ್ಟಿಯಾಗಿ ಓದುವುದರ ಜೊತೆಗೆ, ಅವುಗಳನ್ನು ಜಾತಿ, ಲಿಂಗ, ಧರ್ಮ, ಕಳೆದುಕೊಳ್ಳುವ ಭಾವ ಮತ್ತಿತರ ವಿಷಯಗಳ ಕುರಿತು ಮಾತುಕತೆ ನಡೆಸಲು ಬಳಕೆ ಮಾಡಿದ್ದೇನೆ. ಈ ವರ್ಷವಂತೂ ಬಹಳ ಪ್ರೋತ್ಸಾಹ ಸಿಕ್ಕಿದ್ದು, ಕೆಲವು ಅರ್ಥಪೂರ್ಣ ಮಾತುಕತೆಗಳು ನಡೆದಿವೆ ಹಾಗೂ ಅನೇಕ ಪ್ರಮುಖ ಪ್ರಶ್ನೆಗಳನ್ನು ಎತ್ತಲಾಗಿದೆ. ಆದರೆ, ಈ ಅನುಭವದ ಮುಖ್ಯಾಂಶಗಳ ಬಗ್ಗೆ ಮಾತನಾಡುವುದಕ್ಕೂ ಮೊದಲು, ಇಂತಹ ಯೋಜನೆಗೆ ಕಥೆಗಳು ಮತ್ತು ಪುಸ್ತಕಗಳ ಬಳಕೆಯಿಂದಾಗುವ ಕೆಲವು ವಿಶಿಷ್ಟ ಪ್ರಯೋಜನಗಳ ಬಗ್ಗೆ ಗಮನ ಕೊಡಲು ಬಯಸುತ್ತೇನೆ.

> ಎಳೆಯ ವಿದ್ಯಾರ್ಥಿಗಳ ಗಮನ ಸೆಳೆಯುವ ನಿಟ್ಟಿನಲ್ಲಿ ಸಚಿತ್ರ ಪುಸ್ತಕಗಳು ಕೆಲವು ನಿರ್ದಿಷ್ಟ ಆವಶ್ಯಕತೆಗಳನ್ನು ಪೂರೈಸುತ್ತವೆ. ಯಾವುದೋ ನಿರ್ದಿಷ್ಟವಾದುದರ ಮೇಲೆ ಲಕ್ಷ್ಯ ಕೊಡಬೇಕಾಗುತ್ತದೆ– ಪರದೆಯಲ್ಲಿ ಯಾವುದನ್ನೋ ವೀಕ್ಷಿಸುವುದಕ್ಕಿಂತ ಇದು ಭಿನ್ನವಾದುದು– ಅಂದರೆ, ಕೇಳುಗ/ ಓದುಗನೂ ಕೆಲವೊಂದು ಕೆಲಸಗಳನ್ನು ಮಾಡಬೇಕಾಗುತ್ತದೆ. ಲಕ್ಷ್ಯವಿಡುವ ಮತ್ತು ಕಲಿಯುವ ಈ ಕೌಶಲವು ಸ್ವಯಂ ಕಲಿಕೆಯ ಜಾಣ್ಮೆಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಅಂಶವಾಗುತ್ತದೆ. ಈ ಜಾಣ್ಮೆಯು ತರಗತಿಗಳಲ್ಲಿ ಹಾಗೂ ಶೈಕ್ಷಣಿಕ ವ್ಯವಸ್ಥೆಯಲ್ಲಿ ಯಾವಾಗಲೂ ಪ್ರಸ್ತುತವಾಗಿರುತ್ತದೆ. ಹಾಗಾದರೂ, ಪಠ್ಯಪುಸ್ತಕಗಳಿಗಿಂತ ಬಹಳ ಬೇಗನೆ ಅವರು ಇದನ್ನು ಮಾಡುತ್ತಾರೆ. ಯಾಕೆಂದರೆ, ವಯಸ್ಸಿಗೆ ತಕ್ಕುದಾದ ಭಾಷೆಯೊಂದಿಗೆ ಸಚಿತ್ರ ಪುಸ್ತಕಗಳು ಚಿತ್ರದೊಂದಿಗೆ ಗಮನ ಸೆಳೆಯುವುದಲ್ಲದೆ, ಕಥೆ ಹೇಳುವ ನೆಲೆಯಲ್ಲಿಯೂ ಕೊಡುಗೆ ನೀಡುತ್ತವೆ. ಪಠ್ಯ ಮತ್ತು ಚಿತ್ರದ ಈ ಸಂಯೋಜನೆಯು ಓದುಗರಿಗೆ ದೃಶ್ಯ ನಿರೂಪಣೆ ಮತ್ತು ಸಂದರ್ಭವನ್ನು ಕಟ್ಟಿಕೊಟ್ಟರೂ, ಕಲ್ಪನೆಗೂ ಅವಕಾಶ ಇರುತ್ತದೆ. ಓದುಗರು ಕಥೆಯನ್ನು ಹಾಗೆಯೇ ಓದುತ್ತಾ ಹೋಗುವಂತಾಗದೆ, ಕಥೆಯಲ್ಲಿ ತಲ್ಲೀನರಾಗುವಂತೆ ಅದು ಉತ್ತೇಜಿಸುತ್ತದೆ.

ಸಚಿತ್ರ ಸರಣಿ ಪುಸ್ತಕಗಳನ್ನು ಬಳಸಿದ್ದರಿಂದ, ಲಿಂಗ ಅಥವಾ ಜಾತಿಯಂತಹ ವಿಷಯಗಳ ಬಗ್ಗೆ ಒಂದೇ ಸವನೆ ತೊಡಗಿಸಿಕೊಳ್ಳುವುದಕ್ಕೂ ಸಾಧ್ಯವಾಯಿತು. ಈ ವಿಷಯಗಳು ವಿದ್ಯಾರ್ಥಿಗಳಿಗೆ ಏಕತಾನತೆ ಅನ್ನಿಸದಂತೆ ಮಾಡಬೇಕಾದರೆ, ಹೆಚ್ಚಿನ ಸಾಮರಸ್ಯ ಮತ್ತು ಬದ್ಧತೆ ಇರಬೇಕು.

ಇನ್ನು, ಕಥೆ ಪುಸ್ತಕ ಓದುವಾಗ ನಾವು ಕೆಲವು ಕಡೆ ಸಣ್ಣ ವಿರಾಮ ತೆಗೆದುಕೊಂಡು, ಆ ಪುಸ್ತಕದ ಬಗ್ಗೆ ಅಥವಾ ಅದರಲ್ಲಿನ ಚಿತ್ರದ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಕೆಲವೊಮ್ಮೆ ಕಥೆಯ ಹಿಂದೆ ಮುಂದೆ ಹೋಗಿ, ಹಿಂದೆ ಆಗಿರುವುದನ್ನು ಉಲ್ಲೇಖಿಸುತ್ತಾ, ಕಥೆಯ ಓಘ ನಿಲ್ಲದಂತೆ ಮುಂದುವರಿಯುವುದು. ಬಹುಶಃ ಇನ್ನಿತರ ಬೇರೆ ಯಾವುದೇ ಮಾಧ್ಯಮ ರೂಪದಲ್ಲಿಯೂ ಈ ಬಗೆಯನ್ನು ನಾವು ಕಾಣಲಾರೆವು.


## ನಮ್ಮ ತರಗತಿಯ ನಿದರ್ಶನಗಳಿಂದ

'ಮೇರಾ ನಾಮ್ಗುಲಾಬ್ಹೈ' (ನನ್ನ ಹೆಸರು ಗುಲಾಬ್) ಎಂಬ ಕಥೆಯನ್ನು ಓದುತ್ತಿದ್ದೆವು. ಅದರಲ್ಲಿನ ಪ್ರಮುಖ ಪಾತ್ರ 'ಗುಲಾಬ್'ನನ್ನು ಅವನ ತಂದೆಯ ವೃತ್ತಿಯ ಕಾರಣಕ್ಕೆ (ಸ್ವಚ್ಛತಾ ಕಾರ್ಮಿಕ) ಹುಡುಗರ ಗುಂಪೊಂದು ಚುಡಾಯಿಸುತ್ತಿರುವ ಸನ್ನಿವೇಶದ ಬಗ್ಗೆ ಐದನೇ ತರಗತಿಯಲ್ಲಿ ಮಾತುಕತೆ ನಡೆಯುತ್ತಿರುವಾಗ, ಹುಡುಗನೊಬ್ಬ ಇನ್ನೊಬ್ಬ ಹುಡುಗನ ಜಾತಿಯ ಉಪನಾಮವನ್ನು (ಜಾತಿ ಸೂಚಕ ಸರ್ನೇಮ್) ತಿರುಚಿ ಕರೆಯುತ್ತಿರುವ ಸಂಗತಿ ಕಂಡು ಬಂತು. ಕಥೆಯನ್ನು ಕೇಳಿಸಿಕೊಂಡ ಕೆಲವು ಹುಡುಗರು, ಆ ಕಥೆಗೂ ಚುಡಾಯಿಸಲ್ಪಡುತ್ತಿರುವ ಈ ವಿದ್ಯಾರ್ಥಿಗೂ ಎಷ್ಟು ಸಾಮ್ಯತೆ ಇದೆ ಎಂದು ಪ್ರತಿಕ್ರಿಯಿಸಿದರು.


ಈ ನಿದರ್ಶನದಲ್ಲಿ, ಚುಡಾಯಿಸುತ್ತಿದ್ದ ಹುಡುಗನಿಗೆ ಯಾವುದೇ ನಿರ್ದಿಷ್ಟ ದುರುದ್ದೇಶವಿರಲಿಲ್ಲ. ಅವನ ಪ್ರಕಾರ ಅದು, ಅವರೆಲ್ಲಾ ಒಟ್ಟಾಗಿ ಯಾವಾಗಲೂ ಮಾಡುವ ಇತರ ತಮಾಷೆಗಳ ಹಾಗೆಯೇ ಇತ್ತು. ಆದಾಗ್ಯೂ, ಚುಡಾಯಿಸಲ್ಪಟ್ಟ ಹುಡುಗ ಮಾತ್ರ ಪ್ರತಿದಿನವೂ ಅದರಿಂದ ನೋವು ಅನುಭವಿಸುತ್ತಿದ್ದ. ಆದರೆ ಅದನ್ನು ವಿರೋಧಿಸಿ ಮಾತನಾಡುವಷ್ಟು ಧೈರ್ಯ ಅವನಲ್ಲಿರಲಿಲ್ಲ. ಈ ಸಂಗತಿಗಳು– ಜಾತಿ ಮತ್ತು ಲಿಂಗ ಆಧಾರಿತ ಅಸಮಾನತೆಗಳು– ಎಲ್ಲ ವಿದ್ಯಾರ್ಥಿಗಳ ಜೀವನದ ವಾಸ್ತವವಾಗಿದ್ದವು. ಇನ್ನು ಕೆಲವು ಪ್ರಕರಣಗಳಲ್ಲಿ ಮತ್ತು ಕೆಲವು ವಿದ್ಯಾರ್ಥಿಗಳಿಗೆ ಈ ವಾಸ್ತವದ ಅರಿವು ಚೆನ್ನಾಗಿಯೇ ಇತ್ತು. ಅವರಿಗೆ ಪ್ರಜ್ಞಾಪೂರ್ವಕ ಅರಿವು ಇಲ್ಲದೇ ಇದ್ದರೂ, ಅವುಗಳು ಅವರ ಜೀವನದಲ್ಲಿ ಬೆಸೆದಿದ್ದವು. ತರಗತಿಯಲ್ಲಿ ಈ ಮಾತುಕತೆಯನ್ನು ನಡೆಸಿದ ಬಳಿಕ, ನಾನು ಜಾತಿಯ ಬಗ್ಗೆ ಮಾತನಾಡಲು ಶಕ್ತನಾದುದಷ್ಟೇ ಅಲ್ಲದೆ, ನನಗೆ ತಿಳಿಯದೇ ಇದ್ದ, ತರಗತಿಯ ಕ್ರಿಯಾಶೀಲತೆಯ ಪರಿಚಯವಾಯಿತು. ಮುಖ್ಯವಾಗಿ, ಚುಡಾಯಿಸಲ್ಪಡುತ್ತಿದ್ದ ವಿದ್ಯಾರ್ಥಿ ನಿರಾಳವಾಗಲು ಬೇಕಾದ ನಿರ್ದಿಷ್ಟ ಕ್ರಮವನ್ನು ಕೈಗೊಳ್ಳಲೂ ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಆ ವಿದ್ಯಾರ್ಥಿಯ ಆತ್ಮವಿಶ್ವಾಸ ಹೆಚ್ಚಿತಲ್ಲದೆ, ಕ್ರಮೇಣ ತರಗತಿಯಲ್ಲಿ ಅವನ ಕಾರ್ಯಕ್ಷಮತೆಯೂ ಹೆಚ್ಚಿತು.

## ಕಥೆ ಹೇಳುವಿಕೆಯ ಒಳನೋಟಗಳು

ಕಥೆ ಹೇಳುವ ಪ್ರಕ್ರಿಯೆಯಲ್ಲಿ ನಾವು ವಿದ್ಯಾರ್ಥಿಗಳ ಬದುಕಿನ ಕುರಿತು ಎಷ್ಟೋ ಸಂಗತಿಗಳನ್ನು ಕಲಿಯುತ್ತೇವೆ. ಕಥೆಗಳು ಅವರಿಗೆ ಸಂಬಂಧಿಸಿದಂತಿರುತ್ತವೆ ಮತ್ತು ಸಾಂಪ್ರದಾಯಕವಾಗಿ ನಾವು ಬಳಸುವ ಪಠ್ಯಪುಸ್ತಕಗಳಿಗಿಂತ ಹೆಚ್ಚಾಗಿ ನಮ್ಮ ಆಂತರಿಕ ಒಳನೋಟಗಳನ್ನು ಮುನ್ನೆಲೆಗೆ ತರುತ್ತವೆ. ಇನ್ನೊಂದು ಉದಾಹರಣೆಯನ್ನು ನೋಡೋಣ. ನಾವು 'ಐ ವಿಲ್ಸೇವ್ಮೈ ಲ್ಯಾಂಡ್' (I Will Save My Land) ಎಂಬ ಕಥೆ ಓದುತ್ತಿದ್ದ ಸಂದರ್ಭ. ಅದರಲ್ಲಿನ ಪ್ರಮುಖ ಪಾತ್ರ ಒಬ್ಬಳು ಚಿಕ್ಕ ಹುಡುಗಿಯದ್ದು. ಅವಳು ತನ್ನ ತಂದೆ ಮತ್ತು ಅಜ್ಜಿಯೊಂದಿಗೆ ಮಾತನಾಡುತ್ತಿರುತ್ತಾಳೆ. ಆದರೆ ತಾಯಿಯ ಪ್ರಸ್ತಾಪ ಇರುವುದಿಲ್ಲ. ಅನೇಕ ವಿದ್ಯಾರ್ಥಿಗಳು ತಾಯಿ ಎಲ್ಲಿ ಇರಬಹುದು ಎಂದು ಇತ್ಯಾದಿಯಾಗಿ ವಿಚಾರಿಸಿದರು. ನಾನು ಅವರ ಕಲ್ಪನೆಗಳಿಗೆ ಉತ್ತೇಜನ ಕೊಟ್ಟರೂ, ಆ ಬಗ್ಗೆ ನಿರ್ದಿಷ್ಟ ಖಚಿತತೆ ನೀಡಲಾಗಲಿಲ್ಲ. ಕಥೆ ಓದಿ ಮುಗಿಸಿದ ಬಳಿಕ, ಆ ಕಥೆ ನನ್ನ ಪಾಲಿಗೆ ಲಿಂಗ, ಜಾತಿ ಮತ್ತು ಭೂಮಿಗೆ ಸಂಬಂಧಿಸಿದ್ದಾಗಿತ್ತು. ಆದರೆ ಒಬ್ಬ ವಿದ್ಯಾರ್ಥಿ, ಕಣ್ಣಲ್ಲಿ ನೀರು ತುಂಬಿಕೊಂಡು, "ಮಕ್ಕಳನ್ನು ಬಿಟ್ಟು ದೂರ ಹೋಗುವ ತಾಯಿ ಅತ್ಯಂತ ಕೆಟ್ಟವಳು" ಎಂದು ಹೇಳಿದ. ಕಥೆಯಲ್ಲಿ ಬಾಲಕಿಯ ತಾಯಿಗೆ ಏನಾಗಿರಬಹುದು ಎಂಬ ಬಗ್ಗೆ ನಾವು ಯಾವುದೇ ತೀರ್ಮಾನಕ್ಕೆ ಬಂದಿರದ ಕಾರಣ, ಆ ವಿದ್ಯಾರ್ಥಿಯ ಕಟುವಾದ ಅನ್ನಿಸಿಕೆ ಬಗ್ಗೆ ನನಗೆ ಆಶ್ಚರ್ಯವಾಯಿತು. ತರಗತಿ ಮುಗಿದ ಬಳಿಕ, ನಾನು ಆ ವಿದ್ಯಾರ್ಥಿಯೊಂದಿಗೆ ಮಾತನಾಡಿದೆ. ಅವನ ತಾಯಿ ಕೆಲ ತಿಂಗಳುಗಳಿಂದ ಬೇರೆ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದು, ಮಕ್ಕಳು ಮನೆಯಲ್ಲಿ ಅನಾಥರಂತೆ ಬಾಳಬೇಕಾಗಿದೆ ಎಂಬ ಸಂಗತಿ ನನಗೆ ತಿಳಿಯಿತು. ಶಿಕ್ಷಕರಾಗಿ ನಾವು, ಕಥೆಗಳು ಮಕ್ಕಳ ಮೇಲೆ ಅಂತಹ ಪರಿಣಾಮ ಬೀರುತ್ತವೆ ಎಂದು ತಿಳಿದಿರಲಿಲ್ಲ, ಕೇಳಿಯೂ ಇರಲಿಲ್ಲ. ಆ ನಿಟ್ಟಿನಲ್ಲಿ ಆಲೋಚಿಸಿಯೂ ಇರಲಿಲ್ಲ.




ಚಿತ್ರ 1. ಕಥೆ ಹೇಳುವಾಗ ಕಂಡ ಕೆಲವು ಒಳನೋಟಗಳು ಮತ್ತು ಪ್ರಶ್ನೆಗಳು




ಚಿತ್ರ 2. ನಾಲಾ, ಮುಸ್ಕಾನ್, ಪಡೊ ರಖಾ ಶೃಂಖಲಾ

ಆ ಮಗು ಆಟದ ಮೈದಾನದಲ್ಲಿ ಇತರ ಮಕ್ಕಳೊಂದಿಗೆ ಕೆಟ್ಟದಾಗಿ ವರ್ತಿಸುವ ಮೂಲಕ ತನ್ನ ನೋವನ್ನು ವ್ಯಕ್ತಪಡಿಸುತ್ತಿದ್ದರೂ, ಅದುವರೆಗೂ ನಾವೆಲ್ಲಾ ಅದನ್ನು ಸಂಪೂರ್ಣವಾಗಿ ಬೇರೆಯೇ ರೀತಿಯಲ್ಲಿ ಪರಿಭಾವಿಸುತ್ತಿದ್ದೆವು. ಹಾಗೆ ತನ್ನ ಕಥೆಯನ್ನು ಹೇಳಿಕೊಂಡ ತಕ್ಷಣ ಆ ಮಗುವಿನ ಪರಿಸ್ಥಿತಿ ಸುಧಾರಿಸಿತು ಎಂದೇನಲ್ಲ. ಆದರೆ ಆ ಮಗುವಿಗೆ ಒಳ್ಳೆಯ ಸಹಕಾರ ನೀಡಲು ನಮಗೆ ಸಾಧ್ಯವಾಯಿತು ಅಷ್ಟೇ. ಸಂವೇದನಾತ್ಮಕವಾಗಿ ಆಯ್ಕೆ ಮಾಡಿದ ಕಥೆಗಳು ಮನಸ್ಸನ್ನು ಹೊಸ ಅನುಭವಗಳಿಗೆ ತೆರೆದಿಡಲು ಪ್ರೋತ್ಸಾಹಿಸುತ್ತವೆ ಎಂಬುದು ನಿರ್ವಿವಾದ ಅಂಶ. ಉದಾಹರಣೆಗೆ, "ನಾಲಾ" (ನಮ್ಮ ದೇಶದ ನಗರವೊಂದರ ಕೊಳಗೇರಿಯ ಬಾಲಕಿಯೊಬ್ಬಳು ಬರೆದುದು) ಎಂಬ ಸಣ್ಣ ಕಥೆಯನ್ನು ಓದುವ ಸಂದರ್ಭದಲ್ಲಿ, ತೆರೆದ ಮೋರಿಯ ಬಳಿ, ಅದರ ದಂಡೆಗಳನ್ನೇ ಶೌಚಾಲಯವಾಗಿ ಬಳಸಿಕೊಂಡು ಬದುಕುವವರ ಅನುಭವವನ್ನು ನಾವು ತಿಳಿದುಕೊಳ್ಳು-ವಂತಾಯಿತು. ತರಗತಿಯ ವಿದ್ಯಾರ್ಥಿಗಳೆಲ್ಲರೂ ಜುಗುಪ್ಸೆ ವ್ಯಕ್ತಪಡಿಸಿದರು. (ಆದರೆ ಕಥೆಯಲ್ಲಿ ಬಳಕೆಯಾಗಿರುವ ಭಾಷೆ ಎಲ್ಲರಿಗೂ ತಮಾಷೆಯ ಸಂಗತಿಯಾಗಿತ್ತು). ಆದರೆ, ಇರಲು ಒಂದು ಮನೆ ಮತ್ತು ಬಳಸಲು ಶೌಚಾಲಯ ಇಲ್ಲದೇ ಇರುವ ಕರುಣಾಜನಕ ಸಂಗತಿಯ ಬಗ್ಗೆ ಒಂದು ಗಂಭೀರ ಚರ್ಚೆ ನಡೆಸಲು ಈ ಕಥೆಯಿಂದ ಸಾಧ್ಯವಾಯಿತು. ಅಲ್ಲದೆ, ಕೆಲವು ನಿರ್ದಿಷ್ಟ ಜನರು ಅತ್ಯಂತ ಅಪಾಯಕಾರಿ ಮತ್ತು ಕೊಳಕು ಜಾಗಗಳಲ್ಲಿ ಬದುಕಬೇಕಾಗಿದೆ ಎಂಬ ಬಗ್ಗೆ ನಾವು ಸಾಕಷ್ಟು ಹೊತ್ತು ಚರ್ಚೆ ಮಾಡಿದೆವು. "ಮೇರಾ ನಾಮ್‌ಗುಲಾಬ್‌ಹೈ" ಎಂಬ ಕಥೆಯಲ್ಲಿ ಕೂಡಾ, ಆಡಳಿತದಿಂದ ಯಾವುದೇ ರೀತಿಯ ಬೆಂಬಲ ಇಲ್ಲದ ಸ್ವಚ್ಛತಾ ಕಾರ್ಮಿಕರ ಸ್ಥಿತಿಯೂ ಅಪಾಯಕಾರಿಯಾದುದು. ಅಲ್ಲದೆ, ಆ ರೀತಿಯ ಕೆಲಸಗಳನ್ನು ನಮ್ಮ ನಮ್ಮ ಪ್ರದೇಶಗಳಲ್ಲಿ ಅಥವಾ ನಮ್ಮ ಮನೆಗಳಲ್ಲಿ ಯಾರು ಮಾಡುತ್ತಾರೆ ಎಂಬ ಕುರಿತೂ ನಾವು ಚರ್ಚಿಸಿದೆವು. ಇದು ಕಥೆಯ ಭಾಗ ಅಲ್ಲವಾದರೂ, ಅದರಿಂದಾಗಿ ನಾವು ವಾಸ್ತುಶಿಲ್ಪ, ಭೌಗೋಳಿಕತೆ ಮತ್ತು ನಮ್ಮ ಹಳ್ಳಿಗಳ ಸಾಮಾಜಿಕ ರಚನೆಗಳ ಕುರಿತು ಆಸಕ್ತಿದಾಯಕ ಚರ್ಚೆ ನಡೆಸುವಂತಾಯಿತು. ಜಾದುಯಿ ಮಚ್ಚಿ (Jadui Macchi) ಎಂಬ ಲಘು ಕಥೆಯಂತೂ, ನಾವು ಓದಿದ ಕೆಲವು ಗಂಭೀರ ಕಥೆಗಳು ಮತ್ತು ಸಮಸ್ಯೆಗಳ ನಡುವೆ, ಅದ್ಭುತವಾದ ಹಾಗೂ ಬೋಧನ ವಿಧಾನದ ದೃಷ್ಟಿಯಿಂದ ಶ್ರೀಮಂತವೆನ್ನಿಸುವ ಸಂಭಾಷಣೆಯನ್ನು ಹುಟ್ಟುಹಾಕಿತು. ಆ ಕಥೆಯಲ್ಲಿ, ಒಬ್ಬಳು ತಾಯಿ ಮತ್ತು ಅವಳ ಹೆಣ್ಣುಮಕ್ಕಳು ತಮ್ಮ ಭೂಮಿಗೆ ಸಂತೋಷವನ್ನು ಮರಳಿ ತರಲು ಪ್ರಯತ್ನಿಸುತ್ತಾರೆ. ಈ ಲಘು ಕಾಲ್ಪನಿಕ ಕಥೆಯನ್ನು ಓದುವಾಗ, ತರಗತಿಯಲ್ಲಿ ಬಾಲಕಿಯೊಬ್ಬಳು, "ಸಾಮಾನ್ಯವಾಗಿ ಹೆಣ್ಣುಮಕ್ಕಳು ಅಷ್ಟು ದೂರ ಒಬ್ಬಂಟಿಯಾಗಿ ಪ್ರಯಾಣಿಸಲಾರರು. ಹಾಗಿರುವಾಗ ಆ ಹೆಣ್ಣುಮಕ್ಕಳು ಹೇಗೆ ಅದನ್ನು ಮಾಡಲು ಸಾಧ್ಯ?" ಎಂದು ಪ್ರಶ್ನಿಸಿದಳು. ಅದು ಒಂದು ಸುದೀರ್ಘ ಚರ್ಚೆಯನ್ನು ಹುಟ್ಟುಹಾಕಿ, ಬಿಸಿಬಿಸಿ ವಾಗ್ವಾದಕ್ಕೆ ಎಡೆ ಮಾಡಿಕೊಟ್ಟಿತು. ನಂತರ ಅದೇ ಮಾತುಕತೆಯು ಹುಡುಗರು ಮತ್ತು ಹುಡುಗಿಯರು ಮನೆಗಳಲ್ಲಿ ಮನೆಗೆಲಸ ಮಾಡುವ ವಿಚಾರವಾಗಿ ವ್ಯವಸ್ಥಿತ ಚರ್ಚೆಯಾಗಿ ಮಾರ್ಪಟ್ಟಿತು. ಅದರ ಕೆಲವು ಪ್ರಮುಖ ಅಂಶಗಳು ಹೀಗಿದ್ದವು: ನಮ್ಮ ಜಿಲ್ಲೆಯಲ್ಲಿರುವ ಭೂಸಂಬಂಧಿ ಕಾನೂನನ್ನು ತಿಳಿದುಕೊಳ್ಳುವುದು; ತರಗತಿಯ ಕೆಲವು ಹುಡುಗಿಯರು ತಮಗೆ ಮಾಡಬೇಕೆನ್ನಿಸಿದ ಕೆಲಸಗಳನ್ನು, ಆಸೆಯಿದ್ದರೂ ಮಾಡಲು ನಿರ್ಬಂಧಗಳಿವೆ ಎಂದು ಹೇಳಿಕೊಂಡರು. ಕೆಲವು ಹುಡುಗರು ತಮ್ಮ ಮನೆಗಳಲ್ಲಿ ಎಲ್ಲರೂ ಮಾಡುವ ಕೆಲಸಗಳ ಪಟ್ಟಿ ತಯಾರಿಸಿದರು. ಆದರೆ, ಬಹುತೇಕ ಶ್ರಮದಾಯಕ ಕೆಲಸಗಳನ್ನು ತಮ್ಮ ತಾಯಂದಿರು ಮತ್ತು ಮನೆಯ ಹೆಣ್ಣು ಮಕ್ಕಳೇ ಮಾಡುತ್ತಾರೆ ಎಂದು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡರು.

## ಯಾವುದು ಸಾಧ್ಯ? ಯಾವುದು ಅಸಾಧ್ಯ?

ನಮ್ಮ ಯೋಜನೆ ಮತ್ತು ತರಗತಿಗಳಲ್ಲಿ ಸಮೃದ್ಧ ಚರ್ಚೆಗಳನ್ನು ಹುಟ್ಟುಹಾಕಬಲ್ಲ ಮತ್ತು ತರಗತಿಯ ಮಾತುಕತೆಗಳಲ್ಲಿ ಮುಕ್ತತೆಯನ್ನು ತರಬಲ್ಲ ಕೆಲವು ನಿರ್ದಿಷ್ಟ ಆಚರಣೆಗಳು ಇರುವುದನ್ನು ನಾನು ಕಳೆದ ವರ್ಷದಿಂದೀಚೆಗೆ ಕಂಡುಕೊಂಡಿದ್ದೇನೆ.

ನಾನು ವೈಯಕ್ತಿಕವಾಗಿ ಒಂದಷ್ಟು ಕಥೆ ಪುಸ್ತಕಗಳ ಮೇಲೆ ಗಮನಹರಿಸುತ್ತಿದ್ದೇನೆ. ಕೆಲವು ನಿರ್ದಿಷ್ಟ ಪುಸ್ತಕಗಳು ಮತ್ತು ಕತೆಗಳು ನನ್ನಲ್ಲಿ ಸಂಚಲನ ಮೂಡಿಸಿದ್ದು, ಅವುಗಳು ವಿದ್ಯಾರ್ಥಿಗಳ ಮೇಲೆ ಯಾವ ರೀತಿಯ ಪ್ರಭಾವ ಬೀರಬಹುದು ಎಂದು ತಿಳಿದುಕೊಳ್ಳುವ ಉನ್ನತ ನಿರೀಕ್ಷೆಯೊಂದಿಗೆ ನಾನು ತರಗತಿಗೆ ಹೋಗುವುದುಂಟು. ಕೆಲವೊಮ್ಮೆ, ನಾನು "ಬಯಸಿದ ಹಾಗೆ" ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ ವ್ಯಕ್ತವಾಗದೇ ಇರುವುದುಂಟು. ಅದು ನಾನು ಆ ಗುಂಪಿನೊಂದಿಗೆ ಬೆರೆಯುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ನಿರ್ದಿಷ್ಟ ಅಂತರ ಕಾಯ್ದುಕೊಂಡು, ವಿದ್ಯಾರ್ಥಿಗಳು ಉದಾಸೀನತೆ ಅಥವಾ ತಮ್ಮ ಇಷ್ಟವಿಲ್ಲದಿರುವಿಕೆಯನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡುವುದು ರಚನಾತ್ಮಕ ಮಾತುಕತೆಗಳಿಗೆ ಪ್ರಮುಖ ಕೀಲಿಕೈ ಎಂದು ನನಗನ್ನಿಸಿದೆ. ಹಾಗೆಂದು, ಆ ಸಂದರ್ಭಗಳಲ್ಲಿ ಯಾವುದೇ ವಿನಿಮಯ ನಡೆಯುವುದೇ ಇಲ್ಲ ಎಂದರ್ಥವಲ್ಲ. ಬದಲಿಗೆ, ಅವರಿಗೆ ಯಾವುದು ಇಷ್ಟವಾಯಿತು ಅಥವಾ ಇಷ್ಟವಾಗಲಿಲ್ಲ ಎಂಬ ಬಗ್ಗೆಯೇ ಚರ್ಚೆ ನಡೆಯಬಹುದು ಹಾಗೂ ಒಬ್ಬ ಶಿಕ್ಷಕನಾಗಿ ನನಗೆ ಯಾವುದು ಇಷ್ಟವಾಯಿತು ಮತ್ತು ಯಾಕೆ ಎಂದು ನಾನೂ ಮುಕ್ತವಾಗಿ ಹೇಳಬೇಕು. ಆದರೆ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವ ಪ್ರಯತ್ನ ಮಾಡಬಾರದು. ಯಾಕೆಂದರೆ, ಅಧಿಕಾರಯುತ – ಶಿಕ್ಷಕನಾಗಿ ತರಗತಿಯಲ್ಲಿ ನನಗೆ ಹೆಚ್ಚು– ಅಸಮತೋಲನ, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ, ಕನಿಷ್ಠ ಪಕ್ಷ ಯಾವುದೋ ಗುಂಪಿನ ಒಂದು ವಿಭಾಗದಿಂದಲಾದರೂ, ಕಡಿಮೆ ಪ್ರಾಮಾಣಿಕವಾದ ಮತ್ತು ನಾನು ಕೇಳಲು ಬಯಸುತ್ತಿರುವಂತಹ ಪ್ರತಿಕ್ರಿಯೆಗಳು ವ್ಯಕ್ತವಾಗಲು ಕಾರಣವಾದೀತು.

ಈ ಬೋಧನ ವಿಧಾನವನ್ನು ನಾವು ಕೈಗೆತ್ತಿಕೊಳ್ಳುವ ಮುನ್ನ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಅಂಶವೇನೆಂದರೆ, ಕಥೆಗಳು / ಕಥೆ ಪುಸ್ತಕಗಳ ಆಯ್ಕೆ. ವಿಶೇಷವಾಗಿ, ಮಕ್ಕಳು ತಮ್ಮ ಪಾಡಿಗೆ ಓದುವುದಾದರೆ, ಭಾಷೆಯು ವಯಸ್ಸಿಗೆ ಮತ್ತು ಅವರ ಹಂತಕ್ಕೆ ಸೂಕ್ತವಾಗಿರಬೇಕು. ಒಂದು ವೇಳೆ ಅದನ್ನು ಅವರಿಗೆ ಓದಿ ಹೇಳುವುದಾದರೆ, ಹೆಚ್ಚಿನ ಮಟ್ಟದ ಸಂಕೀರ್ಣತೆ ಇರುವುದನ್ನು, ಆಯ್ಕೆ ಮಾಡಿಕೊಳ್ಳಬಹುದು, ಏಕೆಂದರೆ ವಿವರಣೆ ಕೊಡಬಹುದು. ಆದರೆ ಅತಿಯಾದ ಸಂಕೀರ್ಣತೆ ಮತ್ತು ಅನಗತ್ಯ ವಿಷಯಗಳನ್ನು ವಿವರಿಸುವಂತೆ ಅತಿಯಾದ ಅಡಚಣೆಗಳಿದ್ದರೆ, ಕಥೆ ಕೇಳುವವರಿಗೆ ವಿಷಯಾಂತರ–ವಾಗುತ್ತದೆ. ಮುಖ್ಯವಾಗಿ, ಕಥೆಯ ವಸ್ತು ಮತ್ತು ಸಂದರ್ಭಕ್ಕೆ ಸಂಬಂಧಪಡುವಂತಿರಬೇಕು.

ಓದುಗನ ಸ್ವಂತ ಬದುಕು ಮತ್ತು ಅನುಭವದ ಕನ್ನಡಿಯ ನಡುವಿನ ಗೆರೆಯನ್ನು ದಾಟಿ ಮುನ್ನಡೆಯಬಲ್ಲ ಹಾಗೂ ಹೊಸ ಜಗತ್ತಿಗೆ ಕಿಂಡಿಯಾಗುವ ಕಥೆಗಳನ್ನು ನಾವು ಹುಡುಕಬೇಕಾಗಿದೆ. ಭಾರತೀಯ ಸಂದರ್ಭಗಳನ್ನು ಒಳಗೊಂಡ ಮತ್ತು ಹೆಚ್ಚು ನಮಗೆ ಸಂಬಂಧಪಡುವಂತಹ ಅನೇಕ ಕಥಾ ಶೀರ್ಷಿಕೆಗಳು ವಿದೇಶಿ ಪ್ರಕಾಶಕರಿಗಿಂತಲೂ ಮುಸ್ಕಾನ್ ಮತ್ತು ತೂಲಿಕಾ ಬುಕ್ಸ್‌ನಂತಹ ಪ್ರಕಾಶಕರ ಬಳಿ ಇವೆ. ಸಮರ್ಪಕವಾದ ಕಥೆಗಳು ಲಭ್ಯವಿಲ್ಲದೇ ಇದ್ದರೂ ನಮ್ಮ ವಿದ್ಯಾರ್ಥಿಗಳಿಗೆ ಪಠ್ಯದೊಂದಿಗೆ ಮತ್ತು ಅದಕ್ಕೆ ವಿರುದ್ಧವಾಗಿ ಓದಲು ಕಲಿಸುವುದು ನಮ್ಮ ಹೊಣೆ,

ಶಿಕ್ಷಕರು ಸರಳ ಕಥೆಗಳನ್ನು ಸಂಕೀರ್ಣ ಕಥೆಗಳ ಜೊತೆ (ಜೀವನ, ಜಾತಿ ಮುಂತಾದ ಸಂಕೀರ್ಣ ಸಮಸ್ಯೆಗಳ ಕುರಿತಾದುದು) ಆರಿಸಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಮತ್ತು ಪ್ರಶ್ನಿಸುವ ಉಮೇದು ಬರುವುದಷ್ಟೇ ಅಲ್ಲದೆ ಸಂಭಾಷಣೆ ಮತ್ತು ಪರ್ಯಾಲೋಚನೆಯ ಉಮೇದನ್ನೂ ಜೀವಂತ–ವಾಗಿಡಲು ಸಾಧ್ಯವಾಗುತ್ತದೆ.


**ಪರಾಮರ್ಶನಗಳು:**

*I Will Save My Land*, written by Rinchin, illustrated by Sagar Kolwankar, published by Tulika Books

*Mera Naam Gulab Hai* [My Name is Gulab], by Sagar Kolwankar, published by Tulika Books

*Naala*, written by Shivani, illustrated by Kanak Shashi published by Muskaan Publications

*Jadui Macchi*, written by Chandrakala Jagat, illustrated by Shakuntala Kushram, published by Tulika Books

***Publishers of Indian Children's Literature***

Adivaani, Duckbill Books, Eklavya Publications, Ektara, Kalpavriksh Children's Books, Karadi Tales, Katha, Muskaan Publication, Navayana Publishing, Pickle Yolk Books, Pratham Books, Tara Books, Tulika Books, Young Zubaan





**ಧ್ರುವ ದೇಸಾಯಿ** ಅವರು ಕೆಲ ವರ್ಷಗಳಿಂದ ದೇಶದ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಬಗೆಯ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿರುವ ಸಂವಾದ, ಭ್ರಾತೃತ್ವ ಮತ್ತು ನ್ಯಾಯ ಎಂಬ ಗುಂಪಿನಲ್ಲಿ ಆಸಕ್ತಿ (Interest Group for Dialogue, Fraternity, and Justice) ಹೊಂದಿದ್ದಾರೆ. ಅವರಿಗೆ ಮತ್ತು ಅವರ ವಿದ್ಯಾರ್ಥಿಗಳಿಗೆ ಸಚಿತ್ರ ಪುಸ್ತಕಗಳು ಮತ್ತು ಕ್ರೀಡೆಗಳಲ್ಲಿ ಬಹಳ ಆಸಕ್ತಿ. ಅವರನ್ನು dhruva.desai13@apu.edu.in ಮೂಲಕ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ನಾಗಮಣಿ ಎಸ್.ಎನ್.**

# ಕಲೆಯ ಮೂಲಕ ಕಥೆ ಹೇಳುವುದು

ಅಭಿಲಾಷಾ ಅವಸ್ಥಿ


ಕಥೆಗಳು ಮಕ್ಕಳಲ್ಲಿ ಆಸಕ್ತಿಯನ್ನು ಕೆರಳಿಸುತ್ತವೆ, ಮಾತ್ರವಲ್ಲದೆ ಪಾತ್ರಗಳ ಪ್ರಪಂಚಕ್ಕೆ ಸುಲಭವಾಗಿ ಅವರು ತೆರೆದುಕೊಳ್ಳುವಂತೆ ಮಾಡುತ್ತವೆ. ಕಥೆಗಳನ್ನು ಹೇಳಲು ಕಲೆಯನ್ನು ಮಾಧ್ಯಮವಾಗಿ ಆರಿಸಿಕೊಂಡಾಗ ಆ ಪ್ರಕ್ರಿಯೆಯನ್ನು ಅದು ಇನ್ನಷ್ಟು ಆಳಕ್ಕೆ ಕೊಂಡೊಯ್ಯಬಲ್ಲದು ಹಾಗೂ ಕಥೆಯು ದೀರ್ಘವಾಗಿ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡಬಲ್ಲದು. ಏಕೆಂದರೆ ಕಥೆಯ ಮೂಲಕ ನೀಡಿದ ಮಾಹಿತಿಯು ಮಕ್ಕಳನ್ನು ತಲುಪುತ್ತದೆ ಮಾತ್ರವಲ್ಲದೆ ಅದು ಸಂವೇದನಶೀಲವೂ ಆಗಿರುತ್ತದೆ. ಕಲೆಯ ಮೂಲಕ ಕಥೆ ಹೇಳುವುದರಿಂದ ಮಕ್ಕಳನ್ನು ತೊಡಗಿಸಿಕೊಳ್ಳುವುದಕ್ಕಾಗಿ ಅನೇಕ ದಾರಿಗಳು ಇವೆ.

## ಕಥೆಯನ್ನು ಹೇಳಲು ಮಗುವು ಕಲೆಯನ್ನು ಬಳಸಿದಾಗ

ಚಿತ್ರ 1ರಲ್ಲಿ, ಮಗುವು ಚಿತ್ರದ ಮೂಲಕ ಕಥೆಯನ್ನು ಹೇಳಲು ಯತ್ನಿಸುತ್ತಿದ್ದಾಳೆ. ಆಕೆಯ ಚಿತ್ರದಲ್ಲಿ ‘ ಐದು ಬಾಯಿಗಳ’ (ವಿದ್ಯಾರ್ಥಿನಿ ಹೇಳಿದ ಪದವಿದು) ಪೆನ್ಸಿಲ್ ಅನ್ನು ಕಾಣಬಹುದು. ಆಕೆಯೇ ನೀಡಿದ ವಿವರಣೆಯ ಪ್ರಕಾರ, ಆಕೆಯ ಪೆನ್ಸಿಲ್ ಒಂದು ಮರವಂತೆ. ಅದರ ಒಂದು ತುದಿಯು ಮುರಿದರೆ, ಆ ಜಾಗದಲ್ಲಿ ಇನ್ನೊಂದು ತುದಿಯು ಬೆಳೆಯುತ್ತದೆ. ಭಾಷೆಯ ಮೂಲಕ ಇದನ್ನು ಸಾಧ್ಯವಾಗಿಸಬಹುದು. ಈ ಕಲಾಕೃತಿಯ ಸುತ್ತ ಹೆಣೆಯಲಾದ ಕಥೆಯು ಈ ಹುಡುಗಿಯ ಪ್ರಪಂಚದ ಕುರಿತು ಆಳವಾದ ಅರಿವನ್ನು ಮೂಡಿಸಿಕೊಳ್ಳಲು ಬಾಗಿಲನ್ನು ತೆರೆಯುತ್ತದೆ. ಪೆನ್ಸಿಲ್ ಅನ್ನು ಬಳಸಿ ಆಕೆಯ ಕಥೆಯನ್ನು ರಚಿಸಲಾಗಿದೆ. ಆದರೆ ತನ್ನ ಕಲ್ಪನೆಯ ಮೂಲಕ ಆ ಕಥೆಗೆ ಅವಳು ಬೇರೆಯದೇ ತಿರುವು ನೀಡಿದ್ದಾಳೆ. ಇದರೊಂದಿಗೆ, ಈ ಕಲಾಕೃತಿಯಲ್ಲಿ ಬಳಸಲಾದ ಬೇರೆಬೇರೆ ಬಣ್ಣಗಳು ಆಕೆಯ ಕಲ್ಪನೆಯನ್ನು ಕ್ರೋಡೀಕರಿಸಿ ಆಕೆಯ ಭಾವನೆಗಳು ಮತ್ತು ಮನೋಭಾವವು ಕಾಗದದಲ್ಲಿ ಮೂಡುವಂತೆ ಮಾಡುತ್ತವೆ. ಈ ಮೂಲಕ ತನ್ನ ಕಲ್ಪನೆಗೆ ಮೂರ್ತ ರೂಪವನ್ನು ನೀಡಿದ್ದಾಳೆ.


## ಕಥೆಯನ್ನು ಹೆಣೆಯಲು ಮಕ್ಕಳಿಗೆ ಸಹಾಯ ಮಾಡಲು ಶಿಕ್ಷಕರು ಕಲಾಕೃತಿಯನ್ನು ಬಳಸಿದಾಗ

ಮಕ್ಕಳು ಕಲೆಯ ಮೂಲಕ ತಮ್ಮ ಕಥೆಗಳನ್ನು ವ್ಯಕ್ತಪಡಿಸಿದಾಗ, ಅವರು ಕಥೆಯನ್ನು ನಿರೂಪಿಸಲು ಪದಗಳು, ನುಡಿಗಟ್ಟುಗಳು ಮತ್ತು ಪರಿಕಲ್ಪನೆಗಳ ಕುರಿತು ಯೋಚಿಸಲು ಪ್ರಾರಂಭಿಸುತ್ತಾರೆ. ತರಗತಿಯಲ್ಲಿ ಕಥೆಯನ್ನು ಹೇಳುವ ಶಿಕ್ಷಕರು, ಈಗಾಗಲೇ ಹೊಂದಿರುವ ಕಲಾಕೃತಿಯನ್ನು ಬಳಸಿ, ಇದಕ್ಕೆ ಪೂರಕವಾದ ಸನ್ನಿವೇಶವನ್ನು ರೂಪಿಸಬಹುದು. ಶಿಕ್ಷಕರು ಒಂದು ಕಲಾಕೃತಿಯನ್ನು ತೋರಿಸಿದಾಗ, ಈ ಕೆಳಗಿನ ಪ್ರಶ್ನೆಗಳ ಮೂಲಕ ಅವರೇನು ನೋಡುತ್ತಾರೆ ಅಥವಾ ಗ್ರಹಿಸುತ್ತಾರೆ ಎಂಬುದನ್ನು ಕೇಳಬಹುದು: ಇಲ್ಲಿ ಏನು ನಡೆಯುತ್ತಿದೆ? ಜನರು ಏನು ಮಾಡುತ್ತಿದ್ದಾರೆ? ಅವರು ಹೇಗೆ ಭಾವಿಸುತ್ತಾರೆ? ಚಿತ್ರಗಳು ನಿಮಗೆ ಏನಾದರೂ ಹೇಳುತ್ತಿವೆಯೇ?



ಚಿತ್ರ 1. ವಿದ್ಯಾರ್ಥಿಯು ವಿಶಿಷ್ಟವಾದ ಪೆನ್ಸಿಲ್ ಒಂದನ್ನು ಕಲ್ಪಿಸಿಕೊಳ್ಳುತ್ತಿರುವುದು

ಈ ಪ್ರಶ್ನೆಗಳನ್ನು ಕೇಳಿದಾಗ ಮಕ್ಕಳು ವಿವಿಧ ಸಾಧ್ಯತೆಗಳ ಕುರಿತು ಯೋಚಿಸಲು ಆರಂಭಿಸುತ್ತಾರೆ. ಅವರು ರಚಿಸುವ ಕಥೆಗಳ ಸುತ್ತ ತಾರ್ಕಿಕತೆಯನ್ನು ಹುಡುಕಲು ಅವಕಾಶವಿರುತ್ತದೆ. ಮನಸ್ಥಿತಿ, ಅನುಕ್ರಮ, ಕಾಲಕ್ರಮ ಇತ್ಯಾದಿಗಳತ್ತ ಬೊಟ್ಟು ಮಾಡುವ ಪ್ರಶ್ನೆಗಳ ಮೂಲಕ ಈ ತರ್ಕಗಳು ಲಭಿಸುತ್ತವೆ. ಅಲ್ಲದೆ ಈ ಕಲೆಯನ್ನು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸುವ ಸ್ವಾತಂತ್ರ್ಯವಿರುತ್ತದೆ. ಇಲ್ಲಿ ಯಾರದೂ ಸರಿಯೂ ಅಲ್ಲ, ತಪ್ಪೂ ಅಲ್ಲ. ದೊರೆಯುವ ಉತ್ತರವು ಬೇರೆಬೇರೆ ಸಾಧ್ಯತೆಗಳ ಗುಣಕ್ಕೆ ಹಾಗೂ ಬೇರೆಬೇರೆ ತಾರ್ಕಿಕತೆಗಳಿಗೆ ಸರಿಹೊಂದುತ್ತದೆ. ಈ ಪ್ರಕ್ರಿಯೆಯಲ್ಲಿ ಶಿಕ್ಷಕರು ಸಹ ತಮ್ಮ ಅಭಿಪ್ರಾಯವನ್ನು ನೀಡುತ್ತಾರೆ. ಆ ಮೂಲಕ ಇಲ್ಲಿ ಅವರೂ ಸಹ ಪಾಲ್ಗೊಳ್ಳುತ್ತಾರೆ. ಎರಡು, ಮೂರು ಮತ್ತು ನಾಲ್ಕನೇ ಚಿತ್ರಗಳು ತರಗತಿಯಲ್ಲಿ ತೋರಿಸಿದ ವಿಮಾನದ ಚಿತ್ರಕ್ಕೆ ಮಕ್ಕಳು ನೀಡಿದ ಪ್ರತಿಕ್ರಿಯೆಗಳಾಗಿವೆ. ಈ ಚಿತ್ರವು ಒಂದು ದೊಡ್ಡದಾದ ಮರ, ಅನೇಕ ಜನರು, ಪ್ರಾಣಿ, ಪಕ್ಷಿಗಳನ್ನು ಹೊಂದಿದೆ. ಒಂದು ವಿಷಯವನ್ನು ಬೇರೆಬೇರೆ ಆಯಾಮಗಳಿಂದ ನೋಡಲು ಕಥೆಗಳು ನಮಗೆ ಸಹಾಯ ಮಾಡುತ್ತವೆ. ಒಂದು ಕಥೆಯ ಜೊತೆಗೆ ನಾವು ಕಲಾಕೃತಿಯನ್ನು ಬಳಸಿದಾಗ ಮತ್ತು ಆ ಕಥೆಗೆ ದೃಷ್ಟಿಕೋನಗಳನ್ನು ಪರಿಚಯಿಸಿದಾಗ, ನಮ್ಮ ಕಲ್ಪನೆಯನ್ನು ವಿವಿಧ ರೀತಿಯಲ್ಲಿ ಬಳಸುವುದಕ್ಕಾಗಿ ದಾರಿಯೊಂದು ತೆರೆದುಕೊಳ್ಳುತ್ತದೆ. ಚಿತ್ರ 1ರಲ್ಲಿ, ತನ್ನನ್ನು ತಾನು ಮರವಾಗಿ ಕಲ್ಪಿಸಿಕೊಂಡು, ಮಗುವು ಬೇರೆಯೇ ದೃಷ್ಟಿಕೋನವನ್ನು ವ್ಯಕ್ತಪಡಿಸಿದೆ. ಈ ವ್ಯಕ್ತೀಕರಣವು ಕಥೆಯನ್ನು ಇನ್ನಷ್ಟು ವೈಯಕ್ತಿಕಗೊಳಿಸುತ್ತದೆ. ಚಿತ್ರ 2ರಲ್ಲಿ, ವಿಮಾನವು ಮರದ ಮೇಲಿದ್ದಾಗ ಮರದಲ್ಲಿ ಮೂಡುವ ಭಾವನೆಗಳನ್ನು ಮಗುವು ಉಲ್ಲೇಖಿಸುತ್ತದೆ. ವಿವಿಧ ವ್ಯಾಖ್ಯಾನಗಳ ಕೂಡುವಿಕೆ ಎನ್ನಿಸುವ ಕಲಾಕೃತಿಯು ಈ ದೃಷ್ಟಿಕೋನದ ಉದಯಕ್ಕೆ ಅನುವು ಮಾಡಿಕೊಡುತ್ತದೆ. ಅಂದರೆ, ವಿವಿಧ ದೃಷ್ಟಿಕೋನಗಳ ಮೂಲಕ ಇದನ್ನು ಪರಿಶೋಧಿಸುವಾಗ ಸೃಜನಶೀಲವಾಗಿ ಯೋಚಿಸುವ ಅನೇಕ ಅವಕಾಶಗಳು ತೆರೆದುಕೊಳ್ಳುತ್ತವೆ.




ಚಿತ್ರ 2. 'ವಿಮಾನ'ದ ಚಿತ್ರ, ಕುರಿತು ವಿದ್ಯಾರ್ಥಿಯ ವ್ಯಾಖ್ಯಾನ

ಮಕ್ಕಳ ಈ ವ್ಯಾಖ್ಯಾನಗಳು, ಅವರು ತಮ್ಮ ಕಥೆಯಲ್ಲಿ ತರ್ಕವನ್ನು ರೂಪಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಚಿತ್ರ ೨ರ, ಕಲಾಕೃತಿಯಲ್ಲಿ ಇರುವ, ಎಲ್ಲರನ್ನೂ ರಕ್ಷಿಸಲು ಸಹಾಯ ಮಾಡಿದ ಮಾನವ-ಕುದುರೆಯ ಪ್ರಾಮುಖ್ಯವನ್ನು ತೋರಿಸುತ್ತದೆ. ಚಿತ್ರ ೩ರಲ್ಲಿ ತೋರಿಸಲಾಗಿರುವ ಕಥೆಯು, ಈ ಕಥೆಗೆ ಇನ್ನೊಂದು ಪಾತ್ರವನ್ನು ಸೇರಿಸುತ್ತದೆ. ಹೊಸ ಪಾತ್ರದಲ್ಲಿ ಕಾಣಿಸಿಕೊಳ್ಳುವ ಈ ನಾಯಕನು ಕಥೆಯ ಆಯಾಮವನ್ನೇ ಬದಲಾಯಿಸಿ ಬಿಡುತ್ತಾನೆ. ಚಿತ್ರ ೩ರಲ್ಲಿ ಗಮನಿಸಲಾಗಿರುವ ಇನ್ನೊಂದು ಅಂಶವು, ಚಿತ್ರದ ಸುತ್ತಲಿನ ಸಣ್ಣಪುಟ್ಟ ಅಂಶಗಳ ಮೇಲೆ ಗಮನ ಹರಿಸಿ ಈ ಕಥೆಯ ಲಹರಿಯನ್ನು ಮಾರ್ಪಡಿಸುತ್ತದೆ. ನಾಯಿ ಮತ್ತು ಹಸುವಿನ ಕುರಿತು ಉಲ್ಲೇಖಿಸಲಾಗಿರುವ ಸೂಕ್ಷ್ಮ ವಿವರಗಳು ಈ ಕಥೆಗೆ ರಹಸ್ಯಾತ್ಮಕ ಅಂಶವನ್ನು ಸೇರಿಸುತ್ತವೆ. ಇದು, ಅತ್ಯಂತ ಸಣ್ಣ ವಿಚಾರದ ಸುತ್ತಲೂ ಸಂಭಾವ್ಯದ ರೇಖೆಯನ್ನು ಎಳೆಯುವ ಮಗುವಿನ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಎಲ್ಲಾ ಪಾತ್ರಗಳನ್ನು ಅದೇ ಗಹನತೆಯಲ್ಲಿ ಅಧ್ಯಯನ ಮಾಡಿದರೂ, ಅವು ಕಥೆಯಲ್ಲಿ ಮಾರ್ಪಾಡು ಮಾಡಲು ದಾರಿ ಮಾಡಿಕೊಡುತ್ತವೆ ಮತ್ತು ಇದರಲ್ಲಿ ಇತರ ಸಾಧ್ಯತೆಗಳನ್ನು ಕಂಡುಹಿಡಿಯಲು ಒತ್ತು ನೀಡುತ್ತವೆ.

## ಸಾಂಸ್ಕೃತಿಕ ಜ್ಞಾನದೊಂದಿಗೆ ಕಥೆಯನ್ನು ಬೆಳೆಸಲು ಮಕ್ಕಳು ಕಲೆಯನ್ನು ಬಳಸಿದಾಗ

ಪಶ್ಚಿಮ ಬಂಗಾಳದ ಪಟ್ಟಚಿತ್ರ ಕಲೆಯಲ್ಲಿ ರಚಿಸಿದ, ಎರಡು ದೇಹಗಳ ಒಂದು ತಲೆಯನ್ನು ಮಾತ್ರ ಹೊಂದಿರುವ ಹುಲಿಯ ಚಿತ್ರವನ್ನು ಮಕ್ಕಳಿಗೆ ತೋರಿಸಲಾಯಿತು. ಚಿತ್ರ ೫ರಲ್ಲಿ ಮಗುವು ಆ ಚಿತ್ರವನ್ನು ವ್ಯಾಖ್ಯಾನಿಸಿ ಅದರ ಸುತ್ತಲೂ ಕಥೆಯನ್ನು ಹೆಣೆದಿದೆ. ಅವರು ಹುಲಿಯನ್ನು ವ್ಯಕ್ತೀಕರಣಗೊಳಿಸಿದ್ದು, ಅದು ತನ್ನದೇ ಪ್ರತಿಬಿಂಬದೊಂದಿಗೆ ಹೋರಾಡುವುದನ್ನು ಬಿಂಬಿಸಿದ್ದಾರೆ. ಕೆಲವು ಮಕ್ಕಳು ಚಿತ್ರದತ್ತ ನೋಡಿ ಹುಲಿಯ ಮುಖವು ಸೂರ್ಯಕಾಂತಿ ಹೂವಿನ ಮಾದರಿಯಲ್ಲಿ ರೂಪುಗೊಂಡಿದೆ ಅಥವಾ ನಾಲಿಗೆಯು ಹಲ್ಲಿಯ ನಾಲಿಗೆಯಂತಿದೆ ಎಂದು ಭಾವಿಸಿದರು. ತಮ್ಮ ಸಾಂಸ್ಕೃತಿಕ ಹಿನ್ನೆಲೆಯನ್ನು ಅವರು ಇಲ್ಲಿ ಅನ್ವಯಿಸಿದರು.

ಮಗುವಿನ ಚಿತ್ರ (ಚಿತ್ರ ೫) ಹುಲಿಯ ಚಿತ್ರದಿಂದ ಆಡುಗಳತ್ತ ಗಮನವನ್ನು ವರ್ಗಾಯಿಸಿತು. ಇದು ಕಲಾಕೃತಿಯಲ್ಲಿ ಕಾಣುವ ಪಾತ್ರದ ಪ್ರಾಮುಖ್ಯವನ್ನು ಬದಲಾಯಿಸಿತು. ಆ ಮೂಲಕ ಮಗುವು ಇಲ್ಲಿ ತನ್ನದೇ ಆದ ಆಯಾಮವನ್ನು ನೀಡುತ್ತದೆ. ಆಡನ್ನು ತಿನ್ನುವ ಹುಲಿಯ ಪ್ರವೃತ್ತಿಯನ್ನು ಇಲ್ಲಿ ಎತ್ತಿ ತೋರಿಸಲಾಯಿತು ಹಾಗೂ ನಾಟಕೀಯ ಮನವರಿಕೆಯ ಮೂಲಕ ಇದನ್ನು ಮುನ್ನೆಲೆಗೆ ತರಲಾಯಿತು. ಕಥೆಯ ಶೀರ್ಷಿಕೆಯು, ಕಥೆಯಲ್ಲಿ ಈ ಪಾತ್ರಗಳಿಗೆ ಮಗುವು ನೀಡಿದ ಪ್ರಾಮುಖ್ಯವನ್ನು ಪ್ರತಿಫಲಿಸುತ್ತದೆ. ಹೀಗೆ ಕಲೆಯು ನೆನಪಿಸಿಕೊಳ್ಳುವ ಸಾಧ್ಯತೆಯನ್ನು ಒದಗಿಸುತ್ತದೆ ಮಾತ್ರವಲ್ಲದೆ ಕಥೆಯನ್ನು ಹೆಣೆಯುವುದಕ್ಕಾಗಿ ಸಾಂಸ್ಕೃತಿಕ ಪೂರ್ವಜ್ಞಾನವನ್ನು ಅನ್ವಯಿಸಲು ಅವಕಾಶ ಮಾಡಿಕೊಡುತ್ತದೆ.


## ಕಥಾ ನಿರೂಪಣೆಯಿಂದ ಉಂಟಾಗುವ ಪ್ರಯೋಜನಗಳು

- ಕಲೆಯನ್ನು ಒಂದು ಮಾಧ್ಯಮವಾಗಿ ಬಳಸಿದಾಗ, ಮಕ್ಕಳು ತಮ್ಮ ಕಥೆಯನ್ನು ರೂಪಿಸುವುದಕ್ಕಾಗಿ ಬಹುವಾಗಿ ತಾರ್ಕಿಕ ಯೋಚನೆಯನ್ನು ನೆಚ್ಚಿಕೊಳ್ಳಬೇಕಾಗುತ್ತದೆ. ಇದು, ಅನುಕ್ರಮಗೊಳಿಸುವ ಕೌಶಲವನ್ನು ವೃದ್ಧಿಸುತ್ತದೆ. ಕಲಿಕೆಯಿಂದ ಇದೇ ಫಲಿತಾಂಶವನ್ನು ನಿರೀಕ್ಷಿಸಲಾಗುತ್ತದೆ.


- ಕಲೆಯು, ಇನ್ನಷ್ಟು ಕಲ್ಪನಾತ್ಮಕ ಯೋಚನೆಯೊಂದಿಗೆ ಪಾತ್ರಗಳು ಅಥವಾ ಸನ್ನಿವೇಶದತ್ತ ನೋಡಲು ಮಕ್ಕಳಿಗೆ ಸಹಾಯ ಮಾಡುತ್ತದೆ. ಏಕೆಂದರೆ ಆ ಕಲಾಕೃತಿಯೊಳಗೆ ಸಾಧ್ಯತೆಗಳನ್ನು ನೋಡಲು ಸಾಕಷ್ಟು ಅವಕಾಶವಿರುತ್ತದೆ. ಇದು ಮಕ್ಕಳಲ್ಲಿ ಆಸಕ್ತಿಯನ್ನು ಕೆರಳಿಸಬಹುದು ಹಾಗೂ ಆ ಕಥೆಯನ್ನು ನೆನಪಿಟ್ಟುಕೊಳ್ಳಲು ಸಹಾಯ ಮಾಡಬಹುದು.

- ಮಗುವು ತನ್ನ ಕಥೆಯನ್ನು ಕಲಾಕೃತಿಯ ಮೂಲಕ ವ್ಯಕ್ತಪಡಿಸಿದಾಗ, ಅದಕ್ಕೊಂದು ದೃಷ್ಟಿಕೋನವನ್ನು ನೀಡುವ ಸಂದರ್ಭದಲ್ಲಿ ಭಾಷೆಯು ಪೂರಕ ಪಾತ್ರವನ್ನು ವಹಿಸುತ್ತದೆ. ಹೀಗಾಗಿ ಇದು ಹೆಚ್ಚು ಅರ್ಥಪೂರ್ಣ ಹಾಗೂ ಆಸಕ್ತಿಕರವಾಗಿ ಮೂಡಿ ಬರುತ್ತದೆ.

- ಮಕ್ಕಳು ಕಲಾಕೃತಿಯ ಸೂಚಕಗಳಾದ ಬಣ್ಣ, ತಂತ್ರ, ಮನೋಚಿತ್ತವನ್ನು ರೂಪಿಸಲು ಬಳಸಿದ ಅಭಿವ್ಯಕ್ತಿ, ಧ್ವನಿ, ಅನುಕ್ರಮ ಮತ್ತು ಕಥೆಯ ಸನ್ನಿವೇಶ ಇತ್ಯಾದಿಗಳನ್ನು ಬಳಸುವುದರಿಂದ ಊಹೆಯ ಕೌಶಲವು ಇನ್ನಷ್ಟು ಸ್ಫುಟವಾಗುತ್ತದೆ.





**ಚಿತ್ರ 3. 'ವಿಮಾನ'ದ ಕಲಾಕೃತಿಯನ್ನು ಕುರಿತು ಇನ್ನೊಬ್ಬ ವಿದ್ಯಾರ್ಥಿ ಬರೆದ ಕಥೆ.**



A Tree

I am a Tree One day one Aeroplane
मुझ पर अटक गया उसने मेरी Branches
और मेरे फूल को भी Hert करने लगा। मेरा मन
ऐसा कर रहा था की Aeroplane को गीरा दू और
पर उसे मैं गीरा नहीं पाया तभी वहा Villagers
आये और उन्होने Aeroplane के अंदर के
सारे लोगों को नीकाल लिया और airoplane
मुझ परही अटके रहा।

ಚಿತ್ರ 4. 'ವಿಮಾನ'ದ ಕಲಾಕೃತಿಯನ್ನು ಕುರಿತು ಮತ್ತೋರ್ವ ವಿದ್ಯಾರ್ಥಿ ಬರೆದ ಕಥೆ.



A Goats

Once upon a time Two tigers fighting
उन्होंने सोचा की वह ही Goats खाएँगे इस लिए
वह लड रहे थे। उनके side मे Verry Beautiful
और उन्होंने सोचा तुम्हारा मुँह एक है।
• हम क्यो लड़ रहे हम बकरीयो को मिल
जूल कर खाएँगे उन्होने Goats को
मिल जूल कर खा लिया।

ಚಿತ್ರ 5. ತರಗತಿಯಲ್ಲಿ ತೋರಿಸಲಾದ 'ಹುಲಿ'ಯ ಚಿತ್ರದ ಕುರಿತು ವಿದ್ಯಾರ್ಥಿಯೋರ್ವ ಬರೆದ ಕಥೆ

## ತರಗತಿಯಲ್ಲಿ ಕಲಾಕೃತಿಯನ್ನು ಬಳಸುವುದು

ಶಿಕ್ಷಕರು ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು:

ಎ. ಕಲಾಕೃತಿಯನ್ನು ಬಳಸುವಾಗ ಕಥೆಯ ವಿವಿಧ ಅಂಶಗಳಾದ ತರ್ಕ, ವ್ಯವಸ್ಥೆ, ಸಂಸ್ಕೃತಿ, ದೃಷ್ಟಿಕೋನ, ಪಾತ್ರಗಳು ಮತ್ತು ಕಥಾವಸ್ತುವಿನ ಮೇಲೆ ಅದನ್ನು ಹೆಣೆಯಬಹುದು.

ಬಿ. ಕಲಾಕೃತಿಯನ್ನು ವ್ಯಾಖ್ಯಾನಿಸಲು ಭಾಷೆಯನ್ನು ಬಳಸುವ ಅಗತ್ಯವಿರುತ್ತದೆ. ಕಲಾಕೃತಿಯ ಮೂಲಕ ಕಥೆಯನ್ನು ಕಲಿಸಿದಾಗ ವೈವಿಧ್ಯಮಯ ಊಹೆಗೆ ಅವಕಾಶಗಳು ವೃದ್ಧಿಸುತ್ತವೆ. ಮಕ್ಕಳು ಒಂದು ಚಿತ್ರಕಲೆಯನ್ನು ನೋಡಿದಾಗ, ಆ ಕಲಾಕೃತಿಯಲ್ಲಿ ಕಾಣುವ ವಿವಿಧ ಅಂಶಗಳನ್ನು ಪರಿಶೀಲಿಸಿ ಅವರು ತರ್ಕವನ್ನು ರೂಪಿಸಬಹುದು. ಕೆಲವು ಸಾಧ್ಯತೆಗಳನ್ನು ಪ್ರಸ್ತುತಪಡಿಸಬಹುದು ಮತ್ತು ಅವರ ತಾರ್ಕಿಕ ವಿವರಣೆಯನ್ನು ಚರ್ಚಿಸಬಹುದು. ತರಗತಿಯಲ್ಲಿ ಕಲಾಕೃತಿಯನ್ನು ಕಥೆಯ ಕುರಿತು ಅಭ್ಯಾಸ ನಡೆಸಲು ಪ್ರಾರಂಭಿಸಿದಾಗ ಸಾಧ್ಯತೆಗಳಿಗೆ ಮಿತಿ ಇರುವುದಿಲ್ಲ.

ಮುಂದಿನ ಹಂತದಲ್ಲಿ ಕಲಾಕೃತಿಯನ್ನು ಪ್ರೇರಣೆಯಾಗಿ ಬಳಸಿಕೊಂಡು ಮಕ್ಕಳು ತಮ್ಮದೇ ಆದ ಕಥೆಯನ್ನು ಅಭಿವೃದ್ಧಿಪಡಿಸಬಹುದು. ಅವರು ಇದಕ್ಕಾಗಿ ಹೆಸರುಗಳು, ಬಣ್ಣಗಳು ಇತ್ಯಾದಿ ಸೇರಿದಂತೆ ಶಬ್ದಭಂಡಾರವನ್ನು ಹೊಂದಿರುವ ಅಗತ್ಯವಿದೆ. ಭಾಷಾ ಕಲಿಕೆಯ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಇದಕ್ಕೆ ವಾಕ್ಯದ ಮಾದರಿಯನ್ನು ಪರಿಚಯಿಸಬಹುದು. ಉದಾಹರಣೆಗೆ: ಅಲ್ಲಿ ----- ಇತ್ತು. ಮುಂದಿನ ಹಂತಕ್ಕೆ ಹೋಗುವಾಗ, ಈ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಕಲಾಕೃತಿಯ ಕುರಿತು ಕಥೆಯನ್ನು ಬರೆಯುವುದಕ್ಕಾಗಿ ಒಂದು ಚೌಕಟ್ಟನ್ನು ಅವರಿಗೆ ನೀಡಬಹುದು:

ಎ. ಕಥೆಯಲ್ಲಿರುವ ಭಾವನೆ ಯಾವುದು?

ಬಿ. ಇದರ ಕಾಲಾನುಕ್ರಮ ಯಾವುದು?

ಸಿ. ಇದರಲ್ಲಿ ಎಷ್ಟು ಪಾತ್ರಗಳಿವೆ? ಅವುಗಳಿಗೆ ಹೆಸರುಗಳಿವೆಯೇ? ಆ ಪಾತ್ರಗಳ ಗುಣಲಕ್ಷಣಗಳೇನು?

ಡಿ. ಕಥೆಯು ಎಲ್ಲಿ ನಡೆಯುತ್ತಿದೆ?

ಇ. ಕಥೆಯಲ್ಲಿ ಸಂಘರ್ಷವಿದೆಯೇ? ಅದನ್ನು ಹೇಗೆ ಬಗೆಹರಿಸಲಾಯಿತು? ಅವರು ಈ ಕುರಿತು ಬರೆದ ನಂತರ ಅದನ್ನು ಚಿತ್ರಗಳ ರೂಪದಲ್ಲಿ ಪ್ರತಿನಿಧಿಸಲು ಅವರನ್ನು ಕೇಳಬಹುದು. ಅವರು ಮಾಡುವ ಕಲಾತ್ಮಕ ಆಯ್ಕೆಯು, ಅವರು ಪ್ರಚುರಪಡಿಸಲು ಯತ್ನಿಸುವ ಅಂಶಗಳನ್ನು ನಿರೂಪಿಸುತ್ತದೆ. ಉದಾಹರಣೆಗೆ, ಅವರು ಒಂದು ಕೋಪಿಷ್ಟ ಆಮೆಯನ್ನು ತೋರಿಸಿದರೆ, ಅವರು ಆ ರೀತಿಯಲ್ಲಿ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಅದೇ ರೀತಿ, ಅವರು ಆರಿಸುವ ಬಣ್ಣಗಳು, ಕಥೆಯ ಕುರಿತು ಅವರು ಬರೆದ ಶೈಲಿಗೆ ಹೆಚ್ಚುವರಿ ಆಯಾಮವನ್ನು ನೀಡುತ್ತವೆ.

## ಉಪಸಂಹಾರ

ಒಟ್ಟಾರೆಯಾಗಿ, ಕಥೆಯನ್ನು ನಿರೂಪಿಸಲು ನಾವು ಕಲೆಯನ್ನು ಬಳಸಿದಾಗ ಇದು ಮೌಖಿಕ ಕಥೆಯ ಪ್ರಾತಿನಿಧಿತ್ವದ ಮೂಲಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ, ಅದರಲ್ಲೂ ಚೆನ್ನಾಗಿ ಕಲಿಯುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರುತ್ತದೆ. ಕಲೆಯ ಬಳಕೆಯು, ಸಾಧ್ಯತೆಗಳಿಗೆ ಸಾಕಷ್ಟು ಅವಕಾಶವನ್ನು ನೀಡುತ್ತದೆ ಮಾತ್ರವಲ್ಲದೆ ಯೋಚನೆಗಳನ್ನು ಆಧರಿಸುವುದಕ್ಕಾಗಿ ಸಾಂಪ್ರದಾಯಕವಲ್ಲದ ತರ್ಕವನ್ನು ರೂಪಿಸಲು ಅವಕಾಶ ಮಾಡಿ ಕೊಡುತ್ತದೆ. ಕಲೆಯು ಸಂಸ್ಕೃತಿಯನ್ನು ಪ್ರತಿನಿಧಿಸುವುದರಿಂದ ಮಕ್ಕಳು ಬಹು-ಸಾಂಸ್ಕೃತಿಕತೆಯ ಕುರಿತು ಕಲಿಯುತ್ತಾರೆ ಹಾಗೂ ತಮ್ಮದೇ ಆದ ಸಾಂಸ್ಕೃತಿಕ ವ್ಯಾಖ್ಯಾನವನ್ನು ಕಲಾಕೃತಿಗೆ ಅನ್ವಯಿಸುತ್ತಾರೆ.

**ಕೃತಜ್ಞತೆಗಳು**
ಲೇಖಕಿಯು, ಈ ಬರೆಹಕ್ಕಾಗಿ ತಮ್ಮ ವಿದ್ಯಾರ್ಥಿಗಳ ಕಲಾಕೃತಿಯನ್ನು ನೀಡಿದ ಹೇಮಾ ಪಾಂಡೆ (ಸರ್ಕಾರಿ ಪ್ರಾಥಮಿಕ ಶಾಲೆ, ಸೈಮ್ಧರ್) ಮತ್ತು ಪೂನಮ್ವಾ (ಸರ್ಕಾರಿ ಪ್ರಾಥಮಿಕ ಶಾಲೆ, ಬಿರೋರಾ) ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತಾರೆ.



**ಅಭಿಲಾಷಾ ಅವಸ್ಥಿ** ಅವರು ಉತ್ತರಾಖಂಡ ರಾಜ್ಯದ ಅಲ್ಮೋರಾದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಅವರು ಚಿತ್ರ ಬಿಡಿಸುವುದು, ಓದುವುದು ಮತ್ತು ಪ್ರವಾಸವನ್ನು ಇಷ್ಟಪಡುತ್ತಾರೆ. ಕಲೆಯನ್ನು ಪರಿಶೋಧಿಸುವುದು ಅವರ ಆಸಕ್ತಿಯ ವಿಷಯವಾಗಿದೆ. ಅವರನ್ನು abhilasha.awasthi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸ** | ಪರಿಶೀಲನೆ: **ನಾಗಮಣಿ ಎಸ್.ಎನ್.**

# ಬೋಧನೆಯ ವಿಧಾನವಾಗಿ ಕಥೆ ಹೇಳುವುದು

ಗಾಯತ್ರಿ

ಏಕಲವ್ಯ ಫೌಂಡೇಷನ್‌ನ ಮೊಹಲ್ಲಾ ಶೈಕ್ಷಣಿಕ ಚಟುವಟಿಕೆ ಕೇಂದ್ರ (Mohalla Education Activity Centre - MLAC) ಮತ್ತು ಸರ್ಕಾರಿ ಶಾಲೆಗಳೊಂದಿಗೆ ಕೆಲಸ ಮಾಡುತ್ತಾ ನಾವು, ಮಕ್ಕಳು ಭಾಷೆಗಳನ್ನು ಹೇಗೆ ಕಲಿಯುತ್ತಾರೆ ಹಾಗೂ ಕಥೆಗಳು, ಹಾಡುಗಳು, ಜಾನಪದ ಕಥೆಗಳು, ಕವಿತೆಗಳು ಇತ್ಯಾದಿಗಳ ಮೂಲಕ ಅವರು ಭಾಷೆಯನ್ನು ಕಲಿಯಲು ಅವರಿಗೆ ಹೇಗೆ ಸಹಾಯ ಮಾಡಬಹುದು ಎಂಬುದರ ಕುರಿತು ಒಂದಿಷ್ಟು ಹೊಳಹುಗಳನ್ನು ಪಡೆದುಕೊಂಡಿದ್ದೇವೆ. ಪ್ರಾಥಮಿಕ ತರಗತಿಯ ಮಕ್ಕಳು ನಿರೀಕ್ಷಿತ ಕಲಿಕೆಯ ಫಲಿತಗಳಾದ ಗಮನವಿಟ್ಟು ಆಲಿಸಿ ಹಿಂಜರಿಕೆಯಿಲ್ಲದೆ ಮಾತನಾಡುವುದು, ಒಂದು ಚಿತ್ರವನ್ನು ಹತ್ತಿರದಿಂದ ನೋಡಿ ಅದನ್ನು ವಿವರಿಸುವುದು, ಅವರ ಜೀವನ ಮತ್ತು ಪರಿಸರದ ಆಧಾರದ ಮೇಲೆ ಅನುಭವಗಳನ್ನು ಹಂಚಿಕೊಳ್ಳುವುದು ಮತ್ತು ವಿವರಿಸುವುದು, ಪ್ರಶ್ನಿಸುವುದು, ವಿವೇಚನೆ, ತುಲನೆಗಳನ್ನು ಸಾಧಿಸಲು ಕಥೆಗಳು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ತಿಳಿಸುವ ನನ್ನ ಅನುಭವದ ಕೆಲವು ಉದಾಹರಣೆಗಳು ಇಲ್ಲಿವೆ. ಕಥೆ ಹೇಳುವಿಕೆಯು ಭಾಷಾ ಕೌಶಲಗಳ ಅಭಿವೃದ್ಧಿಗೆ ಸಹಾಯ ಮಾಡುತ್ತದೆ ಮತ್ತು ಶಾಲಾ ಪರಿಸರ ಹಾಗೂ ಪಠ್ಯಕ್ರಮವನ್ನು ಸುಲಭವಾಗಿ ಬೆಸೆಯುತ್ತದೆ.

## ಕಥೆ ಹೇಳುವಿಕೆ ಮತ್ತು ಭಾಷೆ

ಒಂದು ಕಥೆಯನ್ನು ಹೇಳಲು ನಾನು ಪುಸ್ತಕವನ್ನು ತೆಗೆದುಕೊಂಡಾಗ, ಮೊದಲು ಮಕ್ಕಳಿಗೆ ಚಿತ್ರಗಳನ್ನು ತೋರಿಸುತ್ತೇನೆ. ಶೀರ್ಷಿಕೆ ಕೇಳಿ ಚಿತ್ರಗಳನ್ನು ನೋಡಿದಾಗ ಮಕ್ಕಳ ಮುಖದಲ್ಲಿ ಮೂಡುವ ಆನಂದಕ್ಕೆ ಬೆಲೆ ಕಟ್ಟಲಾಗದು. ಕಥೆ ಹೇಳುವಿಕೆಯಲ್ಲಿ ಎಲ್ಲರನ್ನೂ ಒಳಗೊಳ್ಳಬೇಕು, ಪ್ರತಿ ಮಗುವೂ ಆಲಿಸುವಂತೆ ನೋಡಿಕೊಳ್ಳಬೇಕು ಮತ್ತು ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಇಲ್ಲದಿದ್ದರೆ, ಅವರ ಉತ್ಸಾಹವು ಬೇಗನೆ ಮಸುಕಾಗುತ್ತದೆ.

ಮಕ್ಕಳಿಗೆ, ವಿಶೇಷವಾಗಿ ಜನಪದ ಕಥೆಗಳು ಸೂಕ್ತವಾಗಿರುತ್ತವೆ. ಏಕೆಂದರೆ ಅವು ದೈನಂದಿನ ಜೀವನ, ಆವಶ್ಯಕತೆಗಳು, ಸ್ವಭಾವ ಮತ್ತು ಹೋರಾಟಗಳನ್ನು ಪ್ರತಿನಿಧಿಸುತ್ತವೆ ಮತ್ತು ಮಕ್ಕಳು ಅವುಗಳನ್ನು ತಮ್ಮ ಪರಿಸರಕ್ಕೆ ಸಂಬಂಧ ಕಲ್ಪಿಸಿಕೊಳ್ಳಬಹುದು. ಹೋಶಂಗಾಬಾದ್‌ನ ಪ್ರಾಥಮಿಕ ಶಾಲೆಯಲ್ಲಿ 1ರಿಂದ 3ನೇ ತರಗತಿಯ ಮಕ್ಕಳಿಗೆ ಸುಂದರವಾದ ಚಿತ್ರಣಗಳನ್ನೊಳಗೊಂಡ ಜನಪದ ಕಥೆಯಾದ ಶಲ್ಜಮ್ (ಟರ್ನಿಪ್, ಏಕಲವ್ಯ) ಅನ್ನು ಹೇಳಲಾಯಿತು. ನಾನು ಮಕ್ಕಳಿಗೆ ಚಿತ್ರಗಳನ್ನು ತೋರಿಸಿ, ಅವರು ಏನು ನೋಡಿದರೋ ಅದರ ಬಗ್ಗೆ ಕೇಳಿದೆ. ಮರಗಳು, ಗಿಡಗಳು, ರಸ್ತೆಗಳು, ಮನೆಗಳು, ಹೊಲಗಳು, ನದಿಗಳು, ಗುಡಿಸಲುಗಳು, ಪರ್ವತಗಳು, ಮಾನವ ಜೀವಿಗಳು, ಪ್ರಾಣಿಗಳು ಮತ್ತು ಹೂವುಗಳನ್ನು ನೋಡಿದೆವು ಎಂಬುದು ಅವರು ಕೊಟ್ಟ ಕೆಲವು ಉತ್ತರಗಳಾಗಿದ್ದವು. ಅವರು ಹೂವುಗಳ ಹೆಸರನ್ನೂ ಸಹ ಹೇಳಿದರು: ಚೆಂಡುಹೂವು ಮತ್ತು ಸೇವಂತಿಗೆ. ಎಲ್ಲಾ ಮಕ್ಕಳು ಮಾತನಾಡುತ್ತಿರುವಾಗ, ಒಂದನೇ ತರಗತಿಯ ಒಂದು ಮಗು ಜೊತೆಯಾಯಿತು. ಅದು ಯಾರೂ ನೋಡದ ಮೂರು ಸಣ್ಣ ಹಕ್ಕಿಗಳನ್ನು ಆ ಚಿತ್ರಗಳಲ್ಲಿ ತೋರಿಸಿತು.

> ಕಥೆಯನ್ನು ಚರ್ಚಿಸುವಾಗ ಮಕ್ಕಳಿಗೆ ಭಾಷೆಯನ್ನು ಬಳಸಲು ಅದ್ಭುತವಾದ ಅವಕಾಶ ದೊರೆಯುವುದರಿಂದ ಮಕ್ಕಳಿಗೆ ಚಿತ್ರಗಳನ್ನು ತೋರಿಸುವುದು, ಅವುಗಳ ಬಗ್ಗೆ ಮಾತನಾಡುವುದು, ಪ್ರಶ್ನೆಗಳನ್ನು ಕೇಳುವುದು ಮತ್ತು ಕಥೆಯಲ್ಲಿರುವ ಅನುಭವಗಳನ್ನು ಹೋಲುವಂತಹ ಮಕ್ಕಳ ಅನುಭವಗಳನ್ನು ಕೇಳುವುದು ಭಾಷೆಯ ಬೆಳವಣಿಗೆಗೆ ನಿರ್ಣಾಯಕ ಅಂಶಗಳಾಗಿವೆ. ತರಗತಿಯಲ್ಲಿನ ಎಲ್ಲಾ ಮಕ್ಕಳು ಒಟ್ಟಿಗೆ ಮಾತ-ನಾಡುವಾಗ, ಸಾಮಾನ್ಯವಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಹಿಂಜರಿಯುವ ಮಕ್ಕಳು ಸಹ ಮುಕ್ತವಾಗಿ ಮಾತನಾಡುವುದು ಕಂಡುಬರುತ್ತದೆ.

## ಒಂದು ಕಥೆಯನ್ನು ಪರಿಚಯಿಸುತ್ತಾ

ಕಥೆಯನ್ನು ಪ್ರಾರಂಭಿಸುವ ಮೊದಲು, ಅದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸುವುದು ನನಗೆ ಉಪಯುಕ್ತವಾಗಿ ಕಂಡಿದೆ. ಏಕೆಂದರೆ ಈ ರೀತಿಯಾಗಿ ಕಥೆಯನ್ನು ಹೇಳುವಾಗ ನಾವು ಮಕ್ಕಳಿಗೆ ಅವರ ಸುತ್ತಮುತ್ತಲಿನ ಹಲವಾರು ವಿಷಯಗಳನ್ನು ಪರಿಚಯಿಸಬಹುದು. ಇದರ ಜೊತೆಗೆ, ಮಕ್ಕಳ ಅನುಭವಗಳನ್ನು ತರಗತಿಯಲ್ಲಿ ಪರಿಗಣಿಸಬಹುದು ಮತ್ತು ಅವರು ಹಂಚಿಕೊಳ್ಳುವ ಕೆಲವು ವಿಚಾರಗಳ ಆಧಾರದ ಮೇಲೆ ಮುಂದಿನ ಚರ್ಚೆಗಳು ಮತ್ತು ಚಟುವಟಿಕೆಗಳನ್ನು ಕೈಗೊಳ್ಳಬಹುದು. "ಯಾರಾದರೂ ಗಡ್ಡೆಕೋಸು / ನವಿಲುಕೋಸನ್ನು ನೋಡಿದ್ದೀರಾ, ಅದು ಹೇಗೆ ಕಾಣುತ್ತದೆ?" ಎಂದು ನಾನು ಕೇಳಿದಾಗ, ಅನೇಕ ಮಕ್ಕಳು ತಮ್ಮ ಕೈಗಳನ್ನು ಎತ್ತಿದರು. ಕೆಲವು ಮಕ್ಕಳು ಅದು ಈರುಳ್ಳಿಯಂತೆ ಕಾಣುತ್ತದೆ ಎಂದು ಹೇಳಿದರೆ, ಇನ್ನೂ ಕೆಲವರು ಮೂಲಂಗಿ ಅಥವಾ ಕ್ಯಾರೆಟ್ಟಿನಂತೆ ಎಂದು ಹೇಳಿದರು, ಮತ್ತೆ ಕೆಲವರು

ಎಲೆಕೋಸಿನಂತೆ ಕಾಣುತ್ತದೆ ಎಂದು ಹೇಳಿದರು. ಒಂದು ಮಗುವು ಅದು ಬದನೆಕಾಯಿಯಂತೆ ನೇರಳೆ ಬಣ್ಣದ್ದಾಗಿರುತ್ತದೆ ಎಂದು ಹೇಳಿತು. ಇದರಿಂದ ಮತ್ತೊಂದು ಪ್ರಶ್ನೆ ಉದ್ಭವಿಸಿತು: ನವಿಲುಕೋಸು ಹೇಗೆ ಬೆಳೆಯುತ್ತದೆ ಎನ್ನುವುದನ್ನು ಯಾರಾದರೂ ಗಮನಿಸಿದ್ದೀರಾ? ಎರಡು ಮೂರು ಕೈಗಳು ಮೇಲೆದ್ದವು. "ಮಣ್ಣಿನ ಕೆಳಗೆ" ಎಂದು 3ನೇ ತರಗತಿಯ ಆರ್ಯನ್ ಹೇಳಿದನು. ಇನ್ನು ಯಾವ ಯಾವ ತರಕಾರಿಗಳು ನೆಲದಡಿ ಬೆಳೆಯುತ್ತವೆ ಎಂದು ನಾನು ಕೇಳಿದೆ. ಕ್ಯಾರೆಟ್, ಮೂಲಂಗಿ, ನೆಲಗಡಲೆ, ಮತ್ತು "ಆ ... ರಕ್ತದಂತೆ ಕೆಂಪಗೆ ಇರುವ... ಹಾ! ಬೀಟ್ರೂಟ್, ಆಲೂಗಡ್ಡೆ, ಈರುಳ್ಳಿ, ಬೆಳ್ಳುಳ್ಳಿ" ಎಂದು ಮಕ್ಕಳು ಒಟ್ಟಾಗಿ ಜೋರಾಗಿ ಹೇಳಿದರು.

"ನೀವು ಈ ಹಿಂದೆ ಎಂದಾದರೂ ನವಿಲುಕೋಸನ್ನು ತಿಂದಿದ್ದೀರಾ? ಒಂದು ವೇಳೆ ತಿಂದಿದ್ದರೆ, ಹಸಿಯಾದುದನ್ನು ತಿಂದಿರುವಿರೋ ಅಥವಾ ಬೇಯಿಸಿದ್ದನ್ನೋ ಹೇಳಿ". ಕೆಲವೇ ಕೆಲವು ಮಕ್ಕಳು ಮಾತ್ರ ನವಿಲುಕೋಸನ್ನು ತಿಂದಿರುವುದು ಗೊತ್ತಾಯಿತು. ಒಂದು ಮಗುವಿನ ಪ್ರಕಾರ, ಅದನ್ನು ಕತ್ತರಿಸಿ ರೊಟ್ಟಿಯೊಂದಿಗೆ ತಿನ್ನಲಾಗುತ್ತದೆ. ಮತ್ತೊಬ್ಬಳು ಅದನ್ನು ಸಲಾಡ್‌ನ ಭಾಗವಾಗಿ ಹಸಿಯಾಗಿ ಸೇವಿಸಿದ್ದಳು. ಮೂರನೇ ಮಗು ಅದನ್ನು ಪಲ್ಯದ ರೂಪದಲ್ಲಿ ಸೇವಿಸಿದ್ದೇನೆ ಎಂದು ಹೇಳಿತು. ಇನ್ನೊಂದು ಮಗು ತನ್ನ ತಾಯಿ ನವಿಲುಕೋಸು ಮತ್ತು ಬಟಾಣಿಯಿಂದ ಉಪ್ಪಿನಕಾಯಿ ತಯಾರಿಸಿದ್ದರು ಮತ್ತು ಅವರು ಅದನ್ನು ಅನ್ನ, ಸಾರಿನೊಂದಿಗೆ ಸವಿದೆವು ಎಂದು ಹೇಳಿತು. ಇದು ಚರ್ಚೆಯನ್ನು ಹುಟ್ಟುಹಾಕಿತು. "ಸರಿ, ನೀವು ಯಾವ ಯಾವ ಉಪ್ಪಿನಕಾಯಿಯನ್ನು ತಿಂದಿದ್ದೀರಿ ಹೇಳಿ?" ಎಂಬುದು ನನ್ನ ಮುಂದಿನ ಪ್ರಶ್ನೆಯಾಗಿತ್ತು.

ಮಕ್ಕಳು ಮಾವು, ನಿಂಬೆ, ನೆಲ್ಲಿಕಾಯಿ, ಮೆಣಸಿನಕಾಯಿ, ಹಲಸು, ಮೀನು, ಅರಿಶಿನದ ಉಪ್ಪಿನಕಾಯಿಗಳ ಬಗ್ಗೆ ಮಾತನಾಡ-ತೊಡಗಿದರು. ಸಂಭಾಷಣೆಯನ್ನು ಮುಂದುವರಿಸುತ್ತಾ, ನಾನು ಬೆಳ್ಳುಳ್ಳಿ, ಶುಂಠಿ, ಅಣಬೆ, ಮೆಣಸಿನಕಾಯಿ, ಕರಂಡೆಕಾಯಿ ಹಾಗೂ ಕ್ಯಾರೆಟ್, ಹೂಕೋಸು, ನವಿಲುಕೋಸು ಮತ್ತು ಬಟಾಣಿಗಳ ಮಿಶ್ರ ಉಪ್ಪಿನಕಾಯಿಯನ್ನು ತಿಂದಿದ್ದೇನೆ ಎಂದು ದನಿಗೂಡಿಸಿದೆ. ಮಕ್ಕಳಿಗೆ ಕರಂಡೆ/ಕವಳ (ಸಣ್ಣ, ಹುಳಿಯಾದ ಕಾಡು ಹಣ್ಣು) ಪರಿಚಯವಿಲ್ಲದ ಕಾರಣ ಗೂಗಲ್ ಮಾಡಿ ಅವರಿಗೆ ಅದರ ಗಿಡ ಮತ್ತು ಹಣ್ಣನ್ನು ತೋರಿಸಿದೆ.

ಇಲ್ಲಿಯವರೆಗೆ ನಾವು ಕಥೆಯ ಹತ್ತಿರವೂ ಸುಳಿದಿರಲಿಲ್ಲ. ಮಾತು ಕೇವಲ ನವಿಲುಕೋಸಿನ ಸುತ್ತ ಕೇಂದ್ರೀಕೃತವಾಗಿತ್ತು. ನಾನು ಮಕ್ಕಳಿಗೆ ಕಥೆಯಲ್ಲಿನ ಎಲ್ಲಾ ಚಿತ್ರಗಳನ್ನು ಒಂದೊಂದಾಗಿ ತೋರಿಸಿ ಕಥೆಯನ್ನು ಊಹಿಸುವಂತೆ ಹೇಳಿದೆ. ಮಕ್ಕಳು ಪ್ರತಿ ಚಿತ್ರ ಮತ್ತು ಬೆಳೆಯುತ್ತಿರುವ ತರಕಾರಿಗಳ ಬಗ್ಗೆ ಸಾಕಷ್ಟು ಮಾತನಾಡಿದರು. ಅವರು ಪ್ರತಿ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದರು- ಗೌಳಿಗ/ಹಾಲಿನವನು, ನಲ್ಲಿ ತಿರುಗಿಸುತ್ತಿರುವ ಹುಡುಗಿ, ಹೊಲಕ್ಕೆ ನೀರು ಹಾಕುತ್ತಿರುವ ಅಜ್ಜ, ಗಾಡಿಯಲ್ಲಿ ತರಕಾರಿ ಸಂಗ್ರಹಿಸುವ ಅಜ್ಜಿ ಇತ್ಯಾದಿ.ಪುಟಗಳನ್ನು ತಿರುವುತ್ತಾ ಹೋದಂತೆ ಅಜ್ಜ ಸ್ವತಃ ನವಿಲುಕೋಸನ್ನು ಅಗೆದು ತೆಗೆಯಲು ಸಾಧ್ಯವಾಗದಿದ್ದಾಗ ಅಜ್ಜಿಯನ್ನು ಕರೆಯುವ ಕಥೆಯ ಭಾಗಕ್ಕೆ ಬಂದೆವು. ಅವಳಿಗೂ ಅದನ್ನು ಹೊರತೆಗೆಯಲು ಸಾಧ್ಯವಾಗದ ಕಾರಣ, ಅವಳು ಹುಡುಗಿಯನ್ನು ಕರೆಯುತ್ತಾಳೆ. ಈಗಲಾದರೂ ನವಿಲುಕೋಸು ಹೊರಬರುತ್ತದೆಯೇ ಎಂದು ನಾನು ಕೇಳಿದಾಗ, ಮಕ್ಕಳು ಸಕಾರಾತ್ಮಕವಾಗಿ ಹುಡುಗಿ ತನ್ನ ಅಜ್ಜ-ಅಜ್ಜಿಯರಿಗಿಂತ ಬಲಶಾಲಿ ಎಂಬ ಪ್ರತಿಕ್ರಿಯೆಯನ್ನು ನೀಡಿದರು. ಒಂದು ಮಗು ತನ್ನ ಮನೆಯಲ್ಲಿಯೂ ಸಹ ತನ್ನ ಅಜ್ಜನಿಗೆ ಸಾಧ್ಯವಾಗದ ವಸ್ತುಗಳನ್ನು ತನ್ನ ತಂದೆಗೆ ಎತ್ತಲು ಸಾಧ್ಯವಾಗುತ್ತದೆ ಎಂದು ಹೇಳಿತು. ಆದಾಗ್ಯೂ, ಈ ಪುಟ್ಟ ಮಕ್ಕಳು ಮುಂದಿನ ಪುಟದ ಚಿತ್ರವನ್ನು ನೋಡಿದಾಗ, ನವಿಲುಕೋಸು ಇನ್ನೂ ಹೊರಗೆ ಬಂದಿಲ್ಲ ಎಂಬ ನಿರ್ಣಯಕ್ಕೆ ಬಂದರು. ಆಳವಾಗಿ ಬೇರು ಬಿಟ್ಟಿರುವುದರಿಂದ ಬಹುಶಃ ಅದನ್ನು ಹೊರ ತೆಗೆಯಲು ಸಾಕಷ್ಟು ಶಕ್ತಿಯ ಅಗತ್ಯವಿದೆ ಎಂದು ಅವರು ಹೇಳಿದರು. ಹೇಸರಗತ್ತೆ, ಕೋಳಿ ಮತ್ತು ಕೋಳಿ ಮರಿಗಳು ಆ ದೃಶ್ಯವನ್ನು ನೋಡಿ ನಗುತ್ತಿರುವುದನ್ನು ಅವರು ಗಮನಿಸಿದರು. ಮುಂದೆ, ಹುಡುಗಿ ಹೇಸರಗತ್ತೆಯನ್ನು ಕರೆಸುತ್ತಾಳೆ. ಅದು ನವಿಲುಕೋಸನ್ನು ಎಳೆಯಲು ಸಹಾಯ ಮಾಡಲು ಆ ಹುಡುಗಿಯ ಜಡೆಯನ್ನು ಹಿಡಿಯುತ್ತದೆ. ಜಮೀನಿನಲ್ಲಿದ್ದ ಪ್ರಾಣಿಗಳೆಲ್ಲ ಒಂದೊಂದಾಗಿ ನವಿಲುಕೋಸನ್ನು ಎಳೆಯುವ ಕೆಲಸಕ್ಕೆ ಸೇರಿಕೊಳ್ಳುತ್ತವೆ. ಅಂತಿಮವಾಗಿ ನವಿಲುಕೋಸು ಹೊರಗಡೆ ಬರುವವರೆಗೂ ಅವರು ಒಬ್ಬರನ್ನೊಬ್ಬರು ಗಟ್ಟಿಯಾಗಿ ಹಿಡಿದುಕೊಂಡು ಎಳೆದರು. ನವಿಲುಕೋಸು ಹೊರ ಬಂದಾಗ ಎಲ್ಲರೂ ಒಬ್ಬರ ಮೇಲೆ ಒಬ್ಬರು ಬೀಳುವ ಚಿತ್ರವನ್ನು ನೋಡುತ್ತಾ ತುಂಬಾ ಖುಷಿಯಾಗಿ ಎಲ್ಲಾ ಮಕ್ಕಳೂ ಜೋರಾಗಿ ನಗುತ್ತಿದ್ದರು.

ಅವರೆಲ್ಲ ಸೇರಿ ನವಿಲುಕೋಸನ್ನು ಎಳೆಯಲು ಸಾಧ್ಯವಾಗದಿದ್ದಾಗ ಸಣ್ಣ ಇಲಿಯು ಹೇಗೆ ಅದನ್ನು ಎಳೆಯಲು ಸಾಧ್ಯವಾಯಿತು ಎಂದು ನಾನು ಅವರನ್ನು ಕೇಳಿದೆ. ಒಂದು ಮಗು ಇಲಿಯು ಬೇರುಗಳನ್ನು ಕತ್ತರಿಸಿದ ಕಾರಣ ಅದು ಕೊನೆಗೆ ಕಿತ್ತು ಹೊರಬಂದಿತು ಅಥವಾ ಬಹುಶಃ ಅದು ತನ್ನ ಸ್ನೇಹಿತನಿಂದ ಸಹಾಯ ತೆಗೆದುಕೊಂಡಿದೆ ಎಂದು ಭಾವಿಸಿತು.ನಿರೂಪಣೆಯಿಲ್ಲದಿದ್ದರೂ, ಕೇವಲ ಚಿತ್ರಗಳನ್ನು ನೋಡುವ ಮೂಲಕ ನಮ್ಮ ಕಥೆ ಇಲ್ಲಿಗೆ ಕೊನೆಗೊಂಡಿತು. ಆದಾಗ್ಯೂ, ಕಥೆಯ ಪಾತ್ರಗಳಂತೆ ಮಕ್ಕಳಿಗೆ ಉಡುಪು ಹಾಕಿ ಕೆಲವು ಮಕ್ಕಳೊಂದಿಗೆ ನಾನು ಕಥೆಯನ್ನು (ಗಡ್ಡೆಕೋಸು, ಮುದುಕ, ಮುದುಕಿ, ಹುಡುಗಿ, ಹೇಸರಗತ್ತೆ, ನಾಯಿ, ಬೆಕ್ಕು ಮತ್ತು ಇಲಿ) ಅಭಿನಯ ಮಾಡಿಸಿದೆ. ಮಕ್ಕಳು ತಮ್ಮ ಕಣ್ಣೆದುರೇ ತೆರೆದುಕೊಂಡ ಕಥೆಯನ್ನು ನೋಡಿ ಆನಂದಿಸಿದರು. ಕಥೆಯ ನಿರೂಪಣೆಯ ಪ್ರಕಾರ ಎಲ್ಲರೂ ಅಂತಿಮವಾಗಿ ಪರಸ್ಪರರ ಮೇಲೆ ಬಿದ್ದು ತಮಾಷೆಯಾಗಿ ಜಗಳವಾಡಲು ಪ್ರಾರಂಭಿಸಿದರು.

## ಆಲೋಚನೆಗೆ ಸಹಾಯ ಮಾಡಲು ಪ್ರಶ್ನೆಗಳನ್ನು ಬಳಸುವುದು

ಕಥೆ ಅಥವಾ ಅದರ ಅಂತ್ಯದ ಘಟನೆಗಳ ಬಗ್ಗೆ ಅವರಿಗೆ ಏನಾದರೂ ಪ್ರಶ್ನೆಗಳು ಅಥವಾ ಕಾಳಜಿಗಳು ಇದ್ದವೇ ಎಂದು ನಾನು ವಿದ್ಯಾರ್ಥಿಗಳನ್ನು ಕೇಳಿದೆ. ಕಥೆಯ ನಿರೂಪಣೆಯನ್ನು ಕೇಳಿದ ನಂತರ ಅವರ ಆಲೋಚನೆಗಳು ಏನಿರಬಹುದು ಎಂದು ಕಂಡುಹಿಡಿಯಲು ಇದು ಸಹಾಯ ಮಾಡುತ್ತದೆ. ಕಥೆಗಳ ಮೇಲಿನ ಈ ರೀತಿಯ ಸಂಭಾಷಣೆಯು ಭಾಷೆಯ ಹಲವು ಆಯಾಮಗಳನ್ನು ತೆರೆದಿಡುತ್ತಾ ಹಲವಾರು ವಿಷಯಗಳನ್ನು ಏಕಕಾಲದಲ್ಲಿ ತಿಳಿದುಕೊಳ್ಳುವ ಅವಕಾಶವನ್ನು ನಮಗೆ ನೀಡುತ್ತದೆ ಎಂಬುದು ನನ್ನ ನಂಬಿಕೆ. ಮಕ್ಕಳಿಗೆ ನಿರೂಪಣೆಯಲ್ಲಿ ಏನು ಇಷ್ಟವಾಯಿತು ಅಥವಾ ಇಷ್ಟವಾಗಲಿಲ್ಲ, ಅಂದರೆ, ನಿರೂಪಣೆಯ ಯಾವ ಭಾಗ ಇಷ್ಟ ಆಗಲಿಲ್ಲ ಅಥವಾ ಯಾವುದನ್ನು ಸುಧಾರಿಸಬಹುದು ಎನ್ನುವ ವಿಷಯಗಳ ಬಗ್ಗೆ ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ. ಪರಿಣಾಮವು ಎದ್ದು ಕಾಣುತ್ತದೆ. ಇಲ್ಲಿ ನೋಡಿದಂತೆ, ಮಕ್ಕಳು ಪ್ರಾಯೋಗಿಕವಾಗಿ ಪ್ರತಿ ಚಿತ್ರದ ಮೇಲೆ ಕನಿಷ್ಠ ಒಂದು ಸಾಲನ್ನಾದರೂ ಯೋಚಿಸಲು ಮತ್ತು ವ್ಯಕ್ತಪಡಿಸಲು ಸ್ವಯಂ ಪ್ರಯತ್ನವನ್ನು ಮಾಡಿದರು.

## ಕಥೆ ಪುಸ್ತಕಗಳನ್ನು ಅತ್ಯುತ್ತಮವಾಗಿ ಬಳಸುವುದು

ನಮ್ಮ ಅನುಭವದಲ್ಲಿ ಹೇಳುವುದಾದರೆ ಶಿಕ್ಷಕರು ನಿರಂತರವಾಗಿ ಪಠ್ಯಕ್ರಮವನ್ನು ಪೂರ್ಣಗೊಳಿಸುವ ಒತ್ತಡದಲ್ಲಿ-ರುವುದರಿಂದ ಕಥೆ ಪುಸ್ತಕಗಳನ್ನು ಯಾವಾಗ ಮತ್ತು ಹೇಗೆ ಬಳಸಬೇಕೆಂದು ನಿರ್ಧರಿಸಲು ಕಷ್ಟವಾಗುತ್ತದೆ. ಶಿಕ್ಷಕರು ನಾವು ಅವರ ಶಾಲೆಗಳಿಗೆ ಬಂದು ಕಥೆಪುಸ್ತಕಗಳೊಂದಿಗೆ ಚಟುವಟಿಕೆಗಳನ್ನು ಮಾಡಿ, ಅವರು ಅನುಸರಿಸಲು ಸಾಧ್ಯವಾಗುವಂತಹ ವಿಚಾರಗಳನ್ನು ಅವರಿಗೆ ತಿಳಿಸುವಂತೆ ಸಲಹೆ ನೀಡಿದರು. ಇಂತಹ ಶಾಲೆಗಳಿಗೆ ನಾವು ಓದುವ ಮೇಳಗಳನ್ನು (Reading Fairs) ಆಯೋಜಿಸಿದೆವು. ಈ ಓದುವ ಮೇಳಗಳು, ಮಕ್ಕಳು ನಿರೀಕ್ಷಿತ ಕಲಿಕೆಯ ಫಲಿತಾಂಶಗಳನ್ನು ಪಡೆಯುವ ನಿಟ್ಟಿನಲ್ಲಿ ಕಥೆ ಹೇಳುವುದನ್ನು, ಪುಸ್ತಕಗಳಲ್ಲಿ ಕೊಟ್ಟಿರುವ ಪದಗಳು ಮತ್ತು ಚಿತ್ರಗಳನ್ನು ಕಂಡುಹಿಡಿಯುವುದನ್ನು, ಪುಸ್ತಕದ ಬಗ್ಗೆ ಸುಳುಹುಗಳನ್ನು ನೀಡುವ ಮೂಲಕ (ಅದರ ಬಣ್ಣ, ಚಿತ್ರ, ಹೆಸರು) ಪುಸ್ತಕವನ್ನು ಕಸಿದುಕೊಳ್ಳುವುದು, ಆಟವನ್ನು ಆಡುವುದು ಮುಂತಾದ ಚಟುವಟಿಕೆಗಳನ್ನು ಒಳಗೊಂಡಿತ್ತು.

ಈ ಇಡೀ ಚಟುವಟಿಕೆಯ ಗುರಿಯು ಭಾಷೆಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಕಥೆ ಹೇಳುವುದರ ಪ್ರಾಮುಖ್ಯವನ್ನು ಪ್ರದರ್ಶಿಸುವುದು ಮತ್ತು ಚಟುವಟಿಕೆಗಳಲ್ಲಿ ಶಿಕ್ಷಕರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವುದಾಗಿತ್ತು. ಜೊತೆಗೆ ಸನ್ನೆಗಳ ಮೂಲಕ ಕಥೆಯನ್ನು ಹೇಳುವುದರಿಂದ ಅವರ ಹಿಂಜರಿಕೆಯನ್ನು ತೊಡೆದುಹಾಕಲು ಪ್ರಯತ್ನಿಸುವುದು ಹಾಗೂ ಮಾತನಾಡುವುದು ಮತ್ತು ಅರ್ಥಮಾಡಿಕೊಳ್ಳುವುದು ಈ ಚಟುವಟಿಕೆಯ ಗುರಿಯಾಗಿತ್ತು. ಇದರ ಫಲವಾಗಿ ಮುಂದಿನ ಬಾರಿ ಶಾಲೆಗೆ ಹೋದಾಗ ನಾನು ಕೊಟ್ಟ ಪುಸ್ತಕಗಳನ್ನೆಲ್ಲ ಓದಿದ್ದೇವೆ ಎಂದು ಮಕ್ಕಳು ಹೇಳಿದರು. ಕೆಲವು ಕಥೆಗಳನ್ನು ಶಿಕ್ಷಕರು ಮಕ್ಕಳಿಗೆ ಓದಿ ಹೇಳಿದ್ದರು ಮತ್ತು ಕೆಲವನ್ನು ಮಕ್ಕಳೇ ತಮ್ಮ ಬಿಡುವಿನ ಸಮಯದಲ್ಲಿ ಸ್ವತಃ ಓದಿದ್ದರು. ಅವರು ನಮಗೆ ಹೆಚ್ಚಿನ ಪುಸ್ತಕಗಳನ್ನು ನೀಡುವಂತೆ ಕೇಳಿದರು. ಮಕ್ಕಳು ಈಗ ಕಥೆ ಪುಸ್ತಕಗಳನ್ನು ಪ್ರೀತಿಸುತ್ತಿದ್ದಾರೆ! ಮಕ್ಕಳ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಕಥೆ ಹೇಳುವ ಮೂಲಕ ಅವರ ಸಂವಹನ ಕೌಶಲಗಳನ್ನು ಜೀವಂತಗೊಳಿಸಲು ಮತ್ತು ಬಲಪಡಿಸಲು ನಾವು ಅನೇಕ ಉತ್ತೇಜಕ ಮಾರ್ಗಗಳನ್ನು ಅನ್ವೇಷಿಸಬಹುದು. ಕಥೆಯಲ್ಲಿ ಮುಂದೆ ಏನಾಗುತ್ತದೆ ಎಂದು ಊಹಿಸುವ ಮೂಲಕ, ಮಕ್ಕಳು ಹಂತಹಂತವಾಗಿ ಭಾಷೆಯ ನಿಯಮಗಳ ಬಗ್ಗೆ ಪರಿಚಯವನ್ನು ಹೊಂದುತ್ತಾರೆ. ಕಥೆ ಹೇಳುವಿಕೆಯು ಪ್ರಾಥಮಿಕ ಶಾಲೆಯ ಆರಂಭಿಕ ವರ್ಷಗಳಲ್ಲಿ ಮಕ್ಕಳಿಗೆ ಓದಲು ಕಲಿಯಲು ಸಹಾಯ ಮಾಡುವ ಹೆಚ್ಚು ಪ್ರಯೋಜನಕಾರಿ ಮತ್ತು ಆಕರ್ಷಕ ಚಟುವಟಿಕೆಯಾಗಿದೆ.



**ಚಿತ್ರ 1. ಕುತೂಹಲದಿಂದ ಪುಸ್ತಕ ನೋಡುತ್ತಿರುವ ಮಕ್ಕಳು**



**ಗಾಯತ್ರಿ** ಅವರು ಹೊಶಂಗಾಬಾದನಲ್ಲಿರುವ ಏಕಲವ್ಯ ಫೌಂಡೇಷನ್‌ನ ಮಕ್ಕಳ ಗ್ರಂಥಾಲಯದಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡಿದ್ದಾರೆ. ಅವರು ಪ್ರಸ್ತುತ ಜಶ್ನ್-ಎ-ತಾಲೀಮ್ ಯೋಜನೆಯ ಭಾಗವಾಗಿ ಹೋಶಂಗಾಬಾದ್ ಬ್ಲಾಕ್‌ನಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಬೋಧನ ಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳು, ಶಿಕ್ಷಕರು ಮತ್ತು ಸಮುದಾಯದೊಂದಿಗೆ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಮಕ್ಕಳೊಂದಿಗೆ ಸಮಯ ಕಳೆಯಲು ಮತ್ತು ಅವರೊಂದಿಗಿನ ತಮ್ಮ ಅನುಭವಗಳ ಬಗ್ಗೆ ಬರೆಯಲು ಇಷ್ಟ. ಅವರನ್ನು gayatri@eklavya.in ಮೂಲಕ ಸಂಪರ್ಕಿಸಬಹುದು.

ಅನುವಾದ: **ನಿವೇದಿತಾ ಬಿ. ರುದ್ರೇಶ್** | ಪರಿಶೀಲನೆ: **ನಾಗಮಣಿ ಎಸ್.ಎನ್.**

# ಕಥೆಯ ಮೂಲಕ ಮೌಲ್ಯಗಳನ್ನು ಬಿತ್ತುವುದು | ನನ್ನ ಅನುಭವಗಳು

ಇಮಾನ್ ಶರ್ಮಾ

ಮಕ್ಕಳಾಗಿದ್ದಾಗ ನಾವು ಕಥೆ ಕೇಳಲು ಅದೆಷ್ಟು ಇಷ್ಟಪಡುತ್ತಿದ್ದೆವು ಎಂದು ನಿಮಗೆ ನೆನಪಿದೆಯೇ? ವರ್ಣರಂಜಿತ ಕಥೆಗಳನ್ನು ಹೇಳುವ ಕುಟುಂಬದ ವಯಸ್ಕರು ನಮಗೆ ಅಚ್ಚುಮೆಚ್ಚಿನವ-ರಾಗಿರುತ್ತಿದ್ದರು. ಪಠ್ಯಪುಸ್ತಕದಾಚೆಗಿನ ವಿಷಯಗಳ ಬಗ್ಗೆ ಕಥೆ ಹೇಳುತ್ತಿದ್ದ ಶಿಕ್ಷಕರು ನಮಗೆ ಅಚ್ಚುಮೆಚ್ಚಿನವರಾಗಿದ್ದರು. ಮಕ್ಕಳಾಗಿದ್ದಾಗ ನಾವು ಅದೆಷ್ಟೇ ಚಂಚಲಚಿತ್ತರಾಗಿ, ಅವಿರತ ಚಟುವಟಿಕೆಯಿಂದ ಕೂಡಿದ್ದರೂ, ಹೇಳುವವರಿದ್ದರೆ ಗಂಟೆಗಟ್ಟಲೆ ಹೊತ್ತು ಕಥೆ ಕೇಳುತ್ತಾ, ಬೇರೊಂದು ಜಗತ್ತಿನಲ್ಲಿ ವಿಹರಿಸುತ್ತಿದ್ದೆವು. ಕಥೆಗಳು ನಮ್ಮನ್ನು ಹೊಸ ಸಾಧ್ಯತೆಗಳ ಜಗತ್ತೊಂದಕ್ಕೆ ಒಯ್ಯುತ್ತಿದ್ದವಲ್ಲವೆ? ಕಥೆ ಹೇಳುವವರಿಗೆ ಇದ್ದ ಉದ್ದೇಶವಾದರೂ ಏನು? ನಮ್ಮಲ್ಲಿನ ಅಪರಿಮಿತ ಕುತೂಹಲಕ್ಕೆ, ಸದಾ ಅನ್ವೇಷಣೆಯಲ್ಲಿ ತೊಡಗಿರುವ ನಮ್ಮ ಮನಸ್ಸುಗಳು ಬಯಸುವುದನ್ನು ಒದಗಿಸಿ, ನಮ್ಮ ಗಮನವನ್ನು ತಮ್ಮತ್ತ ಸೆಳೆಯುತ್ತಿದ್ದರಷ್ಟೇ ಅಲ್ಲದೆ, ವಯಸ್ಕರು ಕಥೆಗಳ ಮೂಲಕ ನಮ್ಮಲ್ಲಿ ಕೆಲವು ಮೌಲ್ಯಗಳನ್ನು ಬಿತ್ತಲು ನೋಡುತ್ತಿದ್ದರು. ಆದ್ದರಿಂದಲೇ ಅವರ ಬಹಳಷ್ಟು ಕಥೆಗಳಲ್ಲಿ ನೀತಿಪಾಠಗಳಿದ್ದು, ಕೆಲವೊಮ್ಮೆ ಕೊನೆಯಲ್ಲಿ ಅವನ್ನು ಸ್ಫುಟವಾಗಿ ತಿಳಿಸಲಾಗುತ್ತಿತ್ತು.

ಇತ್ತೀಚಿನ ದಿನಗಳಲ್ಲಿ ಕಥೆ ಹೇಳುವುದು ಕಲಿಕೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಕೇವಲ ಭಾಷಾ ವಿಷಯಗಳನ್ನಷ್ಟೇ ಅಲ್ಲದೆ, ಎಲ್ಲಾ ವಿಷಯಗಳನ್ನು ಬೋಧಿಸಲು ಕಥೆ ಹೇಳುವುದು, ಅದರಲ್ಲೂ ಶಾಲಾ ಕಲಿಕೆಯ ಪ್ರಾಥಮಿಕ ಹಂತದಲ್ಲಿ, ಒಂದು ಪರಿಣಾಮಕಾರಿ ಬೋಧನ ವಿಧಾನದ ತಂತ್ರವೆಂದು ಪರಿಗಣಿತವಾಗಿದೆ. ಕಥಾ ಮಾಧ್ಯಮದ ಮೂಲಕ ಮಕ್ಕಳು ಆಲಿಸಲು, ಗ್ರಹಿಸಲು, ಕಲ್ಪಿಸಿಕೊಳ್ಳಲು, ದೃಷ್ಟಿಕೋನಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ಇತಿಹಾಸ, ಸಂಸ್ಕೃತಿ ಮತ್ತು ಪರಿಕಲ್ಪನೆಗಳನ್ನು ವಿಶ್ಲೇಷಿಸಿ, ಬೆಲೆಕಟ್ಟಲು ಕಲಿಯುತ್ತಾರೆ. ಇದರ ಮೂಲಕ ಅವರು ಅಭಿವ್ಯಕ್ತಿ, ಸಮಂಜಸತೆ, ಪ್ರಸ್ತುತಿ, ಸ್ವರಭಾರ, ಧ್ವನಿಯ ಏರಿಳಿತ, ವಾಕ್ಯಗಳ ಸಂರಚನೆ, ನುಡಿಗಟ್ಟುಗಳು, ಗಾದೆಗಳು, ಮಾತಿನ ಶೈಲಿ ಇವೇ ಮೊದಲಾದ ಹಲವು ಭಾಷಾ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ.

## ನನ್ನ ಅನುಭವ ಮತ್ತು ಕಲಿಕೆ

ನಾನು, ನನ್ನ ವಿಷಯವಾದ ಇಂಗ್ಲಿಷ್ ಭಾಷೆಯನ್ನು ಬೋಧಿಸಲು ಕಥೆ ಹೇಳುವ ಮೂಲಕ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಿದ ಅಂದಿನ ದಿನಗಳನ್ನು ಮೆಲುಕು ಹಾಕುವಾಗ ಮಕ್ಕಳೊಂದಿಗೆ ಇನ್ನೂ ಹೆಚ್ಚಿನ ವೈಯಕ್ತಿಕ ಸ್ತರದಲ್ಲಿ ಸಹ ಹೇಗೆ ಸಂಬಂಧ ಸ್ಥಾಪಿಸಬಹುದು ಎಂಬುದು ನನಗೆ ತೋರುತ್ತಿದೆ. ಕಥೆಗಳ ಮೂಲಕ ನಾನು ನಾಚಿಕೆ ಸ್ವಭಾವದ, ಅಂತರ್ಮುಖಿ ಮಕ್ಕಳೊಂದಿಗೆ ಸಂಭಾಷಣೆಯಲ್ಲಿ ತೊಡಗುವುದು ಸಾಧ್ಯವಾಯಿತು. ಇದರಿಂದ ಅವರಿಗೆ ಮನಸ್ಸು ಬಿಚ್ಚಿ ಮಾತನಾಡುವಷ್ಟು ಆರಾಮವೆನ್ನಿಸಿತಲ್ಲದೆ, ನಾನು ಅವರ ಬಗ್ಗೆ ಯಾವುದೇ ಪೂರ್ವ ತೀರ್ಮಾನಕ್ಕೆ ಬರದೆ ಮಾತನಾಡುತ್ತೇನೆ ಎಂಬ ಭರವಸೆ ಅವರಿಗೆ ದೊರೆಯಿತು. ನಾನು ಅವರಿಗೆ, "ಈ ಕಥೆಯ ಪಾತ್ರ ನೀವಾಗಿದ್ದರೆ ಏನು ಮಾಡುತ್ತಿದ್ದಿರಿ, ಏಕೆ ಹಾಗೆ ಮಾಡುತ್ತಿದ್ದಿರಿ" ಎಂಬಂತಹ ಪ್ರಶ್ನೆಗಳನ್ನು ಕೇಳಿದಾಗೆಲ್ಲಾ, ಅವರು ತಮ್ಮ ವಿಚಾರಗಳನ್ನು ನನ್ನೊಂದಿಗೆ ಹಂಚಿಕೊಂಡು ನನಗೆ ಅಚ್ಚರಿ ಉಂಟುಮಾಡುತ್ತಿದ್ದರು. ಈ ವಿಚಾರಗಳು ನನಗೆ ಅವರ ಬದುಕು, ಅವರ ಅಸ್ಮಿತೆ, ಅವರ ಇಂಗಿತ, ಅವರ ಕುಟುಂಬ ಮತ್ತು ಮನೆಯಲ್ಲಿನ ಪರಿಸ್ಥಿತಿಗಳ ವಿಷಯವಾಗಿ ಇಣುಕು ನೋಟವೊಂದನ್ನು ಒದಗಿಸಿತು.

ಪುಟ್ಟ ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತುವ ರಚನಾತ್ಮಕ ವಿಧಾನವಾಗಿರುವುದು ಕಥೆ ಹೇಳುವುದರ ಮತ್ತೊಂದು ನಿರ್ವಿವಾದ ಲಕ್ಷಣವಾಗಿದೆ. ಕಥೆಯೊಂದನ್ನು ಕೇಳುವಾಗ ಸನ್ನಿವೇಶ ಅಥವಾ ಪಾತ್ರವನ್ನು ಕುರಿತು ತೀರ್ಮಾನಕ್ಕೆ ಬರಲು ಹಾಗೂ ಯಾವುದು ಒಳ್ಳೆಯದು, ಯಾವುದು ಕೆಟ್ಟದು, ಯಾವುದನ್ನು ಮಾಡಬೇಕು, ಯಾವುದನ್ನು ಮಾಡಕೂಡದು ಎಂಬುದನ್ನು ಅರ್ಥ ಮಾಡಿಕೊಂಡು, ತಮ್ಮದೇ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಮಕ್ಕಳು ತಮ್ಮ ಅಂತಃಸ್ಸಾಕ್ಷಿ, ಅನುಭವಾತ್ಮಕ ಜ್ಞಾನಗಳನ್ನು ಬಳಸಿಕೊಳ್ಳುತ್ತಾರೆ. ಉತ್ತಮ ಕೇಳುಗರಾಗಿ, ಅವರು ಹಲವು ಸನ್ನಿವೇಶಗಳ ಬಗೆಗೆ ಸ್ವಂತ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುತ್ತಾರೆ. ಅವರು, ಕಥೆಗಳಲ್ಲಿನ ಪಾತ್ರಗಳೊಂದಿಗೆ ದೇಶ-ಕಾಲಗಳ ಮಿತಿಗಳನ್ನು ದಾಟಿ, ಅವುಗಳನ್ನು ತಮ್ಮ ಜೀವನ ಹಾಗೂ ಅನುಭವಗಳ ವಾಸ್ತವದೊಂದಿಗೆ ಬೆಸೆಯುತ್ತಾರೆ. ಅತಿ ಪುಟ್ಟ ಮಕ್ಕಳೂ ಸಹ ಕಥೆ, ಪಾತ್ರ ಹಾಗೂ ಅವುಗಳ ಜಗತ್ತಿಗೆ, ನಾವು ಮಕ್ಕಳಾಗಿದ್ದಾಗ ಮಾಡುತ್ತಿದ್ದಂತೆಯೇ, ಸ್ಪಂದಿಸುತ್ತಾರೆ.

## ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವುದು

ಹಲವು ಬಾರಿ ನಾನು ಚರ್ಚೆಗಳಲ್ಲಿ ಅವರ ವಿರುದ್ಧ ಬೇಕೆಂದೇ ವಾದಮಾಡಿದರೂ, ಮಕ್ಕಳು ನನ್ನ ಬಗ್ಗೆ ಯಾವುದೇ ಅಭಿಪ್ರಾಯ ತಳೆಯದೆ, ಬದಲಿಗೆ, ತಾವು ಯಾವುದು ಸರಿ ಅಥವಾ ತಪ್ಪು

ಎಂದು ಯೋಚಿಸುವ ವಿಷಯವಾಗಿ ಪ್ರಶ್ನೆಗಳಿಗೆ ಅತಿ ತಾರ್ಕಿಕವಾದ ಉತ್ತರ ನೀಡುತ್ತಿದ್ದರು; ಅಲ್ಲದೆ, ತಾವೇಕೆ ಹಾಗೆ ಯೋಚಿಸುತ್ತೇವೆ ಎಂಬುದನ್ನೂ ತಿಳಿಸುತ್ತಿದ್ದರು. ಇದು ನನ್ನನ್ನು ಯೋಚಿಸುವಂತೆ ಮಾಡಿತು: ಕಥೆ ಹೇಳುವುದು ನಿಜವಾದ ಸನ್ನಿವೇಶವೊಂದನ್ನು ಅನುಭವಿಸಿದಂತೆಯೇ ಅಲ್ಲವೆ? ಎಷ್ಟರಮಟ್ಟಿಗೆ ಅಂದರೆ, ಯಾವುದು ಸರಿ, ಯಾವುದು ತಪ್ಪು ಎಂಬುದರ ವಿಷಯವಾಗಿ ಸ್ಪಷ್ಟ ಅಭಿಪ್ರಾಯ ತಳೆಯುವಷ್ಟರ ಮಟ್ಟಿಗೆ! ಮಕ್ಕಳು ಇದನ್ನು ಅರಿಯಲು, ತನ್ಮೂಲಕ ಮೂಲಭೂತ ಮೌಲ್ಯಗಳನ್ನು ಯಾಂತ್ರಿಕವಾಗಿ ಬಾಯಿಪಾಠ ಮಾಡಿ ಒಪ್ಪಿಸದೇ, ಕಥೆಗಳಲ್ಲಿನ ನೀತಿಯನ್ನು ಸಹಜವಾಗಿ ಅವರು ಬೆಳೆಸಿಕೊಳ್ಳುವಂತೆ ಮಾಡಲು ಇದಕ್ಕಿಂತಲೂ ಉತ್ತಮವಾದ ವಿಧಾನವಿದೆಯೇ? ಕಥೆಗಳ ಮೂಲಕ ಬದುಕಿನ ಬಗ್ಗೆ ಕಲಿಯುವುದರಿಂದ ಮಕ್ಕಳು ತಮ್ಮ ಬದುಕನ್ನು ಪ್ರಭಾವಿಸುವ ಉತ್ತಮ ಆಯ್ಕೆಗಳನ್ನು ಮಾಡಲು ನೆರವಾಗುತ್ತದೆ.

## ಒಳ್ಳೆಯತನಕ್ಕೆ ಮನ್ನಣೆ

ಕಥಾ–ಕಲಾಪದ ಬಳಿಕ ನಾನು ಮಕ್ಕಳನ್ನು ಕೇಳ ಬಯಸುತ್ತಿದ್ದ ನನ್ನ ಮೆಚ್ಚಿನ ಪ್ರಶ್ನೆಯೆಂದರೆ, "ನಿಮ್ಮ ನೆಚ್ಚಿನ ಪಾತ್ರ ಯಾವುದು?" ಎಂಬುದಾಗಿತ್ತು. ಮಕ್ಕಳು ಸದಾ ವಿವೇಕಪೂರ್ಣ ಆಯ್ಕೆಗಳನ್ನೇ ಮಾಡುತ್ತಾರೆ. ಪಾತ್ರ, ಸನ್ನಿವೇಶಗಳನ್ನು ವಿಶ್ಲೇಷಿಸುವಲ್ಲಿ ಅವರು ನಿಪುಣರು. ಮಗುವೊಂದು ನಕಾರಾತ್ಮಕ ಪಾತ್ರವೊಂದನ್ನು ಮೆಚ್ಚಿದ ಸಂಗತಿ ನನ್ನ ಅನುಭವಕ್ಕೆ ಇದುವರೆಗೂ ಬಂದಿಲ್ಲ. ಒಳ್ಳೆಯ ಪಾತ್ರಗಳೇ ಸದಾ ಅವರ ಮೆಚ್ಚಿನ ಪಾತ್ರಗಳಾಗಿ, ಅವರ ಪ್ರೀತಿಯನ್ನು ಸದಾ ತಮ್ಮ ಮುಡಿಗೆ ಏರಿಸಿಕೊಳ್ಳುತ್ತಿದ್ದುದು. ಇದರಿಂದ ಮಕ್ಕಳು ಸಹಜವಾಗಿಯೇ ಒಳ್ಳೆಯತನವನ್ನು ಆದರಿಸುತ್ತಾರೆ ಹಾಗೂ ಒಳ್ಳೆಯದು ಯಾವುದು ಎಂಬುದನ್ನು ನಿರ್ಧರಿಸುವ ವಿವೇಕ ಅವರಲ್ಲಿ ಇರುತ್ತದೆ ಎಂಬುದನ್ನು ನಾನು ಅರಿತೆ. ಶಿಕ್ಷಕರಾಗಿ ನಾವು ಅವರಿಗೆ ಮಾರ್ಗದರ್ಶನ ಮಾಡುವುದರ ಹೊರತಾಗಿ ಬೇರೇನೂ ಮಾಡಲಾಗುವುದಿಲ್ಲ. ಮಗು, ಅದೆಷ್ಟೇ ತುಂಟನಾಗಿದ್ದರೂ, ಒಳ್ಳೆಯ ಪಾತ್ರವನ್ನೇ ತನ್ನ ನೆಚ್ಚಿನ ಪಾತ್ರವಾಗಿ ಘೋಷಿಸುವ ಮೂಲಕ ತನಗೆ ಒಳ್ಳೆಯತನದ ಮೌಲ್ಯ ತಿಳಿದಿದೆ ಎಂಬುದನ್ನು ಮತ್ತೆಮತ್ತೆ ಸಾಬೀತು ಮಾಡುತ್ತದೆ.

## ಇತರರ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳದಿರುವುದು

ನಾನೊಮ್ಮೆ 8–10 ಮಕ್ಕಳಿದ್ದ ತರಗತಿಗೆ ಮೀನು ತಿನ್ನಲು ಬಯಸುತ್ತಿದ್ದ ಹುಡುಗಿಯೊಬ್ಬಳ ಕಥೆಯನ್ನು ಹೇಳುತ್ತಿದ್ದೆ. ಬಹುತೇಕ ಸಸ್ಯಾಹಾರಿಗಳೇ ಇದ್ದ ಆ ತರಗತಿಯ ಮಕ್ಕಳು ನನ್ನ ಕಥೆಗೆ ಹೇಗೆ ಸ್ಪಂದಿಸುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಇವರು ಕೊಂಚ 9 – 10 ರ ಆಸುಪಾಸಿನ ವಯಸ್ಸಿನ ದೊಡ್ಡ ಮಕ್ಕಳಾಗಿದ್ದರು. ನಾನು ನಿರೀಕ್ಷಿಸಿದಂತೆ ಪ್ರತಿಕ್ರಿಯಿಸಿದ್ದು ಕೇವಲ ಇಬ್ಬರು ಅಥವಾ ಮೂವರು ಮಾತ್ರ ಎಂಬುದು ನನಗೆ ಅಚ್ಚರಿ ತಂದಿತು. ಉಳಿದ ಎಲ್ಲ ಮಕ್ಕಳಿಗೂ ಕಥೆಯಲ್ಲಿನ ಹುಡುಗಿ ಮೀನು ತಿನ್ನುವುದರ ಬಗ್ಗೆ ತಕರಾರಿರಲಿಲ್ಲ. ಅವರಲ್ಲಿ ಕೆಲವರು ತಾವೂ ಸಹ ಮಾಂಸಾಹಾರಿಗಳೆಂದೂ, ತಮಗೂ ಮೀನು, ಕೋಳಿಮಾಂಸ ಮತ್ತು ಮೊಟ್ಟೆಗಳೆಂದರೆ ಇಷ್ಟವೆಂದೂ ನನ್ನೊಡನೆ ಹಂಚಿಕೊಂಡರು. ನನಗಿನ್ನೂ ನೆನಪಿರುವಂತೆ, ಅವರು ಹೇಳಿದ್ದು, "ನಮಗೇನು ಬೇಕೋ ಅದನ್ನು ತಿನ್ನಲು ಅಡ್ಡಿಯಿಲ್ಲ. ವ್ಯಕ್ತಿ ಏನನ್ನು ತಿನ್ನಲು ಬಯಸುತ್ತಾನೆ ಎಂಬುದರ ಮೇಲೆ ಅವನ ಒಳ್ಳೆಯತನ ಅಥವಾ ಕೆಟ್ಟತನ ನಿರ್ಧಾರವಾಗುವುದಿಲ್ಲ." ಮಕ್ಕಳು ಇಷ್ಟೊಂದು ಪ್ರೌಢರಿದ್ದಾರೆಂಬುದನ್ನು ತಿಳಿದು ನಾನು ಮೂಕವಿಸ್ಮಿತಳಾದೆ. ನಾನೂ ಸಹ ಮಾಂಸಾಹಾರಿ ಎಂದು ಅವರಿಗೆ ತಿಳಿಸಿದೆ. ಕಥೆ ಮತ್ತು ತದನಂತರದ ಚರ್ಚೆಯ ಕೊನೆಗೆ ಎಲ್ಲ ಮಕ್ಕಳೂ ಓರ್ವ ವ್ಯಕ್ತಿಯ ಆಹಾರ ಕ್ರಮವನ್ನು ಆಧಾರವಾಗಿಟ್ಟುಕೊಂಡು ವ್ಯಕ್ತಿಯ ಗುಣವನ್ನು ಹೇಳಲಾಗದು ಎಂಬುದನ್ನು ಒಪ್ಪಿಕೊಂಡರು. ಹೀಗಾಗಿ, ಆ ದಿನದ ಕಥಾಕಲಾಪವು ಈ ಮಕ್ಕಳು ಸಹಿಷ್ಣುತೆಯ ನಿರ್ದಿಷ್ಟ ಹಂತವೊಂದಕ್ಕೆ ತಲುಪುವಂತೆ ಮಾಡಲು ನೆರವಾಯಿತು. ನಮ್ಮ ಸಾಮಾಜಿಕ ಸಂಪ್ರದಾಯಗಳಾಚೆಗೆ ಮಕ್ಕಳು ಯೋಚಿಸುವಂತೆ ಮಾಡಿ, ಮತ್ತೊಬ್ಬರ ಜಾಗದಲ್ಲಿ ನಿಂತು ಜಗತ್ತನ್ನು ಗ್ರಹಿಸುವ ಅವಕಾಶವೊಂದನ್ನು ಕಲ್ಪಿಸಿಕೊಡಲು ಕಥೆ ಹೇಳುವುದೊಂದು ಶ್ರೇಷ್ಠ ವಿಧಾನ ಎಂಬುದು ನನಗೆ ಮನವರಿಕೆಯಾಯಿತು.

ನನ್ನ ಪ್ರಕಾರ, ಪುಟ್ಟ ಮಕ್ಕಳಿಗೆ ಕಥೆ ಹೇಳುವುದರಲ್ಲಿ ಅತಿ ಆಸಕ್ತಿದಾಯಕ ಸಂಗತಿಯೆಂದರೆ, ಅವರು ಕಥೆ, ಅದರಲ್ಲಿನ ಸಂಚು ಅಥವಾ ಪಾತ್ರಗಳನ್ನು ಹೇಗೆ ತಮ್ಮದೇ ಆದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತಾರೆ ಎಂಬುದನ್ನು ಕುರಿತಾಗಿದೆ. ಅವರು ತಮ್ಮದೇ ಆದ ಮೌಲ್ಯಗಳನ್ನು ಕಟ್ಟಿಕೊಳ್ಳುತ್ತಿದ್ದರು. ಅವರು ತಮ್ಮದೇ ಆದ ವಿಚಾರಗಳಿಂದ ಗೊಂದಲಕ್ಕೆ ಈಡಾಗುತ್ತಿದ್ದರಲ್ಲದೆ, ಆ ಗೊಂದಲದ ಸ್ಥಿತಿಗಳಲ್ಲಿ ಅವರಿಗೆ ಬಹುತೇಕ ಬಾರಿ ಯಥೋಚಿತವಾದ ಉತ್ತರಗಳನ್ನು ಒದಗಿಸುತ್ತಿದ್ದುದು ಅವರ ಸಹಪಾಠಿಗಳೇ ಹೊರತು, ನಾನಲ್ಲ.

## ಉಪಸಂಹಾರ

ಬೊಂಬೆಗಳು, ಕಥೆಗಳ ಕಾರ್ಡುಗಳು ಹಾಗೂ ಪುಸ್ತಕಗಳು (ಬಿಗ್ಬುಕ್ಸ್ ಸರಣಿಯ ಪುಸ್ತಕಗಳು, ಸಚಿತ್ರ ಪುಸ್ತಕಗಳು ಇತ್ಯಾದಿ), ದೊಡ್ಡ ಚಿತ್ರಗಳು, ಪಾತ್ರಾಭಿನಯ, ಮಕ್ಕಳು ಬಿಡಿಸಿದ ಚಿತ್ರಗಳು, ವಿಡಿಯೋಗಳು ಇವೇ ಮೊದಲಾದ ವಿವಿಧ ಕಥಾ ನಿರೂಪಣೆಯ ವಿಧಾನ ಹಾಗೂ ಸಾಮಗ್ರಿಗಳನ್ನು ಬಳಸುವುದರಿಂದ ಕಥೆ ಹೇಳುವುದನ್ನು ಇನ್ನಷ್ಟು ಆಸಕ್ತಿದಾಯಕ ಚಟುವಟಿಕೆಯನ್ನಾಗಿಸ ಬಹುದು. ಅನುಭವವು ಶ್ರೀಮಂತಗೊಂಡಂತೆ, ಪರಿಣಾಮವೂ ಗಾಢವಾಗುತ್ತಾ ಹೋಗುತ್ತದೆ. ಮಕ್ಕಳೇ ಕಥೆ ಹೇಳುವಾಗ ಅದು ಅವರಿಗಿರುವ ಹಿಂಜರಿಕೆಯನ್ನು ತೊಲಗಿಸಿ, ಮಾತನಾಡಲು ಹಾಗೂ ತಮ್ಮ ವಿಚಾರಗಳನ್ನು ಹೊರಹಾಕಲು ಬೇಕಿರುವ ಆತ್ಮವಿಶ್ವಾಸಕ್ಕೆ ಇಂಬು ನೀಡುತ್ತದೆ. ಆದ್ದರಿಂದ, ಮಕ್ಕಳಿಗೆ ಯೋಚಿಸಲು, ಚಿಂತನೆ ನಡೆಸಲು ಕಥೆಗಳ ಮೂಲಕ ಹಾದಿಯೊಂದು ತೆರೆದಂತಾಗಿ, ಆಯ್ಕೆಗಳನ್ನು (ಕಥೆಯ ಕೊನೆಯನ್ನು ಬದಲಿಸುವ, ತಮ್ಮ ನೆಚ್ಚಿನ ಪಾತ್ರವನ್ನು ಅಥವಾ

ಭಾಗವನ್ನು ಆರಿಸಿಕೊಳ್ಳುವ) ಮಾಡುವ ಅವಕಾಶ ದೊರೆತು, ಅವರು ಉತ್ತಮ ಶ್ರೋತೃ ಹಾಗೂ ಸೃಜನಶೀಲ ಸಂವಹನಕಾರರೂ ಆಗುತ್ತಾರೆ. ಈ ಎಲ್ಲವೂ ಇಪ್ಪತ್ತೊಂದನೇ ಶತಮಾನದ ಜೀವನಕ್ಕೆ ಅತ್ಯಗತ್ಯವಾದ ಕೌಶಲಗಳಾಗಿವೆ. ನನ್ನ ಅನುಭವಗಳ ಕನ್ನಡಿಯಲ್ಲಿ ನೋಡಿರುವಂತೆ, ಮಕ್ಕಳಲ್ಲಿ ಮೂಲಭೂತ ಮೌಲ್ಯಗಳ ಸಹಜ ವಿಕಾಸಕ್ಕೆ ಕಥೆಗಳು ಅವಕಾಶ ಮಾಡಿಕೊಡುತ್ತವೆ.

ಆರಂಭಿಕ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (The National Curriculum Framework for Foundational Stage -NCF-FS) 2022 ಐದು ವಿಕಾಸಾತ್ಮಕ ಕ್ಷೇತ್ರಗಳನ್ನು ಕುರಿತು ಹೇಳುತ್ತದೆ: (i) ಭೌತಿಕ ವಿಕಾಸ, (ii) ಸಮಾಜೋ–ಭಾವನಾತ್ಮಕ ಹಾಗೂ ನೈತಿಕ ವಿಕಾಸ, (iii) ಸಂಜ್ಞಾನಾತ್ಮಕ ವಿಕಾಸ (cognitive development), (iv) ಭಾಷೆ ಹಾಗೂ ಸಾಕ್ಷರತೆಯ ವಿಕಾಸ ಮತ್ತು (v) ಸೌಂದರ್ಯಪ್ರಜ್ಞೆ ಮತ್ತು ಸಾಂಸ್ಕೃತಿಕ ವಿಕಾಸ. ಕಥೆ ಹೇಳುವುದರಿಂದ ಈ ಎಲ್ಲ ವಿಕಾಸಾತ್ಮಕ ಕ್ಷೇತ್ರಗಳೂ ಲಾಭ ಪಡೆಯುತ್ತವೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, "ನೀತಿ, ಮೌಲ್ಯ ಮತ್ತು ಮನೋವೃತ್ತಿ"ಗಳ ಬಗ್ಗೆಯೂ ಹೇಳುತ್ತದೆ. ಅಲ್ಲದೆ, ನಾವೀಗಾಗಲೇ ಚರ್ಚಿಸಿರುವಂತೆ, ಇವುಗಳನ್ನು ಸ್ವಾಭಾವಿಕವಾಗಿ ವಿಕಾಸಗೊಳಿಸಲು ಕಥೆ ಹೇಳುವುದು ಒಂದು ಪರಿಣಾಮಕಾರಿ ಸಾಧನವಾಗಿದೆ. ಕಥೆಗಳ ಆಧಾರದ ಮೇಲೆ ಒಂದು ಪರಿಪೂರ್ಣ ಕಲಿಕೆಯ – ಅನುಭವವನ್ನು ಮಕ್ಕಳಿಗೆ ಕಟ್ಟಿಕೊಡಲು ಸಾಧ್ಯ ಎಂಬುದು ಸ್ಪಷ್ಟವಿದೆ. ಶಿಕ್ಷಕರಾದ ನಾವು ನಮ್ಮ ತರಗತಿಗಳಲ್ಲಿ ಕಥೆ ಹೇಳುವುದನ್ನು ಇನ್ನಷ್ಟು ಹೆಚ್ಚು ಅಳವಡಿಸಿಕೊಳ್ಳುವ ಸಮಯ ಸನ್ನಿಹಿತವಾಗಿದೆ.




**ಚಿತ್ರ 1. ರಾಜಸ್ಥಾನದ ಚಿತ್ತೋರಘಡದಲ್ಲಿ ಗೊಂಬೆಗಳನ್ನು ಬಳಸಿಕೊಂಡು ಮಕ್ಕಳು ಕಥೆ ಹೇಳುತ್ತಿರುವುದು.**

**ಪರಾಮರ್ಶನಗಳು:**

Dash, D. (2015). Effectiveness of Storytelling Approach in Inculcating Values Identified by NCERT among the 6th Grade Learners of Odisha State. *Scholarly Research Journal for Interdisciplinary Studies, 51(3)*, 2583-2590

Gunawardena, M. & Brown, B. (2021). Fostering Values Through Authentic Storytelling. *Australian Journal of Teacher Education, 46 (6)*

Koivulu, M., Turja, L. & Laakso, M.-L. (2020). Using the Storytelling Method to Hear Children's Perspectives and Promote Their Social-Emotional Competence. *Journal of Early Intervention, 42(2)*, 163-181

National Curriculum Framework for Foundational Stage (2022)

Taylor, E., Taylor, P. C. & Hill, J. (2018). *Ethical Dilemma Story Pedagogy – A Constructivist Approach to Values Learning and Ethical Understanding*. Paper presented at Proceedings of the Science and Mathematics International Conference (SMIC)



**ಇಮಾನ್ ಶರ್ಮಾ** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ "ಸ್ಕೂಲ್ ಆಫ್ ಕಂಟಿನ್ಯೂಯಿಂಗ್ ಎಜುಕೇಷನ್ ಎಂಡ್ ಯೂನಿವರ್ಸಿಟಿ ರಿಸೋರ್ಸ್ ಸೆಂಟರ್"ನಲ್ಲಿ ಅಧ್ಯಾಪಕರಾಗಿದ್ದಾರೆ. ಇವರು ಅಸ್ಸಾಂ ರಾಜ್ಯದ ಗುವಾಹಟಿ ಮೂಲದವರಾಗಿದ್ದು, ಇವರ ಕಾರ್ಯಕ್ಷೇತ್ರ ಇಂಗ್ಲಿಷ್ ಭಾಷೆ, ಆರಂಭಿಕ ಬಾಲ್ಯಕಾಲದ ಆರೈಕೆ ಮತ್ತು ಶಿಕ್ಷಣ (ECCE) ಹಾಗೂ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (F L N) ಗಳಾಗಿವೆ. ಇವರು ಕಾಟನ್ ಕಾಲೇಜಿನ ಇಂಗ್ಲಿಷ್ ಆನರ್ಸ್ ಪದವೀಧರೆಯಾಗಿದ್ದು, ತೇಜ್ಪುರ್ ವಿಶ್ವವಿದ್ಯಾಲಯದಿಂದ ಭಾಷಾಶಾಸ್ತ್ರ ಮತ್ತು ಅಳಿವಿನಂಚಿನ ಭಾಷೆಗಳ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇವರನ್ನು iman.sharma@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಕುಶಾಲ್ ಬಿ.ಎಸ್.** | ಪರಿಶೀಲನೆ: **ನಾಗಮಣಿ ಎಸ್.ಎನ್.**

ಈ ಆರಂಭಿಕ ಹಂತಗಳಲ್ಲಿ ಮಕ್ಕಳು ಪರಿಚಿತವಾದುದರ ಬಗ್ಗೆ ಕೇಳುತ್ತಾರೆ, ನೋಡುತ್ತಾರೆ ಮತ್ತು ಓದುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಶಿಕ್ಷಕರಿಗೆ ಬಹಳ ಮುಖ್ಯವಾಗಿದೆ. ಉದಾಹರಣೆಯಾಗಿ, ತರಗತಿಯಲ್ಲಿ, ಕಥೆಯ ರೂಪದಲ್ಲಿ ಓದುವ ವಿಷಯವು ಮಕ್ಕಳೆಲ್ಲರೂ ವೃತ್ತಾಕಾರದಲ್ಲಿ ಕುಳಿತುಕೊಂಡು ಗುಂಪಿನಲ್ಲಿ ಚಟುವಟಿಕೆ ನಡೆಸುವ ಸಮಯದಲ್ಲಿ ಅಥವಾ ಅವರು ಸಣ್ಣಸಣ್ಣ ಗುಂಪುಗಳಾಗಿ ಸಂವಹನ ನಡೆಸುವ ಸಮಯದಲ್ಲಿ ಚರ್ಚಿಸಲ್ಪಡುವುದನ್ನು ಸಹ ಬೆಂಬಲಿಸಬೇಕು.

ಭಾಷಾ ಕಲಿಕೆಯಲ್ಲಿ ಕಥೆಗಳ ಶಕ್ತಿ, ಶರೂನ್ ಸನ್ನಿ, ಪುಟ–

# ಕಥೆ ಹೇಳುವುದು: ತರಗತಿಯ  ಅನುಭವ

ಇಶಾ ಬಡ್ಕಸ್

ನಾನು ಸಮಗ್ರ ಲೈಂಗಿಕ ಶಿಕ್ಷಣದ ಚೌಕಟ್ಟೊಂದನ್ನು (Comprehensive Sexuality Education-CSE) ರೂಪಿಸುತ್ತಿದ್ದೇನೆ. ಅದು ಸುರುಳಿ (spiral) ಸ್ವರೂಪವನ್ನು ಹೊಂದಿದ್ದು, ಸಮಗ್ರ ಲೈಂಗಿಕ ಶಿಕ್ಷಣದ ಚೌಕಟ್ಟು, ಶಿಕ್ಷಣದ ಆರಂಭದ ವರ್ಷಗಳಿಂದಲೂ ಔಪಚಾರಿಕ ಪಠ್ಯಕ್ರಮದ ಒಂದು ಭಾಗವಾಗಿರಬೇಕು ಎಂಬ ವಿಚಾರವನ್ನು ಅದು ಸಮರ್ಥಿಸುತ್ತದೆ. ನಾನು ಪುಣೆಯ ಅಕ್ಷರನಂದನ ಶಾಲೆಯಲ್ಲಿ ಐದು ಮತ್ತು ಒಂಬತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೊಮ್ಮೆ ತರಗತಿ ತೆಗೆದುಕೊಳ್ಳುತ್ತೇನೆ. ದೊಡ್ಡ ಮಕ್ಕಳೊಂದಿಗೆ ವಿಷಯಕ್ಕೆ ನೇರವಾಗಿ ಪ್ರವೇಶಿಸಿ ಸಂಭಾಷಣೆ ನಡೆಸುತ್ತೇನೆ. ಆದರೆ 5ನೇ ತರಗತಿಯ ಮಕ್ಕಳೊಂದಿಗೆ ಸ್ವಲ್ಪ ಬೇರೆ ರೀತಿಯಲ್ಲಿ ಸಂಭಾಷಣೆ ನಡೆಸಬೇಕಾಗುತ್ತದೆ. 5ನೇ ತರಗತಿಯ ಮಕ್ಕಳೊಂದಿಗೆ ನಾನು 'ಕಥೆ ಹೇಳುವುದರ' ಮೂಲಕ ವಿಷಯವನ್ನು ಸಂವಹನ ಮಾಡುತ್ತಿದ್ದೆ. ಅದರ ಮೂಲಕ ನನಗೆ ಸಿಕ್ಕ ಸೀಮಿತ ಅನುಭವವನ್ನು ಇಲ್ಲಿ ನಾನು ಕ್ರೋಡೀಕರಿಸಲು ಯತ್ನಿಸಿದ್ದೇನೆ; ಅಂದರೆ ಈ ಲೇಖನವು ಕಥೆಗಳೊಂದಿಗೆ ನಾನು ನಡೆಸಿದ ಪ್ರಯೋಗಗಳಿಂದ ನನಗೆ ದೊರೆತ ಪಾಠಗಳನ್ನು ಕುರಿತು ಮಾತನಾಡುತ್ತದೆ.

## ತರಗತಿಯಲ್ಲಿ ಕಥೆ ಹೇಳುವ ನನ್ನ ಅನುಭವಗಳು

ಕಠಿಣ ವಿಷಯಗಳ ಕುರಿತ ಸಂವಾದ:

ಕೆಲವೊಮ್ಮೆ ಕೆಲವು ವಿಷಯಗಳ ಮೇಲೆ ಸಂವಾದವನ್ನು ಪ್ರಾರಂಭಿಸುವುದು ಕಷ್ಟವಾಗುತ್ತದೆ, ಏಕೆಂದರೆ ಅವುಗಳಿಗೆ ಸೂಕ್ತವಾದ ಆರಂಭಿಕ ಅಂಶಗಳು ಇರುವುದಿಲ್ಲ ಅಥವಾ ಸಿಕ್ಕುವುದಿಲ್ಲ. ಅಂತಹ ಸನ್ನಿವೇಶದಲ್ಲಿ ಕಥೆಗಳು, ಕವಿತೆಗಳು ಮತ್ತು ಸಿನೆಮಾಗಳು ಸ್ವಾಭಾವಿಕವಾಗಿ ಸಂವಾದಕ್ಕೆ ಪ್ರಚೋದನೆಯನ್ನು ನೀಡುತ್ತವೆ. ನನ್ನ ಅನುಭವದಲ್ಲಿ 'ಸರ್ ಕಾ ಸಲಾನ್', 'ಕ್ಯೂಂ ಕ್ಯೂಂ ಲಡಕೀ', 'ಪ್ಯಾರೀ ಮ್ಯಾಡಮ್', 'ಬರಸ್ತಾ ತರಬೂಜ್' ಅಂತಹ ಕಥೆಗಳು ಜನರ ನಿತ್ಯದ ಅನುಭವವನ್ನು ಪದಗಳಲ್ಲಿ ಇಡುವ ಮೂಲಕ ಜಾತಿ, ವರ್ಗ, ಧರ್ಮ, ಲಿಂಗ ತಾರತಮ್ಯದಂತಹ ಅನೇಕ ಸಂಕೀರ್ಣ ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಚಿತ್ರ ಪುಸ್ತಕಗಳು ಸಂಕೀರ್ಣ ಸಾಮಾಜಿಕ ಸಂಬಂಧಗಳನ್ನು ಕುರಿತು ಸಹಜ ರೀತಿಯಲ್ಲಿ ಸಂವಾದವನ್ನು ಆರಂಭಿಸಲು ಮತ್ತು ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ಕುರಿತು ಚಿಂತಿಸಲು ಸಹಾಯ ಮಾಡುತ್ತವೆ. ನಗರ ಪ್ರದೇಶದ ತರಗತಿಗಳಲ್ಲಿ ಅಂತಹ ಕಥನಗಳು ವಿಶೇಷವಾಗಿ ಮುಖ್ಯವಾಗುತ್ತವೆ, ಏಕೆಂದರೆ ಅಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಸ್ಥಿರ ಸಮಾಜೋ–ಆರ್ಥಿಕ ಹಿನ್ನೆಲೆಯನ್ನು ಹೊಂದಿರುತ್ತಾರೆ.

ಆಲಿಸುವ ಅವಕಾಶವೊಂದನ್ನು ಕಲ್ಪಿಸುವುದು:

ಸಂವಾದಗಳನ್ನು ನಡೆಸುವಾಗ ಪ್ರಶ್ನೆಗಳಂತೂ ಏಳುತ್ತವೆ. ಆಗ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳಲು ಆರಂಭಿಸುತ್ತಾರೆ ಮತ್ತು ಅದು ಬೇರೆಯವರ ಭಾವನೆಗಳನ್ನು ತನ್ನದಾಗಿಸಿಕೊಳ್ಳಲು ಅಥವಾ ಪರಸ್ಪರರ ಅನುಭವಗಳೊಂದಿಗೆ  ನಂಟನ್ನು ಕಂಡುಕೊಳ್ಳಲು ಒಂದು ವೇದಿಕೆಯಾಗುತ್ತದೆ. ಕಥೆಯಲ್ಲಿ ಬರುವ ವಿವಿಧ ಪಾತ್ರಗಳಲ್ಲಿ ಕೆಲವೊಮ್ಮೆ ವಿದ್ಯಾರ್ಥಿಗಳು ಯಾವುದಾದರೂ ಒಂದು ಪಾತ್ರದ ಅನುಭವಗಳು ತಮ್ಮ ಬದುಕಿನ ಅನುಭವಗಳೂ ಆಗಿವೆ ಎಂಬುದನ್ನು ಕಂಡುಕೊಳ್ಳಬಹುದು, ಅಥವಾ ಜನರ ಬೇರೆಬೇರೆ ಸಾಮಾಜಿಕ ವಾಸ್ತವಗಳನ್ನು ಅರಿಯಬಹುದು. ಈ ರೀತಿ ಭಿನ್ನ ಬದುಕುಗಳ, ಭಿನ್ನ ದನಿಗಳ ನಿರೂಪಣೆಯನ್ನು ಆಲಿಸುವುದರಿಂದ ವಿದ್ಯಾರ್ಥಿಗಳಲ್ಲಿ ಭಿನ್ನ ಬದುಕುಗಳನ್ನು ಒಳಗೊಳ್ಳುವ ಮತ್ತು ಅವುಗಳನ್ನು ಸ್ವೀಕರಿಸುವ ಮನೋಭಾವವು ಬೆಳೆಯುತ್ತದೆ.

ಸೃಜನಶೀಲತೆ, ಕುತೂಹಲ ಮತ್ತು ಪರ್ಯಾಲೋಚನೆಗೆ ಅವಕಾಶ ಕಲ್ಪಿಸುವುದು:

ಕಥೆಗಳ ಮೂಲಕ ಅನೇಕ ಬಗೆಯ ಚಟುವಟಿಕೆಗಳು ಮತ್ತು ಕಲಿಕೆಯ ಅಭ್ಯಾಸಗಳನ್ನು ರೂಪಿಸಬಹುದು. ವಿದ್ಯಾರ್ಥಿಗಳು ಅಥವಾ ಸಂದರ್ಭಕ್ಕೆ ತಕ್ಕಂತೆ ಕಥೆಗಳನ್ನು ಬದಲಾಯಿಸುವ ಮೂಲಕ ಕೆಳಗೆ ಕೊಟ್ಟಿರುವ ಚಟುವಟಿಕೆಗಳಲ್ಲಿ ಕೆಲವನ್ನು ಮಾಡಲು ಯತ್ನಿಸಬಹುದು. ಪಾತ್ರಾಭಿನಯದಂತಹ ಚಟುವಟಿಕೆಗಳನ್ನು ಮಾಡಿಸುವುದರಿಂದ ವಿದ್ಯಾರ್ಥಿಗಳಿಗೆ ತಾವು ಬೇರೆಯವರ ಬದುಕನ್ನು ಅನುಭವಿಸಿ ನೋಡುವ ಅವಕಾಶವನ್ನು ಅದು ಕಲ್ಪಿಸುತ್ತದೆ. ಬೇರೆಯವರಾಗಿರುವುದು ಎಂದರೆ ಏನು ಎನ್ನುವುದರ ಅನುಭವವು ಇತರರನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಕಲಿಸುತ್ತದೆ. ಈ ಚಟುವಟಿಕೆಗಳು ಭಾಷಾ ಕಲಿಕೆಯ, ಪದಸಂಪತ್ತಿನ ವರ್ಧನೆಯ ಹಾಗೂ ಬೇರೆಬೇರೆ ಅಭಿವ್ಯಕ್ತಿಗಳ ಅನೇಕ ಹಾದಿಗಳನ್ನು ಅವರಿಗೆ ತೆರೆಯುತ್ತವೆ.

### ಶೈಕ್ಷಣಿಕ ಚರ್ಚೆಗಳಿಗೆ ಸಜ್ಜುಗೊಳಿಸುವುದು:

ಕಥೆಗಳು ತರಗತಿಯಲ್ಲಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಹಲವು ಬಗೆಯ ಕೊಂಡಿಗಳನ್ನು ಏರ್ಪಡಿಸಬಹುದು. ಉದಾಹರಣೆಗೆ ದ ವೈ ವೈ ಗರ್ಲ್ ಕತೆಯನ್ನು (The Why-Why Girl) ಓದುವಾಗ ಸಾಮಾಜಿಕ ನ್ಯಾಯ, ಲಿಂಗ, ಜಾತಿಯಂತಹ ಸಮಾಜ ವಿಜ್ಞಾನಕ್ಕೆ ನೇರವಾಗಿ ಸಂಬಂಧಿಸಿದ ಅನೇಕ ವಿಷಯಗಳು ಚರ್ಚೆಯಲ್ಲಿ

ಬಂದವು. ಸಮಾಜವಿಜ್ಞಾನದ ತರಗತಿಯಲ್ಲಿ ಅಂತಹ ಕೊಂಡಿಗಳು ಪ್ರಯೋಜನಕ್ಕೆ ಬರುತ್ತವೆ, ಏಕೆಂದರೆ ಅಲ್ಲಿ ಕಥೆಯಲ್ಲಿ ಬಂದ ಸಂಗತಿಗಳನ್ನು ಚರ್ಚಿಸುವುದರ ಮೂಲಕ ಸಂವಾದವನ್ನು ಆರಂಭಿಸಬಹುದು. ಸಮಾಜದ ದಮನಕಾರಿ ವ್ಯವಸ್ಥೆಗಳನ್ನು ಪ್ರಶ್ನಿಸುವಂತಹ ಕಥನಗಳಿದ್ದರೆ ಅವು ಸಮಾಜದಲ್ಲಿರುವ ಇನ್ನೂ ಅನೇಕ ಸಿದ್ಧಮಾದರಿಗಳು ಮತ್ತು ಕಟ್ಟುಕಟ್ಟಳೆಗಳನ್ನು ಪ್ರಶ್ನಿಸುವ ಅವಕಾಶಗಳನ್ನು ಸೃಷ್ಟಿಸುತ್ತವೆ ಹಾಗೂ ತರಗತಿಯಲ್ಲಿ ಶೈಕ್ಷಣಿಕ ವಿಷಯಗಳ ಪರ್ಯಾಲೋಚನೆಗೆ ಹಚ್ಚುವ ಸಾಮರ್ಥ್ಯವನ್ನು ಅದು ಬೆಳೆಸುತ್ತವೆ.

## ಸುಗಮಕಾರರ ಪಾತ್ರ:

ಕಥೆ ಹೇಳುವುದಕ್ಕೆ ಒಂದು ಸಮಗ್ರ ನೋಟದ ಪಾಠ ಯೋಜನೆಯನ್ನು ನಾನು ಮಾಡಿಕೊಂಡಿದ್ದೇನಾದರೂ ಅಂತಹ ತರಗತಿಗಳು ಹೆಚ್ಚು ಸ್ವಯಂಪ್ರೇರಿತವಾಗಿದ್ದರೆ, ಪೂರ್ವ–ಸಂಕಲ್ಪವಿಲ್ಲದೆ ಮುಕ್ತವಾಗಿ ನಡೆದರೆ ಹೆಚ್ಚು ಒಳನೋಟಗಳನ್ನು ಕೊಡುತ್ತವೆ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ. ಕಥೆ ಹೇಳುವಾಗ ನಾನು ಬಹಳ ಪ್ರಶ್ನೆಗಳನ್ನು ಕೇಳುತ್ತೇನೆ, ಆಗ ಆ ಪ್ರಕ್ರಿಯೆಯು ಸ್ವಾಭಾವಿಕವಾಗಿ ಚರ್ಚೆಗಳನ್ನು ಹುಟ್ಟಿಸುತ್ತದೆ. ಕಥೆ ಮುಂದುವರಿದಂತೆ ಸುಗಮಕಾರರು ಚರ್ಚೆಯನ್ನು ಬೆಳೆಸಬೇಕು, ಚರ್ಚೆಯ ಅಂಶಗಳನ್ನು ಕ್ರೋಡೀಕರಿಸಬೇಕು, ಚರ್ಚೆಗೆ ಪ್ರಸ್ತುತವಾದ ಅಂಶಗಳನ್ನು ಮತ್ತು ಪ್ರಶ್ನೆಗಳನ್ನು ಒತ್ತಿ ಹೇಳಬೇಕು. ಕಥೆ ಹೇಳುತ್ತ ಹೋದಂತೆ ಶಿಕ್ಷಕರು ವಿಷಯಕ್ಕೆ ಪ್ರಸ್ತುತವಾಗುವ ಹಲವು ಸಂಗತಿಗಳನ್ನು ಪ್ರಸ್ತಾವಿಸುತ್ತ ಹೋಗಬಹುದು, ಆಗ ವಿದ್ಯಾರ್ಥಿಗಳಿಗೆ ಅನುಭವಗಳನ್ನು ಒಂದಕ್ಕೊಂದು ಸಂಪರ್ಕ ಕಲ್ಪಿಸುವುದು ಸುಲಭವಾಗುತ್ತದೆ.

ಈ ಭಾಗದಲ್ಲಿ ನಾನು ಐದನೆಯ ತರಗತಿಯ ಮಕ್ಕಳೊಂದಿಗೆ ಮಹಾಶ್ವೇತಾದೇವಿಯವರ ದ ವೈ ವೈ ಗರ್ಲ್ ಕಥೆಯನ್ನು ಓದಿದ್ದರ ಅನುಭವವನ್ನು ಹಂಚಿಕೊಳ್ಳುತ್ತೇನೆ. ಇದು ಮೋಯ್ನಾ ಎಂಬ ಹತ್ತು ವರ್ಷದ ಆದಿವಾಸಿ ಸಮುದಾಯದ ಹುಡುಗಿಯ ಕಥೆಯಾಗಿದೆ. ಮೋಯ್ನಾಗೆ ಬಹಳ ಕುತೂಹಲ, ಏನನ್ನು ನೋಡಿದರೂ ಅದು ಯಾಕೆ ಎಂದು ಪ್ರಶ್ನಿಸುತ್ತಿರುತ್ತಾಳೆ. ಮೋಯ್ನಾ ಕೇಳುವ ಪ್ರಶ್ನೆಗಳು ಪ್ರಕೃತಿಯ ಚೋದ್ಯಗಳ ಬಗೆಗೆ ನಾವೂ ಯೋಚಿಸುವಂತೆ ಮಾಡುತ್ತವೆ, ಹಾಗೂ ಸಾಮಾಜಿಕ ಅನ್ಯಾಯಗಳನ್ನು ಪ್ರಶ್ನಿಸುವಂತೆ ಮಾಡುತ್ತವೆ. ಮೋಯ್ನಾ ಒಂದು ದೊಡ್ಡ ಹಾವನ್ನು ಹಿಡಿಯಲು ಅದರ ಹಿಂದೆ ಓಡುವ ಸನ್ನಿವೇಶದೊಂದಿಗೆ ಕಥೆ ಆರಂಭವಾಗುತ್ತದೆ. ಮೋಯ್ನಾ ಕುಟುಂಬದಲ್ಲಿ ಹಾವನ್ನು ತಿನ್ನುತ್ತಾರೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಮಾನವರು ಬೇರೆ ಯಾವೆಲ್ಲ ರೀತಿಯ ಮಾಂಸವನ್ನು ತಿನ್ನುತ್ತಾರೆ ಎಂಬುದನ್ನು ಕುರಿತು ಚರ್ಚಿಸಿದರು. ಹಾವುಗಳನ್ನೂ ತಿನ್ನುತ್ತಾರೆ ಎನ್ನುವುದನ್ನು ಕೇಳಿ ಕೆಲವು ವಿದ್ಯಾರ್ಥಿಗಳಿಗೆ ಅಚ್ಚರಿಯಾಯಿತು. ಮೋಯ್ನಾ ತಾನು ನಿತ್ಯವೂ ಮಾಡುವ ಮನೆಕೆಲಸ ಹಾಗೂ ಚಾಕರಿಗಳನ್ನು ಕುರಿತು ಮಾತನಾಡುತ್ತಾಳೆ. ೫ನೇ ತರಗತಿಯ ಆ ಮಕ್ಕಳು ಮೋಯ್ನಾ ವಯಸ್ಸಿನವರೇ ಆಗಿದ್ದರಿಂದ ಮೋಯ್ನಾಳ ಬದುಕು ತಮ್ಮ ಬದುಕಿಗಿಂತ ಭಿನ್ನ ಎನ್ನುವುದು ಅವರಿಗೆ ವಿಶೇಷವಾಗಿ ಕಂಡಿತ್ತು. ಮೋಯ್ನಾ ಮತ್ತು ಜಮ್ಲೋಳ '(ಜಮ್ಲೋ ಚಲ್ತೀ ಗಯೀ ಕತೆಯ ನಾಯಕಿ)' ಬದುಕು ತಮ್ಮ ಬದುಕಿಗಿಂತ ಹೆಚ್ಚು ಕಷ್ಟದ್ದು ಎಂದು ಒಬ್ಬ ವಿದ್ಯಾರ್ಥಿಗೆ ಅನ್ನಿಸಿತ್ತು, ಜೊತೆಗೆ, ತಮ್ಮ ಹಾಗೂ ಅವರ ಬಾಲ್ಯಗಳು ಎಷ್ಟು ತದ್ವಿರುದ್ಧವಾಗಿವೆ ಎಂದು ಅವನು ಹೇಳಿದ್ದ. ಮೋಯ್ನಾ ಮತ್ತು ಜಮ್ಲೋ ಇಬ್ಬರಿಗೂ ತಮ್ಮ ಕುಟುಂಬಕ್ಕೆ ಬೆಂಬಲವಾಗಿ ನಿಲ್ಲುವ ಜವಾಬ್ದಾರಿಗಳಿದ್ದವು, ಮುಖ್ಯವಾಗಿ ಆರ್ಥಿಕ ಬೆಂಬಲವನ್ನು ನೀಡುವ ಜವಾಬ್ದಾರಿ ಅವರ ತಲೆಯ ಮೇಲಿತ್ತು. ಚಿಕ್ಕದಾಗಿ ಹೇಳುವುದಾದರೆ, ನನ್ನ ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುವ ಅನೇಕ ವಸ್ತುಗಳು ಮೋಯ್ನಾ ಮತ್ತು ಜಮ್ಲೋಳಂತಹ ಅನೇಕ ಮಕ್ಕಳಿಗೆ ನಿತ್ಯದ ಹೋರಾಟವೆಂಬುದನ್ನು ಅವರು ಅರಿಯುವಂತಾಯಿತು. ಅವು ಎಲ್ಲಾ ಮಕ್ಕಳಿಗೂ ಸಿಗುತ್ತವೆ ಎಂದೇ ಅವರು ಭಾವಿಸಿದ್ದರು. ಈ ಕಥೆಯಲ್ಲಿ ಮೋಯ್ನಾಳು ಶಬರ ಬುಡಕಟ್ಟಿಗೆ ಸೇರಿದವಳೆಂದು ಮತ್ತು ಶಬರ ಸಮುದಾಯವರಿಗೆ ಜಮೀನು ಅಥವಾ ಇನ್ನಿತರ ಸಂಪನ್ಮೂಲಗಳನ್ನು ಹೊಂದುವ ಅವಕಾಶವಿಲ್ಲ ಎಂದು ಉಲ್ಲೇಖಿಸಲಾಗಿದೆ. ಸಮುದಾಯದವರಿಗೆ ಈ ಕುರಿತು ಯಾವ ಆಕ್ಷೇಪಣೆಯೂ ಇರಲಿಲ್ಲ, ಆದರೆ, ಮೋಯ್ನಾಳ ಪ್ರಶ್ನೆಗಳು ದಿನದಿಂದ ದಿನಕ್ಕೆ ಗಹನವಾಗುತ್ತ ಹೋಗುತ್ತವೆ, ಸಂಪನ್ಮೂಲಗಳ ಹಂಚಿಕೆಯಲ್ಲಿ ಇರುವ ಅಸಮಾನತೆಯನ್ನು ಪರೀಕ್ಷಿಸುತ್ತ ಹೋಗುತ್ತವೆ. ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಬದುಕಿನ ಸಂಕಷ್ಟಗಳನ್ನು ನಮ್ಮ ನಗರ ಪ್ರದೇಶದ ತರಗತಿಗಳಲ್ಲಿ ಮುನ್ನೆಲೆಗೆ ತರುವುದು ಬಹಳ ಮುಖ್ಯವಾಗುತ್ತದೆ. ಈ ರೀತಿಯಾಗಿ ನಗರದ ವಿದ್ಯಾರ್ಥಿಗಳು ತಾವು ಎಷ್ಟು ಸವಲತ್ತನ್ನು ಹೊಂದಿದ್ದೇವೆ, ತಮ್ಮ ಬದುಕುಗಳು ಎಷ್ಟು ನಿರಾಳವಾಗಿವೆ ಎನ್ನುವುದನ್ನು ಅರಿತು ಈ ಅನುಕೂಲತೆಯನ್ನು ಬಳಸಿ ತಾವು ಏನು ಮಾಡಬಹುದು ಎನ್ನುವುದರ ಬಗೆಗೆ ಹೊಳಹುಗಳನ್ನು ಅವರಿಗೆ ನೀಡುತ್ತವೆ.

ತಾವೆಲ್ಲ ತಮ್ಮ ಭೂಮಾಲೀಕರ ಮನೆಯಲ್ಲಿ ನೀಡುವ ತಂಗಳನ್ನ ಯಾಕೆ ತಿನ್ನಬೇಕು ಎಂದು ಮೋಯ್ನಾಳು ಯೋಚಿಸಲು ಆರಂಭಿಸುತ್ತಾಳೆ, ಆ ಹಂತದಲ್ಲಿ ಮತ್ತೊಂದು ಚರ್ಚೆಯು ಆರಂಭವಾಯಿತು. ವಿದ್ಯಾರ್ಥಿಗಳು ತಮ್ಮ ಮನೆಗಳ ಅನುಭವವನ್ನೂ ಹಂಚಿಕೊಂಡರು, ತಮ್ಮ ಮನೆಗಳಲ್ಲಿಯೂ ತಾವು ಉಂಡು ಉಳಿಯುವ ಆಹಾರ ಪದಾರ್ಥಗಳನ್ನು ಮನೆಯ ಕೆಲಸದವರಿಗೆ ಕೊಡುತ್ತಾರೆ ಎಂಬುದನ್ನು ಅವರು ನೆನಪು ಮಾಡಿಕೊಂಡರು. ಕೆಲವರಿಗೆ ಹಾಗೆ ಮಾಡುವುದರಲ್ಲಿ ತಪ್ಪೇನೂ ಇಲ್ಲ ಎನಿಸಿತು, ಮಿಗುವ ಆಹಾರವನ್ನು ಹಾಗೆ ಕೊಡದೇ ಇದ್ದರೆ ಸುಮ್ಮನೇ ವ್ಯರ್ಥವಾಗುತ್ತವೆಯಲ್ಲಾ ಎಂದು ಹೇಳಿದರು. ಇನ್ನೂ ಕೆಲವರಿಗೆ ಹಾಗೆ ಮಾಡುವುದು ತಪ್ಪೆಂದು ಅನ್ನಿಸಿತು, ಏಕೆಂದರೆ ಉದ್ದೇಶ ಎಷ್ಟೇ ಒಳ್ಳೆಯದಿರಲಿ, ಹಾಗೆ ತಂಗಳನ್ನು ಸ್ವೀಕರಿಸುವಾಗ ಮನಸ್ಸು ಎಷ್ಟು ನೊಂದಿರುತ್ತದೆ ಎನ್ನುವುದು ಅವರಿಗೆ ಅರ್ಥವಾಗಿತ್ತು. ವಿದ್ಯಾರ್ಥಿಗಳಲ್ಲಿ ಕೆಲವರು ಈ ತರಗತಿ ಆರಂಭವಾಗುವುದಕ್ಕೂ ಮೊದಲು ಆದಿವಾಸಿ ತಾಂಡಾಗಳನ್ನು

(ಬುಡಕಟ್ಟು ವಸತಿಪ್ರದೇಶ) ಭೇಟಿ ಮಾಡಿ ಬಂದಿದ್ದರು. ಆದ್ದರಿಂದ ಅವರಿಗೆ ಮೋಯ್ನಾ ವಾಸಿಸುತ್ತಿದ್ದ ಹಳ್ಳಿಯ ಕಲ್ಪನೆ ತಕ್ಷಣ ಮನಸ್ಸಿಗೆ ಬಂದಿತ್ತು. ಸರಕಾರಿ ಶಾಲೆಗಳಲ್ಲಿ ನಿಗದಿ ಪಡಿಸಿದ ಸಮಯವು ಅಂತಹ ಹಳ್ಳಿಗಳಿಂದ ಬರುವ ಮಕ್ಕಳ ಅನುಕೂಲತೆಗೆ ತಕ್ಕಂತೆ ಯಾಕಿಲ್ಲ ಎಂದು ಆ ವಿದ್ಯಾರ್ಥಿಗಳು ಪ್ರಶ್ನಿಸಿದರು, ಶಾಲೆ ಇರುವುದು ವಿದ್ಯಾರ್ಥಿಗಳ ಸಲುವಾಗಿಯಾದ್ದರಿಂದ ಅದರ ಸಮಯವು ಅಲ್ಲಿಗೆ ಬರುವ ಮಕ್ಕಳ ನಿತ್ಯದ ಬದುಕಿಗೆ ಹೊಂದಿಕೊಳ್ಳುವಂತಿರಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಕಥೆಯಲ್ಲಿ ಮೋಯ್ನಾಳು ಇಂತಹ ಮಹತ್ವದ ಪ್ರಶ್ನೆಗಳನ್ನು ತನಗೆ ತಾನೇ ಮತ್ತು ತನ್ನ ಸುತ್ತಲೂ ಇದ್ದವರನ್ನು ಉದ್ದೇಶಿಸಿ ಕೇಳಿಕೊಳ್ಳುತ್ತಿದ್ದಳಾದರೂ ಓದುಗರಾಗಿ ನಮಗೂ ಶಿಕ್ಷಣದ ಅವಕಾಶ ಮತ್ತು ಇತರ ಮೂಲಭೂತ ಅಗತ್ಯಗಳು ಯಾಕೆ ಎಲ್ಲರಿಗೂ ಸಮನಾಗಿ ಸಿಗುವುದಿಲ್ಲ, ಮೋಯ್ನಾಳಂತಹ ಮಕ್ಕಳು ಯಾಕೆ ಅಂತಹ ಸವಲತ್ತುಗಳಿಂದ ವಂಚಿತರಾಗುತ್ತಾರೆ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ನಂತರ ನಾವು ಸಾಮೂಹಿಕವಾಗಿ ಆಲೋಚನೆಗೆ ತೊಡಗಿದೆವು: 'ನಮ್ಮ ಸುತ್ತಲೂ ಅಂತಹ ಅನೇಕ ಸಂಗತಿಗಳು ಮತ್ತು ಆಚರಣೆಗಳು ನಡೆಯುತ್ತಿವೆ, 'ಯಾಕೆ' ಎಂದೇನಾದರೂ ನಾವು ಕೇಳುತ್ತೇವೆಯೇ? ಅಥವಾ ಅವು ಹೇಗಿವೆಯೋ ಹಾಗೆ ಸುಮ್ಮನೆ ಒಪ್ಪಿಕೊಂಡುಬಿಡುತ್ತೇವೆಯೇ? ಈ ಚರ್ಚೆಯ ನಂತರ ವಿದ್ಯಾರ್ಥಿಗಳಿಗೆ ಚಟುವಟಿಕೆಯೊಂದನ್ನು ನೀಡಲಾಯಿತು. ವಿದ್ಯಾರ್ಥಿಗಳು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಕಥೆ ಕೇಳುತ್ತಿದ್ದ ಸಂದರ್ಭದಲ್ಲಿ ಅವರ ಮನಸ್ಸಿಗೆ ಬಂದ, ಅಥವಾ ಮೊದಲಿನಿಂದಲೂ ಕಾಡುತ್ತಿದ್ದ ಎರಡು ಪ್ರಶ್ನೆಗಳನ್ನು ಕುರಿತು ಅವರು ಯೋಚಿಸಬೇಕಿತ್ತು. ಕೆಲವು ಪ್ರತಿಕ್ರಿಯೆಗಳು ಹೀಗಿದ್ದವು:

| | |
|---|---|
| ತನ್ನನ್ನು, ದೇಹದ ಕುರಿತು ಪ್ರಶ್ನಿಸಿಕೊಳ್ಳುವುದು | • ನಾನು ನನ್ನ ತಲೆಕೂದಲನ್ನು ಕತ್ತರಿಸಿಕೊಂಡಾಗ ಎಲ್ಲರೂ ನಾನು ಚೆನ್ನಾಗಿ ಕಾಣುತ್ತಿಲ್ಲವೆಂದು ಹೇಳಿದರು; ನಾನು ಅವರ ಗೆಳತಿ ಅಲ್ಲವೆಂದು ಹೇಳಿದರು. ತಲೆಕೂದಲು ಕತ್ತರಿಸಿಕೊಂಡಿದ್ದು ತಪ್ಪಾಯಿತೇ?<br>• ಹೆಂಗಸರಿಗೆ ಮಾತ್ರ ಮಕ್ಕಳಾಗುತ್ತವೆಯೇ?<br>• ಕೆಲವೊಮ್ಮೆ ನನ್ನ ಸುತ್ತಲೂ ಇರುವ ವಿದ್ಯಾರ್ಥಿಗಳು ಮನ ನೋಯುವಂತೆ ವರ್ತಿಸುತ್ತಾರೆ. ನಾನು ಈ ಶಾಲೆಗೆ ಹೊಸಬಳು ಎಂಬ ಕಾರಣಕ್ಕೆ ಇರಬಹುದೇ? |
| ಸಮಾಜ ಮತ್ತು ಲಿಂಗಾಧಾರಿತ ಪಾತ್ರಗಳನ್ನು ಪ್ರಶ್ನಿಸುವುದು | • ನಮ್ಮ ಮನೆಯಲ್ಲಿ ನನಗೆ ಅಡುಗೆ ಮಾಡಲು ಬಿಡದಿರುವುದಕ್ಕೆ ನಾನು ಹುಡುಗನಾಗಿರುವುದು ಕಾರಣವೇ?<br>• ಕಪ್ಪು ಮೈಬಣ್ಣವನ್ನು ಹೊಂದಿರುವವರನ್ನು ಕೀಳೆಂದು ಯಾಕೆ ಭಾವಿಸುತ್ತಾರೆ?<br>• ಯಾಕೆ ಕೆಲವರು ಇತರರನ್ನು ಕೆಟ್ಟ ಪದಗಳಿಂದ ಬೈಯ್ಯುತ್ತಾರೆ? ಆ ಪದಗಳನ್ನು ಬಳಸುವಾಗ ಅವರ ಮನಸ್ಸಿನಲ್ಲಿ ಏನಿರುತ್ತದೆ? ಈ ಪದಗಳನ್ನು ಯಾರು ಸೃಷ್ಟಿಸಿದರು?<br>• ಮಕ್ಕಳ ಮೈಬಣ್ಣವನ್ನು ಯಾರು ನಿರ್ಧರಿಸುತ್ತಾರೆ?<br>• ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆ ಉಳಿದವರು ಯಾಕೆ ತಲೆಕೆಡಿಸಿಕೊಳ್ಳಬೇಕು?<br>• ಒಬ್ಬ ಹುಡುಗ ಮತ್ತು ಒಬ್ಬಳು ಹುಡುಗಿ ಒಟ್ಟಿಗಿದ್ದರೆ ಅಪಾರ್ಥ ಕಲ್ಪಿಸಿ ತಮಾಷೆ ಮಾಡುವ ಅಗತ್ಯವಿದೆಯೇ? ಅವರಿಬ್ಬರೂ ಕೇವಲ ಸ್ನೇಹಿತರಾಗಿರಬಾರದೇ?<br>• ನಮ್ಮ ಮನೆಯಲ್ಲಿ ಪೂಜೆಯನ್ನು ಅಜ್ಜ ಮಾತ್ರ ಮಾಡುತ್ತಾರೆ ಏಕೆ?<br>• ಆದಿವಾಸಿ ತಾಂಡಾದಲ್ಲಿ ಒಂದೇ ಶಾಲೆ ಇದೆ ಯಾಕೆ? |
| ರಮ್ಯ ಕಲ್ಪನೆಗಳು – ಕುತೂಹಲ | • ಭೂತಗಳೂ ಮನೆ ಕಟ್ಟುತ್ತವೆಯೇ?<br>• ಯಾವಾಗಲೂ ಪೋಷಕರು ಹೇಳಿದ್ದನ್ನು ಪಾಲಿಸುವ ಅಗತ್ಯವಿದೆಯೇ?<br>• ಕೆಲವರು ಗುಣಪಡಿಸಲೇ ಆಗದ ಕಾಯಿಲೆಯಿಂದ ಬಳಲುತ್ತಿರುತ್ತಾರೆ. ಅಂತಹ ಕಾಯಿಲೆಗಳು ಯಾಕಾದರೂ ಇವೆ?<br>• ರಮ್ಯಕಲ್ಪನೆಯಲ್ಲಿ ಬರುವ ಸಂಗತಿಗಳು ನಿಜವಾಗಿಯೂ ಅಸ್ತಿತ್ವದಲ್ಲಿರಲು ಸಾಧ್ಯವೇ?<br>• ಚರಿತ್ರೆಯಲ್ಲಿ ನಿಜಕ್ಕೂ ಆಗಿದ್ದು ಏನು?<br>• ತರಗತಿಯಲ್ಲಿ ನಮ್ಮ ಪೆನ್ನುಗಳನ್ನು ಕದಿಯುವವರು ಯಾರು? |

| | |
|---|---|
| ಭಾವನೆಗಳು | • ಬೇರೆಯವರು ಈ ಜಗತ್ತನ್ನು ಹೇಗೆ ನೋಡುತ್ತಾರೆ ಎನ್ನುವುದನ್ನು ನಾನು ಏಕೆ ಅರಿಯಲು ಆಗುವುದಿಲ್ಲ?<br>• ಕೂಗಾಡಿದರೆ ಬೈಯ್ಯುವುದು ಎಂದೇ ತಿಳಿಯಬೇಕೇ? ಅಥವಾ ಯಾರ ಮೇಲೋ ಸಿಟ್ಟು ಬಂದಿದೆ ಎಂದರ್ಥವೇ? |

## ಕಥೆ ಹೇಳುವುದರೊಂದಿಗಿನ ಚಟುವಟಿಕೆಗಳು

ಕಥೆ ಪುಸ್ತಕಗಳನ್ನು ಬೋಧನ–ಕಲಿಕೆಯ ಸಾಮಗ್ರಿಗಳಂತೆ (TLMs) ಬಳಸಿಕೊಂಡು ವಿವಿಧ ಚಟುವಟಿಕೆಗಳನ್ನು ಮಾಡಬಹುದು. ಇಲ್ಲಿ ಗುಂಪುಗಳಲ್ಲಿ ನಡೆಸಬಹುದಾದ ಅಂತಹ ಐದು ಚಟುವಟಿಕೆಗಳನ್ನು ನೀಡಲಾಗಿದೆ. ಅವು ಸಹಭಾಗಿತ್ವ, ಸೃಜನಶೀಲತೆ ಮತ್ತು ಪ್ರಶ್ನೆ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಲು ಪೂರಕವಾಗಿವೆ.

ಕಥನವನ್ನು ಬದಲಿಸುವುದು

ಈ ಚಟುವಟಿಕೆಯಲ್ಲಿ ಕಥೆಯ ಇನ್ನೊಂದು ಪಾತ್ರದ ದೃಷ್ಟಿಕೋನದಿಂದ ಯೋಚಿಸಿ ಇಡೀ ಕಥೆಯನ್ನು ಮತ್ತೊಮ್ಮೆ ಬರೆಯುವ ಪ್ರಯತ್ನವನ್ನು ಮಾಡುವಂತೆ ವಿದ್ಯಾರ್ಥಿಗಳ ಪ್ರತಿ ಗುಂಪುಗಳಿಗೆ ಹೇಳಲಾಗುತ್ತದೆ. ಅದರಲ್ಲಿ ಪಾಲ್ಗೊಂಡವರು ಬೇರೆ ದೃಷ್ಟಿಕೋನದಲ್ಲಿ ಹೊಸ ಪಾತ್ರದ 'ಅನುಭವವನ್ನು ತಮ್ಮದಾಗಿಸಿಕೊಂಡು' ಹೊಸ ಸನ್ನಿವೇಶಗಳು ಮತ್ತು ಮಾತುಕತೆಗಳನ್ನು ಕಲ್ಪಿಸಿಕೊಳ್ಳಲು ಯತ್ನಿಸುವುದರಿಂದ ಅಂತಹ ಅಭ್ಯಾಸ ಚಟುವಟಿಕೆಗಳು ಕಥೆಗಳಿಗೆ ಆಸಕ್ತಿದಾಯಕ ತಿರುವುಗಳನ್ನು ನೀಡಬಹುದು.

ಅಂತ್ಯವನ್ನು ಊಹಿಸಿರಿ ಅಥವಾ ಬದಲಾಯಿಸಿ

ಈ ಚಟುವಟಿಕೆಯನ್ನು ಎರಡು ವಿಧದಲ್ಲಿ ಮಾಡಬಹುದು: ಸುಗಮಕಾರರು ಕಥೆಯನ್ನು ಓದುತ್ತ ಕಥೆಯ ಅಂತ್ಯಕ್ಕೆ ಬಂದಾಗ ನಿಲ್ಲಿಸುವುದು ಮತ್ತು ಕಥೆಗೆ ಇರಬಹುದಾದ ಅಂತ್ಯದ ಸಾಧ್ಯತೆಗಳನ್ನು ಗುಂಪುಗಳೊಂದಿಗೆ ಚರ್ಚಿಸುವುದು. ಅಥವಾ, ಸುಗಮಕಾರರು ಇಡೀ ಕಥೆಯನ್ನು ಓದಿ ನಂತರ ವಿದ್ಯಾರ್ಥಿಗಳಿಗೆ ಅಂತ್ಯವನ್ನು ಬದಲಾಯಿಸಬೇಕೆಂದು ಅನ್ನಿಸಿದರೆ ಬದಲಾಯಿಸಿ ಎನ್ನುವುದು.

ಮತ್ತೊಂದು ಹೊಸ ಪಾತ್ರವನ್ನು ಸೇರಿಸಿ ಕತೆಯನ್ನು ಬರೆಯಿರಿ

ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಹೊಸ ಪಾತ್ರವೊಂದನ್ನು ಕಥೆಗೆ ಸೇರಿಸಿ ಉಳಿದ ಪಾತ್ರಗಳೊಂದಿಗಿನ ಅದರ ಪಯಣವನ್ನು ಮರುಸೃಷ್ಟಿಸಿ ಕಥೆಯನ್ನು ಹೊಸದಾಗಿ ಬರೆಯಬಹುದು.

ಅಭಿನಯಿಸಿ!

ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆಯಲ್ಲಿ (Socio-emotional Learning- SEL) ಅಭಿನಯ ಮತ್ತು ನಟನೆಯ ಚಟುವಟಿಕೆಗಳು ಬಹಳ ಸಹಾಯ ಮಾಡುತ್ತವೆ. ಕಥೆಯ ಪಾತ್ರಗಳನ್ನು ಅಭಿನಯಿಸುತ್ತ ವಿದ್ಯಾರ್ಥಿಗಳು ಆ ಪಾತ್ರಗಳ ಬದುಕಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಅದರ ಜೊತೆಗೆ ಪ್ರೇಕ್ಷಕರೂ ಪಾಲ್ಗೊಳ್ಳುವಂತಹ ನಾಟಕವನ್ನು (participatory theatre) ಅಲ್ಲಿ ಪರಿಚಯಿಸಬಹುದು. ವಿದ್ಯಾರ್ಥಿಗಳು ಕಥೆಯನ್ನು ಅಭಿನಯಿಸುತ್ತಿರುವಾಗ ಯಾವುದಾದರೂ ಒಂದು ಹಂತದಲ್ಲಿ ಪ್ರೇಕ್ಷಕರು ಪಾತ್ರಗಳನ್ನು ಬದಲಿಸಬಹುದು, ಬೇರೆ ಪಾತ್ರಗಳನ್ನು ಸೇರಿಸಬಹುದು ಮತ್ತು ತಾವೇ ಆ ಪಾತ್ರವನ್ನು ಅಭಿನಯಿಸುತ್ತಿದ್ದಾರೋ ಎಂಬಂತೆ ಆ ದೃಶ್ಯದಲ್ಲಿ ಸ್ವಯಂಪ್ರೇರಿತರಾಗಿ ಪ್ರತಿಕ್ರಿಯಿಸಬಹುದು. ಅದರಿಂದಾಗಿ ಯಾವುದೇ ಸನ್ನಿವೇಶವನ್ನು ವಿವಿಧ ದೃಷ್ಟಿಕೋನಗಳಿಂದ ನೋಡಬಹುದು ಎನ್ನುವ ಹೊಳಹು ಸಿಗುತ್ತದೆ.

ಮುಖಪುಟ ಮತ್ತು ಶೀರ್ಷಿಕೆಯನ್ನು ವಿನ್ಯಾಸ ಮಾಡಿರಿ

ಸುಗಮಕಾರರು ಕಥೆ ಪುಸ್ತಕದ ಮುಖಪುಟವನ್ನು ಮರೆಮಾಡಿ ಕಥೆಯನ್ನು ಓದುವುದು. ಕಥೆ ಓದಿ ಚರ್ಚೆಯನ್ನೂ ಮುಗಿಸಿದ ಮೇಲೆ ವಿದ್ಯಾರ್ಥಿಗಳು ಜೋಡಿಯಲ್ಲಿ ಕುಳಿತು ಚರ್ಚೆಯನ್ನು ಆಧರಿಸಿ ಕಥೆಯ ಮುಖಪುಟವನ್ನು ಕಲ್ಪಿಸಿಕೊಳ್ಳಬೇಕು ಹಾಗೂ ಕಥೆಗೆ ಸೂಕ್ತವಾಗುವ ಶೀರ್ಷಿಕೆಯನ್ನೂ ಯೋಚಿಸಬೇಕು.

ಹೀಗೆ ಕಥೆ ಪುಸ್ತಕಗಳು ಉತ್ತಮ ಬೋಧನ–ಕಲಿಕೆಯ ಸಾಮಗ್ರಿಗಳಾಗಬಲ್ಲವು ಎನ್ನುವುದಂತೂ ಇಲ್ಲಿ ಮನ–ದಟ್ಟಾಗುತ್ತದೆ. ತರಗತಿಯಲ್ಲಿ ಕಥೆಯನ್ನು ಓದುವುದು ಖಂಡಿತವಾಗಿಯೂ ಮಹತ್ವದ ಪಾತ್ರವನ್ನು ವಹಿಸುತ್ತದೆ, ಆದರೆ ಅದನ್ನು ವಿವಿಧ ರೂಪಗಳಲ್ಲಿ ಮಾಡುವುದು ಇನ್ನೂ ಅನೇಕ ಹಾದಿಗಳನ್ನು ತೆರೆಯುತ್ತದೆ. ನಾನು ಬೆಳೆಯುವಾಗ ಬಹಳಷ್ಟು ಕಥೆ ಪುಸ್ತಕಗಳನ್ನು ಓದಿದ್ದೇನೆ. ನಮಗೆ ವಾರಕ್ಕೆ ಎರಡು ದಿನ ಗ್ರಂಥಾಲಯದ ತರಗತಿಗಳು ಇದ್ದವಾದರೂ ಪುಸ್ತಕಗಳನ್ನು ಕುರಿತ ಚರ್ಚೆಯನ್ನು ಪಠ್ಯಕ್ರಮವು ಒಳಗೊಂಡಿರಲಿಲ್ಲ. ಹೀಗೆ ಪಠ್ಯಕ್ರಮ ಮತ್ತು ಕಥೆ ಓದುವ ಚಟುವಟಿಕೆಯನ್ನು ಪ್ರತ್ಯೇಕಿಸುವುದು ಸಮಸ್ಯೆಯನ್ನುಂಟು ಮಾಡುತ್ತದೆ, ಏಕೆಂದರೆ

ಅಲ್ಲಿ ಕಥೆ ಪುಸ್ತಕಗಳ ಕಥಾವಸ್ತು ಮತ್ತು ನಿರೂಪಣಾ ಚೌಕಟ್ಟು ಹಾಗೂ ಪಠ್ಯಕ್ರಮದ ವಿಷಯಗಳಿಗೂ ನಡುವೆ ನಂಟು ಬೆಳೆಯಲು ಅವಕಾಶವಿರುವುದಿಲ್ಲ. ಕಥೆಗಳಿಗೆ ಬಹಳ ಸಾಮರ್ಥ್ಯವಿದೆ, ಹಾಗೂ ನಾವು ಸುಗಮಕಾರರಾಗಿ ಸಂಭಾಷಣೆಗಳನ್ನು ಸೃಷ್ಟಿಸಲು, ಪರಸ್ಪರ ವಿಚಾರ ವಿನಿಮಯವನ್ನು ನಡೆಸಲು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಆಲಿಸುವ ಕಿವಿಗಳನ್ನು ರೂಪಿಸಲು ಪ್ರಾಮಾಣಿಕ ಯತ್ನವನ್ನು ಮಾಡಬೇಕು ಎಂದು ನನಗನ್ನಿಸುತ್ತದೆ.

---



**ಇಶಾ ಬಡ್ಕಸ್** ಅವರು ಕಳೆದ ನಾಲ್ಕು ವರ್ಷಗಳಿಂದ 'ಏಕಲವ್ಯ' ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಕಮ್ಯುನಿಟಿ ಎಂಗೇಜ್‌ಮೆಂಟ್ ಮತ್ತು ಶಿಕ್ಷಣ ಕಾರ್ಯಕ್ರಮಗಳಿಗೆ ಸಂಯೋಜಕರಾಗಿದ್ದಾರೆ. ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಸಂವಾದಕ್ಕೆ ಅವಕಾಶವನ್ನು ಸೃಷ್ಟಿಸುವ ಮೂಲಕ ಲಿಂಗತ್ವ ಮತ್ತು ಲೈಂಗಿಕತೆಯನ್ನು ಅಧ್ಯಯನ ಮಾಡುವುದು ಅವರ ಆಸಕ್ತಿಯ ಕ್ಷೇತ್ರವಾಗಿದೆ. ಇಶಾ ಬಡ್ಕಸ್ ಅವರನ್ನು ishabadkas@eklavya.in ಮೂಲಕ ಸಂಪರ್ಕಿಸಬಹುದು.

ಅನುವಾದ: **ಪ್ರಜ್ಞಾ ಎಲ್.ಎಸ್.** | ಪರಿಶೀಲನೆ: **ನಾಗಮಣಿ ಎಸ್.ಎನ್.**

# ಗಣಿತ ತರಗತಿಯೊಳಗೆ ಕಥೆಗಳು ಬಂದಾಗ

ಮಾಲಾ ಕುಮಾರ್

ಬಾಯಾರಿದ ಜಾಣ ಕಾಗೆ, ಉಪಾಯದಿಂದ ನೀರು ಕುಡಿದ ಕಥೆ ಯಾರಿಗೆ ಗೊತ್ತಿಲ್ಲ, ಆದರೆ ಇಲ್ಲಿ ಹೇಳುತ್ತಿರುವುದು ವಿಭಿನ್ನವಾಗಿ ಕಾರ್ಯನಿರ್ವಹಿಸಲು ಇಷ್ಟಪಡುವ ಕಾಗೆಯ ಬಗ್ಗೆ. ಇಲ್ಲಿ, ಈ 'ಬಾಯಾರಿದ ಕಾಗೆ' ತನ್ನ ಬಾಯಾರಿಕೆ ತಣಿಸಲು ನೀರಿಗಾಗಿ ಮಡಕೆಯ ತಳದಲ್ಲಿರುವ ನೀರಿನ ಮಟ್ಟವನ್ನು ಮೇಲಕ್ಕೆ ತರಲು ಆ ಮಡಕೆಯೊಳಗೆ ಕಲ್ಲುಗಳನ್ನು ಹಾಕುವಾಗ ಹೀಗೆ ಹೇಳುತ್ತದೆ:

ಗೆಳೆಯರೇ ಬನ್ನಿ ಸಾಲಾಗಿ
ಕಾಗೆ 1 ಎಡಕ್ಕೆ ಹೋಗು
ಕಾಗೆ 2 ಬಲಕ್ಕೆ ಹೋಗು
ಎಡ ಮತ್ತು ಬಲ, ಎಡ ಮತ್ತು ಬಲ
ಎಲ್ಲಾ ತನ್ನಿ ಒಂದೊಂದು ಕಲ್ಲು, ಇಲ್ಲಿ ಹಾಕಿ ಮಡಕೆಯಲ್ಲಿ, ಬಲಕ್ಕೆ!

ಈ ರೀತಿಯಾಗಿ, ಇಲ್ಲಿ ಹೇಳಲಾಗಿರುವ ಬುದ್ಧಿವಂತ ಕಾಗೆ ತನ್ನ ಬಾಯಾರಿಕೆಯನ್ನು ನೀಗಿಸಲು ಇತರ ಕಾಗೆಗಳ ಸಹಾಯವನ್ನು ಪಡೆಯುತ್ತದೆ. ಬೇರೆಬೇರೆ ಕಥೆಗಾರರು ತಮ್ಮತಮ್ಮ ಸೃಜನಶೀಲತೆಗೆ ಅನುಗುಣವಾಗಿ, ಇಲ್ಲಿ ಕಾಗೆ ಹೇಳುವ ಸಾಲುಗಳನ್ನು ಬದಲಾಯಿಸಬಹುದು, ಹಾಡಬಹುದು ಅಥವಾ ಅದನ್ನು ಮೇಳ/ ಕೋರಸ್ ಆಗಿ ಬದಲಾಯಿಸಬಹುದು. ಚರ್ಚೆಯು ಈ ಕಥೆಯು ಒಳಗೊಂಡಿರುವ ಗಣಿತ ವಿಷಯದ ಕಡೆಗೆ ಹೊರಳುವ ಮೊದಲು ಮಕ್ಕಳಿಗೆ ಕೆಲವು ನಿಮಿಷಗಳ ಕಾಲ ಮೋಜು ಮಾಡಲು ಅವಕಾಶ ಮಾಡಿಕೊಡಿ. ಕಥೆಗಾರರು ತಮ್ಮ ಕಥೆಯ ಆಕರ್ಷಣೆಯನ್ನು ಹೆಚ್ಚಿಸಲು ಅಥವಾ ನಿರ್ದಿಷ್ಟ ಪ್ರೇಕ್ಷಕರಿಗೆ ಹೆಚ್ಚು ಪ್ರಸ್ತುತವಾಗಲು ಅಥವಾ ಒಂದು ಉದ್ದೇಶಕ್ಕಾಗಿ ಕಥೆಗಳನ್ನು ಬಳಸಲು, ಸ್ಥಾಪಿತ ಕಥೆಗಳ ಪರಿಧಿಯನ್ನು ವಿಸ್ತರಿಸಲು ಮತ್ತು ಮಾರ್ಪಾಟು ಮಾಡಲು ಇಷ್ಟಪಡುತ್ತಾರೆ. ಹೆಚ್ಚಿನ ಶಾಲಾಪೂರ್ವ ಮಕ್ಕಳು, ದೊಡ್ಡವರು ತಮ್ಮ ಕಥೆಗಳನ್ನು ಬದಲಾಯಿಸುವುದನ್ನು ಇಷ್ಟಪಡುವುದಿಲ್ಲ. ಈ ಮಾರ್ಪಡಿಸಲಾದ ಕಾಗೆ ಕಥೆಯ ಬದಲಾವಣೆಯನ್ನು ಆರಂಭದಲ್ಲಿ ಅವರು ತಿರಸ್ಕರಿಸಬಹುದು. ಅವರಲ್ಲಿ ಒಂದು ಮಗು, 'ಬಾಯಾರಿದ ಕಾಗೆ ಒಂಟಿಯಾಗಿತ್ತು!' ಎಂದು ಕೂಗಬಹುದು, ಆದರೆ ನಿಕಟ ಪರಿಚಯ ಕಥೆಯನ್ನು ಮಕ್ಕಳಿಗೆ ಪ್ರಿಯವಾಗಿಸುವ ಅಂಶಗಳಲ್ಲಿ ಒಂದಾಗಿದೆ. ಆದರೆ, ಅದೃಷ್ಟವೆಂಬಂತೆ, ಮಕ್ಕಳು ಬದಲಾವಣೆಯನ್ನು ಸ್ವಾಗತಿಸುತ್ತಾರೆ, ಕೆಲವೊಮ್ಮೆ ಅವರು ಅದಕ್ಕಾಗಿ ಒತ್ತಾಯಿಸುತ್ತಾರೆ ಕೂಡ. ಕೆಲವು ಹಂತದಲ್ಲಿ, ಮಕ್ಕಳು ಹೊಸದಕ್ಕೆ ಹಳೆಯದನ್ನು ಬಿಟ್ಟುಕೊಡಲು ಸಿದ್ಧರಾಗುತ್ತಾರೆ. ನಿರೂಪಕರು ಮಕ್ಕಳನ್ನು ಸಲಹೆ ನೀಡುವ ಮೂಲಕ ಹೊಸ ಕಥೆಯ ಸಹ- ಸೃಷ್ಟಿಕರ್ತರಾಗಲು ಆಹ್ವಾನಿಸಿದರೆ, ಅಲ್ಲಿ ಬದಲಾವಣೆಯು ತಾನೇ ತಾನಾಗಿ ಸಂಭವಿಸುತ್ತದೆ. ಕಾಗೆ ತುಂಬಾ ಸೋಮಾರಿಯಾಗಿದ್ದರೆ ಏನಾಗುತ್ತಿತ್ತು? ಕಾಗೆ ನೀರನ್ನು ಬೇರೆಯದೇ ರೀತಿಯಲ್ಲಿ ಕುಡಿಯುತ್ತಿತ್ತೆಂದು ನೀವು ಭಾವಿಸುತ್ತೀರಾ? ಅದು ತನ್ನ ಕೊಕ್ಕಿನಿಂದ ಮಡಕೆಗೆ ರಂಧ್ರವನ್ನು ಕೊರೆಯುತ್ತಿತ್ತೇ? ಬಹುಶಃ ಮರಕುಟಿಗ ಅದನ್ನು ಮಾಡಿದೆ, ಮಗುವೊಂದು ಉತ್ತರಿಸಬಹುದು.

## ಕಥೆಗಳ ಮೂಲಕ ಗಣಿತ ಬೋಧನೆ

ಮಕ್ಕಳ ಸಂವಹನ ಮತ್ತು ಗ್ರಹಿಕೆಯ ಕೌಶಲಗಳನ್ನು ರೂಪಿಸಲು ಕಥೆ ಹೇಳುವಿಕೆಯು ಚೆನ್ನಾಗಿ ಒದಗಿ ಬರುತ್ತದೆ. ಭಾಷಾ ತರಗತಿಯಲ್ಲಿ, ಕಥೆಯಲ್ಲಿನ ಎಲ್ಲಾ ವಿಶೇಷಣಗಳಿಗೂ ವಿರುದ್ಧವಾಗಿರುವುದನ್ನು ಬಳಸಿ-ಕೊಂಡು ಸಂಪೂರ್ಣವಾಗಿ ಹೊಸ ಕಥೆಯನ್ನು ರಚಿಸಲು ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬಹುದು. ವಿಜ್ಞಾನ ತರಗತಿಯಲ್ಲಿ, ವಿದ್ಯಾರ್ಥಿಗಳು ಒಂದು ಲೋಟ ನೀರಿಗೆ ಕಲ್ಲುಗಳನ್ನು ಹಾಕುವುದರಿಂದ ನೀರಿನ ಮಟ್ಟ ನಿಜವಾಗಿಯೂ ಏರುತ್ತದೆಯೇ ಎಂದು ನೋಡಲು ಪ್ರಯತ್ನಿಸಬಹುದು ಮತ್ತು ಗಣಿತ ತರಗತಿಯಲ್ಲಿ ಇವೆಲ್ಲದಕ್ಕಿಂತ ಹೆಚ್ಚಿದನ್ನು ಮಾಡಬಹುದು. ಇಂಟರ್ ನ್ಯಾಷನಲ್ ಜರ್ನಲ್ ಆಫ್ ಎಜುಕೇಷನಲ್ ರಿಸರ್ಚ್‌ನಲ್ಲಿ 2021ರಲ್ಲಿ ಪ್ರಕಟವಾದ ಫಿನ್ನಿಷ್ ಅಧ್ಯಯನವೊಂದರ ಪ್ರಕಾರ, 'ಶಿಕ್ಷಕರು ತಮ್ಮ ತರಗತಿಯ ಭೌತಿಕ ಪರಿಸರದಲ್ಲಿ ಮತ್ತು ಅವರ ಬೋಧನ ವಿಧಾನಗಳಲ್ಲಿ ಕಥೆಗಳನ್ನು ಹೇಗೆ ಬಳಸುತ್ತಾರೆ (storification) ಎಂಬುದರ ಕುರಿತಾದ ಕೋಡಿಂಗ್ ಮೇಲೆ ಗಮನವನ್ನು ಕೇಂದ್ರೀಕರಿಸಲಾಯಿತು ಮತ್ತು ಇದು ಆರು ವಿಧದ ಗ್ರಹಿಕೆಗಳು ಮತ್ತು ಅನುಭವಗಳನ್ನು ವಿವರಿಸುತ್ತದೆ. : ಬೋಧನೆಯೊಂದಿಗೆ ಜೋಡಣೆ (ಸಂಯೋಜನೆ), ಶಿಕ್ಷಣಕ್ಕಾಗಿ ಒಂದು ಉದ್ದೇಶವನ್ನು ಒದಗಿಸುವುದು, ವಾತಾವರಣ (ಸಂಜ್ಞಾ ಕ್ರಮ / Signalling), ವಿದ್ಯಾರ್ಥಿಗಳ (ತಪ್ಪಾದ) ನಡೆವಳಿಕೆ, ವಿದ್ಯಾರ್ಥಿಗಳ ಸಾಮರ್ಥ್ಯಗಳು ಮತ್ತು ಸಾರಿಗೆ ಪ್ರಜ್ಞೆಗೆ ಅವಕಾಶ ಕಲ್ಪಿಸುವುದು.'

ಮೇಲೆ ಹೇಳಲಾದ ಕಾಗೆಯ ಕಥೆಯನ್ನು ಬಳಸಿಕೊಂಡು ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರ ಎಲ್ಲವನ್ನೂ ಕಲಿಸಬಹುದು. ಉದಾಹರಣೆಗೆ ಒಟ್ಟು 3 0 ಕಲ್ಲುಗಳನ್ನು ಮಡಕೆಗೆ ಹಾಕಲಾಗಿದೆ ಎಂದುಕೊಳ್ಳೋಣ. ಒಂದೊಂದು ಕಾಗೆ ಒಂದೊಂದು ಕಲ್ಲನ್ನು ಮಡಕೆಗೆ ಹಾಕಿದ್ದರೆ, ಆಗ, ಅಲ್ಲಿ ಒಟ್ಟು ಎಷ್ಟು ಕಾಗೆಗಳು ಇದ್ದವು ಎಂದು ನೀವು ಹೇಳುತ್ತೀರಿ? ಅಲ್ಲಿ 15 ಕಾಗೆಗಳು ಮಾತ್ರ ಬಂದಿದ್ದರೆ ಒಂದೊಂದು ಕಾಗೆ ಎಷ್ಟು ಕಲ್ಲುಗಳನ್ನು ಹಾಕಬೇಕಿತ್ತು? ಅಲ್ಲಿ ಕೇವಲ 10 ಕಾಗೆಗಳಿದ್ದರೆ ಆಗ ಒಂದೊಂದು ಕಾಗೆ ಎಷ್ಟು ಕಲ್ಲುಗಳನ್ನು ಹಾಕಿರಬಹುದು? ಎಂದು ಲೆಕ್ಕಾಚಾರ ಮಾಡಬಹುದು. ಸ್ವರೂಪ ಮತ್ತು ರಚನೆ, ವಸ್ತು, ಘನವಸ್ತುಗಳು ಮತ್ತು ದ್ರವ ವಸ್ತುಗಳು ಮತ್ತು ಗಾತ್ರ/ಪರಿಮಾಣದ ಪರಿಕಲ್ಪನೆಗಳನ್ನು ಕಲಿಸಲು ಕೂಡಾ ನಾವು ಕಥೆಯನ್ನು ಬಳಸಬಹುದು. ಗಣಿತ ಮತ್ತು ವಿಜ್ಞಾನದಂತಹ ಅಮೂರ್ತ ವಿಷಯಗಳ, ಹೆಚ್ಚಿನ ಕಲಿಕೆಯು ಉರುಹೊಡೆಯುವ ಮೂಲಕ ನಡೆಯುತ್ತದೆಯೇ ಹೊರತು ಅವುಗಳ ಕಾರಣವನ್ನು ಅರಿತುಕೊಳ್ಳುವುದರಿಂದ ಅಲ್ಲ. ಚೆನ್ನಾಗಿ ನಿರೂಪಣೆ ಮಾಡಿದ ಕಥೆಗಳು, ಮಕ್ಕಳು ತಾವಾಗಿಯೇ ಕಲಿಯಲು ಅನುವು ಮಾಡಿಕೊಡುವ ಪುನಃ ನೆನಪಿಸಿಕೊಳ್ಳಬಹುದಾದ ಸಹಜ ಮೌಲ್ಯವನ್ನು ಹೊಂದಿವೆ.

ಪರಿಕಲ್ಪನೆಗಳನ್ನು ಪರಿಚಯಿಸಲು, ಕಲಿಕೆಯನ್ನು ಹೆಚ್ಚು ಸಾಪೇಕ್ಷವಾಗಿಸಲು ಮತ್ತು ಅಮೂರ್ತ ಪರಿಕಲ್ಪನೆಯನ್ನು ಸುಲಭವಾಗಿ ಅರ್ಥಮಾಡಿಸಲು ಮಕ್ಕಳ ಗಮನವನ್ನು ಸೆಳೆಯಲು ಕಥೆಗಳು ಶಿಕ್ಷಕರಿಗೆ ಸಹಾಯ ಮಾಡುತ್ತವೆ. ನೀವು ಬೆಸ ಮತ್ತು ಸಮ ಸಂಖ್ಯೆಗಳನ್ನು ಹೇಗೆ ಕಲಿಸುತ್ತೀರಿ? ಹ್ಯಾಪಿ ಮ್ಯಾಥ್ಸ್ ಸರಣಿಯಲ್ಲಿ, ನಾನು ಒಬ್ಬ ಮುದುಕನ ಬಗ್ಗೆ ಒಂದು ಕಥೆಯನ್ನು ರಚಿಸಿದ್ದೇನೆ, ಅದರಲ್ಲಿ ಅಜ್ಜ ಒಂದು ಆಕರ್ಷಕ ಅಭ್ಯಾಸವನ್ನು ಹೊಂದಿರುತ್ತಾನೆ ಮತ್ತು ಆತನ ಮೊಮ್ಮಗ ಅದನ್ನು ಅನುಕರಿಸುತ್ತಾನೆ. ಬೆಸ ಮತ್ತು ಸಮ ಸಂಖ್ಯೆಗಳು ನಿಜ ಜೀವನದಲ್ಲಿ ಪಾತ್ರವಹಿಸುತ್ತವೆ, ಕನಿಷ್ಠ ಅವನ ಅಜ್ಜನ ಜೀವನದಲ್ಲಿ ಪಾತ್ರವನ್ನು ವಹಿಸಿದ್ದವು ಎಂದು ಅವನು ಕಲಿಯುತ್ತಾನೆ! 'ಒನ್, ಥ್ರೀ, ಫೈವ್, ಹೆಲ್ಪ್'ನಲ್ಲಿ ಲೇಖಕ ಕುರ್ಖೂಲಿ ಮಾಣಿಕ್ಕವೇಲ್ ಅವರು ಎಲ್ಲರ ಗಮನ ಸೆಳೆಯಲು ಜೀರುಂಡೆಗಳು, ಮಿಡತೆಗಳು, ಪತಂಗಗಳು, ಜೇಡಗಳು ಮತ್ತು ಇತರ ಜೀವಿಗಳನ್ನು ತಂದಿದ್ದಾರೆ, ಇದು ಕೇವಲ ಬೆಸ ಮತ್ತು ಸಮ ಸಂಖ್ಯೆಗಳನ್ನು ಕಲಿಯಲು ಮಾತ್ರವಲ್ಲ, ಸಂಕಲನಕ್ಕೂ ಅನ್ವಯಿಸುತ್ತದೆ. ಯಾವುದೇ ತರಗತಿಯಲ್ಲಿ ಸೋನಾಲ್ ಗುಪ್ತಾ ವಾಸ್ವಾನಿ ಅವರು ರೇಖಾಚಿತ್ರ ಬಿಡಿಸಿರುವ ಈ ಕಥೆಯನ್ನು ವಿವರಿಸಿದರೆ ಚಿಕ್ಕ ಮಕ್ಕಳು ಉತ್ಸಾಹದಿಂದ ಜಿಗಿಯುತ್ತಿದ್ದರು!

ಆರಂಭಿಸಿ, ವಿಸ್ತರಿಸಿ, ನಿಲ್ಲಿಸಿ!

ಕಥೆಗಳು ನಮ್ಮ ಅರಿವಿಗೇ ಬರದಂತೆ ಬೆಳೆಯುತ್ತವೆ. ಶಿಕ್ಷಕರು ಕಥೆ ಹೇಳುವಿಕೆಯನ್ನು ಸಾಧನವಾಗಿ ಬಳಸಲು ನಿರ್ಧರಿಸಿದಾಗ, ನಿರೀಕ್ಷಿತ ಕಲಿಕೆಯ ಫಲಿತಾಂಶವನ್ನು ಮನಸ್ಸಿನಲ್ಲಿಟ್ಟು-ಕೊಳ್ಳುವುದು ಮುಖ್ಯವಾಗಿದೆ. ಯಾರಿಗೆ ಮೇಕೆ ಸಿಕ್ಕಿತು? ಕಥೆಯಲ್ಲಿ ಲೇಖಕಿ ಅಪರ್ಣಾ ಆತ್ರೇಯ ಅವರು ಇಬ್ಬರು ಸ್ನೇಹಪರವಾಗಿರುವ ರಾಕ್ಷಸರನ್ನು ಕರೆತರುತ್ತಾರೆ, ಅವರು ಯಾರು ಹೆಚ್ಚು ಮಸಾಲೆ ಮಜ್ಜಿಗೆ ಕುಡಿಯುತ್ತಾರೆ ಎಂದು ತಮ್ಮೊಳಗೆ ಜಗಳವಾಡಿಕೊಳ್ಳುತ್ತಾರೆ. ಭಿನ್ನರಾಶಿಗಳ ಮೋಜನ್ನು ಕಲಿಯಲು ಇನ್ನೊಂದು ಕಥೆ ಇಲ್ಲದೆ. ಶ್ರೇಯಾ ಸೇನ್ ಅವರು ತಮ್ಮ ಕಥೆಯಲ್ಲಿ ನೀಡಿದ ಪಾತ್ರದ ಹೆಸರುಗಳು ಮತ್ತು ವಿವರಣೆಗಳು ತರಗತಿಯನ್ನು ಸುಲಭವಾಗಿ ನಗೆಗಡಲಲ್ಲಿ ತೇಲಿಸಿಬಿಡಬಹುದು. ಶಿಕ್ಷಕರು ಆ ಕಥಾ ನಿರೂಪಣೆಯನ್ನು ಸೂಕ್ತ ಸಮಯದಲ್ಲಿ ನಿಲ್ಲಿಸಿ ಮಕ್ಕಳನ್ನು ಗಣಿತದ ಕಲಿಕೆಯೆಡೆಗೆ ಕರೆದೊಯ್ಯಬೇಕಾಗುತ್ತದೆ!

ಒಮ್ಮೆ, ಕೆಲವು ವರ್ಷಗಳ ಹಿಂದೆ, ನಾನು ಐದನೇ ತರಗತಿಗೆ ಸಂಖ್ಯೆಗಳ ಮಾಂತ್ರಿಕತೆಯನ್ನು ಕಲಿಸುತ್ತಿದ್ದಾಗ, ತರಗತಿಯನ್ನು ಗಣಿತದ ಮೋಜಿನೆಡೆಗೆ ಕೊಂಡೊಯ್ದಿದ್ದೆ, ಬಹುಶಃ ಸ್ವಲ್ಪ ಹೆಚ್ಚೇ ಕರೆದುಕೊಂಡು ಹೋಗಿದ್ದೆ. ನಾನು ವಿದ್ಯಾರ್ಥಿಗಳಿಗೆ ಕಾಗದದಿಂದ ವಿಮಾನಗಳನ್ನು ಮಾಡಿ, ಅವುಗಳ ಮೇಲೆ ರಹಸ್ಯ ಸಂದೇಶಗಳನ್ನು ಬರೆದು ತರಗತಿಯೊಳಗೆ ವಿಮಾನಗಳನ್ನು ಹಾರಿಸಲು ಹೇಳಿದ್ದೆ. ವಿಮಾನವನ್ನು ಹಿಡಿದವರು ಅದರಲ್ಲಿದ್ದ ಸಂದೇಶದ ಸಂಕೇತವನ್ನು ಬಿಡಿಸಬೇಕಿತ್ತು. ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಇದ್ದುದರಿಂದ ನಾವು ನಮ್ಮ ಕಾರ್ಯವನ್ನು ಮುಂದುವರಿಸಿದ್ದೆವು, ಪ್ರಾಂಶುಪಾಲರು ಬಾಗಿಲು ತೆರೆದು ಒಳಗೆ ಬಂದದ್ದನ್ನು ಗಮನಿಸಿರಲಿಲ್ಲ, ಅಂತಹ ಉತ್ಸಾಹಭರಿತ ಗಣಿತ ತರಗತಿಯನ್ನು ನೋಡಿ ಅವರು ಎಷ್ಟು ರೋಮಾಂಚನ-ಗೊಂಡಿರಬೇಕು ಎಂದು ನಾನು ಅವಿವೇಕದಿಂದ ಯೋಚಿಸಿದೆ. ಆದರೆ ಅವರು ನನ್ನನ್ನು ತರಗತಿಯಿಂದ ಹೊರಗೆ ಕರೆದು ಈವರೆಗೆ ಎಂದೂ ಕೇಳದ ಮಾತುಗಳಿಂದ ಎಚ್ಚರಿಸಿದರು.

## ನೈಜ ಕಥೆಗಳು

ಕಥೆಗಾರಳಾಗಿ, ನಾನು ಕಥೆಯ ಸ್ವರೂಪವನ್ನು ಬಳಸಿಕೊಂಡು ಪರಿಕಲ್ಪನೆಯನ್ನು ವಿವರಿಸಲು ಪ್ರಯತ್ನಿಸಿದಾಗ ನನ್ನ ಸ್ವಂತ ಆರಂಭಿಕ ತಪ್ಪುಗ್ರಹಿಕೆಗಳನ್ನು ಪ್ರಶ್ನಿಸಲು ಮತ್ತು ಕಲಿಯಲು ಸಾಧ್ಯವಾಯಿತು. ಎಲ್ಲಾ ಪರಿಕಲ್ಪನೆಗಳನ್ನು ಕಥೆಯ ಮೂಲಕ ಹೇಳಲಾಗುವುದಿಲ್ಲ. ಎಲ್ಲಾ ಕಥೆಗಳು ಗಣಿತವನ್ನು ಕಲಿಸಲು ಒದಗಿ ಬರುವುದಿಲ್ಲ. ನಾವು ಬೆಳೆದು ದೊಡ್ಡವರಾಗುತ್ತಾ ಕೇಳಿದ ಅನೇಕ ಕಥೆಗಳು ಉದಾಹರಣೆಗೆ ಕಾಲ್ಪನಿಕ ಕಥೆಗಳು ಮತ್ತು ರಾಜ-ರಾಣಿ ಕಥೆಗಳು, ಇಂದಿನ ಕಾಲಕ್ಕೆ ರಾಜಕೀಯವಾಗಿ, ಸಾಮಾಜಿಕವಾಗಿ ಅನೇಕ ತಪ್ಪು ಸಂದೇಶಗಳನ್ನು ಹೊಂದಿವೆ ಮತ್ತು ಅವುಗಳನ್ನು ನಿರ್ಲಕ್ಷಿಸುವುದು ಉತ್ತಮ. ಚಿಕ್ಕ ಹುಡುಗಿಯನ್ನು ತೋಳ ನುಂಗುವ ಮತ್ತು ಮರಕಡಿಯುವವನು ತೋಳವನ್ನು ಕಡಿದು ಆ ಹುಡುಗಿಯನ್ನು ಬಿಡಿಸುವ ಕಥೆಯಂತಹ ಸಾಕಷ್ಟು ಹಿಂಸಾತ್ಮಕವಾಗಿ ತೋರುವ ಜನಪದ ಕಥೆಗಳನ್ನು ನಾವು ಬಳಸಬೇಕೇ? ಆ ರೀತಿಯ ಕಥೆಗಳನ್ನು ಬಿಟ್ಟುಬಿಡುವುದು ಉತ್ತಮ. ನಮ್ಮ ಸುತ್ತಲಿನ ನೈಜ ಕಥೆಗಳು ಬೋಧನ ಸಾಧನಗಳಾಗಿ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿವೆ.

ನೀವು ಅವರಿಗೆ ಕಥೆಯೊಂದಿಗೆ ವಿಷಯವನ್ನು ಮನವರಿಕೆ ಮಾಡಿಸಬಹುದು. ವಿದ್ಯಾರ್ಥಿಗಳು ತಮ್ಮ ಪಾಠಗಳು ಮತ್ತು ನೈಜ ಪ್ರಪಂಚದ ನಡುವೆ ಇರುವ ನೇರ ಸಂಪರ್ಕವನ್ನು ನೋಡಬಹುದು. ಮೂರು ಪ್ರಮುಖ ಬುಡಕಟ್ಟು ಸಮುದಾಯಗಳಾದ ಖಾಸಿ, ಗಾರೋ ಮತ್ತು ಜೈನ್ತಿಯಾಗಳ ನೆಲೆಯಾದ ಮೇಘಾಲಯದ ಪರ್ವತಗಳಿಗೆ ಸಂಬಂಧಿಸಿದ ಸುದ್ದಿಯ ವರದಿಯೊಂದು ಇಲ್ಲಿದೆ. ಭಾರತ ಮತ್ತು ಪ್ರಪಂಚದ ಬಹುತೇಕ ಭಾಗಗಳಿಗಿಂತ, ಅವರ ಜೀವನ ವಿಧಾನ ಮತ್ತು ಸಂಪ್ರದಾಯಗಳು ವಿಭಿನ್ನವಾಗಿವೆ. ಉದಾಹರಣೆಗೆ, ಈ ಪ್ರದೇಶದ ಹುಡುಗಿಯರು ತಮ್ಮ ತಾಯಿಯ ಕುಟುಂಬದ ಹೆಸರನ್ನು ತಮ್ಮ ಉಪನಾಮವಾಗಿ ಹೊಂದುತ್ತಾರೆ; ಅವರು ತಮ್ಮ ತಾಯಂದಿರಿಂದ ಭೂಮಿಯನ್ನು ಆನುವಂಶಿಕವಾಗಿ ಪಡೆಯುತ್ತಾರೆ, ಅದರ ದೊಡ್ಡ ಭಾಗ ಕಿರಿಯ ಮಗಳಿಗೆ ಹೋಗುತ್ತದೆ; ಅವರು ಬಿತ್ತನೆ ಬೀಜಗಳ ಜ್ಞಾನವನ್ನು ಆನುವಂಶಿಕವಾಗಿ ಪಡೆಯುತ್ತಾರೆ; ಮತ್ತು ಅವರು ತಮ್ಮ ಮನೆಗಳು ಮತ್ತು ಹೊಲಗಳ ನಡುವೆ ಅನೇಕ ಕಡಿದಾದ, ಇಳಿಜಾರಾಗಿರುವ ಮೆಟ್ಟಿಲುಗಳನ್ನು ಹತ್ತಿ ಇಳಿಯುತ್ತಿರುತ್ತಾರೆ. ಕೆಲವೊಮ್ಮೆ ಈ ಮೆಟ್ಟಿಲುಗಳು ಸುಮಾರು 2,500ದವರೆಗೂ ಇರುತ್ತವೆ. ಈ ರೀತಿಯ ಅಸಾಮಾನ್ಯ ಮತ್ತು ಆಸಕ್ತಿದಾಯಕ ಸಂಗತಿಗಳಿಂದ ತುಂಬಿರುವ ಕಥೆಯನ್ನು ಗಣಿತ ತರಗತಿಯಲ್ಲಿ ದೂರ, ಅಳತೆ (ಈ ಕಥೆಯಲ್ಲಿ ಪ್ರತಿ ಮೆಟ್ಟಿಲಿನ ಎತ್ತರ ಎಷ್ಟಿರಬಹುದು ಎಂದು ನೀವು ಭಾವಿಸುತ್ತೀರಿ?) ಮತ್ತು ಪ್ರಮಾಣಿತ ಅಳತೆಯ ಅಗತ್ಯವನ್ನು ಕಲಿಸಲು ಬಳಸಬಹುದು:

- ಪರಿಮಾಣ: ಒಂದು ಕೈಮುಷ್ಟಿಯಷ್ಟು ಬೀಜಗಳ ಗಾತ್ರ ಎಷ್ಟಿರಬಹುದು?
- 2ಡಿ ಮತ್ತು 3ಡಿ: ಕೈಯ ಮುಷ್ಟಿಯಲ್ಲಿದ್ದ ಬೀಜಗಳನ್ನು ನೆಲದ ಮೇಲೆ ಸಮವಾಗಿ ಹರಡಿದರೆ, ಆ ಬೀಜಗಳಿಂದ ಆವೃತವಾದ ಪ್ರದೇಶದ ವಿಸ್ತೀರ್ಣ ಎಷ್ಟು?
- ಭಾಗ ಮತ್ತು ತರ್ಕ: ಇಬ್ಬರು ಹೆಣ್ಣುಮಕ್ಕಳ ತಾಯಿಯಾದ ಬಿಬಿಯಾನಾ ರಾಣಿ ಅವರು ಹತ್ತು ಎಕರೆ ಭೂಮಿಯನ್ನು ಹೊಂದಿದ್ದರೆ, ಕಿರಿಯ ಮಗಳು ಮೊದಲ ಮಗಳಿಗಿಂತ ಹೆಚ್ಚಿನ ಭಾಗ ಪಡೆಯುವ ರೀತಿಯಲ್ಲಿ ಆಕೆ ಎಷ್ಟು ರೀತಿಯಲ್ಲಿ ಭಾಗ ಮಾಡಿ ಹಂಚಬಹುದು?

## ಉಪಸಂಹಾರ

ಪಾಠ ಯೋಜನೆಗಳನ್ನು ಮಾಡಲು ತೆಗೆದುಕೊಳ್ಳುವ ಸಮಯ, ಕೆಲಸ ಮತ್ತು ಬದ್ಧತೆ ಹೆಚ್ಚಿನ ಶಿಕ್ಷಕರಿಗೆ ಇತರರ ಕಥೆಗಳನ್ನು – ಸಂಬಂಧವಿಲ್ಲದ್ದನ್ನು – ಓದಲು ಅಥವಾ ನೋಡಲು ಬಹಳ ಕಡಿಮೆ ಸಮಯವನ್ನು ನೀಡುತ್ತದೆ.

ಈ ಕೆಳಗೆ ಶಿಕ್ಷಕರಿಗೆ ಗಣಿತ ಕಲಿಸಲು ಉಪಯೋಗವಾಗಬಹುದಾದ ಆಸಕ್ತಿದಾಯಕ ಮತ್ತು ಮೌಲ್ಯಯುತವಾದ ಲೇಖನಗಳ, ವಿಡಿಯೋಗಳ ಪಟ್ಟಿ ನೀಡಲಾಗಿದೆ:

https://www.sciencedirect.com/science/article/pii/S0883035520318346?via%3Dihub
https://www.mathsthroughstories.org/about-us.html
https://storyweaver.org.in/stories/51422-one-three-five-help?mode=read



**ಮಾಲಾ ಕುಮಾರ್** ಅವರು ಬರೆಹಗಾರ್ತಿಯಾಗಿದ್ದು, ಮಕ್ಕಳ ಪುಸ್ತಕದ ಲೇಖಕಿ ಮತ್ತು ಪ್ರಥಮ್ ಬುಕ್ಸ್‌ನ ಮಾಜಿ ಸಂಪಾದಕಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಕಟನೆ ಐ ವಂಡರ್ ನಿಯತಕಾಲಿಕದ ಕನ್ಸಲ್ಟಿಂಗ್‌ಎಡಿಟರ್‌ಆಗಿದ್ದಾರೆ. ಅವರನ್ನು Mala.kumar@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ನಾಗಮಣಿ ಎಸ್.ಎನ್.**

ಕಥೆ ಹೇಳುವ ಸಮಯದಲ್ಲಿ ಕೇಳಲಾಗುವ ಪ್ರಶ್ನೆಗಳು ಮಕ್ಕಳಲ್ಲಿ ಅರಿವು ಮತ್ತು ಸಹಾನುಭೂತಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಕಥೆಯಲ್ಲಿ ಬರುವ ಪಾತ್ರವು ನೀವಾಗಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳಿದಾಗ, ಮಕ್ಕಳ ಆಲೋಚನೆ ವಿಸ್ತಾರಗೊಂಡು ಸಮಸ್ಯೆಗಳನ್ನು ಪರಿಹರಿಸುವ ಕೌಶಲಗಳು ವೃದ್ಧಿಗೊಳ್ಳುತ್ತವೆ. ಉದಾಹರಣೆಗೆ, ಕಥೆಯು ಕನಸುಗಳ ಬಗ್ಗೆ ಆಗಿದ್ದಲ್ಲಿ: ನಿನಗೆ ಯಾವ ಕನಸು ಬೀಳುತ್ತದೆ? ಕಥೆಯು ಭಯದ ಬಗ್ಗೆ ಆಗಿದ್ದಲ್ಲಿ: ನಿನಗೆ ಯಾವಾಗ ಭಯವಾಗುತ್ತದೆ? ಭಯ ಆದಾಗ ನೀನು ಏನು ಮಾಡುತ್ತೀಯ? ಎಂಬ ಪ್ರಶ್ನೆಗಳನ್ನು ಕೇಳಿ ಅವುಗಳ ಬಗ್ಗೆ ಮಕ್ಕಳ ಪ್ರತಿಕ್ರಿಯೆಗಳನ್ನು ಪ್ರಶ್ನಿಸಿದಾಗ ಅವರ ಭಾವನೆಗಳನ್ನು ವ್ಯಕ್ತಪಡಿಸಲು ಅವರಿಗೆ ಒಂದು ಅವಕಾಶ ಕೊಟ್ಟಂತೆ ಆಗುತ್ತದೆ ಮತ್ತು ಶಾಲೆಯಲ್ಲಿ ಕಲಿಯುವ ಅಂಶಗಳನ್ನು ತಮ್ಮ ಸ್ವಂತ ಜೀವನಕ್ಕೆ ಸಹ ಸಂಬಂಧ ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.

ಪದ್ಮಾ ಬಿ.ಎಂ., ಕಥೆಗಳ ಮೂಲಕ ಕಲಿಯುವುದು, ಪುಟ –

# ತರಗತಿಯೊಳಗೆ ಕಥೆ ಹೇಳುವ ಚಟುವಟಿಕೆಗಳು

ನಬನಿತಾ ದೇಶಮುಖ್

ಕಥೆ ಹೇಳುವುದರ ಮೇಲೆ ನಡೆಯುತ್ತಿರುವ ಸಂಶೋಧನೆಗಳ ಪ್ರಕಾರ, ನಿಯಮಿತವಾಗಿ ಕಥೆಗಳನ್ನು ಆಲಿಸುವ ವಿದ್ಯಾರ್ಥಿಗಳಲ್ಲಿ ಸಾಕ್ಷರತಾ ಕೌಶಲಗಳು ಗಮನಾರ್ಹ ಸುಧಾರಣೆ ಆಗುತ್ತದೆ. ಒಂದು ಲೇಖನದಲ್ಲಿ ಹೇಳುವಂತೆ ಸಣ್ಣ ವಯಸ್ಸಿನಲ್ಲಿ ಕಥೆ ಕೇಳುವುದಕ್ಕೆ ಒಡ್ಡಿಕೊಂಡ ಮಕ್ಕಳು ಕಲ್ಪನೆ, ಸಹಾನುಭೂತಿ, ಸಹಿಷ್ಣುತೆ ಮತ್ತು ಅರ್ಥ ಮಾಡಿಕೊಳ್ಳುವಂತಹ ಪ್ರಮುಖ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಇವು ಮಕ್ಕಳಿಗೆ ಆತ್ಮವಿಶ್ವಾಸದೊಂದಿಗೆ ಜೀವನ ಸಾಗಿಸಲು ನೆರವಾಗುತ್ತವೆ.

> ಸೂಕ್ತ ಹಾವಭಾವ, ಧ್ವನಿಯ ಏರಿಳಿತ, ಮಧ್ಯಂತರ ತಡೆಗಳು, ಮುಖಭಾವಗಳು ಮತ್ತು ಸಾಮಗ್ರಿಗಳನ್ನು ಬಳಸಿ ನಿರೂಪಿತವಾದ ಕಥೆಗಳು ಪರಿಣಾಮಕಾರೀ ಬೋಧನ ಸಾಮಗ್ರಿಗಳಾಗುತ್ತವೆ. ಹೊಸ ಭಾಷೆಯನ್ನು ಕಲಿಯಲು ಕಷ್ಟಪಡುವ ವಿದ್ಯಾರ್ಥಿಗಳೊಂದಿಗೆ ಇದನ್ನು ಬೋಧಕರು ಆತ್ಮವಿಶ್ವಾಸದೊಂದಿಗೆ ಬಳಸಬಹುದು. ವಿದ್ಯಾರ್ಥಿಗಳ ವಯಸ್ಸು, ಆಸಕ್ತಿಗಳು, ಗ್ರಹಿಕೆಯ ಮಟ್ಟಗಳು ಹಾಗೂ ಹಿನ್ನೆಲೆಯನ್ನು ಆಧಾರವಾಗಿಟ್ಟು-ಕೊಂಡು ಆಯ್ಕೆ ಮಾಡಿರುವ ಕಥೆಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ.

ದುರದೃಷ್ಟವಶಾತ್, ಭಾರತದ ಉದ್ದಗಲಕ್ಕೂ ಹಲವು ತರಗತಿಗಳಲ್ಲಿ ಬೋಧಕರು ಮುಖ್ಯವಾಗಿ ನೈತಿಕ ಮೌಲ್ಯಗಳನ್ನು ಬಿತ್ತಲು ಇಲ್ಲವೇ ವ್ಯಾಕರಣದ ಪರಿಕಲ್ಪನೆಗಳನ್ನು ವಿವರಿಸಲು ಮಾತ್ರ ಕಥೆಗಳನ್ನು ಬಳಸುತ್ತಾರೆ. ಕಥೆ ಹೇಳುವುದು ಅರ್ಥಬದ್ಧವಾಗಬೇಕಾದರೆ ಬೋಧಕರು ತುಂಬು ಉತ್ಸಾಹದೊಂದಿಗೆ ಮತ್ತು ನೋಡುಗರಿಗೆ ಸಂತಸ ಮೂಡಿಸುವುದಕ್ಕಾಗಿ ಕಥೆ ಹೇಳಬೇಕಾಗುತ್ತದೆ. ಶೈಕ್ಷಣಿಕ ಉದ್ದೇಶಕ್ಕಾಗಿ ಕಥೆಯನ್ನು ಛೇದಿಸಿ, ವಿಶ್ಲೇಷಿಸಿ, ಅರ್ಥ ಮಾಡಿಕೊಂಡು, ತಮ್ಮದೇ ರೀತಿಯಲ್ಲಿ ಕಥೆಯನ್ನು ನಿರೂಪಿಸುವುದು ಮುಂದಿನ ಹಂತಗಳಲ್ಲಿ ಬರಬೇಕಾಗುತ್ತದೆ. ತರಗತಿಯಲ್ಲಿ ಕಥೆಗಳನ್ನು ಸಾಕ್ಷರತೆಯ ಕೌಶಲಗಳ ಬೆಳವಣಿಗೆಯಿಂದ ಹಿಡಿದು ಹೆಚ್ಚು ಮಾನವೀಯತೆಯುಳ್ಳ ವ್ಯಕ್ತಿಯಾಗಬೇಕೆನ್ನುವವರೆಗಿನ ಉದ್ದೇಶಗಳೊಂದಿಗೆ ಬಳಸ-ಬಹುದು. ಈ ಲೇಖನವು ಕಲಿಕೆಯಲ್ಲಿ ತೊಡಗಿರುವ ಪುಟ್ಟ ಮಕ್ಕಳಲ್ಲಿ ಕಥೆ ಹೇಳುವುದು ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆವಣಿಗೆಯನ್ನು ( Listening, Speaking, Reading and Writing - LSRW) ಹೇಗೆ ಹೆಚ್ಚು ಸುಧಾರಿಸಿ, ಸಮರ್ಥಗೊಳಿಸಬಲ್ಲದು ಹಾಗೂ ಅದರೊಂದಿಗೆ ಗ್ರಹಿಕೆ, ಕ್ರಮಾನುಗತಿ, ಊಹಿಸುವ ಕೌಶಲ, ಕಥೆಯನ್ನು ಮತ್ತೆ ಹೇಳುವುದು ಮತ್ತು ಬರೆಯುವ ಸಾಮರ್ಥ್ಯಗಳನ್ನು ಹೇಗೆ ಹೆಚ್ಚಿಸಬಹುದು ಎನ್ನುವುದರ ಮೇಲೆ ಗಮನವಿರಿಸಿದೆ. ತರಗತಿಯಲ್ಲಿ ಮಾಡಬಹುದಾದ ಸೃಜನಶೀಲ ಚಟುವಟಿಕೆಗಳಲ್ಲಿ ಕೆಲವನ್ನು ಈ ಕೆಳಗೆ ನೀಡಲಾಗಿದೆ:

## ಮಾತಿನ ಕೌಶಲಗಳು

ಭಾಷೆಯನ್ನು ನಿರರ್ಗಳವಾಗಿ ಬಳಸುವುದು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ ಮತ್ತು ಅದನ್ನು ಉಪನ್ಯಾಸಗಳಿಗೆ ಕಿವಿಕೊಡುವುದರಿಂದಲಾಗಲೀ, ಬೋಧಕರು ಹೇಳಿದುದನ್ನು ಯಾಂತ್ರಿಕವಾಗಿ ಪುನರುಕ್ತಿ ಮಾಡುವುದ-ರಿಂದಾಗಲೀ ಸಿದ್ಧಿಸಲಾಗದು. ಬದಲಾಗಿ, ಕಥೆ ಹೇಳುವಂತಹ ಸಂತಸದಾಯಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಬರುತ್ತದೆ.

ಚಟುವಟಿಕೆ : ಕಥೆಯ ಚೀಲ

ಉದ್ದೇಶ: ಕಥೆ ಹೆಣೆಯಲು ಮಕ್ಕಳಿಗೆ ನೆರವಾಗುವ ಮೂಲಕ ಅವರ ಕಲ್ಪನೆ ಮತ್ತು ಮಾತಿನ ಕೌಶಲಗಳನ್ನು ಸುಧಾರಿಸುವುದು.

ಸಾಮಗ್ರಿಗಳು: ಎರೇಸರ್, ಪೆನ್ಸಿಲುಗಳು, ಪೆನ್ನುಗಳು, ಪೆನ್ಸಿಲ್ ಶಾರ್ಪನರ್, ನಾಣ್ಯಗಳು, ಚಾಕೋಲೇಟ್ಗಳು ಇತ್ಯಾದಿ ಸಣ್ಣ ಪುಟ್ಟ ವಸ್ತುಗಳನ್ನು ಒಳಗೊಂಡಿರುವ ಒಂದು ಚೀಲ.

ವಿಧಾನ:

- ಒಂದು ಕಥೆಯನ್ನು ಹೇಳಿ ಮತ್ತು ಪ್ರತಿ ಕಥೆಗೂ ಒಂದು ಆರಂಭ, ಒಂದು ಮಧ್ಯಭಾಗ ಮತ್ತು ಒಂದು ಕೊನೆ ಇರುತ್ತದೆ ಎನ್ನುವುದನ್ನು ಮಕ್ಕಳಿಗೆ ವಿವರಿಸುವುದು
- ಮುಂದಿನ ಸಾಲಿನಲ್ಲಿ ಕುಳಿತಿರುವ ಆರು ಮಂದಿ ಮಕ್ಕಳಿಗೆ ಕಣ್ಣು ಮುಚ್ಚಿಕೊಳ್ಳುವಂತೆ ಹೇಳಿ ಚೀಲದಿಂದ ಏನಾದರೊಂದು ವಸ್ತುವನ್ನು ಎತ್ತಿಕೊಳ್ಳುವಂತೆ ತಿಳಿಸುವುದು
- ನೀವೂ ಚೀಲದಿಂದ ಒಂದು ವಸ್ತುವನ್ನು ಎತ್ತಿಕೊಳ್ಳುವುದು. ನೀವು ಎತ್ತಿಕೊಂಡಿರುವ ವಸ್ತುವಿನ ಮೇಲೆ ಒಂದು ಕಥೆಯನ್ನು ಆರಂಭಿಸಿ ಮತ್ತು ಮಕ್ಕಳು ತಾವು ಎತ್ತಿಕೊಂಡಿರುವ ವಸ್ತುವನ್ನು ಕಥೆಗೆ ಪರಿಚಯಿಸುವಂತೆ ತಿಳಿಸಿ, ಕಥೆಯನ್ನು ಮುಂದುವರಿಸುವಂತೆ ಹೇಳುವುದು.

ಫಲಿತಾಂಶ: ಮಕ್ಕಳು ದಿನಬಳಕೆಯ ವಸ್ತುಗಳನ್ನು, ಅಂದರೆ ಪ್ರತಿ ದಿನ ಉಪಯೋಗಿಸುವ ಸಾಮಗ್ರಿಗಳನ್ನು ಕಲಿಕೆಯ ಸಾಮಗ್ರಿಯಾಗಿ ಬಳಸಿಕೊಂಡು ಕಥೆ ಹೆಣೆಯುವುದನ್ನು ಕಲಿಯುತ್ತಾರೆ.

## ಕಥೆಯ ಪುನರುಕ್ತಿ ಕೌಶಲಗಳು

ಕಥೆಯ ಗ್ರಹಿಕೆಯನ್ನು ಹೆಚ್ಚಿಸುವುದಕ್ಕೆ ಕಥೆಯ ಪುನರುಕ್ತಿ ಒಂದು ಮಹತ್ವದ ಸಾಮರ್ಥ್ಯವಾಗಿದೆ. ಇದು ಮಕ್ಕಳಿಗೆ ತಮ್ಮದೇ ಪದಗಳಲ್ಲಿ ಕಥೆಯನ್ನು ಹೇಳುವುದಕ್ಕೆ ನೆರವಾಗುತ್ತದೆ. ಇದು ಅವರ ಆಲಿಸುವ ಮತ್ತು ಮಾತಿನ ಕೌಶಲಗಳನ್ನೂ ಹೆಚ್ಚಿಸುತ್ತದೆ, ಜೊತೆಗೆ ಘಟನಾವಳಿಗಳ ಕ್ರಮಾನುಗತ ಜೋಡಣೆಗೆ ಸುಧಾರಣೆ ತರುತ್ತದೆ.

ಚಟುವಟಿಕೆ: ಚೆಂಡು ದಾಟಿಸುವ ಆಟದ ಮೂಲಕ ಕಥೆ ಹೆಣೆಯುವುದು

ಉದ್ದೇಶ: ಮಕ್ಕಳಿಗೆ ಕಥೆಯೊಂದನ್ನು ಪುನಃ ಹೇಳಲು ನೆರವಾಗುವುದು

ಸಾಮಗ್ರಿಗಳು: ಒಂದು ಚೆಂಡು

ವಿಧಾನ:
- ತರಗತಿಯಲ್ಲಿ ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ ಒಂದು ಕಥೆಯನ್ನು ಹೇಳುವುದು
- ಒಂದು ಚೆಂಡನ್ನು ತೆಗೆದುಕೊಂಡು ಮಕ್ಕಳ ಕಡೆಗೆ ಎಸೆಯುವುದು. ಯಾವ ವಿದ್ಯಾರ್ಥಿಯ ಕೈಗೆ ಅದು ಬರುತ್ತದೋ, ಅವರು ಕಥೆಯನ್ನು ಆರಂಭದಿಂದ ಹೇಳಬೇಕು. ಮೊದಲ ಸಾಲನ್ನು ನಿರೂಪಿಸಿದ ನಂತರ, ವಿದ್ಯಾರ್ಥಿಯು ತನ್ನ ಕೈಯಲ್ಲಿರುವ ಚೆಂಡನ್ನು ಇನ್ನೊಬ್ಬ ವಿದ್ಯಾರ್ಥಿಗೆ ದಾಟಿಸಬೇಕು. ಆ ವಿದ್ಯಾರ್ಥಿ ಕಥೆಯ ಕ್ರಮಾನುಗತವಾದ ಮುಂದಿನ ಸಾಲನ್ನು ಹೇಳಬೇಕು.
- ಹೀಗೆ ಚೆಂಡನ್ನು ಸುತ್ತಲೂ ದಾಟಿಸುತ್ತಾ ಅದನ್ನು ಪಡೆಯುವ ಪ್ರತಿ ವಿದ್ಯಾರ್ಥಿಯೂ ಕಥೆಯನ್ನು ಮತ್ತೆ ಹೇಳುವ ಚಟುವಟಿಕೆಯಲ್ಲಿ ಭಾಗವಹಿಸುತ್ತಾ ಕಥೆಯ ಕೊನೆಯನ್ನು ತಲುಪಬೇಕು.
- ಗ್ರಹಿಕೆಯನ್ನು ಪರೀಕ್ಷಿಸಲು, ಮುಂದಿನ ಅನುಸರಣೆಯ ಹಂತವಾಗಿ, ಕಥೆಯನ್ನು ಹೇಳುವಾಗ ಉದ್ದೇಶಪೂರ್ವಕವಾಗಿ ತಪ್ಪುಗಳನ್ನು ಮಾಡುವುದು ಹಾಗೂ ವಿದ್ಯಾರ್ಥಿಗಳು ಆ ತಪ್ಪನ್ನು ಸರಿಪಡಿಸಲು ಕಾಯುವುದು.

ಫಲಿತಾಂಶ: ವಿದ್ಯಾರ್ಥಿಗಳು ಗಮನವಿಟ್ಟು ಕೇಳುವುದನ್ನು, ಅರ್ಥ ಮಾಡಿಕೊಳ್ಳುವುದನ್ನು ಮತ್ತು ಕಥೆಯನ್ನು ಮತ್ತೆ ಉತ್ಸುಕತೆ–ಯೊಂದಿಗೆ ಹೇಳುವುದನ್ನು ಕಲಿಯುತ್ತಾರೆ.

## ಆಲಿಸುವ ಕೌಶಲಗಳು

ಉತ್ತಮ ಆಲಿಸುವ ಕೌಶಲವು ಒಂದು ಭಾಷೆಯ ಕಲಿಕೆಗೆ ಬಹಳ ಮುಖ್ಯ. ಆದರೆ, ಆಲಿಸುವುದೆಂದರೆ ಕೇವಲ ಪದಗಳ ಸದ್ದನ್ನು ಕೇಳುವುದು ಮಾತ್ರವಲ್ಲ, ಕೇಳಿದ್ದನ್ನು ಸಂಸ್ಕರಿಸುವುದೂ ಅದರಲ್ಲಿ ಸೇರಿದೆ. ಮಕ್ಕಳು ಕಥೆಗಳನ್ನು ಆಲಿಸುವ ಮೂಲಕ ಸಮೃದ್ಧವಾದ ಪದಕೋಶವನ್ನು, ಸಂಕೀರ್ಣ ವ್ಯಾಕರಣ ರಚನೆಗಳನ್ನು ಮತ್ತು ಸ್ಪಷ್ಟ ಉಚ್ಚಾರ, ಪದಬಳಕೆಯನ್ನು ಗ್ರಹಿಸಿಕೊಳ್ಳುತ್ತಾರೆ ಮತ್ತು ಬೋಧಕರ ಬೆಂಬಲ ಮತ್ತು ಮಾರ್ಗದರ್ಶನದೊಂದಿಗೆ ಅವರ ಓದುವ, ಬರೆಯುವ ಕೌಶಲಗಳು ತಾವಾಗಿಯೇ ಸುಧಾರಣೆ–ಯಾಗುತ್ತವೆ.

ಚಟುವಟಿಕೆ: ಸಂಗೀತಮಯ ಕಥೆ

ಉದ್ದೇಶ: ಶ್ರವ್ಯ ಸಂಪನ್ಮೂಲಗಳ ಬಳಕೆಯ ಮೂಲಕ ವಿದ್ಯಾರ್ಥಿಗಳ ಆಲಿಸುವ ಕೌಶಲವನ್ನು ಸುಧಾರಿಸುವುದು.

ಸಾಮಗ್ರಿಗಳು: ಸಂಗೀತ ಸಾಧನಗಳು ಅಥವಾ ವಿವಿಧ ಬಗೆಯ ಸದ್ದುಗಳ ಧ್ವನಿಮುದ್ರಣಗಳು; ಮೊಬೈಲ್ ಫೋನುಗಳು ಮತ್ತು ಧ್ವನಿವರ್ಧಕಗಳು.

ವಿಧಾನ:
- ಹಕ್ಕಿಗಳ ಚಿಲಿಪಿಲಿ, ಡೋಲಿನ ಬಡಿತ, ಗಾಳಿಯ ಮೊರೆತ, ನೀರಿನ ಜುಳುಜುಳು ಇತ್ಯಾದಿ ಹಲವಾರು ಬಗೆಯ ಸದ್ದನ್ನು ಒಳಗೊಂಡಿರುವ ಕಥೆಯೊಂದನ್ನು ಆಯ್ಕೆ ಮಾಡಿಕೊಳ್ಳುವುದು.
- ತರಗತಿಯಲ್ಲಿ ಆ ಕಥೆಯನ್ನು ನಿರೂಪಿಸುವುದು.
- ಹಕ್ಕಿಗಳ ಚಿಲಿಪಿಲಿಯಂತಹ ಸದ್ದು ಇರುವ ಹಂತದಲ್ಲಿ ತುಸು ತಡೆದು ಕಥೆಯನ್ನು ಮತ್ತೆ ಹೇಳುವುದು. ಧ್ವನಿವರ್ಧಕದ ಮೂಲಕ ಹಕ್ಕಿಗಳ ಚಿಲಿಪಿಲಿ ಸದ್ದಿನ ಧ್ವನಿಮುದ್ರಣವನ್ನು ಕೇಳಿಸುವುದು
- ವಯಸ್ಸಿಗೆ ಅನುಗುಣವಾಗಿ ವಿದ್ಯಾರ್ಥಿಗಳು ತಾವು ಕೇಳುವ ಹಕ್ಕಿಯ ಸದ್ದನ್ನು ಇಂಗ್ಲಿಷಿನಲ್ಲಿ ಅಥವಾ ತರಗತಿ ನಡೆಯುವ ಭಾಷೆಯಲ್ಲಿ ಹೇಳಬೇಕು. ಉದಾಹರಣೆಗೆ, 'ಚೀಪ್–ಚೀಪ್', 'ಟ್ವೀಟ್–ಟ್ವೀಟ್',' 'ಟ್ವಿಟರ್', ಇತ್ಯಾದಿ.
- ಕಥೆಯಲ್ಲಿರುವ ಸದ್ದಿನ ಪದಗಳು ಮುಗಿಯುವವರೆಗೆ ಕಥೆ ಹೇಳುವುದನ್ನು ಮುಂದುವರಿಸುವುದು
- ಇದರ ಮುಂದುವರಿಕೆಯ ಭಾಗವಾಗಿ ವಿದ್ಯಾರ್ಥಿಗಳು ಕೆಲವೊಂದು 'ಸದ್ದಿನ ಪದಗಳನ್ನು' ದನಿಯೆತ್ತಿ ಹೇಳಬೇಕು ಅಥವಾ ಆ ಪದಗಳನ್ನು ಉಪಯೋಗಿಸಿ ವಾಕ್ಯಗಳನ್ನು ಬರೆಯಬೇಕು.

ಫಲಿತಾಂಶ: ಸಂಗೀತ ಸಾಧನಗಳು ಮತ್ತು ಧ್ವನಿಮುದ್ರಣಗಳ ಬಳಕೆಯಿಂದ ವಿದ್ಯಾರ್ಥಿಗಳ ಪದಕೋಶ ಮತ್ತು ಗ್ರಹಿಕೆ ಸುಧಾರಿಸುತ್ತದೆ.

## ಕ್ರಮಾನುಗತಿಯ ಕೌಶಲಗಳು

ಕ್ರಮಾನುಗತಿಯು (Sequencing) ಮಕ್ಕಳಿಗೆ ತಾವು ಓದಿದುದನ್ನು ಅಥವಾ ಕೇಳಿಸಿಕೊಂಡದ್ದನ್ನು ಗ್ರಹಿಸಲು ನೆರವಾಗುತ್ತದೆ. ಜೊತೆಗೆ ಅದು ಕಥೆಯ ಭಾಗಗಳನ್ನು ಗುರುತಿಸಲು ಮತ್ತು ಕ್ರಮಾನುಗತವಾಗಿ ಅದನ್ನು ಮತ್ತೆ ಹೇಳಲು ನೆರವಾಗುತ್ತದೆ. ಕ್ರಮಾನುಗತಿಯ ಕೌಶಲಗಳು ಬಹು ಮುಖ್ಯ ಗ್ರಹಿಕಾ ಕಾರ್ಯತಂತ್ರವಾಗಿದ್ದು, (comprehension strategies) ವಿಶೇಷವಾಗಿ ನಿರೂಪಣೆಯ ಪಠ್ಯಗಳಿಗೆ ಮಹತ್ವದ್ದಾಗಿರುತ್ತವೆ.

ಚಟುವಟಿಕೆ: ಓದುವ ಶಂಕು
ಉದ್ದೇಶ: ಓದುವ ಮತ್ತು ಕ್ರಮಾನುಗತಿಯ ಕೌಶಲಗಳ ವೃದ್ಧಿ

ಸಾಮಗ್ರಿಗಳು: ಕಥೆಯ ಪುಟ, ಪೆನ್ಸಿಲುಗಳು, ನೋಟ್ ಪುಸ್ತಕಗಳು

ವಿಧಾನ:

- ಒಂದು ನಿಯತಕಾಲಿಕ ಅಥವಾ ಸುದ್ದಿಪತ್ರಿಕೆಯಿಂದ ಮಕ್ಕಳ ಕಥೆಯ ಪುಟವನ್ನು ಆಯ್ದು ಕತ್ತರಿಸುವುದು
- ಪುಟವನ್ನು ಒಂದು ಶಂಕುವಿನ ಆಕಾರಕ್ಕೆ ಸುರುಳಿ ಸುತ್ತಿ, ಇಣುಕಿ ನೋಡಲು ಮೇಲ್ಭಾಗದಲ್ಲಿ ಒಂದು ಸಣ್ಣ ತೂತು ಮಾಡುವುದು
- ಮಕ್ಕಳು ಆ ತೂತಿನ ಮೂಲಕ ಇಣುಕಿ ನೋಡುವಂತೆ ಮತ್ತು ಆ ಶಂಕುವಿನೊಳಗಿನ ಪುಟದಲ್ಲಿ ಮುದ್ರಿಸಿರುವ ಪದಗಳು ಅಥವಾ ನುಡಿಗಟ್ಟನ್ನು ಓದುವಂತೆ ಪ್ರೋತ್ಸಾಹಿಸುವುದು
- ಕಾಗದದ ಶಂಕುವನ್ನು ತೆರೆಯಿರಿ. ಕಥೆಯ ಮಧ್ಯಭಾಗವನ್ನು ಓದಿ ಹೇಳಿ ಮತ್ತು ವಿದ್ಯಾರ್ಥಿಗಳಿಗೆ ಮೊದಲ ಭಾಗವನ್ನು ಅಥವಾ ಕೊನೆಯ ಭಾಗವನ್ನು ನಿರೂಪಿಸಲು ಇಲ್ಲವೇ ಬರೆಯಲು ಹೇಳಿ.
- ಇದರ ಮುಂದಿನ ಅಭ್ಯಾಸವಾಗಿ, ಕಥೆಯಿಂದ ಪಾತ್ರಗಳನ್ನು, ವಸ್ತುಗಳನ್ನು ಅಥವಾ ಕ್ರಿಯೆಗಳನ್ನು ಚಿತ್ರಿಸುವಂತೆ ಹೇಳುವುದು

ಫಲಿತಾಂಶ: ಕಥೆಯನ್ನು ನಿರೂಪಿಸುವ ಮತ್ತು ಕಥೆಯನ್ನು ಕ್ರಮಾನುಗತವಾಗಿ ಬರೆಯುವ ಮಕ್ಕಳ ಪ್ರೇರಣೆ ಹೆಚ್ಚುತ್ತದೆ.

## ವಾಕ್ಯ ಹೆಣೆಯುವುದು

ಸರಿಯಾಗಿ ಮತ್ತು ಸ್ಪಷ್ಟವಾಗಿ ಬರೆಯುವ ಸಾಮರ್ಥ್ಯವು ಸವಾಲೆನಿಸುವ ಯಾವುದೇ ಬರೆಯುವ ಕೆಲಸವನ್ನು ಸಫಲತೆಯ ಅನುಭವವಾಗಿ ಮಾರ್ಪಾಡು ಮಾಡುತ್ತದೆ. ವಾಕ್ಯ ರಚನೆಯ ಕೌಶಲಗಳ ಅಭಿವೃದ್ಧಿಯು ವಿಶೇಷವಾಗಿ ಪ್ರಾಥಮಿಕ ತರಗತಿಗಳಲ್ಲಿರುವ ವಿದ್ಯಾರ್ಥಿಗಳಿಗೆ ಮಹತ್ವದ ಪಾತ್ರ ವಹಿಸುತ್ತದೆ.



ಚಿತ್ರ 1. ಓದುವ ಶಂಕು

ಚಟುವಟಿಕೆ: ಅರ್ಧ ವಾಕ್ಯಗಳ ಆಟ

ಉದ್ದೇಶ: ವಾಕ್ಯಗಳ ಆರಂಭ ಮತ್ತು ಅಂತ್ಯವನ್ನು ಚಲನಶೀಲರಾಗಿ ಸಂಪರ್ಕಿಸುವುದಕ್ಕೆ ವಿದ್ಯಾರ್ಥಿಗಳಿಗೆ ನೆರವಾಗುವುದು.

ಸಾಮಗ್ರಿಗಳು: ಅರ್ಧ ವಾಕ್ಯಗಳನ್ನು ಬರೆದ ಕಾಗದ ಚೂರುಗಳ
ವಿಧಾನ:

- ಈ ಮೊದಲೇ ವಿದ್ಯಾರ್ಥಿಗಳಿಗೆ ಹೇಳಿರುವ ಒಂದು ಕಥೆಯಿಂದ ಆಯ್ದ, ಅರ್ಧರ್ಧ ವಾಕ್ಯಗಳನ್ನು ಬರೆದಿರುವ, ಕಾಗದದ ಚೂರುಗಳನ್ನು ವಿದ್ಯಾರ್ಥಿಗಳಿಗೆ ಹಂಚುವುದು.

- ವಿದ್ಯಾರ್ಥಿಗಳು ಪರಸ್ಪರ ಮುಖಾಮುಖಿಯಾಗಿ ಎರಡು ಸಾಲುಗಳಲ್ಲಿ ನಿಲ್ಲುವಂತೆ ಮಾಡುವುದು. 1ನೇ ಸಾಲಿನಲ್ಲಿ ವಾಕ್ಯಗಳ ಆರಂಭಗಳಿರುತ್ತವೆ. 2ನೇ ಸಾಲಿನಲ್ಲಿ ಅಂತ್ಯಗಳಿರುತ್ತವೆ. ನೀವು 'ಆರಂಭಿಸಿ' ಎಂದ ಕೂಡಲೇ ಎರಡೂ ಸಾಲುಗಳಲ್ಲಿರುವ ವಿದ್ಯಾರ್ಥಿಗಳು ತಮ್ಮ ಜೊತೆಗಾರರನ್ನು ಹುಡುಕಿ ವಾಕ್ಯಗಳನ್ನು ಇಡೀ ತರಗತಿಗೆ ಓದಿ ಹೇಳಬೇಕು.

- ಎಲ್ಲ ವಾಕ್ಯಗಳ ಜೋಡಿಗಳನ್ನು ಕ್ರಮವಾಗಿ ನಿಲ್ಲುವಂತೆ ಹೇಳುವುದರ ಮೂಲಕ ಕಥೆಯನ್ನು ಅಥವಾ ವಾಕ್ಯವೃಂದವನ್ನು ಪುನಃ ರಚನೆ ಮಾಡಬಹುದು.

ಫಲಿತಾಂಶ: ವಿದ್ಯಾರ್ಥಿಗಳಿಗೆ ಆಟದ ಮೂಲಕ ಓದಲು, ಅರ್ಥ ಮಾಡಿಕೊಳ್ಳಲು ಮತ್ತು ವಾಕ್ಯಗಳ ಭಾಗಗಳನ್ನು ಕ್ರಮವಾಗಿ ಜೋಡಿಸಲು ಪ್ರೇರೇಪಣೆ ಸಿಗುತ್ತದೆ.

## ಪ್ರಶ್ನಿಸುವ ಕೌಶಲಗಳು

ಪ್ರಶ್ನಿಸುವುದು ಒಂದು ಪ್ರಮುಖ ಕೌಶಲವಾಗಿದ್ದು, ಇದು ವಿವೇಚನೆ ಮತ್ತು ತಾರ್ಕಿಕ ಪ್ರತಿಪಾದನೆಯ ಕೌಶಲಗಳನ್ನು ಬೆಳೆಸುತ್ತದೆ. ಪ್ರಶ್ನೆ ಕೇಳುವುದನ್ನು ಕಲಿಯುವುದರ ಮೂಲಕ, ಓರ್ವ ವಿದ್ಯಾರ್ಥಿಯ ಮಾಹಿತಿ ಮತ್ತು ಜ್ಞಾನ ಸಂಗ್ರಹದ ಸಾಮರ್ಥ್ಯ ಹಾಗೂ ಅವರ ಮಾತಿನ ಕೌಶಲವೂ ಸುಧಾರಿಸುತ್ತದೆ.

ಚಟುವಟಿಕೆ: ಐದು ಪ್ರಶ್ನೆಗಳು
ಉದ್ದೇಶ: ವಿದ್ಯಾರ್ಥಿಗಳ ಪ್ರಶ್ನಿಸುವ ಕೌಶಲವನ್ನು ಅಭಿವೃದ್ಧಿಪಡಿಸುವುದು.

ಸಾಮಗ್ರಿಗಳು: ಯಾವುದೂ ಇಲ್ಲ

- ವಿಧಾನ:ತರಗತಿಗೆ ಒಂದು ಕಥೆಯನ್ನು ಹೇಳಿ ಮತ್ತು ಓರ್ವ ವಿದ್ಯಾರ್ಥಿಗೆ (ವಿದ್ಯಾರ್ಥಿ 1) ಕಥೆಯ ಒಂದು ವಸ್ತು ಅಥವಾ ವ್ಯಕ್ತಿಯ ಬಗ್ಗೆ ಯೋಚಿಸಲು ಹೇಳುವುದು.

- ಉಳಿದ ವಿದ್ಯಾರ್ಥಿಗಳು ಆ ವಿದ್ಯಾರ್ಥಿಗೆ (ವಿದ್ಯಾರ್ಥಿ 1) ಪ್ರತಿಯೊಬ್ಬರೂ ಐದು ಪ್ರಶ್ನೆಗಳಂತೆ ಕೇಳಿ, ಸರಿಯಾದ ಉತ್ತರ ಊಹಿಸಬೇಕು. ಸರಿಯಾದ ಉತ್ತರ ಬರಲು ವಸ್ತುವಿನ ಭೌತಿಕ ಲಕ್ಷಣಗಳ (ಆಕಾರ, ಗಾತ್ರ, ಬಣ್ಣ) ಅಥವಾ ವ್ಯಕ್ತಿಯ (ವಯಸ್ಸು, ಅವರ ಹಾವಭಾವ, ಉಡುಗೆ) ಮೇಲೆ ಪ್ರಶ್ನೆಗಳನ್ನು ಕೇಳಬಹುದು.

ಫಲಿತಾಂಶ: ವಿದ್ಯಾರ್ಥಿಗಳು ಹೆಚ್ಚು ಚೆನ್ನಾಗಿ ಕಥೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಪ್ರಶ್ನೆ ಕೇಳುವುದನ್ನು ಕಲಿತುಕೊಳ್ಳುತ್ತಾರೆ.

## ಊಹಿಸುವ ಕೌಶಲಗಳು

ಮುಂದಾಗಲಿರುವುದನ್ನು ಊಹಿಸುವುದು ಮಕ್ಕಳಿಗೆ ಪ್ರಶ್ನೆ ಕೇಳಲು ಮತ್ತು ತರ್ಕಬದ್ಧವಾಗಿ ಆಲೋಚಿಸುವುದನ್ನು ಉತ್ತೇಜಿಸುತ್ತದೆ. ಅವರು ಆಲಿಸುತ್ತಿರುವುದರ ಅಥವಾ ಓದುತ್ತಿರುವುದರ ಮೇಲೆ ಹೆಚ್ಚು ಗಮನವಿರಿಸಿ, ಒಂದು ಕಥೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಕ್ರಮಬದ್ಧವಾಗಿ ಜೋಡಿಸಲೂ ಇದು ನೆರವಾಗುತ್ತದೆ.

ಚಟುವಟಿಕೆ : ಕಥೆ ಉಂಡೆ
ಉದ್ದೇಶ : ವಿದ್ಯಾರ್ಥಿಗಳ ಕೇಳಿಸಿಕೊಳ್ಳುವ, ಓದುವ ಹಾಗೂ ಬರೆಯುವ ಕೌಶಲಗಳನ್ನು ಸುಧಾರಿಸುವುದು

ಸಾಮಗ್ರಿಗಳು: ಹಳೆಯ ನಿಯತಕಾಲಿಕಗಳು ಅಥವಾ ಸುದ್ದಿಪತ್ರಿಕೆಗಳಿಂದ ಹರಿದ ಕಥೆಯ ಪುಟಗಳು

- ವಿಧಾನ:ಹಳೆಯ ಮಕ್ಕಳ ನಿಯತಕಾಲಿಕದಿಂದ ಅಥವಾ ಸುದ್ದಿಪತ್ರಿಕೆಗಳಿಂದ ಕಥೆಯ ಪುಟವನ್ನು ಕತ್ತರಿಸಿಕೊಳ್ಳುವುದು.

- ಆ ಪುಟವನ್ನು ಉಂಡೆಯಾಗಿ ಮುದುರಿಕೊಳ್ಳುವುದು.

- ನಿಮ್ಮ ಬಳಿಗೆ ಓರ್ವ ವಿದ್ಯಾರ್ಥಿಯನ್ನು ಕರೆದು 'ಕಥೆ ಉಂಡೆ'ಯಿಂದ ಕೆಲವು ಪದಗಳನ್ನು ಗಟ್ಟಿಯಾಗಿ ಓದಲು ಹೇಳುವುದು. ಕಥೆ ಯಾವುದರ ಬಗ್ಗೆ ಇರಬಹುದು ಎಂದು ಊಹಿಸುವಂತೆ ಹೇಳುವುದು.

- ಮುದುರಿದ ಪುಟವನ್ನು ತೆರೆದು ಕಥೆಯ ಭಾಗವನ್ನು ಓದುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಮತ್ತು ಉಳಿದ ವಿದ್ಯಾರ್ಥಿಗಳಿಗೆ ಕೊನೆಯನ್ನು ಊಹಿಸುವಂತೆ ಅಥವಾ ಜೋರಾಗಿ ಹೇಳುವಂತೆ, ಇಲ್ಲವೇ ಬರೆಯುವಂತೆ ಹೇಳುವುದು.

ಫಲಿತಾಂಶ: ತಮ್ಮ ಓದುವ ಕೌಶಲವನ್ನು ಸುಧಾರಿಸಿಕೊಂಡು ಒಂದು ಕಥೆಯನ್ನು ಊಹಿಸುವುದನ್ನು ಮತ್ತು ಅರ್ಥ ಮಾಡಿಕೊಳ್ಳುವುದನ್ನು ವಿದ್ಯಾರ್ಥಿಗಳು ಕಲಿತುಕೊಳ್ಳುತ್ತಾರೆ.



**ಚಿತ್ರ 2. ಕಥೆಯ ಉಂಡೆ**

## ವ್ಯಾಕರಣ ಸಾಮರ್ಥ್ಯ

ವ್ಯಾಕರಣದಲ್ಲಿ ನಾಮವಾಚಕಗಳು (parts of speech) "ವಾಕ್ಯರಚನೆಯ ಅಡಿಪಾಯ"ವೆಂದು ಪರಿಗಣಿಸಲ್ಪಟ್ಟಿವೆ. ಇಂಗ್ಲಿಷ್ ಭಾಷೆಯಲ್ಲಿ ವ್ಯಾಕರಣಬದ್ಧವಾಗಿ ಸರಿಯಿರುವ ವಾಕ್ಯ ರಚನೆ ಮಾಡಲು, ಇವುಗಳಲ್ಲಿ ಕೆಲವನ್ನಾದರೂ ಮಕ್ಕಳು ಅರಿತಿರಬೇಕು.

ಚಟುವಟಿಕೆ: ಕಥೆ ಲಕೋಟೆ
ಉದ್ದೇಶ: ನಾಮವಾಚಕಗಳನ್ನು ಸರಿಯಾಗಿ ಗುರುತಿಸಿ ಬಳಸಲು ವಿದ್ಯಾರ್ಥಿಗಳಿಗೆ ನೆರವಾಗುವುದು

ಸಾಮಗ್ರಿಗಳು: ಕಥೆಯೊಂದರ ಪದಗಳನ್ನು ಬರೆದಿರುವ ಕಾಗದದ ಚೂರುಗಳು, ಲಕೋಟೆಗಳು.

- ವಿಧಾನ: ತರಗತಿಗೆ ಒಂದು ಕಥೆ ಹೇಳುವುದು ಮತ್ತು ಅದರ ಮುದ್ರಿತ ಪ್ರತಿಗಳನ್ನು ಮಾಡಿಟ್ಟುಕೊಳ್ಳುವುದು.
- ನಾಮಪದ, ಸರ್ವನಾಮ, ಕ್ರಿಯಾಪದ, ಗುಣವಾಚಕಗಳನ್ನು ಪಠ್ಯದಿಂದ ಕತ್ತರಿಸಿ ಮತ್ತು ಅವುಗಳನ್ನು ಬೇರೆಬೇರೆ ಲಕೋಟೆಗಳಲ್ಲಿ ಹಾಕಿಡುವುದು.
- ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಮತ್ತು ಪ್ರತಿ ಗುಂಪಿಗೂ ವಾಕ್ಯ ರಚನೆ ಮಾಡಲು ಲಕೋಟೆಗಳ ಕಟ್ಟುಗಳನ್ನು ಕೊಡುವುದು.
- ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸರಿಯಾದ ವಾಕ್ಯರಚನೆ ಮಾಡುವ ಗುಂಪು ಅವುಗಳನ್ನು ತರಗತಿಗೆ ಓದುವ ಅವಕಾಶ ಪಡೆದುಕೊಳ್ಳುತ್ತದೆ.
- ಗ್ರಹಿಕೆಯನ್ನು ಮೌಲ್ಯಮಾಪನ ಮಾಡಲು ಇದರ ಅನುಸರಣೆಯ ಭಾಗವಾಗಿ, ಕಥೆಯಿಂದ ಕೆಲವು ಪದಗಳು ಅಥವಾ ಪದಗುಚ್ಛಗಳನ್ನು ಮೂಕಾಭಿನಯದ ಮೂಲಕ ತೋರಿಸುವಂತೆ ಹೇಳುವುದು. ಉಳಿದವರು ಸರಿಯಾದ ಉತ್ತರ ಹೇಳಬೇಕು.

ಫಲಿತಾಂಶ : ಕಥೆಯನ್ನು ಕೇಳುವುದರ ಮೂಲಕ ಮತ್ತು ಗುಂಪು ಆಟವನ್ನು ಆಡುವುದರ ಮೂಲಕ ವ್ಯಾಕರಣವನ್ನು ಸರಿಯಾಗಿ ಬಳಕೆ ಮಾಡುವುದನ್ನು ವಿದ್ಯಾರ್ಥಿಗಳು ಕಲಿತುಕೊಳ್ಳುತ್ತಾರೆ.

## ಒಳನೋಟಗಳು

ಮಕ್ಕಳಲ್ಲಿ ಸಾಕ್ಷರತೆ ಮತ್ತು ಇತರ ಸಾಮರ್ಥ್ಯಗಳನ್ನು ಬೆಳೆಸಲು ಈ ಲೇಖನದಲ್ಲಿ ವಿವರಿಸಿರುವ ಚಟುವಟಿಕೆಗಳನ್ನು ಅರುಣಾಚಲಪ್ರದೇಶ, ಅಸ್ಸಾಂ, ನಾಗಾಲ್ಯಾಂಡ್ ಮತ್ತು ಒಡಿಶಾಗಳ ಶಾಲೆಗಳಲ್ಲಿ ಪ್ರಯತ್ನಿಸಲಾಗಿದೆ. ಕೆಲವು ಶಾಲೆಗಳ ತರಗತಿಗಳಲ್ಲಿ ವಿದ್ಯಾರ್ಥಿಗಳ ಉತ್ಸಾಹ ಮತ್ತು ನಿರ್ವಹಣೆ ಸುಧಾರಿಸಿದೆಯಲ್ಲದೆ ಅವರ ಗ್ರಹಿಕೆ, ನಿರೂಪಣೆ, ಮತ್ತೆ ಕಥೆ ಹೇಳುವಿಕೆ ಮತ್ತು ಶಿಕ್ಷಕರ ಸಹಾಯದಲ್ಲಿ ತಮ್ಮದೇ ಸ್ವಂತ ಕಥೆ ಬರೆಯುವ ಸಾಮರ್ಥ್ಯವೂ ವೃದ್ಧಿಸಿದೆ.

ಈ ಕಥಾ ಚಟುವಟಿಕೆಯಲ್ಲಿರುವ ವಿನೋದದ ಅಂಶಗಳು ಪುಟ್ಟ ಮಕ್ಕಳನ್ನು ಉತ್ತಮವಾಗಿ ಮತ್ತು ಶೀಘ್ರವಾಗಿ ಕಲಿಯುವಂತೆ ಪ್ರೇರೇಪಿಸಿದೆ. ತರಗತಿಯಲ್ಲಿ ಸೃಜನಾತ್ಮಕವಾಗಿ ಕಥೆಗಳನ್ನು ಬಳಸುವಂತೆ ಶಿಕ್ಷಕರನ್ನು ಕೂಡಾ ಈ ಮಕ್ಕಳು ಪ್ರೇರೇಪಿಸಿದ್ದಾರೆ. ಇದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಂಡಿದ್ದಾರೆ. ಇದು ಭಾಷಾ ತರಗತಿಗಳು ಸಾಕಷ್ಟು ವಿನೋದಮಯ ಮತ್ತು ಬೋಧಪ್ರದವಾಗಿರುವಂತೆ ಒಂದು ಆಸಕ್ತಿಯ ಚಟುವಟಿಕೆಯಾಗಿ ರೂಪುಗೊಂಡಿತ್ತು.

**ಕೊನೆ ಟಿಪ್ಪಣಿಗಳು**


i The role of storytelling on language learning: A literature review. Semantic Scholar. https://www.semanticscholar.org/paper/The-role-of-storytelling-on-language-learning%3A-A-Lucarevschi/6afa2c67e6b53337ff4b833d975b6939ec3650e6

ii Why is storytelling important to children? BBC Teach. https://www.bbc.co.uk/teach/teach/why-is-storytelling-important-to-children/zvqcnrd





**ನಬನಿತಾ ದೇಶಮುಖ್** ಅವರು ಓರ್ವ ಶಿಕ್ಷಕಿ, ಶಿಕ್ಷಕರ–ಶಿಕ್ಷಕಿ ಮತ್ತು ಮಕ್ಕಳ ಕಥೆಗಳು, ಪ್ರಾಸಪದ್ಯಗಳ ಲೇಖಕಿ. ಇವರು ಈಶಾನ್ಯ ಭಾರತದ ಶಾಲೆಗಳು ಮತ್ತು ಸಮುದಾಯಗಳ ಜೊತೆಗೆ ಶಿಕ್ಷಣದ ಮೇಲೆ ವಿಸ್ತೃತವಾಗಿ ಕೆಲಸ ಮಾಡುತ್ತಿದ್ದಾರೆ. ಓದುವುದು, ಚಿತ್ರಕಲೆ, ಕಸೂತಿ ಕಲೆ ಮತ್ತು ಕ್ರೀಡೆ ಇವರ ಹವ್ಯಾಸಗಳು. ಅವರನ್ನು deshmukh.nitu@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಸ್ಮಿತಾ ಭಟ್** | ಪರಿಶೀಲನೆ: **ನಾಗಮಣಿ ಎಸ್. ಎನ್.**

# ಧಾನಿಯ ಮೂವರು ಮಿತ್ರರು | ತರಗತಿಯಲ್ಲಿ ಕಥೆ

ಅನುಜಾ ಹಲ್ದಾರ್

ಕಥೆಗಳಲ್ಲಿ ನಡೆಯುವ ಸಂಗತಿಗಳಲ್ಲಿ ಮಕ್ಕಳು ಸಕ್ರಿಯವಾಗಿ ಭಾಗವಹಿಸಲು ಮತ್ತು ಕಥೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರೆ, ಕಥೆಗಳು ಸಾಮಾನ್ಯವಾಗಿ ಎಲ್ಲ ವಯೋಮಾನದ ಮಕ್ಕಳನ್ನು ಆಕರ್ಷಿಸುತ್ತವೆ. ಶಿಕ್ಷಕರಿಗೂ ಕೂಡ ಇದು ವಿವಿಧ ಕ್ಷೇತ್ರಗಳ ವಿಕಾಸ ಹಾಗೂ ಕಲಿಕಾ ಫಲಿತಾಂಶವನ್ನು ತಲುಪಲು ಇರುವ ಸಾಧನವಾಗಬಹುದು. ನನ್ನ ಆರಂಭಿಕ ಅನುಭವವನ್ನೇ ಹೇಳುವುದಾದರೆ, ಒಂದು ಮತ್ತು ಎರಡನೇ ತರಗತಿಯ ಮಕ್ಕಳಿಗೆ ಕಥೆ ಹೇಳುವ ಪ್ರಯತ್ನ ಯಶಸ್ವಿಯಾಗಿರಲಿಲ್ಲ. ಏಕಾಗ್ರತೆಯ ಕೊರತೆ ಮತ್ತು ಕೆಲ ನಿಮಿಷಗಳಲ್ಲಿಯೇ ಮಕ್ಕಳು ಕಥೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದರು. ಮಕ್ಕಳು ಕಥೆಯಲ್ಲಿನ ನಾನಾ ಪಾತ್ರಗಳು ಮತ್ತು ಅವುಗಳ ಭಾವನೆಗಳ ಜೊತೆ ಹೆಚ್ಚು ನಂಟು ಹೊಂದಿರಬೇಕೇ ವಿನಾ ಅವರ ಜ್ಞಾನವನ್ನು ಮೌಲ್ಯಮಾಪನ ಮಾಡುವಂತಹ ಪ್ರಶ್ನೆಗಳನ್ನು ಕೇಳಬಾರದು ಎಂಬುದನ್ನು ನಾನು ಕಲಿತುಕೊಂಡೆ. ಆರಂಭದಲ್ಲಿ ಪ್ರತಿ ಪುಟಕ್ಕೂ ಕಥೆಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದೆ. ಅದು ಕಥೆಯ ಜೊತೆಗಿನ ಸಂಪರ್ಕಕ್ಕೆ ತೊಡಕಾಗುತ್ತಿತ್ತು ಮತ್ತು ಅದು ಮಕ್ಕಳ ಆಸಕ್ತಿಗೆ ಭಂಗ ತರುತ್ತಿತ್ತು. ಹಾಗಾಗಿ ನಾನು ಆ ವಿಧಾನವನ್ನು ಬದಲಿಸಿದೆ. ನಟನೆ ಮಾಡುತ್ತಾ, ಧ್ವನಿಯ ಏರಿಳಿತ ಮಾಡುತ್ತಾ, ಹೆಚ್ಚೇನೂ ಪ್ರಶ್ನೆಗಳನ್ನು ಕೇಳದೆ ಕಥೆಗಳನ್ನು ಹೇಳಲು ಶುರುಮಾಡಿದಾಗ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿಯಿಂದ ಹಾಗೂ ಏಕಾಗ್ರತೆಯಿಂದ ಕಥೆ ಕೇಳಲು ಆರಂಭಿಸಿದ್ದನ್ನು ಗಮನಿಸಿದೆ. ಅದೇ ರೀತಿ ಕಥೆ ಹೇಳುವ ತರಗತಿಗಳಿಗೆ ಅಂಗನವಾಡಿ ಕೇಂದ್ರಗಳ ಮಕ್ಕಳನ್ನು (3ರಿಂದ 5 ವರ್ಷ ವಯೋಮಾನ) ಕೂಡ ತೊಡಗಿಸಿಕೊಳ್ಳಬಹುದು ಎಂದು ಊಹೆ ಕೂಡ ಮಾಡಿರಲಿಲ್ಲ. ಆದರೆ ಮಕ್ಕಳ ಜೊತೆಗಿನ ವೃತ್ತದ ಸಮಯದ (circle time) ಕಥೆ ಹೇಳಲು ಶುರುಮಾಡಿದಾಗ ಅವರು ಅತ್ಯಂತ ಕುತೂಹಲದಿಂದ ಕೇಳಿದ್ದು ಮಾತ್ರವಲ್ಲದೆ ಕಥೆ ಮುಗಿದ ಬಳಿಕ ಅದರ ಪಾತ್ರಗಳನ್ನು ಚಿತ್ರ ಬಿಡಿಸಿ ತೋರಿಸಿದ್ದು ವಿಶೇಷವಾಗಿತ್ತು. ಅವರು ಆ ಕಥೆಯನ್ನು ತಮ್ಮದೇ ಆದ ಮಾತುಗಳಲ್ಲಿ, ತಮ್ಮ ಮಾತೃಭಾಷೆಯಲ್ಲಿ ಅಥವಾ ಚಿತ್ರಗಳ ಮೂಲಕ ವಿವರಿಸುತ್ತಿದ್ದರು. ಮಕ್ಕಳು ಜಗಳ ಮಾಡುತ್ತಿದ್ದಾಗ, ಗಲಾಟೆ ಮಾಡುವ ಸಂದರ್ಭದಲ್ಲಿ ಅಥವಾ ಕೊಟ್ಟ ಕೆಲಸವನ್ನು ಮಾಡದೇ ಇದ್ದಾಗ ಕಥೆ ಒಂದು ಸಾಮಾನ್ಯ ಬೋಧನ ವಿಧಾನವಾಗಿ ಸಹಾಯಕ್ಕೆ ಬರುತ್ತದೆ. ನನ್ನ ಪಾಠ ಯೋಜನೆಯು ತರಗತಿಯಲ್ಲಿ ಯಶಸ್ವಿಯಾಗದಿದ್ದಾಗ, ಪಾಠವನ್ನು ಮಕ್ಕಳು ಆಸಕ್ತಿಯಿಂದ ಕೇಳದೇ ಇದ್ದಾಗ ಕಥೆ ಹೇಳುವುದಕ್ಕಿಂತ ಉತ್ತಮ ಕಾರ್ಯತಂತ್ರ ಇನ್ನೊಂದಿಲ್ಲ. ಇದು ಅಂಗನವಾಡಿ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಕೂಡ ಬಹು ಚೆನ್ನಾಗಿ ಕಾರ್ಯರೂಪಕ್ಕೆ ಬಂದಿದೆ.

ಓದುವುದರಲ್ಲಿ ಹೆಚ್ಚು ಆಸಕ್ತಿ ತೋರದಿದ್ದ ಮಕ್ಕಳು ಕ್ರಮೇಣ ಗ್ರಂಥಾಲಯಕ್ಕೆ ಹೋಗತೊಡಗಿದರು ಮತ್ತು ಕಥೆ ಹೇಳಿ ಎಂದು ನನಗೆ ದುಂಬಾಲು ಬೀಳುವುದನ್ನು ಗಮನಿಸಿದೆ. ನಾನು ಕಥೆ ಹೇಳುವ ಕ್ರಮ ಕೂಡ ಎಷ್ಟು ಮುಖ್ಯವೆಂಬುದನ್ನು ಕಲಿತೆ. ಹಾಗಾಗಿ ಕಥೆ ಹೇಳುವವರು ಈ ಕೆಳಗಿನ ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು:

- ಧ್ವನಿಯ ಏರಿಳಿತ ಮತ್ತು ರಾಗವಾಗಿ ಓದುವ ಕಲೆಯನ್ನು ಮೈಗೂಡಿಸಿಕೊಳ್ಳುವುದು
- ಕಥೆಯ ಭಾವಕ್ಕೆ ತಕ್ಕಂತೆ ಆಪ್ತ ಅಭಿನಯ ಮಾಡುವುದು
- ಮಕ್ಕಳಿಗೆ ಆಸಕ್ತಿ ಮೂಡಿಸುವಂತಹ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುವುದು
- ಕಥೆ ಹೇಳುವ ಮುನ್ನ ಯೋಜನೆ ಮತ್ತು ಸಾಕಷ್ಟು ಬಾರಿ ಸಿದ್ಧತೆ ಮಾಡಿಕೊಳ್ಳುವುದು
- ಸೂಕ್ತವಾದ ಬೋಧನ ಕಲಿಕೆಯ ಸಾಮಗ್ರಿಗಳನ್ನು ಬಳಸುವುದು
- ಕಥೆ ಹೇಳುವ ಮೊದಲು ಅಭ್ಯಾಸ ಮಾಡುವುದು

ನನ್ನ ಪ್ರಕಾರ ಕಥೆ ಹೇಳುವಾಗ, ಮಕ್ಕಳಿಗೆ ವಿಭಿನ್ನವಾಗಿ ಮತ್ತು ಸ್ವತಂತ್ರವಾಗಿ ಯೋಚಿಸಲು ಅವಕಾಶ ಮಾಡಿಕೊಡಬೇಕು. ವಿಭಿನ್ನ ಅಭಿಪ್ರಾಯ ಹಾಗೂ ಅನಿಸಿಕೆಗಳನ್ನು ಮಂಡಿಸಲು ಅವಕಾಶ ಮತ್ತು ಉತ್ತೇಜನ ನೀಡಬೇಕು. ಉದಾಹರಣೆಗೆ ಕಥೆಯ ಅಂತ್ಯವನ್ನು ಊಹಿಸಿ ವಿವರಿಸಲು ಮಕ್ಕಳಿಗೆ ಹೇಳುವುದು.

## ಬಿಗ್ ಬುಕ್ ಸ್ಟೋರಿ: ಧಾನಿ ಕೆ ತೀನ್ ದೋಸ್ತ್

ಒಂದು ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಧಾನಿ ಕೆ ತೀನ್ ದೋಸ್ತ್[1] ಎಂಬ ಬಿಗ್ ಬುಕ್[2]ನಿಂದ ಕಥೆಯ ಒಂದು ಭಾಗವನ್ನು ಓದಿದ, ನಂತರ ಕಥೆಯಲ್ಲಿ ಕಾಗೆಗೆ ಏನಾಗಿರಬಹುದು ಎಂಬುದನ್ನು ಊಹಿಸಲು ಹೇಳಿದೆ. (ಮಕ್ಕಳು ಪುಸ್ತಕದಲ್ಲಿರುವ ಚಿತ್ರವನ್ನು ನೋಡಿ ತಮ್ಮ ಕಲ್ಪನೆ ಮತ್ತು ಕಾರಣಗಳನ್ನು ತಿಳಿಸಬೇಕಾಗಿತ್ತು). ಮಕ್ಕಳು ಕುತೂಹಲಿಗಳಾಗಿದ್ದರು ಮತ್ತು ಅವರಿಗೆ ತುಂಬಾ ಪ್ರಶ್ನೆಗಳಿದ್ದವು. ಉದಾ: ಪ್ರಾಣಿಗಳು ಎಲ್ಲಿಗೆ ಹೋದವು? ಧಾನಿ ಯಾಕೆ ಬೇಸರಗೊಂಡಿದ್ದಾನೆ? ಇತ್ಯಾದಿ.

ಈ ಬಗ್ಗೆ ಆಲೋಚಿಸಿ ತಿಳಿಸುವಂತೆ ಅವರಿಗೆ ಹೇಳಿದೆ. ಅವರು ಅವರದೇ ಆದ ರೀತಿಯಲ್ಲಿ ಕಥೆಯನ್ನು ಕಟ್ಟುತ್ತಿರುವುದನ್ನು ನಾನು ನೋಡಿದೆ ಮತ್ತು ನಾನು ನಟನೆ ಮತ್ತು ಸನ್ನೆಯ ಮೂಲಕ ಕಥೆ ಹೇಳುವುದನ್ನು ಮುಂದುವರಿಸಿದೆ. ಆಗ ಒಬ್ಬ ವಿದ್ಯಾರ್ಥಿ ಹೇಳಿದ, 'ಕಾಗೆಗೆ ಅಪಘಾತವಾಗಿ ಅದರ ಒಂದು ಕಾಲು ಮುರಿದು ಹೋಯಿತು, ಅದಕ್ಕಾಗಿಯೇ ಜೋರಾಗಿ ಅಳಲು ಶುರುಮಾಡಿತು.' ಇನ್ನೊಬ್ಬ ವಿದ್ಯಾರ್ಥಿನಿ ಹೇಳಿದಳು: 'ಕಾಗೆಗೆ ಹಸಿವಾಗಿದೆ, ಅದಕ್ಕಾಗಿ ಅಳುತ್ತಿದೆ'. ಮತ್ತೊಬ್ಬರು ಸೇರಿಸಿದರು; 'ಕಾಗೆ ಹಾರುತ್ತಿದ್ದಾಗ ಬಿಸಿಲಿನ ತಾಪ ತಾಳದೆ ಕೆಳಗೆ ಬಿತ್ತು.' ಎಂದು. ಒಂದೇ ಚಿತ್ರವನ್ನು ನೋಡಿ ಅವರು ಬೇರೆಬೇರೆ ರೀತಿಯಲ್ಲಿ ಆಲೋಚನೆ ಮಾಡಿದ್ದು ನನಗೆ ತುಂಬಾ ಅಚ್ಚರಿಯನ್ನುಂಟು ಮಾಡಿತು. ಅದನ್ನು ಶ್ಲಾಘಿಸಿದ ನಾನು ಆಗ ಶಿಕ್ಷಕಿಯಾಗುವುದಕ್ಕಿಂತ ಒಬ್ಬ ಸುಗಮಕಾರಳಾಗಿ ಕಾರ್ಯ-ನಿರ್ವಹಿಸಿದೆ. ಶಾಲಾಪೂರ್ವ ಶಿಕ್ಷಣದ ಬಹುಮುಖ್ಯ ಉದ್ದೇಶವೆಂದರೆ ಮಕ್ಕಳು ಪರಿಣಾಮಕಾರಿ ಸಂವಹನ-ಕಾರರಾಗಬೇಕು ಎನ್ನುವುದು. ಇದನ್ನು ಕಥೆ ಹೇಳುವಾಗ ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡುವುದರಿಂದ ಸಾಧಿಸಬಹುದು. ಇದನ್ನೇ ಮುಂದೆ, ಒಬ್ಬ ವ್ಯಕ್ತಿಯನ್ನು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವ, ಸ್ವತಂತ್ರ ವಿಚಾರಶಕ್ತಿಯುಳ್ಳ, ಯಾವುದೇ ವಿಚಾರವನ್ನು ತರ್ಕವಿಲ್ಲದೆ ಒಪ್ಪಿಕೊಳ್ಳದಿರುವಂತೆ, ಸ್ವತಂತ್ರ ಚಿಂತನೆಯುಳ್ಳವನನ್ನಾಗಿ ಮಾಡುವ ಶಿಕ್ಷಣದ ವಿಶಾಲ ಗುರಿಗೆ ಸಂಬಂಧ ಕಲ್ಪಿಸಬಹುದು.

## ಕಥೆ ಹೇಳುವ ಪರಿಣಾಮಕಾರಿ ವಿಧಾನ:

ಚಿಕ್ಕ ವಯಸ್ಸಿನ ಮಕ್ಕಳಿಗೆ ಪರಿಣಾಮಕಾರಿಯಾಗಿ ಕಥೆ ಹೇಳುವ ಬೋಧನ ವಿಧಾನವಾಗಿ ಕಥೆಗಳು ಹಾಗೂ ಕಥೆ ಪುಸ್ತಕಗಳನ್ನು ಬಳಸುವಾಗ ಈ ಕೆಳಗಿನ ಸಂಗತಿಗಳನ್ನು ಮನಸ್ಸಿನಲ್ಲಿಟ್ಟು-ಕೊಳ್ಳಬೇಕು:

## ಕಥೆ ಪುಸ್ತಕಗಳ ಆಯ್ಕೆ:

- ಕಥೆ ಪುಸ್ತಕದಲ್ಲಿ ಹೆಚ್ಚು ಚಿತ್ರಗಳಿರಬೇಕು ಮತ್ತು ಕಡಿಮೆ ಪಠ್ಯವಿರಬೇಕು.
- ಆ ಚಿತ್ರಗಳು ಹೊಳೆಯುವಂತೆ, ವರ್ಣರಂಜಿತವಾಗಿ ಆಕರ್ಷಿಸುವಂತಿರಬೇಕು ಹಾಗೂ ಮಕ್ಕಳನ್ನು ಅದರಲ್ಲಿ ತೊಡಗಿಸಿಕೊಳ್ಳುವಂತಿರಬೇಕು.
- ಮಕ್ಕಳಿಗೆ ಆಸಕ್ತಿ ಮೂಡಿಸುವ ಪ್ರಾಣಿಗಳು, ಪ್ರಕೃತಿ ಇತ್ಯಾದಿ ಪಾತ್ರಗಳು ಹಾಗೂ ಸನ್ನಿವೇಶಗಳು ಕಥೆಗಳಲ್ಲಿ ಇರಬೇಕು.
- ಕಥೆ ಪುಸ್ತಕದಲ್ಲಿನ ಪಠ್ಯ ಮತ್ತು ಚಿತ್ರಗಳು ಒಂದಕ್ಕೊಂದು ತಾಳೆಯಾಗುವ ರೀತಿಯಲ್ಲಿರಬೇಕು. ಇದರಿಂದ ಮಕ್ಕಳಿಗೆ ಮುದ್ರಣದ ಬಗ್ಗೆ ಅರಿವು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.
- ಮಕ್ಕಳ ಏಕಾಗ್ರತೆಯ ಅವಧಿ ಕಡಿಮೆಯಿರುವ ಕಾರಣ ಕಥೆಗಳು ಹೆಚ್ಚು ದೀರ್ಘವಾಗಿರಬಾರದು.

ಕಥೆಯ ಭಾಷೆ ಸರಳವಾಗಿರಬೇಕು. ಉದಾಹರಣೆಗೆ ಕಥೆಯ ಪಠ್ಯವು ಪ್ರಾಸಬದ್ಧವಾಗಿದ್ದರೆ ಅದನ್ನು ನೆನಪಿಟ್ಟುಕೊಳ್ಳಲು ಮತ್ತು ತರಗತಿಯಲ್ಲಿ ಪುನರುಚ್ಚರಿಸಲು ಸುಲಭವಾಗುತ್ತದೆ. ಇದರಿಂದ ಮೌಖಿಕ ಭಾಷೆ ಸುಧಾರಿಸುತ್ತದೆ ಮತ್ತು ಏಕಾಗ್ರತೆಯ ಅವಧಿ ಹೆಚ್ಚುತ್ತದೆ.

## ಕಥೆ ಹೇಳಿದ ಬಳಿಕ

- ಪ್ರತಿಯೊಂದು ಕಥೆ ಹೇಳುವ ತರಗತಿ ಮುಗಿದ ಬಳಿಕ ಕಥೆಗೆ ಸಂಬಂಧಿಸಿದಂತೆ ಮುಕ್ತವಾದ ಚರ್ಚೆ ನಡೆಸುವುದು ಸೂಕ್ತ. ಇದರಿಂದ ಮಕ್ಕಳು ಕಥೆಯನ್ನು ಹೇಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಮಕ್ಕಳು ತಮ್ಮ ಅಭಿವ್ಯಕ್ತಿ ಮತ್ತು ಯೋಚನೆಯನ್ನು ಮೌಖಿಕವಾಗಿ ಮತ್ತು ಲಿಖಿತವಾಗಿ/ ಚಿತ್ರದ ಮೂಲಕ ತಿಳಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಕಥೆ ಹೇಳುವಾಗ ಮಧ್ಯೆಮಧ್ಯೆ ಪ್ರಶ್ನೆಗಳನ್ನು ಕೇಳದಿರುವುದು ಉತ್ತಮ, ಏಕೆಂದರೆ, ಅದು ಕಥೆಯ ಓಘಕ್ಕೆ ಅಡ್ಡಿಯುಂಟು ಮಾಡುತ್ತದೆ. ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದೊಂದಿಗೆ ನಂಟು ಹೊಂದಲು ಅವಕಾಶ ಕಲ್ಪಿಸುವ ರೀತಿಯಲ್ಲಿ ಮುಕ್ತ ಸ್ವರೂಪದ ಪ್ರಶ್ನೆಗಳನ್ನು ಕೇಳಬೇಕು. ಉದಾಹರಣೆಗೆ, ಈ ಕಥೆಯನ್ನು ಓದಿದ ಬಳಿಕ ನಾನು ಈ ಪ್ರಶ್ನೆಗಳನ್ನು ಕೇಳಿದೆ; ನಿಮಗೂ ಧಾನಿಗಿರುವಂತೆ ಪ್ರಾಣಿ ಗೆಳೆಯರಿದ್ದಾರೆಯೇ? ಹೌದಾದರೆ, ಅಂತಹ ಪ್ರಾಣಿಗಳು ಯಾವುವು? ಆ ಪ್ರಾಣಿ ಏನನ್ನು ತಿನ್ನಲು ಇಷ್ಟಪಡುತ್ತದೆ? ಇಂತಹ ಪ್ರಶ್ನೆಗಳು ಮಕ್ಕಳನ್ನು ನೈಜ ಜಗತ್ತಿನೊಂದಿಗೆ ಸಂಪರ್ಕ ಹೊಂದಲು, ಮಾತನಾಡಲು, ಸಮಸ್ಯೆಗಳನ್ನು ಪರಿಹರಿಸಲು, ಪ್ರಶ್ನೆಗಳನ್ನು ಕೇಳಲು, ಮಾಹಿತಿಗಳನ್ನು ಹಂಚಿಕೊಳ್ಳಲು, ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು, ಪರ್ಯಾಲೋಚಿಸಲು ಕಲಿಸುತ್ತದೆ ಮತ್ತು ಅಸ್ತಿತ್ವದಲ್ಲಿರುವ ಜ್ಞಾನ ಮತ್ತು ಕೌಶಲಗಳ ಜೊತೆ ಸಂಯೋಜಿಸಲು ಅವರನ್ನು ಸಮರ್ಥರನ್ನಾಗಿಸುತ್ತದೆ.

## ಕುತೂಹಲ ಮತ್ತು ಆಸಕ್ತಿ ಹುಟ್ಟಿಸುವ ಬಗೆ

ಚಿತ್ರಗಳಿರುವ ಕಾರ್ಡ್‌ಗಳನ್ನು ಬಳಸುವುದು, ಬಿಗ್ ಬುಕ್ ಪುಸ್ತಕಗಳು, ಗೊಂಬೆಗಳನ್ನು ಅಂಟಿಸುವುದು ಮುಂತಾದ ನಾನಾ ರೀತಿಯ ಕಥೆ ಹೇಳುವ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಪ್ರಶ್ನೆಗಳಿಗೆ ಉತ್ತರ ಹೇಳುವುದು ಅಥವಾ ಕಥೆಯನ್ನು ಊಹಿಸುವುದು ಮುಂತಾದ ಸೃಜನಾತ್ಮಕ ಸ್ವಯಂ ಅಭಿವ್ಯಕ್ತಿಗೆ ಅವಕಾಶ ನೀಡುವುದು. ಚಿತ್ರ ಬಿಡಿಸುವುದು, ಅಥವಾ ಕಲಿಕೆಯ ಉದ್ದೇಶಗಳನ್ನು (Learning Objectives- LOs) ಹೊಂದಿದ ಪಾತ್ರಾಭಿನಯದ ಮೂಲಕ ಮೌಖಿಕವಾಗಿ, ಅಭಿನಯ, ದೃಶ್ಯ ಕಲೆಯ ಮೂಲಕ ವ್ಯಕ್ತಪಡಿಸಿದ ಮತ್ತು ಪ್ರತಿನಿಧಿಸಿದ ಚಿಂತನೆಗಳು, ಕಲ್ಪನೆ, ಭಾವನೆಗಳನ್ನು (ಸಂಗೀತ, ಕಲೆ, ನೃತ್ಯ,

ನಾಟಕದಂತಹ ವಿವಿಧ ಮಾಧ್ಯಮಗಳನ್ನು ಬಳಸಿ) ಒಳಗೊಂಡಿವೆ. ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಿಕೊಳ್ಳಲು ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಶ್ನೆ ಕೇಳುವ, ಅಭಿನಯದ, ಪದಗಳ ಧ್ವನಿಯ ಪುನರುಚ್ಚಾರದಂತಹ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಮಕ್ಕಳ ಸ್ವಯಂ ಅಭಿವ್ಯಕ್ತಿ ಮತ್ತು ಭಾಷಾ ಬೆಳವಣಿಗೆಯು ಸುಧಾರಿಸುತ್ತದೆ. ಉದಾಹರಣೆಗೆ, ಕಥೆಯಲ್ಲಿ ಕಾಗೆಯ ಧ್ವನಿ ಕಾ ಕಾ, ಬೆಕ್ಕಿನ ಧ್ವನಿ ಮಿಯಾಂ ಮಿಯಾಂ ಇವುಗಳು ಪ್ರಾಥಮಿಕ ಧ್ವನಿವಿಜ್ಞಾನದ ಅರಿವು (phonological Awareness) ಮೂಡಿಸುವುದರೊಂದಿಗೆ ಸುತ್ತಮುತ್ತಲ ಪರಿಸರದಲ್ಲಿ ಅಂತಹ ಧ್ವನಿಗಳನ್ನು ಗುರುತಿಸುವ ಕೌಶಲಗಳನ್ನು ಬೆಳೆಸುತ್ತವೆ.

ಬೋಧನ ವಿಧಾನವಾಗಿ ಕಥೆ ಹೇಳುವುದನ್ನು ಅಳವಡಿಸಿಕೊಳ್ಳುವುದರಿಂದ ಶಿಕ್ಷಕರಿಗೆ ಒಂದೇ ಕಥೆಯನ್ನು ವಿಭಿನ್ನ ರೀತಿಯಲ್ಲಿ ಪ್ರಯೋಗಕ್ಕೆ ಒಳಪಡಿಸಲು ಅವಕಾಶ ಸಿಗುತ್ತದೆ ಮತ್ತು ವಿದ್ಯಾರ್ಥಿಗಳನ್ನು ಕೂಡ ಇನ್ನಷ್ಟು ಕಥೆಗಳನ್ನು ಸೃಷ್ಟಿಸುವಂತೆ ಹಾಗೂ ಅವರು ಉತ್ತಮ ಕಥೆ ಹೇಳುವ ಕಲೆಯನ್ನು ಕರಗತ ಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡಬಹುದು. ಕಥೆ ಹೇಳುವುದು ಕೇವಲ ಮಹತ್ವದ ಕಲಿಕಾ ಸಾಧನವಾಗಿ ಮಾತ್ರವಲ್ಲದೆ ಮಕ್ಕಳ ಯೋಗಕ್ಷೇಮದ ಉದ್ದೇಶವನ್ನೂ ಪೂರೈಸುತ್ತದೆ ಹಾಗೂ ಅಪಾರವಾದ ಖುಷಿಯನ್ನೂ ನೀಡುತ್ತದೆ.

**ಕೊನೆ ಟಿಪ್ಪಣಿ:**

1. ಧಾನಿ ಕೆ ತೀನ್ ದೋಸ್ತ್, ಸುರೇಶ್ ಸ್ವಪ್ನಿಲ್, ರೂಮ್ ಟು ರೀಡ್ ಇಂಡಿಯಾ.
2. ಬಿಗ್ ಬುಕ್ಸ್' ಓದಲು ಕಲಿಯುತ್ತಿರುವ ಚಿಕ್ಕ ಮಕ್ಕಳಿಗಾಗಿ ರೂಪಿಸಿದ ಪುಸ್ತಕಗಳು. ಇದರಿಂದ ಮಕ್ಕಳು ಮುದ್ರಿತ ಸಾಮಗ್ರಿಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುತ್ತಾರೆ ಮತ್ತು ಅವು ಅವರಿಗೆ ಸ್ವತಃ ಓದಲು ಸ್ಫೂರ್ತಿ ನೀಡುತ್ತವೆ.



**ಅನುಜಾ ಹಲ್ದಾರ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಅಸೋಸಿಯೇಟ್ ಆಗಿ (2021–22) ಕಾರ್ಯ ನಿರ್ವಹಿಸಿದವರು. ಅಲ್ಲದೆ ಇವರು ಉತ್ತರಾಖಂಡದ ಉಧಾಮ್ ಸಿಂಗ್ ನಗರದ ಖತಿಮಾದಲ್ಲಿ ಇಂಗ್ಲಿಷ್ ಹಾಗೂ ಇಸಿಇ ವಿಭಾಗದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದರು. ಇವರು ಇಂಗ್ಲಿಷ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಲಿಂಗ ಅಧ್ಯಯನ ವಿಷಯದಲ್ಲಿ ಪಿ.ಹೆಚ್.ಡಿ ಸಂಶೋಧನೆ ನಡೆಸುತ್ತಿದ್ದಾರೆ. ಇವರಿಗೆ ನಾಟಕ ಮತ್ತು ಲಿಂಗ ಅಧ್ಯಯನ ಕ್ಷೇತ್ರದಲ್ಲಿ ಅಪಾರ ಆಸಕ್ತಿ. ಅವರನ್ನು anujahalder18@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಮಂಜುನಾಥ್ ಚಾಂದ್** | ಪರಿಶೀಲನೆ: **ನಾಗಮಣಿ ಎಸ್.ಎನ್.**

# ಲೈಟ್ನಿಂಗ್ (ಬಿಗ್ಬುಕ್) | ತರಗತಿಯಲ್ಲಿ ಕಥೆ

ಕಮಲೇಶ್ ಚಂದ್ರ ಜೋಶಿ

ಶಾಲಾ ಮಕ್ಕಳು ಅಪರೂಪಕ್ಕೆ 'ಲೈಟ್ನಿಂಗ್'ನಂತಹ ಬಿಗ್‌ಬುಕ್ಸ್ (1) ಸರಣಿಯ ಪುಸ್ತಕಗಳಿಗೆ ತೆರೆದುಕೊಳ್ಳುತ್ತಾರೆ. ಇಂತಹ ವಿಷಯಗಳು ಶಾಲೆಗಳಲ್ಲಿ ಅಷ್ಟು ಸುಲಭವಾಗಿ ಲಭಿಸುವುದಿಲ್ಲ. "ಲೈಟ್ನಿಂಗ್" ಕೃತಿಯನ್ನು ಮಕ್ಕಳು ಮೊದಲ ಬಾರಿ ನೋಡಿದಾಗ ತುಂಬಾ ಉತ್ಸುಕರಾಗಿದ್ದರು, ಏಕೆಂದರೆ, ಅವರು ಅದುವರೆಗೂ ಅಷ್ಟು ದೊಡ್ಡ ಗಾತ್ರದ ಪುಸ್ತಕವನ್ನು ಓದಿರಲಿಲ್ಲ. ಬಿಗ್‌ಬುಕ್ ಸರಣಿಯ ಎಲ್ಲಾ ಬಗೆಯ ಉತ್ಕೃಷ್ಟತೆಯ ಮುದ್ರೆಗಳು ಈ ಪುಸ್ತಕದಲ್ಲಿದ್ದು, ಅದರ ವಿಷಯವು ಮಕ್ಕಳಿಗೆ ಪ್ರಸ್ತುತವಾಗಿರು-ವುದಲ್ಲದೆ, ಅವರಿಗೆ ಹೊಸ ಅನುಭವಗಳನ್ನೂ ಕೊಡುತ್ತದೆ. ಮಕ್ಕಳಿಗೆ ಓದಲು ಕಲಿಸುವ ಬೋಧನ ಕ್ರಮವನ್ನು ನಾವು ಪರಿಗಣಿಸುವಾಗ, ಮಕ್ಕಳಿಗೆ ದೃಷ್ಟಾಂತಗಳನ್ನು ಊಹಿಸಲು ಹಾಗೂ ಸಚಿತ್ರ ಮಾಹಿತಿಗಳನ್ನು ವಿವರಿಸಲು ಅವರಿಗೆ ಸಾಕಷ್ಟು ಅವಕಾಶಗಳು ಅದರಲ್ಲಿ ಸಿಗುತ್ತವೆ. ಅವುಗಳು ಬಹಳ ಆಕರ್ಷಕವಾಗಿಯೂ ಮತ್ತು ಮಗ್ನವಾಗಿಸುವಂತೆಯೂ ಇರುತ್ತವೆ. ಕೆಲವು ಶಾಲೆಗಳಲ್ಲಿ ಒಂದನೇ ಮತ್ತು ಎರಡನೇ ತರಗತಿಯ ವಿದ್ಯಾರ್ಥಿಗಳು ಈ ಪುಸ್ತಕವನ್ನು ಓದಿದಾಗ ಅವರಿಗೆ ಆದ ಅನುಭವಗಳನ್ನು ಈ ಲೇಖನದಲ್ಲಿ ಹಂಚಿಕೊಳ್ಳಲಾಗಿದೆ.

ರಣಥಂಬೋರ್ ಕಾಡುಗಳಲ್ಲಿ (ರಣಥಂಬೋರ್ ರಾಷ್ಟ್ರೀಯ ಉದ್ಯಾನವನ) ವಾಸಿಸುವ 'ಲೈಟ್ನಿಂಗ್' ಎಂಬ ಹೆಸರಾಂತ ಹೆಣ್ಣು ಹುಲಿಯ ಕಥೆ ಇದು. ಪುಸ್ತಕದ ಸಚಿತ್ರ ವಿವರಣೆಗಳನ್ನು ನೋಡಿದ ಮಕ್ಕಳು, ಕಾಡಿನಲ್ಲಿ ಒಂದು ಹಾವು, ಒಂದು ಜಿಂಕೆ, ಒಂದು ಹಕ್ಕಿ ಮತ್ತು ಒಂದು ದೇವಾಲಯ ಇದೆ ಎಂದು ತಿಳಿದುಕೊಂಡರು. ಲೈಟ್ನಿಂಗ್‌ನ ದೈನಂದಿನ ಚಟುವಟಿಕೆಗಳನ್ನೂ ಅವರು ಸಚಿತ್ರ ವಿವರಣೆಗಳ ಮೂಲಕವೇ ಅರ್ಥ ಮಾಡಿಕೊಂಡರು. ಕಾಡುಪ್ರಾಣಿಗಳ ಬಗೆಗಿನ ನಮ್ಮ ದೃಷ್ಟಿಕೋನಕ್ಕೆ ಅಂದರೆ, ಕಾಡುಪ್ರಾಣಿಗಳು ಅಪಾಯಕಾರಿ ಮತ್ತು ನಮ್ಮ ಮೇಲೆ ದಾಳಿ ಮಾಡುತ್ತವೆ ಎಂಬ- ನಮ್ಮ ದೃಷ್ಟಿಕೋನಕ್ಕೆ ಸವಾಲೆಸೆಯುವ ಜೊತೆಗೆ ಅವುಗಳ ಬಗ್ಗೆ ನಮ್ಮನ್ನು ಸಂವೇದನಶೀಲರನ್ನಾಗಿಸುವ ಕಾರಣಕ್ಕೆ ಈ ಪುಸ್ತಕವು ವಿಶಿಷ್ಟವಾಗಿದೆ. ಮನುಷ್ಯರು ಅಥವಾ ಜಾನುವಾರುಗಳ ಮೇಲೆ ಹುಲಿ ಅಥವಾ ಚಿರತೆ ದಾಳಿ ಮಾಡಿದ ವರದಿಗಳು ಉತ್ತರಾಖಂಡದ ಸುದ್ದಿಪತ್ರಿಕೆಗಳಲ್ಲಿ ಸಾಮಾನ್ಯವಾಗಿರುತ್ತವೆ. ಪರಿಣಾಮವಾಗಿ, ಹುಲಿ ಒಂದು ಅತ್ಯಂತ ಅಪಾಯಕಾರಿ ಪ್ರಾಣಿ ಎಂಬ ಕಲ್ಪನೆಯೇ ಜನರಲ್ಲಿ ಮೂಡುತ್ತದೆ. ಮಕ್ಕಳು ಅದನ್ನೇ ಕಲಿಯುತ್ತಾರೆ. ಇದು ಪ್ರಾಣಿಗಳ ಕುರಿತ ನಮ್ಮ ಸಂವೇದನಶೀಲತೆಯ ಮೇಲೆ ಪರಿಣಾಮ ಬೀರಿ, ನೈತಿಕ ಉಪದೇಶಕ್ಕೆ ಸೀಮಿತವಾಗುತ್ತದೆ.

ಪುಸ್ತಕದ ಆರಂಭದ ಕೆಲವು ಪುಟಗಳಲ್ಲಿರುವ ಚಿತ್ರಗಳು ಮತ್ತು ಟಿಪ್ಪಣಿಗಳು ಕಾಡು (ರಣಥಂಬೋರ್) ಮತ್ತು ಲೈಟ್ನಿಂಗ್‌ನ ನಡುವೆ ಇರುವ ಆಪ್ತ ನಂಟನ್ನು ಉಲ್ಲೇಖಿಸುತ್ತವೆ. ಇದು ಕಾಡು ಮತ್ತು ಹಳ್ಳಿಯ ಜನರ ನಡುವಿನ ಸಂಬಂಧವೂ ಹೌದು. ಇದು, ಕಾಡು ಮತ್ತು ಅದರಲ್ಲಿನ ಪ್ರಾಣಿ- ಪಕ್ಷಿಗಳ ಸಹಜೀವನದ ಸಂಬಂಧವನ್ನು ಕುರಿತು ಓದುಗರಿಗೆ ಸ್ಪಷ್ಟ ಚಿತ್ರಣವನ್ನು ಕಟ್ಟಿಕೊಡುವುದಷ್ಟೇ ಅಲ್ಲದೆ, ಮನುಷ್ಯರೊಂದಿಗಿನ ಸಂಬಂಧವನ್ನು ಸಹ ಹೇಗೆ ಅನಾವರಣ ಮಾಡುತ್ತದೆ ಎಂಬ ಕಲ್ಪನೆಯನ್ನು ನೀಡುತ್ತದೆ. ಈ ಸಂಬಂಧವನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಕಥೆಯು ಮುಂದುವರಿಯುತ್ತದೆ. ನಮ್ಮ ಪೂರ್ವನಿರ್ಧಾರಿತ ಕಲ್ಪನೆಗಳನ್ನು ಮತ್ತು ಪ್ರಾಣಿಗಳೊಂದಿಗಿನ ನಮ್ಮ ಸಂಬಂಧವನ್ನು ಮರುಪರಿಶೀಲಿಸುವಂತೆ, ಕೆಲವು ಕಡೆಗಳಲ್ಲಿ ಪುಸ್ತಕವು ನಮ್ಮನ್ನು ಪ್ರೇರೇಪಿಸುತ್ತದೆ.

ಮಕ್ಕಳು ಮೊದಲಿಗೆ ಪುಸ್ತಕದ ಬಗ್ಗೆ ಚರ್ಚಿಸುವಾಗ, ಲೈಟ್ನಿಂಗನ್ನು ಒಂದು ಸಿಂಹ, ಚಿರತೆ , ಹುಲಿ ಇತ್ಯಾದಿಗಳೆಂದು ಹೇಳುತ್ತಿದ್ದರು. ಮಾತುಕತೆಯ ವೇಳೆ ಹುಲಿಯ ಬಗ್ಗೆ ನಿಖರವಾದ ಗುಣಲಕ್ಷಣಗಳು ಮತ್ತು ಚಹರೆಗಳನ್ನು ವಿವರಿಸಬೇಕಾಗುತ್ತದೆ. ಲೈಟ್ನಿಂಗ್ ಕಾಡಿನಲ್ಲೆಲ್ಲಾ ಅಲೆದಾಡುತ್ತಿರುತ್ತದೆ, ಈಗ ನೀರು ಕುಡಿಯಲು ಹೋಗುತ್ತಿದೆ ಮತ್ತು 'ಈಗ ಒಂದು ಮರದ ಕೆಳಗೆ ಕುಳಿತಿದೆ' ಎಂದು ಪುಸ್ತಕ ಓದುವಾಗ ಮಕ್ಕಳಿಗೆ ಹೇಳಲಾಗಿತ್ತು. ಕಥೆಯಲ್ಲಿ ಮುಂದೇನಾಗುತ್ತದೆ ಎಂದು ಊಹಿಸಲು ಹೇಳಿದಾಗ, ಅದು ಒಂದು ಪ್ರಾಣಿಯ ಮೇಲೆ ದಾಳಿ ಮಾಡುತ್ತದೆ ಎಂದು ಮಕ್ಕಳು ಹೇಳಿದರು.

ಆದರೆ, ಲೈಟ್ನಿಂಗ್ ಒಂದು ಬಾವಿಯೊಳಗೆ ಬೀಳುವ ಮೂಲಕ ಕಥೆಗೆ ಅನಿರೀಕ್ಷಿತ ತಿರುವು ಸಿಗುತ್ತದೆ. ಏನಾಯಿತೆಂದು ಮಕ್ಕಳೆಲ್ಲಾ ಆಶ್ಚರ್ಯ ಪಡುತ್ತಾರೆ. ಎಲ್ಲವೂ ಸರಾಗವಾಗಿ ಸಾಗುತ್ತಿರುವಾಗ ಒಮ್ಮೆಲೇ ಏನಾಯಿತು, ಈ ಅನಿರೀಕ್ಷಿತ ತಿರುವಿಗೆ ಕಾರಣವೇನು ಎಂದು ಅವರಿಗೆ ಅಚ್ಚರಿಯಾಗುತ್ತದೆ. ಅವರು ಪ್ರಕಾಶಮಾನವಾದ ಚಿತ್ರಗಳನ್ನು ನೋಡಿ ಖುಷಿಪಟ್ಟಿದ್ದರು. ಆದರೆ, ಮುಂದಿನ ಚಿತ್ರ ಏಕಾಏಕಿ ಕಪ್ಪಾಗಿದೆ! ಮಕ್ಕಳ ಉತ್ಸಾಹ ಭಂಗವಾಯಿತು. ಲೈಟ್ನಿಂಗ್ ಬಿದ್ದಿದ್ದ ಬಾವಿಯೊಳಗಿನ ಚಿತ್ರವನ್ನು ನೋಡಿದಾಗ ಅವರಿಗೆ ಗಾಬರಿಯಾಯಿತು. ಆತಂಕಗೊಂಡ ಅವರು, ಅವಳು ಬದುಕಿ ಉಳಿಯುತ್ತಾಳಾ ಎಂದು ಚಿಂತಿಸಲು ಶುರು ಮಾಡಿದರು. ಚಿಂತೆ ಕಾಡಿದರೂ, ಅವಳನ್ನು ಕೊನೆಗೆ ರಕ್ಷಿಸುತ್ತಾರೆ ಎಂಬ ಆಶಾವಾದವನ್ನು ಅವರು ವ್ಯಕ್ತಪಡಿಸಿದರು. ಕಥೆಯಲ್ಲಿ, ಗ್ರಾಮಸ್ಥರೆಲ್ಲರೂ ಒಟ್ಟಾಗಿ ಸೇರಿದಾಗ ಹಾಗೂ

ಅವರಲ್ಲೊಬ್ಬ ದೂರವಾಣಿ ಕರೆ ಮಾಡಿದಾಗ ಅವರ ನಂಬಿಕೆ ನಿಜವಾಯಿತು.

ಕಥೆಯು ಹೀಗೆ ಅವರನ್ನು ತನ್ನೊಳಗೆ ತಲ್ಲೀನಗೊಳಿಸುವಂತೆ ಮಾಡಿತು. ಪುಸ್ತಕದ ಶೀರ್ಷಿಕೆಯ ಕುರಿತೂ ಅಲ್ಲೊಂದು ಚರ್ಚೆ ನಡೆಯಿತು. ಲೈಟ್ನಿಂಗ್‌ನ ಕಣ್ಣುಗಳ ಬಗ್ಗೆ ಮಕ್ಕಳ ಊಹೆಗಳು ಶುರುವಾದವು. ಬಹುಶಃ ರಾತ್ರಿ ವೇಳೆ ಲೈಟ್ನಿಂಗ್‌ನ ಕಣ್ಣು ಬೆಕ್ಕಿನ ಕಣ್ಣುಗಳಂತೆ ಹೊಳೆಯಬಹುದು– ಅದಕ್ಕಾಗಿಯೇ ಅವಳಿಗೆ ಲೈಟ್ನಿಂಗ್ ಅಂದರೆ ಮಿಂಚು ಎಂದು ಹೆಸರಿಟ್ಟಿರಬಹುದು; ಅಥವಾ ಅವಳ ಘರ್ಜನೆಗಾಗಿ ಆ ಹೆಸರು ಇಟ್ಟಿರಬಹುದು. ಮಳೆ ಬರುವಾಗ ಗುಡುಗು ಮತ್ತು ಮಿಂಚು ಕೂಡಾ ಹಾಗೇ ಅಲ್ವಾ ಇತ್ಯಾದಿ ಮಕ್ಕಳಿಗೆ ಈ ಕಥೆ ಹೇಳುವಾಗ, ಲೈಟ್ನಿಂಗ್ ಬಾವಿಗೆ ಬೀಳುವ ಸನ್ನಿವೇಶದ ಹೊತ್ತಿಗೆ ನಾನು ಮಕ್ಕಳನ್ನು ಕೇಳಿದೆ, "ಲೈಟ್ನಿಂಗ್ ಹೇಗೆ ಮೇಲೆ ಬರಬಹುದು ಎಂಬ ಬಗ್ಗೆ ನಿಮ್ಮ ಊಹೆ ಏನು?" ಎಂದು. ಮಕ್ಕಳು ತಮ್ಮದೇ ಆದ ಸ್ವಂತ ಅನುಭವಗಳ ನೆಲೆಯಲ್ಲಿ ಉಪಾಯಗಳನ್ನು ಹೇಳಿದರು. ಬಾವಿಯೊಳಗೆ ಒಂದು ಏಣಿಯನ್ನು ಇಳಿಬಿಟ್ಟು ಅವಳನ್ನು ಹೊರತರಬಹುದೆಂದು ಕೆಲವರು ಹೇಳಿದರೆ, ಕೊರೆಯುವ ಯಂತ್ರದ ಸಹಾಯದಿಂದ ಅವಳನ್ನು ಮೇಲೆತ್ತಬಹುದು ಎಂದು ಇನ್ನು ಕೆಲವರು ಸೂಚಿಸಿದರು, ಅವಳು ತನ್ನ ಪಂಜಗಳ/ಕಾಲುಗುರುಗಳ ನೆರವಿನಿಂದ ಹೊರಬರುತ್ತಾಳೆ ಎಂದು ಒಂದು ಮಗು, ಅಥವಾ ಹಗ್ಗದ ನೆರವಿನಿಂದ ಅವಳನ್ನು ಹೊರಗೆ ಎಳೆಯಬಹುದು ಎಂದು ಇನ್ನೊಂದು ಮಗು ಹೇಳಿತು. ಇನ್ನು ಕೆಲವರು, ರಕ್ಷಣಾ ತಂಡವನ್ನು ಕರೆಸುವಂತೆಯೂ, ಮತ್ತೆ ಕೆಲವರು ಪೋಲೀಸರನ್ನು ಕರೆಸುವಂತೆಯೂ ಸಲಹೆ ನೀಡಿದರು. ನಂತರ, ಗ್ರಾಮಸ್ಥರೊಬ್ಬರು ದೂರವಾಣಿ ಕರೆ ಮಾಡುವುದನ್ನು ನೋಡಿ, ಪೋಲೀಸರನ್ನು ಕರೆಸುತ್ತಿರುವುದಾಗಿ ಅವರಿಗೆ ಮನವರಿಕೆಯಾಯಿತು. ಅರಣ್ಯ ರಕ್ಷಕರು ಮತ್ತು ಅಧಿಕಾರಿಗಳನ್ನು ಕರೆಸುವುದು ಸೂಕ್ತ ಎಂದು ಕೆಲವರು ಪ್ರಸ್ತಾವಿಸಿದರು.

ನಂತರ ಕಥೆಯಲ್ಲಿ, ಇಂಜೆಕ್ಷನ್‌ನ ಗನ್ ಮೂಲಕ ಲೈಟ್ನಿಂಗ್‌ಗೆ ಅರಿವಳಿಕೆ ಮದ್ದು ನೀಡಿ ಅವಳನ್ನು ಬಾವಿಯಿಂದ ರಕ್ಷಿಸಿದ್ದನ್ನು ನೋಡಿದ ಮಕ್ಕಳಿಗೆ ಅಂತಹದೊಂದು ಸಾಧ್ಯತೆಯ ಪರಿಚಯದ ಜೊತೆಗೆ ಪ್ರಾಣಿಗಳನ್ನು ರಕ್ಷಿಸಲು ಯಾವ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತದೆ ಎಂಬುದರ ಬಗ್ಗೆ ಹೊಸ ಕಲ್ಪನೆಯೂ ಮೂಡಿತು. ಅವಳ ಪ್ರಜ್ಞೆ ತಪ್ಪಿಸಲು ಇಂಜೆಕ್ಷನ್ ನೀಡಿದ್ದು ಹೇಗೆ? ಎಲ್ಲಿ ನೀಡಲಾಯಿತು? ಆಮೇಲೆ ಅವಳನ್ನು ಹೊರತೆಗೆದದ್ದು ಹೇಗೆ? ಎಂದೆಲ್ಲಾ ಮಕ್ಕಳು ಅಚ್ಚರಿಯಿಂದ ಕಣ್ಣು ಅರಳಿಸಿಕೊಂಡು ಕುಳಿತಿದ್ದರು. ನಾವು ಕಥೆ ಮುಂದುವರಿಸಿದಂತೆ ಮಕ್ಕಳ ನಿರೀಕ್ಷೆಗಳು ಸಹ ಹೆಚ್ಚುತ್ತಿದ್ದುದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿತ್ತು.,


ಬಾವಿಯಿಂದ ಮೇಲೆತ್ತಿದ ಬಳಿಕ, ಲೈಟ್ನಿಂಗ್‌ಳನ್ನು ಚಿಕಿತ್ಸೆಗಾಗಿ ಒಂದು ವ್ಯಾನ್‌ನಲ್ಲಿ ಕರೆದೊಯ್ಯಲಾಯಿತು. ಆಗ ಮಕ್ಕಳಲ್ಲಿ ನಿರಾಳ ಭಾವ ಮೂಡಿತು. ನಾನು ಈ ಕಥೆಯನ್ನು ಓದಿದ ಶಾಲೆಯಲ್ಲಿ, ಕಥೆಯನ್ನು ಆಲಿಸಿದ ಮಕ್ಕಳು ಅದು ತುಂಬಾ ಮುದ ನೀಡಿತು ಎಂದರು. ಅಲ್ಲದೆ, "ನೀವು ನಾಳೆಯೂ ಬರುತ್ತೀರಾ?" ಎಂದು ಕೇಳಲಾರಂಭಿಸಿದರು.

ಈ ಪುಸ್ತಕ ಓದಿದಾಗ ನನಗೆ ಅನ್ನಿಸಿದ್ದೇನೆಂದರೆ, ಮುಂದೇನಾಗುತ್ತದೆ ಎಂದು ಮಕ್ಕಳು ಊಹಿಸತೊಡಗುತ್ತಾರೆ. ಮಕ್ಕಳು ಪುಸ್ತಕದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳುವುದು ಹೀಗೆಯೇ.

## ಅವಲೋಕನಗಳು

ಮಕ್ಕಳೊಂದಿಗೆ ಓದಲು ಅಥವಾ ಚರ್ಚಿಸಲು ಪುಸ್ತಕವೊಂದನ್ನು ಆಯ್ಕೆ ಮಾಡಿಕೊಳ್ಳುವಾಗ ನಾವು ಈ ಪ್ರಶ್ನೆಯನ್ನು ಕೇಳಕೊಳ್ಳಲೇಬೇಕು: 'ಈ ಪುಸ್ತಕದಲ್ಲಿ ಮಕ್ಕಳು ತಮ್ಮ ಬದುಕಿಗೆ ಅನ್ವಯಿಸಿಕೊಳ್ಳುವಂತಹ, ಅವರಿಗೆ ಬೇರೆ ದೃಷ್ಟಿಕೋನವನ್ನು ನೀಡುವಂತಹ ಅಥವಾ ಅವರಲ್ಲಿ ಹೊಸ ಆಲೋಚನೆಗಳನ್ನು ಹುಟ್ಟಿಸುವಂತಹ ವಿಶೇಷ ಸಂಗತಿಯೇನಾದರೂ ಇದೆಯೆ?' ಸಾಹಿತ್ಯವನ್ನು ಓದುವುದರಿಂದ ನಾವು 'ಹೊಸ' ಮನುಷ್ಯರಾಗುತ್ತೇವೆ; ಓದಿದ ನಂತರ ನಾವು ಮೊದಲಿನ ಆ ವ್ಯಕ್ತಿ ಅಲ್ಲವೇ ಅಲ್ಲ ಎಂಬಂತೆ ಅದು. ಯಾವುದೋ ಒಂದು ವಿಶೇಷ ಪುಸ್ತಕವು ಅವರ [ಮಕ್ಕಳ] ದೀರ್ಘಕಾಲೀನ ಸ್ಮೃತಿಯಲ್ಲಿ ಅಚ್ಚಳಿಯದಂತೆ ಊರಿಬಿಡುವ ಸಾಧ್ಯತೆ ಇರುತ್ತದೆ; ಅದನ್ನು ಮರೆಯಲು ಸಾಧ್ಯವಿಲ್ಲ ಎಂಬಂತೆ. ಮಕ್ಕಳೊಂದಿಗೆ ಪುಸ್ತಕದ 'ನಂಟು' ಬೆಳೆಸುವುದು ಎಂದರೆ, ಓದುವ ವ್ಯಕ್ತಿಯು ಒಂದು ಪುಸ್ತಕವನ್ನು ಮಕ್ಕಳಿಗೆ ಯಾವ ರೀತಿ ವಿವರಿಸಿ ಪ್ರಸ್ತುತಪಡಿಸುತ್ತಾನೆ ಎಂಬುದನ್ನು ಅವಲಂಬಿಸಿರುತ್ತದೆ.

ಕಥೆಯನ್ನು ಕೇಳಿದ ನಂತರ ಮಕ್ಕಳು ಪುಸ್ತಕದ ಬಗ್ಗೆ ತಮ್ಮದೇ ಶೈಲಿಯಲ್ಲಿ ಚಿತ್ರ ಬಿಡಿಸುವ ಮೂಲಕ ತಮ್ಮ ಭಾವವನ್ನು ಅಭಿವ್ಯಕ್ತಪಡಿಸಿದರು. ಪುಸ್ತಕಕ್ಕೆ ತಮ್ಮದೇ ಆದ ಶೀರ್ಷಿಕೆಯನ್ನೂ ಕೊಟ್ಟರು. ಹೀಗೆ ಅದು ಅವರ ಆಲೋಚನೆಗೆ ಪ್ರಚೋದನೆ ನೀಡಿತು. ಇದರೊಂದಿಗೆ, ಅವರ ಪರಿಸರದಲ್ಲಿರುವ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ಅವರು ಹೇಗೆ ನೆರವಾಗುತ್ತಾರೆ ಎಂಬ ಬಗ್ಗೆಯೂ ನಾವು ಚರ್ಚಿಸಿದೆವು. ನಾಯಿಮರಿಗಳಿಗೆ ಸಹಾಯ ಮಾಡುವ ಕುರಿತು ತಮ್ಮ ಅನುಭವಗಳನ್ನು ಅವರು ಹಂಚಿಕೊಂಡರು. ಒಟ್ಟಿನಲ್ಲಿ, ಪುಸ್ತಕದ ಪ್ರೀತಿಯನ್ನು ಬೆಳೆಸುವ ಅಂತಹ ಅವಕಾಶಗಳನ್ನು ನಿಯಮಿತವಾಗಿ ಮಕ್ಕಳಿಗೆ ಒದಗಿಸುತ್ತಿರಬೇಕು ಎಂಬುದು ನಮ್ಮ ನಂಬಿಕೆ. ಖಚಿತವಾಗಿಯೂ, ಮಕ್ಕಳಿಗಾಗಿ ಪುಸ್ತಕಗಳನ್ನು ಆಯ್ಕೆ ಮಾಡುವಲ್ಲಿ ಶಿಕ್ಷಕರು ಮಹತ್ತ್ವದ ಪಾತ್ರವನ್ನು ವಹಿಸಬೇಕು. ಒಳ್ಳೆಯ ಪುಸ್ತಕಗಳನ್ನು ಆರಿಸಲು, ಮಕ್ಕಳಿಗಾಗಿ ಉತ್ತಮ ಸಾಹಿತ್ಯ ಯಾವುದು ಎಂಬ ತಿಳುವಳಿಕೆ ಶಿಕ್ಷಕರಿಗೆ ಇರಬೇಕು. ಮತ್ತೊಂದು ಪ್ರಮುಖ ಅಂಶವೆಂದರೆ, ಮಕ್ಕಳಿಗೆ ಓದಿಸುವ ಪ್ರಕ್ರಿಯೆಯು ಅಭ್ಯಾಸದಿಂದ ಸುಧಾರಣೆಯಾಗುತ್ತದೆ. ಹೆಚ್ಚುಹೆಚ್ಚು ಓದಿದಷ್ಟೂ ಶಿಕ್ಷಕರು ಉತ್ತಮರಾಗುತ್ತಾ ಹೋಗುತ್ತಾರೆ.




ಚಿತ್ರ 1. ಎರಡನೇ ತರಗತಿಯ ವಿದ್ಯಾರ್ಥಿ ಕಥೆಯನ್ನು ಆಧರಿಸಿ ಬರೆದ ಚಿತ್ರ; ಸರ್ಕಾರಿ ಪ್ರಾಥಮಿಕ ಶಾಲೆ, ಪಕ್ಡಿಯ, ಖತೀಮಾ, ಉತ್ತರಾಖಂಡ.

### ಕೊನೆ ಟಿಪ್ಪಣಿಗಳು

1.ಓದಲು ಕಲಿಯುತ್ತಿರುವ ಚಿಕ್ಕ ಮಕ್ಕಳನ್ನು ಉದ್ದೇಶಿಸಿಯೇ ಬಿಗ್ ಬುಕ್ಸ್ ಪ್ರಕಟನೆಗಳವೆ. ಮುದ್ರಿತ ವಿಷಯಗಳೊಂದಿಗೆ ಮಕ್ಕಳ ನಂಟು ಬೆಸೆಯಲು ಈ ಪುಸ್ತಕಗಳು ಸಹಾಯ ಮಾಡುತ್ತವೆ. ಹಾಗಾಗಿ, ಅವುಗಳನ್ನು ನೋಡಲು, ಹುಡುಕಲು ಮತ್ತು ಓದಲು ಮಕ್ಕಳನ್ನು ಪ್ರೇರೇಪಿಸುತ್ತದೆ.

### ಪರಾಮರ್ಶನ


ಲೈಟ್ನಿಂಗ್ (ಬಿಗ್ ಬುಕ್) ಲೇಖಕ–ಪ್ರಭಾತ್; ಸಚಿತ್ರ ವಿವರಣೆ–ಆಲೆನ್ ಶಾ; ಜುಗ್ನೂ ಪ್ರಕಾಶನ್; ಏಕ್ತಾರಾ ಟ್ರಸ್ಟ್‌ನ ಇಂಪ್ರಿಂಟ್.
https://www.ektaraindia.in/ektarashop/ Lightning?search=Big%20Book&description=true


---




**ಕಮಲೇಶ್ ಚಂದ್ರ ಜೋಶಿ** ಅವರು ಸುದೀರ್ಘ ಕಾಲದಿಂದಲೂ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಾಥಮಿಕ ಸಾಕ್ಷರತೆ, ಮಕ್ಕಳ ಸಾಹಿತ್ಯ ಮತ್ತು ಶಿಕ್ಷಕರ ಪ್ರಶಿಕ್ಷಣವೂ ಸೇರಿದಂತೆ ವಿವಿಧ ಶೈಕ್ಷಣಿಕ ವಿಚಾರಗಳ ಬಗ್ಗೆ ಅವರು ಆಸಕ್ತಿಯನ್ನು ಹೊಂದಿದ್ದಾರೆ. ಪ್ರಸ್ತುತ ಅವರು ಉತ್ತರಾಖಂಡದ ಉಧಾಮ್ ಸಿಂಗ್ ನಗರದಲ್ಲಿರುವ ಅಜೀಂ ಪ್ರೇಮ್‌ಜಿ ಜಿಲ್ಲಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು kamlesh@azimpremjifoundation.org ಮೂಲಕ ಸಂಪರ್ಕಿಸಬಹುದು.


ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಲತಾ ಕೆ.ಸಿ.**

# ಪಠ್ಯಕ್ರಮದ ವಿಷಯವನ್ನು ಕಥೆಗಳೊಂದಿಗೆ ಬೆಸೆಯುವುದು | ನನ್ನ ಅನುಭವಗಳು

ಮಧುಮಿತಾ ಆರ್.

ಕಥೆಗಳ ಕುರಿತು ನಾನು ಹೊಂದಿರುವ ಅದಮ್ಯ ಪ್ರೀತಿಯ ಕಾರಣ ತೊಡಗಿಸಿಕೊಳ್ಳುವಿಕೆಯ ಈ ಮಾಧ್ಯಮವನ್ನು ನಾನು ತರಗತಿಯೊಳಗೆ ಕೊಂಡು ಹೋಗಿದ್ದೇನೆ. ಕಥೆಗಳನ್ನು ಓದುವ ಮತ್ತು ಕೇಳುವ ಕುರಿತು ನಾನು ಹೊಂದಿರುವ ಕುತೂಹಲಗಳಲ್ಲಿ ಕೆಲವಾದರೂ ಚಿಕ್ಕ ಮಕ್ಕಳ ಮೇಲೆ ಪ್ರಭಾವ ಬೀರಬಹುದೆಂಬ ಆಸೆ ನನ್ನದು.

ಕಳೆದ ವರ್ಷ ಜೂನ್‌ತಿಂಗಳಿನಲ್ಲಿ ಒಂದು ದಿನ ಮಧ್ಯಪ್ರದೇಶದ ಸಾಗರದಲ್ಲಿರುವ ಒಂದು ಶಾಲೆಗೆ ನಿಯಮಿತ ಭೇಟಿಯ ವೇಳೆ ಮಕ್ಕಳಿಗೆ ಹೇಳುವುದಕ್ಕಾಗಿಯೇ ಒಂದಷ್ಟು ಕಥೆಗಳನ್ನು ಸಿದ್ಧಪಡಿಸಿಕೊಂಡು ಹೋಗಿದ್ದೆ. I ರಿಂದ III ನೇ ತರಗತಿಯವರೆಗಿನ ಶಿಕ್ಷಕಿಯು ಬಹು ದರ್ಜೆಯ ಮತ್ತು ಬಹು ಮಟ್ಟಗಳ (multi-grade, multi-level-MGML) ಶಿಕ್ಷಕಿಯಾಗಿದ್ದರು. ಆ ದಿನದ ಯೋಜನೆಯನ್ನು ನಾನು ಅವರೊಂದಿಗೆ ಚರ್ಚಿಸಿದ್ದೆ. ಒಂದು ಪುನರವಲೋಕನ ಮತ್ತು ಎರಡು ಪದ್ಯಗಳನ್ನು ಪೂರ್ಣಗೊಳಿಸುವ ಅಗತ್ಯವಿದೆಯೆಂದು ಶಿಕ್ಷಕಿಯು ನನಗೆ ತಿಳಿಸಿದರು. ಈ ಎರಡು ಪದ್ಯಗಳು ಪಠ್ಯಪುಸ್ತಕಕ್ಕೆ ಸಂಬಂಧಿಸಿದ್ದವು. ಅದರಲ್ಲಿ ಒಂದು ಪದ್ಯವು ಹಸುವಿಗೆ ಸಂಬಂಧಿಸಿದ್ದರೆ, ಇನ್ನೊಂದು ಗೂಡನ್ನು ಕಟ್ಟುತ್ತಿರುವ ಹಕ್ಕಿಗೆ ಸಂಬಂಧಿಸಿತ್ತು. ಹೀಗಾಗಿ, ಮಕ್ಕಳು ಈಗಾಗಲೇ ತಿಳಿದಿರುವ ಪ್ರಾಣಿಗಳ ಕುರಿತ ಪದ್ಯಗಳ ಪುನರವಲೋಕನಕ್ಕಾಗಿ ನಾವು ಒಟ್ಟಿಗೆ ಯೋಜನೆಯನ್ನು ರೂಪಿಸಿದೆವು.

ತದನಂತರ ನಾನು 'ಹರ್‌ಪೇಡ್ ಜರೂರಿ ಹೈ' (ಹಂತ 2, ಪ್ರಥಮ್‌ಬುಕ್ಸ್) ಕಥೆಯನ್ನು ಗಟ್ಟಿಯಾಗಿ ಓದಿದೆ.ಈ ಕಥೆಯು ಸಂಖ್ಯೆಗಳು, ವಿವಿಧ ಪ್ರಕಾರದ ಮರಗಳು, ಅವುಗಳ ಮೇಲೆ ಕುಳಿತುಕೊಳ್ಳುವ ಹಕ್ಕಿಗಳು, ವಿವಿಧ ಹೂವುಗಳು ಮತ್ತು ಅವು ಎಲ್ಲಿ ಬೆಳೆಯುತ್ತವೆ ಎಂಬುದನ್ನು ಉಲ್ಲೇಖಿಸುತ್ತದೆ. ಮಕ್ಕಳಿಗೆ ಪುಸ್ತಕದಲ್ಲಿದ್ದ ಆಲದ ಮರ, ಅಶ್ವತ್ಥದ ಮರ, ಬೇವಿನ ಮರ, ಹುಣಸೆ ಮರ, ನೇರಳೆ ಮರ ಮತ್ತು ಗಿಳಿ ಮತ್ತು ಜೇನ್ನೊಣದಂತಹ ಹಕ್ಕಿಗಳು ಮತ್ತು ಕೀಟಗಳ ಕುರಿತು ಅರಿವಿತ್ತು. ಆದರೆ ಬಾವಲಿಯು ಹೇಗೆ ನೇತಾಡುತ್ತದೆ ಎಂಬುದನ್ನು ಚಿತ್ರದ ಮೂಲಕ ತೋರಿಸಿದ ನಂತರವೂ ಪಾರಿವಾಳ ಮತ್ತು ಬಾವಲಿಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಅವರಿಗೆ ಸಾಧ್ಯವಾಗಲಿಲ್ಲ. ನಂತರ ಅದು ಬಾವಲಿ ಎಂದು ನಾನು ಅವರಿಗೆ ಹೇಳಿದಾಗ ಅವರಲ್ಲಿ ಒಬ್ಬ, ತಾನು ರಾತ್ರಿ ವೇಳೆ ಊಟದ ನಂತರ ಹೊರಗಡೆ ಆಟವಾಡುವಾಗ ಅದನ್ನು ನೋಡಿದ್ದಾಗಿ ಹೇಳಿದ. ಈ ಸಂಭಾಷಣೆಯು, ಅನುಭವದ ಕಲಿಕೆಯ ಹಂಚಿಕೆಗೆ ಅವಕಾಶವನ್ನು ಒದಗಿಸಿತು.

ತದನಂತರ, ತನ್ನ ಬಾಲ್ಯದಲ್ಲಿ ಮಿಂಚುಹುಳಗಳನ್ನು ಅನೇಕ ಬಾರಿ ನೋಡಿದ್ದನ್ನು ಶಿಕ್ಷಕಿಯು ಉಲ್ಲೇಖಿಸಿ, ಇಂದಿನ ಕಾಲದಲ್ಲಿ ಇವುಗಳು ಕಾಣಸಿಗುವುದು ಅಪರೂಪ ಎಂದು ಹೇಳಿದರು. ಈ ಮಿಂಚುಹುಳಗಳು ಎಲ್ಲಿಂದ ಬೆಳಕನ್ನು ಪಡೆಯುತ್ತವೆ ಎನ್ನುವ ಕುತೂಹಲವು ಮಕ್ಕಳನ್ನು ಕಾಡಿತು. ಅವರ ಉತ್ತರಗಳು ಆಸಕ್ತಿಕರವಾಗಿದ್ದವು. ಅವರು ಬ್ಯಾಟರಿ ಮತ್ತು ಸೌರಶಕ್ತಿಯನ್ನು ಉಲ್ಲೇಖಿಸಿದರು. ಅಲ್ಲದೆ ಟಿ. ವಿ ಕಾರ್ಯಕ್ರಮವೊಂದರಲ್ಲಿ, ಕಾಡಿನಲ್ಲಿ ಕರಡಿಯೊಂದು ಮಿಂಚುಹುಳಕ್ಕೆ ತನ್ನ ಬೆಳಕನ್ನು ಪಡೆಯಲು ಸಹಾಯ ಮಾಡಿದ್ದು ಕಂಡಿದ್ದನ್ನು ಹೇಳಿದರು!.

ಪಕ್ಷಿಗಳು ಮತ್ತು ಗೂಡುಗಳನ್ನು ಒಳಗೊಂಡಿದ್ದ ಪದ್ಯವನ್ನು ನಾವು ಮಾಡಬೇಕಾಗಿದ್ದರಿಂದ ಹಾಗೂ ಮರಗಳ ಕುರಿತ ಕಥೆಯನ್ನು ಓದಿದ್ದ ಕಾರಣ, ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಿ ನಮ್ಮ ಸುತ್ತಮುತ್ತ ಇರುವ ವಿವಿಧ ಮರಗಳನ್ನು ಅವರು ನೋಡುವಂತೆ ಮಾಡಬಹುದೆಂದು ನಾವು ಭಾವಿಸಿದೆವು. ಈ ಮಕ್ಕಳು ಶಾಲೆಯ ಸುತ್ತಮುತ್ತ ಇರುವ ಮನೆಗಳಿಂದ ಬಂದಿರುವ ಕಾರಣ, ನಮ್ಮ ಅಕ್ಕಪಕ್ಕದ ಪರಿಸರವನ್ನು ಅವರಿಗೆ ತೋರಿಸಿ ಸ್ಥಳೀಯ ಮಟ್ಟದಲ್ಲಿರುವ ವಿವಿಧ ಮರಗಳನ್ನು ತೋರಿಸುವ ಅವಕಾಶ ಇಲ್ಲಿ ಲಭಿಸಿತ್ತು.

ಶಾಲೆಯ ಎದುರುಗಡೆಯೇ ದೊಡ್ಡದಾದ ಮರವೊಂದು ಇತ್ತು. ವಿಶೇಷವೆಂದರೆ ಮೂರು ಮರಗಳು ಒಂದಾಗಿ ಬೆಳೆದಿದ್ದವು. ಅವುಗಳೆಂದರೆ ಬರಗದ್ (bargad), ಆಲದ ಮರ ಮತ್ತು ಬೇವಿನ ಮರ. ಈ ಎಲ್ಲ ಮೂರು ಮರಗಳ ಕಾಂಡಗಳು ಮತ್ತು ಕೊಂಬೆಗಳು ಪರಸ್ಪರ ಹೆಣೆದುಕೊಂಡಿದ್ದವು. ಎಲೆಗಳ ಆಕಾರ, ಬಣ್ಣ ಮತ್ತು ಮೇಲ್ಮೈರಚನೆ ಹಾಗೂ ಆಲದ ಮರದ ನೇತಾಡುವ ಬೇರುಗಳು – ಹೀಗೆ ಮೂರು ಬೇರೆಬೇರೆ ಮರಗಳ ವೈಶಿಷ್ಟ್ಯಗಳನ್ನು ಪಟ್ಟಿ ಮಾಡಿ ಇವುಗಳ ನಡುವಿನ ವ್ಯತ್ಯಾಸವನ್ನು ಮಕ್ಕಳು ಅರಿತುಕೊಳ್ಳಲು ನಾವು ಸಹಾಯ ಮಾಡಿದೆವು. ಮರದ ಕೆಳಗೆ ವಿಶ್ರಮಿಸುತ್ತಿದ್ದ ಕೆಲವು ಹಿರಿಯರು ಮಕ್ಕಳಿಗೆ ಸ್ಪರ್ಶಿಸಲು ಮತ್ತು ಅನುಭವಿಸಲು ಕೆಲವು ಎಲೆಗಳನ್ನು ನೀಡಿದರು. ಮೇಲಿನಿಂದ ನೇತಾಡುವ ಬೇರುಗಳ ಮೂಲಕ ಅಳಿಲುಗಳು ಮೇಲಕ್ಕೆ ಹತ್ತುವುದನ್ನು ಹಾಗೂ ಕಾಗೆಗಳು ಹಾಗೂ ಗುಬ್ಬಚ್ಚಿಗಳಂತಹ ಹಕ್ಕಿಗಳು ಮರದ ಸುತ್ತಮುತ್ತ ಹಾರಾಡುವುದನ್ನು ಮತ್ತು ಮರದಲ್ಲಿ ಕುಳಿತುಕೊಳ್ಳುವುದನ್ನು ಮಕ್ಕಳು ಗಮನಿಸಿದರು. ಒಬ್ಬ ಹುಡುಗನು ಮರದಲ್ಲಿ ಜೇನುಗೂಡನ್ನು ಗಮನಿಸಿದ. ನನ್ನನ್ನು ಒಮ್ಮೆಗೆ ತಡೆದು ನಿಲ್ಲಿಸಿ ಆತ ಹೇಳಿದ್ದನ್ನು ದೃಢೀಕರಿಸುವಂತೆ ಮಾಡಿದ. ನಂತರ ನಾವು ಹಾಗೆಯೇ ಅಕ್ಕಪಕ್ಕದಲ್ಲಿ ಓಡಾಡುತ್ತಾ ಮುಂದಕ್ಕೆ ಸಾಗಿ ಪಪ್ಪಾಯ

ಮತ್ತು ಬೋರೆ ಹಣ್ಣಿನಂತಹ ಇತರ ಮರಗಳನ್ನು ನೋಡಿದೆವು. ಮಕ್ಕಳಿಗೆ ಈಗಾಗಲೇ ಈ ಮರಗಳ ಪರಿಚಯವಿತ್ತು.

ನಾವು ತರಗತಿಗೆ ಮರಳಿದಾಗ ಪ್ರತಿ ಮಗುವೂ ಬೇರೆಬೇರೆ ಮರಗಳ ಎಲೆಗಳನ್ನು ತಂದಿದ್ದರು. ಅವರು ಏನನ್ನು ನೋಡಿದ್ದಾರೆ ಎಂಬುದನ್ನು ಶಿಕ್ಷಕಿ ಮತ್ತು ನಾನು ಸೇರಿ ಮಕ್ಕಳೊಂದಿಗೆ ಚರ್ಚಿಸಿದೆವು. ನಂತರ ನಾವು ವಿವಿಧ ಎಲೆಗಳ ಆಕಾರದೊಂದಿಗೆ ಒಂದು ಚಿತ್ರಪತ್ರವನ್ನು ರಚಿಸಿದೆವು ಹಾಗೂ ಅವುಗಳ ಕೆಳಗೆ ಹೆಸರುಗಳನ್ನು ಬರೆದು ತರಗತಿಯಲ್ಲಿ ತೂಗುಹಾಕಿದೆವು. ತದನಂತರ, ಹಕ್ಕಿಯು ಗೂಡನ್ನು ಕಟ್ಟುವ ಪದ್ಯವನ್ನು ಅಭಿನಯದೊಂದಿಗೆ ಪಠಿಸಿದೆವು. ಮರದಲ್ಲಿ ಹಕ್ಕಿಗಳನ್ನು ಅವುಗಳ ಗೂಡುಗಳಲ್ಲಿ ನೋಡಿರುವ ಕುರಿತು ಮಕ್ಕಳು ಮಾತನಾಡಿದರು. ತನ್ನ ಮನೆಯ ಛಾವಣಿಯಲ್ಲಿ, ಕಡ್ಡಿಯ ತುಂಡುಗಳನ್ನು ಬಳಸಿ ಪಾರಿವಾಳವೊಂದು ಹೇಗೆ ಗೂಡನ್ನು ಕಟ್ಟಿದೆ ಎಂಬುದನ್ನು ವಿದ್ಯಾರ್ಥಿಯೊಬ್ಬ ವಿವರಿಸಿದನು.

## ಪಠ್ಯಕ್ರಮದ ಅಗತ್ಯಗಳಿಗೆ ತಕ್ಕಂತೆ ಕಥೆಗಳನ್ನು ಜೋಡಿಸುವುದು

ನಂತರ ಶಿಕ್ಷಕಿಯು ತಾವು ಮಾಡಬೇಕಿದ್ದ ಅಧ್ಯಾಯವನ್ನು ಪ್ರಾರಂಭಿಸಿದರು. ಮೊದಲಿಗೆ ಮರಗಳನ್ನು ಆಧರಿಸಿದ ಚಿತ್ರದ ಸಂಭಾಷಣೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವ ಮೂಲಕ ಮತ್ತು ಒಂದಷ್ಟು ಸುಳುಹುಗಳ ಮೂಲಕ ಮರಗಳು ಹೇಗೆ ನಮ್ಮ ಗೆಳೆಯ ಎನ್ನಿಸಿವೆ ಎಂಬುದನ್ನು ವಿವರಿಸಿದರು.

- ಒಂದು ವೇಳೆ ಮರಗಳು ನಿಮ್ಮ ಗೆಳೆಯರಾಗಿದ್ದರೆ ಅವುಗಳನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ?
- ಅವುಗಳನ್ನು ನೀವು ಎಲ್ಲಿಗೆ ಕೊಂಡೊಯ್ಯುತ್ತೀರಿ? ಏಕೆ?
- ನೀವು ಯಾವ ಮರಗಳನ್ನು ನಿಮ್ಮ ಗೆಳೆಯರಾಗಿ ಸ್ವೀಕರಿಸುತ್ತೀರಿ? ಏಕೆ?

ಮಕ್ಕಳು ವಿಭಿನ್ನ ಉತ್ತರಗಳನ್ನು ನೀಡಿದರು. ಮುಖ್ಯವಾಗಿ ಮಾವು, ಸೀಬೆ, ದಾಳಿಂಬೆ, ಹುಣಸೆ ಮತ್ತು ಬೇವಿನ ಮರಗಳು ತಮ್ಮ ಗೆಳೆಯರಾಗಬೇಕೆಂದು ಅವರು ಇಚ್ಛಿಸಿದರು. ಇದಕ್ಕೆ ಅವರು ನೀಡಿದ ಕಾರಣವೆಂದರೆ, ಈ ಮರಗಳು ದೊಡ್ಡದಾಗಿದ್ದು ಅವುಗಳ ಅಡಿಯಲ್ಲಿ ಆಟವಾಡಬಹುದು, ಅವುಗಳ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳಬಹುದು ಹಾಗೂ ಅವುಗಳ ಹಣ್ಣುಗಳನ್ನು ಮಾರಿ ಹಣ ಗಳಿಸಬಹುದು ಇತ್ಯಾದಿ. ಮಾರಿ ಹಣ ಗಳಿಸುವುದಕ್ಕಾಗಿ ಮರವು ಏಕೆ ಹಣ್ಣುಗಳನ್ನು ನೀಡಬೇಕೆಂದು ಪ್ರಶ್ನಿಸಿದಾಗ, ಮರವೂ ಸಹ ಸ್ನೇಹದ ಸಂಕೇತವಾಗಿ ತನ್ನ ಪಾಲಿನ ಜವಾಬ್ದಾರಿಯನ್ನು ಈಡೇರಿಸಬೇಕು ಎಂದು ಮಗುವೊಂದು ಉತ್ತರಿಸಿತು.

## ದೃಷ್ಟಿಕೋನಗಳು ಮತ್ತು ಶಿಕ್ಷಣಶಾಸ್ತ್ರೀಯ ವಿಧಾನಗಳು

ಕಥೆ ಹೇಳುವ ಮಾಧ್ಯಮವನ್ನು ಇಲ್ಲಿ ಪರಿಚಯಿಸುವುದರಿಂದ ಹಾಗೂ ಸಂಭಾಷಣೆ ಮತ್ತು ಚರ್ಚೆಗೆ ಅವಕಾಶವನ್ನು ಕಲ್ಪಿಸುವುದರಿಂದ 'ಹರ್‌ಪೇಡ್ ಜರೂರಿ ಹೈ' ಕಥೆಯನ್ನು ಮಕ್ಕಳಿಗೆ ತಲುಪಿಸಲು ನನಗೆ ಸಹಾಯ ಮಾಡಿದೆ, ಮಾತ್ರವಲ್ಲದೆ ಮಕ್ಕಳ ಆಸಕ್ತಿ ಮತ್ತು ಗಮನವನ್ನು ಸೆಳೆದು ಕೊನೆಯ ತನಕ ಉಳಿಸುವಂತೆ ಮಾಡಲು ಹಾಗೂ ತರಗತಿಯ ಅಗತ್ಯಕ್ಕೆ ತಕ್ಕುದಾಗಿ ಅದನ್ನು ಮಾರ್ಪಡಿಸಿ ಆವೇಗವನ್ನು ರೂಪಿಸಲು ಸಾಧ್ಯವಾಯಿತು ಎಂಬುದನ್ನು ನಾನು ಅರಿತುಕೊಂಡೆ.

ಪಠ್ಯಕ್ರಮದ ವಿಷಯವೂ ಸಹ ಪ್ರಮುಖವಾಗಿತ್ತು. ಏಕೆಂದರೆ ಅದರಲ್ಲಿನ ಕಥೆಯು ಮಕ್ಕಳನ್ನು ಸಕ್ರಿಯರನ್ನಾಗಿಸಿತು, ಮಾತ್ರವಲ್ಲದೆ ಅವರ ಆಸಕ್ತಿಯನ್ನು ಕುದುರಿಸಿ ಅವರು ಲವಲವಿಕೆಯಿಂದ ಪಾಲ್ಗೊಳ್ಳುವಂತೆ ಮಾಡಿತು. ವಿಶೇಷವಾಗಿ ಚರ್ಚಿಸಲಾದ ವಿಷಯವು ಅವರು ಸುಲಭವಾಗಿ ಅದರೊಂದಿಗೆ ಗುರುತಿಸಿಕೊಂಡು ತಮ್ಮ ಕೊಡುಗೆಯನ್ನು ನೀಡಬಹುದಾದ ವಿಷಯವಾಗಿತ್ತು. ಮಕ್ಕಳ ಜೊತೆಗೆ ನಡೆಸಿದ ಸಂಭಾಷಣೆ, ಒಟ್ಟು ಚರ್ಚೆಗಳು ಹಾಗೂ ಅವುಗಳನ್ನು ತರಗತಿಯಲ್ಲಿ ಹಂಚಿಕೊಂಡ ರೀತಿಯು ನಿಜಕ್ಕೂ ಆನಂದದಾಯಕ ಮತ್ತು ಸಂವರ್ಧಕ ಎನ್ನಿಸಿತು. ಪಠ್ಯಕ್ರಮದ ವಿಷಯಗಳನ್ನು ಮುಂದಕ್ಕೆ ಕೊಂಡೊಯ್ಯುವುದಕ್ಕಾಗಿ ನವೀನ ವಿಧಾನಗಳನ್ನು ಕ್ರೋಡೀಕರಿಸುವುದಕ್ಕಾಗಿ ಸಕ್ರಿಯವಾಗಿ ಮತ್ತು ಕ್ಷಣಮಾತ್ರದಲ್ಲಿ ಪ್ರಯತ್ನಿಸುವುದು ನನ್ನ ಪಾಲಿನ ಆಸಕ್ತಿಯ ವಿಷಯವಾಗಿದೆ. ಮಕ್ಕಳು ಮಾತ್ರವಲ್ಲದೆ ಅವರ ಶಿಕ್ಷಕಿ ಮತ್ತು ನಾನು ಸೇರಿ ಈ ಅನುಭವವನ್ನು ಆನಂದಿಸಿದೆವು. ಒಂದು ರೀತಿಯಲ್ಲಿ ಇದು ಅರ್ಥಪೂರ್ಣ ಕಲಿಕೆ ಎನ್ನಿಸಿತು ಹಾಗೂ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದ ಕುರಿತು ಏನನ್ನು ಕಲಿಯುತ್ತಾರೆಯೋ ಹಾಗೂ ತರಗತಿಯಲ್ಲಿ ತೊಡಗಿಸಿಕೊಳ್ಳುತ್ತಾರೆಯೋ, ಅದರೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳುವ ರೀತಿಯನ್ನು ಇದು ಇನ್ನಷ್ಟು ವರ್ಧಿಸಿತು. ದಿನದ ಕೊನೆಗೆ ಶಿಕ್ಷಕಿ ನನಗೆ ಈ ರೀತಿ ಹೇಳಿದರು: "ನೀವು ವಿದ್ಯಾರ್ಥಿಗಳಿಗೆ ಕಥೆಯನ್ನಷ್ಟೇ ಹೇಳುತ್ತೀರಿ ಎಂದು ನಾನು ಭಾವಿಸಿದ್ದೆ; ನಾವು ಇದೆಲ್ಲವನ್ನು ಮಾಡಿ ಇಂದಿನ ಪಾಠವನ್ನು ಮುಗಿಸುತ್ತೇವೆ ಎಂಬುದನ್ನು ನಾನು ನಿರೀಕ್ಷಿಸಿರಲಿಲ್ಲ!." ಇಂತಹ ಶಿಕ್ಷಣಶಾಸ್ತ್ರೀಯ ವಿಧಾನಗಳು, ಪ್ರತಿ ದಿನ ತರಗತಿಯ ಪಾಠದಲ್ಲಿ ತೊಡಗಿಸಿಕೊಳ್ಳುವಾಗ ತಮ್ಮ ಪರಿಸರದಲ್ಲಿ ದೊರೆಯುವ ಎಲ್ಲಾ ಸಂಪನ್ಮೂಲಗಳನ್ನು ಹೇಗೆ ಕ್ರೋಡೀಕರಿಸಬೇಕು ಎನ್ನುವ ಕಲ್ಪನೆಯನ್ನು ನೀಡಿದವು ಎಂದು ಅವರು ಹೇಳಿದರು.

## ಶಿಶು-ಸ್ನೇಹಿ ವಿಧಾನ

ಮೇಲಿನ ಉದಾಹರಣೆಯು ತರಗತಿಯೊಳಗಿನ ಅಭ್ಯಾಸಕ್ಕೆ ಒಂದು ಉದಾಹರಣೆಯಾಗಿದೆ. ತರಗತಿಯೊಳಗೆ ಹಾಗೂ ಪ್ರತಿ ಮಗುವಿನ ಮಟ್ಟದಲ್ಲಿ ಯೋಚನೆ, ಕಲ್ಪನೆ ಮತ್ತು ಸಂವಹನದ ಪ್ರಪಂಚದ ಬಾಗಿಲನ್ನು ತೆರೆಯುವುದಕ್ಕಾಗಿ ಈ ಸರಳ ಕಥೆಗಳು

ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ನೋಡಿ ಮಕ್ಕಳು, ಶಿಕ್ಷಕರು ಹಾಗೂ ನಾನು ಅಚ್ಚರಿಗೊಂಡ ಕುರಿತು ನನ್ನಲ್ಲಿ ಇನ್ನೂ ಸಾಕಷ್ಟು ನಿದರ್ಶನಗಳಿವೆ.

ಶೈಕ್ಷಣಿಕವಾಗಿ ಹೇಳುವುದಾದರೆ, ಕಥಾ ನಿರೂಪಣೆಯು, ಬುನಾದಿ ಎಂದು ಭಾವಿಸಲಾದ ಈ ಕೆಳಗಿನ ಕಲಿಕೆಯ ಫಲಗಳನ್ನು ಸಾಧಿಸಲು ಸಹಾಯ ಮಾಡುವ ಶಿಕ್ಷಣಶಾಸ್ತ್ರೀಯ ವಿಧಾನವೆನ್ನಿಸಿದೆ. ವಿದ್ಯಾರ್ಥಿಯು ಈ ಕೆಳಗಿನವುಗಳನ್ನು ಸಾಧಿಸಲು ಸಾಧ್ಯವಾಗುತ್ತದೆ:

- ಪದಗಳನ್ನು ಚಿತ್ರಗಳೊಂದಿಗೆ ಗುರುತಿಸುವುದು
- ಚಿತ್ರದಲ್ಲಿ ನೋಡಿದ ಪರಿಚಿತ ವಸ್ತುಗಳನ್ನು ಹೆಸರಿಸುವುದು
- ಅವರು ಇಚ್ಛಿಸಿದಲ್ಲಿ ಮನೆಯ ಭಾಷೆ/ಶಾಲೆಯ ಭಾಷೆ/ ಇಂಗ್ಲಿಷ್/ ಸಂಕೇತದ ಭಾಷೆ, ಮೌಖಿಕವಾಗಿ ಅಥವಾ ಲಿಖಿತವಾಗಿ (ನುಡಿಗಟ್ಟುಗಳಲ್ಲಿ/ಚುಟುಕಾದ ವಾಕ್ಯಗಳಲ್ಲಿ) ಕಥೆಗಳಿಗೆ ಸಂಬಂಧಿಸಿದ ಗ್ರಹಿಕೆಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವುದು
- ಕಥೆಯಲ್ಲಿ ಪಾತ್ರಗಳು ಮತ್ತು ಘಟನೆಗಳ ಅನುಕ್ರಮವನ್ನು ಗುರುತಿಸುವುದು
- ತಮ್ಮ ಮನೆಯ ಭಾಷೆ/ ಶಾಲೆಯ ಭಾಷೆ/ ಇಂಗ್ಲಿಷ್/ ಸಂಕೇತದ ಭಾಷೆಯಲ್ಲಿ ಪಾತ್ರಗಳು, ಕಥಾ ಹಂದರ ಇತ್ಯಾದಿಗಳ ಕುರಿತು ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ವ್ಯಕ್ತಪಡಿಸುವುದು ಮತ್ತು ಪ್ರಶ್ನೆಗಳನ್ನು ಕೇಳುವುದು.
- ಕಥೆಗೆ ಪ್ರತಿಕ್ರಿಯೆಯಾಗಿ ಕೆಲವು ಪದಗಳು/ಚುಟುಕಾದ ವಾಕ್ಯಗಳನ್ನು ಬಿಡಿಸುವುದು/ಬರೆಯುವುದು
- ತಮ್ಮ ಸ್ವಂತ ಅನುಭವಗಳನ್ನು ಮೆಲುಕು ಹಾಕುವುದು ಮತ್ತು ತರಗತಿಯ ಚರ್ಚೆಗೆ ಅವುಗಳನ್ನು ಸಹ ಸೇರಿಸುವುದು

ಮೌಲ್ಯಗಳನ್ನು ಬಿತ್ತುವುದಕ್ಕಾಗಿ ಮತ್ತು ಪಠ್ಯಕ್ರಮದ ವಿಷಯದೊಂದಿಗೆ ಸಂಬಂಧವನ್ನು ರೂಪಿಸುವುದಕ್ಕಾಗಿ ಕಥೆಗಳೊಂದಿಗೆ ನಿರಂತರವಾಗಿ ತೊಡಗಿಸಿಕೊಳ್ಳುವುದರಿಂದ 'ಹೌ ಚಿಲ್ಡ್ರನ್ ಲರ್ನ್' ಎಂಬ ಪುಸ್ತಕದಲ್ಲಿ ಜಾನ್‌ಹೋಲ್ಟ್ ಅವರು ಹೇಳಿರುವ ಮಾತು ನನಗೆ ಆಗಾಗ್ಗೆ ನೆನಪಿಗೆ ಬರುತ್ತದೆ: "ಇದನ್ನು ನಂಬಿಕೆಯಿಂದೇ ಕರೆಯಿರಿ. ಆ ನಂಬಿಕೆ ಏನೆಂದರೆ ಸ್ವಾಭಾವಿಕವಾಗಿ ಮಾನವನು ಕಲಿಯುವ ಪ್ರಾಣಿ ಎನಿಸಿದ್ದಾನೆ. ಹೀಗಾಗಿ ನಾವು ಮಕ್ಕಳನ್ನು ಕಲಿಯಲು 'ಉತ್ತೇಜಿಸುವ' ಅಗತ್ಯವಿಲ್ಲ. ಅವರು ಕಲಿಯುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನಾವು ಅವರಿಗೆ ಹಾನಿ ಮಾಡಬೇಕಾದ ಅಗತ್ಯವಿಲ್ಲ. ನಾವೇನು ಮಾಡಬೇಕು ಎಂದರೆ, ಆದಷ್ಟು ಮಟ್ಟಿಗೆ ಈ ಪ್ರಪಂಚವನ್ನು ಶಾಲೆ ಮತ್ತು ತರಗತಿ ಕೋಣೆಯೊಳಗೆ ತರಬೇಕು; ಮಕ್ಕಳಿಗೆ ಬೇಕಾಗುವಷ್ಟು ಮತ್ತು ಅವರು ಕೇಳುವಷ್ಟು ಸಹಾಯ ಮತ್ತು ಮಾರ್ಗದರ್ಶನವನ್ನು ನೀಡಬೇಕು; ಅವರು ಮಾತನಾಡಲು ಇಚ್ಛಿಸುವಾಗ ಅವರ ಮಾತುಗಳನ್ನು ಗೌರವದಿಂದ ಆಲಿಸಬೇಕು; ಹಾಗೂ ಅವರ ದಾರಿಯಿಂದ ದೂರಕ್ಕೆ ಸರಿಯಬೇಕು. ಉಳಿದುದನ್ನು ಅವರು ಸಾಧಿಸುತ್ತಾರೆ ಎಂಬ ನಂಬಿಕೆ ನಮಗೆ ಇರಬೇಕು'.

**ಪರಾಮರ್ಶನಗಳು:**

'ಹರ್ ಪೇಡ್ ಜರೂರಿ ಹೈ', ಪ್ರಭಾ ರಾಮ್ ಮತ್ತು ಶೀಲಾ ಪ್ರುಟ್, ಪ್ರಥಮ್ ಬುಕ್ಸ್.
ಚಿತ್ರಗಳು: ಸಂಗೀತಾ ಕಡೂರು, ಅನುವಾದ: ದೀಪಾ ತ್ರಿಪಾಠಿ.
https:// storyweaver.org.in/stories/17146-har-ped-zaruri-hai



**ಮಧುಮಿತಾ ಆರ್** ಅವರು ಮಧ್ಯಪ್ರದೇಶದ ಸಗರ್‌ನಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಅಸೋಸಿಯೇಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಬೆಂಗಳೂರಿನಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಪರಿಸರ, ಕಥೆ ಹೇಳುವುದು ಮತ್ತು ರಂಗಭೂಮಿ ಆಧಾರಿತ ಚಟುವಟಿಕೆಗಳ ಮೂಲಕ ಮಕ್ಕಳೊಂದಿಗೆ ತೊಡಗಿಸಿಕೊಳ್ಳುವುದರಲ್ಲಿ ಅವರು ಆಸಕ್ತಿ ಹೊಂದಿದ್ದಾರೆ. ಅವರನ್ನು mathumitha.r@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲನೆ: **ಲತಾ ಕೆ.ಸಿ.**

# ಕಥೆಗಳ ಮೂಲಕ ಕಲಿಯುವುದು

ಪದ್ಮಾ ಬಿ.ಎಂ.

## ಪರಿಚಯ

ಕಥೆಗಳು ಎಲ್ಲರನ್ನೂ ತೊಡಗಿಸಿಕೊಳ್ಳುತ್ತವೆ ಮತ್ತು ಅವು ಸಾರ್ವತ್ರಿಕವಾಗಿ ಇಷ್ಟವಾಗುತ್ತವೆ. ನಮ್ಮ ಇತಿಹಾಸ ಮತ್ತು ಪುರಾಣಗಳು ಕಥೆಗಳಿಂದ ತುಂಬಿದ್ದು, ಬಾಲ್ಯದಲ್ಲಿ ನಾವು ಕೇಳಿದ ಕಥೆಗಳನ್ನು ಎಂದಿಗೂ ಮರೆಯುವುದಿಲ್ಲ. ಕನ್ನಡದ ಕಾಗಕ್ಕ ಗುಬ್ಬಕ್ಕ (ಕಾಗೆ ಮತ್ತು ಗುಬ್ಬಚ್ಚಿ) ಗೋವಿನ ಹಾಡು, ಏಳು ಸಮುದ್ರದ ಆಚೆ ಇರುವ ರಾಕ್ಷಸ ಮುಂತಾದ ಕಥೆಗಳು ಸದಾ ನೆನಪಿನಲ್ಲಿ ಉಳಿಯುತ್ತವೆ. ಪ್ರತಿಯೊಬ್ಬರೂ ಕಥೆಗಳನ್ನು ಇಷ್ಟಪಡುವ ಕಾರಣ ಶಾಲೆಗಳಲ್ಲಿ ಎಲ್ಲಾ ವಿಷಯಗಳನ್ನೂ ಕಥೆಗಳ ಮೂಲಕವೇ ಕಲಿಸಬೇಕೆಂದು ನಾನು ಬಲವಾಗಿ ಒತ್ತಾಯಿಸುತ್ತೇನೆ.

## ಮಕ್ಕಳ ಕಥೆಗಳಿಗಾಗಿ ಹುಡುಕಾಟ

ಕನ್ನಡದಲ್ಲಿ ಮಕ್ಕಳ ಕಥೆಗಳನ್ನು ಹುಡುಕುತ್ತಾ ಹೋದಾಗ ನನಗೆ ಕೊನೆಗೆ ಹೆಚ್ಚಾಗಿ ಸಿಕ್ಕಿದ್ದು ಪದ್ಯ ರೂಪದ ಕಥೆಗಳು. ಅವರಿಗಾಗಿ ಚಿತ್ರ ಪುಸ್ತಕಗಳು ಇರಲಿಲ್ಲ. ಇದ್ದ ಪುಸ್ತಕಗಳಲ್ಲಿ ಹೆಚ್ಚಿನವು ಭಾಷಾಂತರವಾಗಿದ್ದು, ಅವುಗಳಲ್ಲಿನ ಪದ ಬಳಕೆ, ವಾಕ್ಯ ರಚನೆ ಮತ್ತು ಕೆಲವು ಕಥೆಗಳ ಕಥಾವಸ್ತು ಮಕ್ಕಳ ಅರಿವಿನ ಮಟ್ಟವನ್ನು ಮೀರಿದ್ದವು. ಆಗಲೇ ನನಗೆ ನಮ್ಮ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಜಾನಪದ ಕಥೆಗಳನ್ನು ಮತ್ತು ನಮ್ಮ ಪರಿಸರಕ್ಕೆ ಹೊಂದುವಂತಹ ಹೊಸ ಕಥೆಗಳನ್ನು ಬರೆಯಬೇಕೆಂಬ ಆಲೋಚನೆ ಬಂದದ್ದು. ಶಿಕ್ಷಕರು ತಮ್ಮ ಒಡನಾಡುವ ಮಕ್ಕಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವುದರಿಂದ, ಅವರು ಬರೆದ ಕಥೆಗಳು ಪ್ರಸ್ತುತವಾಗಿಯೂ, ಉಪಯುಕ್ತವಾಗಿಯೂ ಇರುತ್ತವೆ. ಆದ್ದರಿಂದ, ಮಕ್ಕಳಿಗಾಗಿ ಕಥೆಗಳ ಸಂಗ್ರಹವನ್ನು ರಚಿಸುವ ಉದ್ದೇಶದಿಂದ ಬೆಂಗಳೂರು ಜಿಲ್ಲಾ ಸಂಸ್ಥೆಯು (ಅಜೀಂ ಪ್ರೇಮ್‌ಜಿ ಫೌಂಡೇಷನ್) ಅಂಗನವಾಡಿ ಮತ್ತು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕಥೆಗಳನ್ನು ಬರೆಯುವ ಕಾರ್ಯಾಗಾರವೊಂದನ್ನು ಆಯೋಜಿಸಿತ್ತು. ಇದರ ಪರಿಣಾಮವಾಗಿ ಸಾಕಷ್ಟು ಕಥೆಗಳು ನಮ್ಮ ಕೈ ಸೇರಿದವು.

## ವೈಧಾನಿಕತೆ

ಕರ್ನಾಟಕದ ನಾನಾ ಪ್ರದೇಶಗಳ ಆಡುಭಾಷೆ, ಆಚಾರ-ವಿಚಾರ, ಪರಿಸರ ವಿಭಿನ್ನವಾಗಿರುವುದರಿಂದ ಎಲ್ಲ ಪ್ರದೇಶಗಳ ಶಿಕ್ಷಕರನ್ನು ಒಂದೇ ಸೂರಿನಡಿ ತಂದು ಕಥೆಗಳನ್ನು ರಚಿಸಲು ನಿರ್ಧರಿಸಲಾಯಿತು. ಕಾರ್ಯಾಗಾರಕ್ಕೆ ಮೊದಲು, ನಾವು ಮಕ್ಕಳ ಸಾಹಿತ್ಯದಿಂದ ಹಲವಾರು ಅನುವಾದಿತ, ಸಚಿತ್ರ ಕಥೆಗಳನ್ನು ಓದಿ ವಿಷಯದ ಆಧಾರದ ಮೇಲೆ ಅವುಗಳನ್ನು ವಿಂಗಡಿಸಿಕೊಂಡೆವು. ಕಥೆಗಳ ಕೇಂದ್ರ ವಿಷಯ ಮತ್ತು ಅವುಗಳಲ್ಲಿ ಅಂತರ್ಗತವಾಗಿರುವ ಕಲಿಕೆಗಳನ್ನು ಸಹ ಚರ್ಚಿಸಿದೆವು.



ಚಿತ್ರ 1. ಪುಟ್ಟಿಯ ಪ್ರಶ್ನೆಗಳು, ಕಾರ್ಯಾಗಾರದ ಸಮಯದಲ್ಲಿ ರಚಿಸಿದ ಮತ್ತು ವಿವರಿಸಿದ ಕಥೆಗಳಲ್ಲಿ ಇದು ಒಂದು




ಚಿತ್ರ 2. ಅಕ್ಕ ತಂಗಿ ಗೂಬೆಗಳು, ಕಾರ್ಯಾಗಾರದ ಸಮಯದಲ್ಲಿ ರಚಿಸಿದ ಮತ್ತು ವಿವರಿಸಿದ ಕಥೆಗಳಲ್ಲಿ ಇದೂ ಒಂದು

ಕೆಲವು ಕಥೆಗಳು ಮಕ್ಕಳಿಗೆ ಸಂಬಂಧಿಸಬಹುದಾದ ಕಥೆಗಳಾಗಿದ್ದವು. ಉದಾಹರಣೆಗೆ, ನಮ್ಮ ಶಿಕ್ಷಕಿಯೊಬ್ಬರು ಬರೆದ ಕಥೆಯಾದ ಅಕ್ಕ ತಂಗಿ ಗೂಬೆಗಳು ಈ ಕಥೆಯನ್ನು ನಾವು ಚಿತ್ರ ಸಮೇತವಾಗಿ ದ್ವಿಭಾಷಾ ಪುಸ್ತಕವಾಗಿ ಪ್ರಕಟಿಸಿದೆವು. ಈ ಪುಸ್ತಕದಲ್ಲಿ ಇತರ ಕಥೆಗಳೂ ಇದ್ದವು: ಹುಣಸೆ ಪೆಪ್ಪರ್ ಮೆಂಟ್: ಹುಣಸೆ ಪೆಪ್ಪರ್‌ಮೆಂಟ್ ತಯಾರಿಸುವಾಗ ಇಬ್ಬರು ಸಹೋದರಿಯರು ಇಕ್ಕಟ್ಟಿಗೆ ಸಿಲುಕುವ ಕಥೆ; ಮತ್ತು ಪುಟ್ಟಿಯ ಪ್ರಶ್ನೆಗಳು: ತನ್ನ ಅಜ್ಜಿಯ ಹಳ್ಳಿಗೆ ಭೇಟಿ ನೀಡಿದಾಗ ದಾರಿಯಲ್ಲಿ ಬರುವ ಎಲ್ಲವನ್ನೂ ಪ್ರಶ್ನಿಸುವ ಪುಟ್ಟಿ ಎಂಬ ಪುಟ್ಟ ಹುಡುಗಿಯ ಕಥೆ; ಮರ ರಾಕ್ಷಸ: ಇದು ಮರವನ್ನು ಕಡಿಯಲು ಬಂದಿದ್ದ ಮರಕಡಿಯುವವನ ಮನೆಗೆ ಹಬ್ಬದೂಟಕ್ಕೆ ಬರುವ ರಾಕ್ಷಸನ ಕುರಿತಾದ ಕಥೆಯಾಗಿತ್ತು.

ಮಕ್ಕಳು ಈ ಕಥೆಗಳೊಂದಿಗೆ ಸಂಬಂಧ ಬೆಸೆದುಕೊಂಡು ಅವುಗಳನ್ನು ಆಸಕ್ತಿದಾಯಕವೆಂದೂ ಹಾಗೂ ಆನಂದದಾಯಕವೆಂದೂ ಕಂಡುಕೊಂಡರು. ಈ ಕಥೆಗಳನ್ನು ಮಕ್ಕಳ ಭಾಷಾ ಬೆಳವಣಿಗೆಯಲ್ಲಿ ವ್ಯಾಪಕವಾಗಿ ಬಳಸಲಾಯಿತು. ಉದಾಹರಣೆಗೆ, ಹುಣಸೆ ಪೆಪ್ಪರ್ಮೆಂಟ್ ಕಥೆಯಲ್ಲಿ ಮಕ್ಕಳೇ ಪೆಪ್ಪರ್ಮೆಂಟ್ ಅನ್ನು ತಯಾರಿಸಲು ಬಳಸುವ ಪದಾರ್ಥಗಳನ್ನು ಪಟ್ಟಿ ಮಾಡಿದ್ದರು. ಇನ್ನೊಂದು ಉದಾಹರಣೆಯಾಗಿ, ಮಂಗಳೂರಿನ ಶಿಕ್ಷಕಿಯೊಬ್ಬರು ತಮ್ಮ ತಂಪು ಗಾಳಿ ಕಥೆಯಲ್ಲಿ ಹವಾಮಾನ (ತಾಪಮಾನ) ಹಾಗೂ ಅಲ್ಲಿನ ಸಂಸ್ಕೃತಿಯ ಕಲ್ಪನೆಗಳನ್ನು ಪರಿಚಯಿಸಲು ಬೀಸಣಿಗೆಗಳನ್ನು ಬಳಸುವ ಅಭ್ಯಾಸವನ್ನು ಬಳಸಿದರು.

## ಕಥೆ ಹೇಳುವಿಕೆ ಮತ್ತು ಕಲಿಯುವಿಕೆ

ಪ್ರಥಮ್ ಮತ್ತು ನ್ಯಾಷನಲ್ ಬುಕ್ ಟ್ರಸ್ಟ್ (ಎನ್ಬಿಟಿ) ಪ್ರಕಟಿಸಿದ ಪುಸ್ತಕಗಳನ್ನು ನಾವು ಭಾಷೆಯ ಬೆಳವಣಿಗೆಗೆ ಮಾತ್ರವಲ್ಲದೆ ನಮ್ಮ ಗಣಿತ ಮತ್ತು ವಿಜ್ಞಾನಗಳ ಬೋಧನ ವಿಧಾನಗಳನ್ನು ಉತ್ಕೃಷ್ಟಗೊಳಿಸಲು ಬಳಸಿದ್ದೇವೆ.

## ಭಾಷೆಯ ಬೆಳವಣಿಗೆ ಮತ್ತು ಕಾಲ್ಪನಿಕತೆ

ಪ್ರಾಥಮಿಕ ಹಂತದಲ್ಲಿ ನಾವು ಅಕ್ಷರ ಕಲಿಸುವ ಮೊದಲು ಕಥೆಗಳನ್ನು ಓದುವುದರಿಂದ ಮಾತನಾಡುವ ಭಾಷೆಯೇ ಬೇರೆ ಮತ್ತು ಬರೆವಣಿಗೆಯ ಭಾಷೆ ಅಥವಾ ಸಾಹಿತ್ಯಕ ಭಾಷೆಯೇ ಬೇರೆ ಎಂದು ಮಕ್ಕಳ ಅರಿವಿಗೆ ಬರುತ್ತದೆ. ಕಥೆಗಳ ಮುಖಾಂತರ ಮಕ್ಕಳಿಗೆ ಹೊಸ ಪದಗಳನ್ನು ಪರಿಚಯಿಸಿ ಆ ಪದಗಳ ಅಕ್ಷರಗಳು ಮತ್ತು ಶಬ್ದಗಳನ್ನು ಗುರುತಿಸಲು ಕಲಿಸಲಾಗುತ್ತದೆ. ಉದಾಹರಣೆಗೆ: ನ್ಯಾಷನಲ್ ಬುಕ್ ಟ್ರಸ್ಟ್‌ನ ಮಂಗುವಿನ ಬುಗುರಿ ಕಥೆಯಲ್ಲಿ ಮಂಗುವಿಗೆ ರಸ್ತೆಯಲ್ಲಿ ಒಂದು ಹಳೆಯ ಬುಗುರಿ ಸಿಗುತ್ತದೆ. ಅದನ್ನು ಎಣ್ಣೆ ಮತ್ತು ಬಣ್ಣದಿಂದ ಅವನು ಹೊಸ ಬುಗುರಿಯನ್ನಾಗಿ 'ಮಾಡಿಕೊಳ್ಳುತ್ತಾನೆ'. ಆದರೆ ಅದರಲ್ಲಿ ಒಂದು ದೊಡ್ಡ ರಂಧ್ರವನ್ನು ನೋಡಿ ದುಃಖಿತನಾಗುತ್ತಾನೆ. ಅದು ಮೊದಲಿನಂತೆ ತಿರುಗುತ್ತದೆಯೇ ಎಂದು ನೋಡಲು ಅವನು ಅದಕ್ಕೆ ಚಾಟಿ ಸುತ್ತಿ ಆಡಿಸಿದಾಗ ಅವನಿಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಅದು ಶಿಳ್ಳೆ ಹೊಡೆದುಕೊಂಡು ತಿರುಗುತ್ತದೆ. ಅದನ್ನು ಕಂಡು ತನ್ನ ಬಳಿ ಈಗ 'ಶಿಳ್ಳೆ ಹೊಡೆಯುವ ಬುಗುರಿ' ಇದೆ ಎಂದು ಸಂತಸ ಪಡುತ್ತಾನೆ. ಜೊತೆಗೆ, ಈ ಕಥೆಯನ್ನು ಕೇಳಿ ಮಕ್ಕಳು ತಮಗೆ ಸಂಬಂಧಿಸಿದ ಅನೇಕ ಹೊಸ ಪದಗಳನ್ನು ಕಲಿಯಲು ಸಾಧ್ಯವಾಗುತ್ತದೆ.

ಕಥೆಗಳು ಮಕ್ಕಳ ಕಲ್ಪನಾ ಶಕ್ತಿಯನ್ನು ಹೆಚ್ಚಿಸಿ, ಆಲೋಚನಾ ಲಹರಿಯ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ, ಎನ್ ಬಿ ಟಿ ಪ್ರಕಾಶನದ 'ಪ್ರಕೃತಿ ಕೊಡುಗೆ' ಕಥೆಯಲ್ಲಿ ಒಮ್ಮೆ ಆನೆಗೆ ಗೀಜುಗನ ರೀತಿ ಹಾರಲು ಆಸೆಯಾಯಿತು. ಅದು ಗೀಜುಗನ ಗೆಳೆಯನಾದ್ದರಿಂದ ಆನೆಯು ಹಕ್ಕಿಗಳ ಬಳಿ ಈ ವಿಷಯವನ್ನು

ಹೇಳಿತು. ಗೀಜುಗವು ತನ್ನ ಬಳಗದಿಂದ ಒಂದೊಂದು ಗರಿಯನ್ನು ಕೇಳಿ ಪಡೆದು ಆನೆಗೆ ಎರಡು ದೊಡ್ಡ ರೆಕ್ಕೆಗಳನ್ನು ನೇಯ್ದುಕೊಡುತ್ತದೆ. ಈ ಹಂತದಲ್ಲಿ ಕಥೆಯನ್ನು ನಿಲ್ಲಿಸಿ ಆನೆಗೆ ಹಾರಲು ಸಾಧ್ಯವಾಗಿರಬಹುದೇ ಎಂದು ಮಕ್ಕಳನ್ನು ಕೇಳಲಾಯಿತು. ಕೆಲವು ಮಕ್ಕಳು, "ಈಗ ಅದಕ್ಕೆ ಇಷ್ಟೊಂದು ದೊಡ್ಡ ರೆಕ್ಕೆಗಳಿರುವುದರಿಂದ ಸಾಧ್ಯವಾಗಿದೆ" ಎಂದು ಉತ್ತರಿಸಿದರು. ಆದರೆ ಇನ್ನೂ ಕೆಲವರು ಆನೆಯು ಎಷ್ಟೊಂದು ಭಾರ, ಹಾರಲು ಆಗುವುದಿಲ್ಲ ಎಂಬ ಉತ್ತರಗಳನ್ನು ಕೊಟ್ಟಿದ್ದರು. ಇಲ್ಲಿ ಮಕ್ಕಳು ತಮ್ಮ ಉತ್ತರಗಳಿಗೆ ತಾವೇ ಕಾರಣಗಳನ್ನು ಕೊಟ್ಟಿದ್ದರು.

'ಒಂಭತ್ತು ಪುಟ್ಟ ಮರಿಗಳು' ಎಂಬ ಇನ್ನೊಂದು ಕಥೆಯಲ್ಲಿ ಅಮ್ಮ ಕೋಳಿ, ನೀರು ಕುಡಿಯಲು ಹೋಗುವಾಗ ಮೊಟ್ಟೆಗಳನ್ನು ನೋಡಿಕೊಳ್ಳಲು ಅಪ್ಪ ಕೋಳಿಗೆ ಹೇಳಿ ಹೋಗುತ್ತದೆ. ಆದರೆ ಬಿರುಗಾಳಿ ಬಂದು ಕೆಲವು ಮೊಟ್ಟೆಗಳು ಒಡೆಯುತ್ತವೆ. ಆಗ ಅಪ್ಪ ಕೋಳಿಗೆ ಒಂದು ಉಪಾಯ ಹೊಳೆಯುತ್ತದೆ. ಇಲ್ಲಿ ಕಥೆಯನ್ನು ನಿಲ್ಲಿಸಿ, ಮಕ್ಕಳಿಗೆ ಆ ಉಪಾಯ ಏನಿರಬಹುದು ಎಂದು ಕೇಳಿದಾಗ, ಅಪ್ಪ ಕೋಳಿಯು ಮೊಟ್ಟೆಗಳನ್ನು ಅಂಟಿಸಿರಬಹುದು ಎಂದು ಕೆಲವರು ಹೇಳಿದರು. ಇನ್ನೂ ಕೆಲವರು ಕೋಳಿ ಮೊಟ್ಟೆಗಳು ಒಡೆದಿವೆ ಎಂದು ನಿಜ ಒಪ್ಪಿಕೊಂಡಿರಬಹುದು ಎಂದು ಆಲೋಚಿಸಿದರು.

ಎನ್ ಬಿ ಟಿ ಪ್ರಕಾಶನದ 'ಹಾರಲು ಕಲಿತ ಮಂಗಟ್ಟೆ ಮರಿ ಹಕ್ಕಿ' ಕಥೆಯಲ್ಲಿ ನನಗೆ ಆಶ್ಚರ್ಯವುಂಟು ಮಾಡಿದ್ದೇನೆಂದರೆ ಆ ಕಥೆಗೆ ಒಂದು ಮಗುವಿನ ಪ್ರತಿಕ್ರಿಯೆ. ಕಥೆಯಲ್ಲಿ, ಅಪ್ಪ ಅಮ್ಮ ಮಂಗಟ್ಟೆ ಹಕ್ಕಿಗಳು ಗೂಡು ಕಟ್ಟಿ ಅದರೊಳಗೆ ಮೂರು ಮೊಟ್ಟೆಗಳನ್ನು ಇಡುತ್ತವೆ. ಒಂದು ಮರಿ ಹುಟ್ಟಿದ ನಂತರ ಅದು ಹಾರಲು ಹೆದರುತ್ತದೆ. ಆಗ ಮರಿ ಹಕ್ಕಿಗೆ ಹಾರಲು ಕಲಿಯುವಂತೆ ಪ್ರೋತ್ಸಾಹಿಸಲು ಅಪ್ಪ ಅಮ್ಮ ಮಂಗಟ್ಟೆ ಹಕ್ಕಿಗಳು ಇತರ ಎರಡು ಮೊಟ್ಟೆಗಳನ್ನು ಎಸೆಯುತ್ತವೆ. ತಾಯಿ ಹಕ್ಕಿ ಯಾಕೆ ಹೀಗೆ ಮಾಡಿರಬಹುದು ಎಂದು ಊಹಿಸಲು ಮಕ್ಕಳನ್ನು ಕೇಳಿದಾಗ, 6 ವರ್ಷದ ಬಾಲಕನು 'ಹೆಚ್ಚು ಮಕ್ಕಳಿದ್ದರೆ ಆಹಾರ ನೀಡಲು ಕಷ್ಟವಾಗುತ್ತದೆ, ಆದ್ದರಿಂದ ಪಕ್ಷಿಯು ಎರಡು ಮೊಟ್ಟೆಗಳನ್ನು ಎಸೆದಿದೆ!'ಎಂದು ಹೇಳಿದನು. ಮಕ್ಕಳು ಎಷ್ಟು ಭಿನ್ನವಾಗಿ ಆಲೋಚಿಸುತ್ತಾರೆ! ಕಥೆ ಹೇಳುವಿಕೆಯು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ ಮತ್ತು ಅವರು ಸ್ವತಃ ಯೋಚಿಸುವಂತೆ ಮಾಡುತ್ತದೆ.

## ಗಣಿತದ ಕಲಿಕೆ

ಕಥೆಗಳ ಮೂಲಕ ಆರಂಭಿಕ ಗಣಿತವನ್ನು (early mathematics) ಕಲಿಸುವುದು ಮಕ್ಕಳಿಗೆ ಪರಿಕಲ್ಪನೆಗಳನ್ನು ಸುಲಭವಾಗಿ ಗ್ರಹಿಸಲು ಸಹಾಯ ಮಾಡುತ್ತದೆ. ಮೇಲೆ ವಿವರಿಸಿದ ಒಂಭತ್ತು ಪುಟ್ಟ ಮರಿಗಳು ಕಥೆಯಲ್ಲಿ, ಅಪ್ಪ ಕೋಳಿ ಎಂಟು ವಿವಿಧ ಪಕ್ಷಿಗಳ ಮೊಟ್ಟೆಗಳನ್ನು ಸಂಗ್ರಹಿಸಿ ಗೂಡಿನಲ್ಲಿ ಇರಿಸುತ್ತದೆ. ಕೆಲವು ದಿನಗಳ ನಂತರ, ಮೊಟ್ಟೆಯೊಡೆದು ಮರಿಗಳು ಹೊರಬಂದು ಅವು ಆಹಾರವನ್ನು ಹುಡುಕಲು ಹೋಗುತ್ತವೆ. ತಮ್ಮದೇ ಪ್ರಭೇದದ ಪಕ್ಷಿಗಳ ಹಿಂಡನ್ನು ಎದುರುಗೊಂಡಾಗ ಒಂದೊಂದಾಗಿ ಹಾರಿ ಹೋಗತೊಡಗುತ್ತವೆ. ಇಲ್ಲಿನ ಪ್ರಶ್ನೆಗಳೆಂದರೆ: ಪ್ರತಿ ಬಾರಿಯು ಎಷ್ಟು ಪಕ್ಷಿಗಳುಯೂ ಹಾರಿಹೋದವು? ಎಷ್ಟು ಪಕ್ಷಿಗಳು ಉಳಿದಿವೆ? ಇದರಿಂದ ಮಕ್ಕಳು ಸಹಜವಾಗಿ ವ್ಯವಕಲನವನ್ನು ಕಲಿತರು.

## ವಿಜ್ಞಾನದ ಕಲಿಕೆ

'ಮಾಂತ್ರಿಕ ತುಂಡು' ಎಂಬ ಪ್ರಥಮ್ ಪ್ರಕಾಶನದ ಕಥೆಯನ್ನು ಬಳಸಿಕೊಂಡು ಮಕ್ಕಳಿಗೆ ಅಯಸ್ಕಾಂತತೆ'ಯನ್ನು ಪರಿಚಯಿಸಿದೆವು. ಚಿಕ್ಕ ಹುಡುಗಿಯೊಬ್ಬಳು ತನ್ನ ಅಣ್ಣನ ಕೊಠಡಿಯಲ್ಲಿ ಸಿಕ್ಕಿದ ಅಯಸ್ಕಾಂತದ ಮೂಲಕ ಅದು ಯಾವ ವಸ್ತುವಿಗೆ ಅಂಟಿಕೊಳ್ಳುತ್ತದೆ ಮತ್ತು ಯಾವ ವಸ್ತುವಿಗೆ




**ಚಿತ್ರ 3. ಒಂಭತ್ತು ಪುಟ್ಟ ಮರಿಗಳು ಕಥೆಯಿಂದ ಒಂದು ಸಚಿತ್ರ ವಿವರಣೆ**

ಅಂಟಿಕೊಳ್ಳುವುದಿಲ್ಲ ಎಂದು ಸ್ವತಃ ತಾನೇ ಪರಿಚಯ ಮಾಡಿಕೊಳ್ಳುತ್ತಾಳೆ. ಈ ಕಥೆಯನ್ನು ಮಕ್ಕಳಿಗೆ ಓದಿದ ನಂತರ, ಅವರಿಗೆ ಒಂದು ಅಯಸ್ಕಾಂತವನ್ನು ಕೊಟ್ಟು ಅದು ಯಾವ ವಸ್ತುಗಳಿಗೆ ಅಂಟಿಕೊಳ್ಳುತ್ತದೆ ಎಂದು ಪಟ್ಟಿ ಮಾಡುವಂತೆ ಹೇಳಲಾಯಿತು. ಚಟುವಟಿಕೆ ಮಾಡುವಾಗಲೂ ಮಕ್ಕಳು ಆಸಕ್ತಿ ಮತ್ತು ಕುತೂಹಲದಿಂದ ಇದ್ದರು. ಅದೇ ರೀತಿ ಪಕ್ಷಿಗಳ ಕಥೆಯನ್ನು ಹೇಳುವಾಗಲೂ ಅವರು, ಮೊಟ್ಟೆಗಳಿಂದ ಮರಿಗಳು ಎಷ್ಟು ದಿನಗಳಿಗೆ ಹೊರಬರುತ್ತವೆ ಎಂಬುದನ್ನು, ಅವುಗಳ ಆಹಾರ, ಜೀವನ ಶೈಲಿಯನ್ನು ತಿಳಿಯಲು ಸಾಧ್ಯವಾಯಿತು. ಇನ್ನೊಂದು ಕಥೆಯಾದ, 'ಮುನಿಯ ಪಡೆದ ನಿಧಿ'ಯಲ್ಲಿ ಒಂದು ಗಿಡದ ಬೆಳವಣಿಗೆಯ ಹಂತಗಳನ್ನು ಅವರಿಗೆ ಪರಿಚಯಿಸಲಾಯಿತು.

## ಸಮಾಜ ವಿಜ್ಞಾನದ ಕಲಿಕೆ

ಆರಂಭಿಕ ಕಲಿಕೆಯು ಕುಟುಂಬ, ವಿವಿಧ ವೃತ್ತಿಗಳು ಮತ್ತು ವಿವಿಧ ಪ್ರದೇಶಗಳ ಪರಿಚಯ, ಸಚಿತ್ರ ವ್ಯಕ್ತಿಚಿತ್ರಗಳು ಮತ್ತು ಘಟನೆಗಳನ್ನು ಒಳಗೊಂಡಿರುತ್ತದೆ. ಕ್ಷೌರ ದಿನಾಚರಣೆ (ಕ್ಷೌರಿಕನ ದೈನಂದಿನ ಜೀವನದಲ್ಲಿ ಒಂದು ದಿನ) ಕಥೆಯಲ್ಲಿ ಬರುವ ಶೃಂಗೇರಿ ಶ್ರೀನಿವಾಸ ಎಂಬ ಪಾತ್ರವು ಒಂದು ದಿನ ದರ್ಜಿ(ಟೈಲರ್), ಬಡಗಿ ಮತ್ತು ತನ್ನ ಕೂದಲನ್ನು ಕತ್ತರಿಸಲು ಕ್ಷೌರಿಕರಂತಹ ಬೇರೆಬೇರೆ ವೃತ್ತಿಯ ವ್ಯಕ್ತಿಗಳ ಬಳಿಗೆ ಹೋಗುತ್ತಾನೆ. ಕಥೆಯಲ್ಲಿ ಬರುವ ಈ ಪಾತ್ರಗಳನ್ನು ಸಚಿತ್ರ ಸಂಭಾಷಣೆಯ ಮೂಲಕ ಮಕ್ಕಳು ಸುಲಭವಾಗಿ ಗುರುತಿಸಲು ಸಾಧ್ಯವಾಯಿತು. ಕಥೆಯಲ್ಲಿ ಕುಟುಂಬದ ಸದಸ್ಯರನ್ನು ಸೇರಿಸುವುದರಿಂದ ವಿವಿಧ ಸಂಬಂಧಗಳನ್ನು ಪರಿಚಯಿಸಲು ಸುಲಭವಾಯಿತು. ಸಸಾಕಿ ಮತ್ತು ಸಾವಿರ ಕೊಕ್ಕರೆಗಳು ಎಂಬ ಮತ್ತೊಂದು ಕಥೆಯಲ್ಲಿ ಹಿರೋಷಿಮಾದ ಮೇಲೆ ಅಣುಬಾಂಬ್ ಹಾಕಿದಾಗ ಸಡೊಕೋ ಸಸಾಕಿ ಎರಡು ವರ್ಷದ ಚಿಕ್ಕ ಹುಡುಗಿ. ಪರಿಣಾಮವಾಗಿ, ಹತ್ತನೇ ವಯಸ್ಸಿನಲ್ಲಿ ಆಕೆಗೆ ಕ್ಯಾನ್ಸರ್ ಇರುವುದು ಪತ್ತೆಯಾಗುತ್ತದೆ. ಸಾವಿರ ಕೊಕ್ಕರೆ ಮಾಡಿದರೆ ಜಪಾನಿಯರು ಬದುಕುಳಿಯುತ್ತಾರೆ ಎಂಬ ನಂಬಿಕೆಯಿಂದ ಸಸಾಕಿ ಸಾವಿರ ಪೇಪರ್ ಕೊಕ್ಕರೆಗಳನ್ನು ಸಿದ್ಧಪಡಿಸಲು ಪ್ರಾರಂಭಿಸುತ್ತಾಳೆ. ಆದರೆ ಈ ಕೆಲಸವನ್ನು ಸಾಧಿಸುವ ಮೊದಲೇ ಅವಳು ಸಾಯುತ್ತಾಳೆ. ನಂತರ ಅವಳ ಗೆಳತಿಯರು ಅದನ್ನು ಪೂರ್ಣಗೊಳಿಸುತ್ತಾರೆ. ಈ ಕಥೆಯನ್ನು ಕೇಳಿ ಬಾಂಬ್ ಸ್ಫೋಟದ ಹಿನ್ನೆಲೆ ಮತ್ತು ಅದರ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಸುಲಭವಾಯಿತು.

## ಜಾಗೃತಿಯನ್ನು ಹೆಚ್ಚಿಸುವುದು

ಕಥೆ ಹೇಳುವ ಸಮಯದಲ್ಲಿ ಕೇಳಲಾಗುವ ಪ್ರಶ್ನೆಗಳು ಮಕ್ಕಳಲ್ಲಿ ಅರಿವು ಮತ್ತು ಸಹಾನುಭೂತಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಕಥೆಯಲ್ಲಿ ಬರುವ ಪಾತ್ರವು ನೀವಾಗಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳಿದಾಗ, ಮಕ್ಕಳ ಆಲೋಚನೆ ವಿಸ್ತಾರಗೊಂಡು ಸಮಸ್ಯೆಗಳನ್ನು ಪರಿಹರಿಸುವ ಕೌಶಲಗಳು ವೃದ್ಧಿಗೊಳ್ಳುತ್ತವೆ. ಉದಾಹರಣೆಗೆ, ಕಥೆಯು ಕನಸುಗಳ ಬಗ್ಗೆ ಆಗಿದ್ದಲ್ಲಿ: ನಿನಗೆ ಯಾವ ಕನಸು ಬೀಳುತ್ತದೆ? ಕಥೆಯು ಭಯದ ಬಗ್ಗೆ ಆಗಿದ್ದಲ್ಲಿ: ನಿನಗೆ ಯಾವಾಗ ಭಯವಾಗುತ್ತದೆ? ಭಯ ಆದಾಗ ನೀನು ಏನು ಮಾಡುತ್ತೀಯ? ಎಂಬ ಪ್ರಶ್ನೆಗಳನ್ನು ಕೇಳಿ ಅವುಗಳ ಬಗ್ಗೆ ಮಕ್ಕಳ ಪ್ರತಿಕ್ರಿಯೆಗಳನ್ನು ಪ್ರಶ್ನಿಸಿದಾಗ ಅವರ ಭಾವನೆಗಳನ್ನು ವ್ಯಕ್ತಪಡಿಸಲು ಅವರಿಗೆ ಒಂದು ಅವಕಾಶ ಕೊಟ್ಟಂತೆ ಆಗುತ್ತದೆ ಮತ್ತು ಶಾಲೆಯಲ್ಲಿ ಕಲಿಯುವ ಅಂಶಗಳನ್ನು ತಮ್ಮ ಸ್ವಂತ ಜೀವನಕ್ಕೆ ಸಹ ಸಂಬಂಧ ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.

## ಮೌಲ್ಯಗಳನ್ನು ತಿಳಿಯುವುದು

ಈ ಹಿಂದೆ ಹೇಳಿದ ಪ್ರಕೃತಿಯ ಕೊಡುಗೆ ಕಥೆಯಲ್ಲಿ ಗೀಜುಗ ಮತ್ತು ಆನೆ ಗೆಳೆಯರಾಗಿರುತ್ತಾರೆ. ಆನೆಗೆ ಹಾರಲು ಆಸೆಯಾದಾಗ, ಗೀಜುಗ ಅದಕ್ಕೆ ರೆಕ್ಕೆಗಳನ್ನು ನೇಯ್ದು ಹಾರಲು ಕಲಿಸುತ್ತದೆ. ಆದರೆ ಆನೆಯು ನೆಲಕ್ಕೆ ಬಿದ್ದು ಪಕ್ಷಿಗೆ ದುಃಖವನ್ನು ಉಂಟುಮಾಡಿ ತಪ್ಪಿತಸ್ಥ ಭಾವನೆ ಮೂಡಿಸುತ್ತದೆ. ಆದಾಗ್ಯೂ, ಕೊನೆಯಲ್ಲಿ, ಗೀಜುಗ ಮತ್ತು ಆನೆ ಎರಡೂ ತಾವು ವಿಭಿನ್ನ ದೈಹಿಕ ಗುಣಲಕ್ಷಣಗಳನ್ನು ಹೊಂದಿದ್ದೇವೆ ಎಂಬುದನ್ನು ಅರಿತುಕೊಳ್ಳುತ್ತವೆ. ಕೊನೆಗೆ ಮಕ್ಕಳಿಗೆ ಕಥೆಯ ಬಗ್ಗೆ ಅನ್ನಿಸಿಕೆ ಕೇಳಿದಾಗ, ಕೆಲವರು ಪಕ್ಷಿಯು ತನ್ನ ಗೆಳೆಯನಿಗೆ ಸಹಾಯ ಮಾಡಿದ್ದು ಒಳ್ಳೆಯದು ಎಂದು ಹೇಳಿದರು. ಇತರರು, ಆನೆ ಗಾಯಗೊಂಡಿದ್ದಕ್ಕೆ ತಾನು ಕಾರಣ ಎಂದು ಪಕ್ಷಿ ಕ್ಷಮೆಯಾಚಿಸಿದ್ದು ನ್ಯಾಯ ಎನ್ನಿಸಲಿಲ್ಲ ಎಂದರು. ಒಂದು ಗುಂಪಿಗೆ ಪಕ್ಷಿ ಮತ್ತು ಆನೆಯ ನಡುವಿನ ಕೊನೆಯ ಸಂಭಾಷಣೆ ಇಷ್ಟವಾಯಿತು. ಹೀಗೆ ಒಂದು ಕಥೆಯಲ್ಲಿ ಮಕ್ಕಳೇ ಹಲವು ವಿಭಿನ್ನ ಅಂಶಗಳ ಬಗ್ಗೆ ಯೋಚಿಸುವಾಗ ನಾವು ಕಥೆಯಿಂದ ಕೇವಲ ಒಂದು ನೀತಿಯನ್ನು ಹೇಳುವ ಅಗತ್ಯವಿಲ್ಲ.

## ಕೆಲವು ಉಪಯುಕ್ತ ಸಲಹೆಗಳು


- ಮಕ್ಕಳಿಗೆ ಕಥೆಯನ್ನು ಹೇಳುವಾಗ, ಕುತೂಹಲಭರಿತ ಹಂತದಲ್ಲಿ ಕಥೆಯನ್ನು ನಿಲ್ಲಿಸಿ ಕೆಲವು ಪ್ರಶ್ನೆಗಳನ್ನು ಕೇಳಿ. ಮೌಖಿಕವಾಗಿ ಅಥವಾ ಬರೆವಣಿಗೆ ರೂಪದಲ್ಲಿ ಕಥೆಯನ್ನು ಪೂರ್ಣಗೊಳಿಸುವಂತೆ ಮಕ್ಕಳಿಗೆ ಹೇಳಿ. ಉದಾಹರಣೆಗೆ, 'ನರಿಯು ಬಾವಿಗೆ ಬೀಳುತ್ತದೆ' ಎಂಬ ಸಾಲನ್ನು ಓದಿದಾಗ, 'ಬಾವಿಗೆ ಬಿದ್ದ ನರಿಯು ಹೇಗೆ ಹೊರಬಂದಿರಬಹುದು ಎಂದು ನೀವು ಭಾವಿಸುತ್ತೀರಿ?' ಎಂಬ ಪ್ರಶ್ನೆಗೆ, ಮಕ್ಕಳು ಈ ಕೆಳಗಿನ ರೀತಿಯಲ್ಲಿ ಕಥೆಯನ್ನು ಪೂರ್ಣಗೊಳಿಸಿದರು: 'ಬಾವಿಯಲ್ಲಿ ಮೆಟ್ಟಿಲುಗಳಿದ್ದವು ಮತ್ತು ನರಿಯು ಅವುಗಳನ್ನು ಏರಿ ಮೇಲೆ ಬಂದಿತು,' "ನರಿ ಗಿಡಬಳ್ಳಿಗಳ ಸಹಾಯದಿಂದ ಮೇಲಕ್ಕೆ ಬಂದಿತು" ಮತ್ತು "ನರಿ ಇತರರ ಸಹಾಯ ಕೇಳಿ ಮೇಲಕ್ಕೆ ಬಂದಿತು".

- ಸರಳ ಇಂಗ್ಲಿಷ್ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿ ಸಚಿತ್ರಗೊಳಿಸಬಹುದು. ಇದನ್ನು ಯಾವ ಭಾಷೆಯಲ್ಲಿ ಬೇಕಾದರೂ ಮಾಡಬಹುದು.

- ಚಿತ್ರ ಸರಣಿಗಳನ್ನು ಮಕ್ಕಳಿಗೆ ಕೊಟ್ಟಾಗ, ಅವರು ವಿವಿಧ ಕಥೆಗಳನ್ನು ಬರೆದರು. ಆ ಕಥೆಗಳನ್ನು ಇತರ ಮಕ್ಕಳು ಓದಲು ಅನುವಾಗುವಂತೆ ಶಾಲೆಯ ಗ್ರಂಥಾಲಯದಲ್ಲಿ ಇರಿಸಬಹುದು.

ಇದರ ಜೊತೆಗೆ, ಮಕ್ಕಳ ಭಾಷಾ ಕಲಿಕೆಯಲ್ಲಿ ಕಥೆಗಳು ವಹಿಸುವ ಪ್ರಮುಖ ಪಾತ್ರವನ್ನು ಹೊರತುಪಡಿಸಿ, ಅದರಲ್ಲಿನ ಪಾತ್ರಗಳು ಮತ್ತು ವಿಷಯಗಳು ಮಕ್ಕಳನ್ನು ಶಾಲಾ ಜೀವನದ ಒಂದು ಪ್ರಮುಖ ಅಂಶವಾದ ಸಾಮಾಜೀಕರಣ ಪ್ರಕ್ರಿಯೆಗೆ ಸಹಾಯ ಮಾಡುತ್ತವೆ.





ಚಿತ್ರ 4.5. ಕಥೆಯನ್ನು ಮಕ್ಕಳಿಂದ ಅನುವಾದಿಸಲಾಗಿದೆ ಮತ್ತು ವಿವರಿಸಲಾಗಿದೆ



**ಪದ್ಮಾ ಬಿ.ಎಂ.** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ ಜೊತೆಗೆ ಬೆಂಗಳೂರಿನ ಸರ್ಕಾರಿ ಶಾಲೆಗಳೊಂದಿಗೆ ಕೆಲಸ ಮಾಡುತ್ತಿದ್ದಾರೆ. ಅವರು ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, 15 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣವು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಆಧಾರವಾಗಿದೆ ಎಂದು ಅವರು ನಂಬುತ್ತಾರೆ. ಅವರನ್ನು padmavatamma.munivenkatappa@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ನಿವೇದಿತಾ ಬಿ. ರುದ್ರೇಶ್** | ಪರಿಶೀಲನೆ: **ಲತಾ ಕೆ.ಸಿ.**

# ಕಥೆಗಳು ಸಂಬಂಧಗಳನ್ನು ಸೃಷ್ಟಿಸುತ್ತವೆ | ನನ್ನ ಅನುಭವಗಳು

ರಜನಿ ದ್ವಿವೇದಿ

ಪ್ರಸ್ತುತ ಲೇಖನವು ಚಿಕ್ಕ ಮಕ್ಕಳಿಗೆ ಕಥೆ ಹೇಳುವುದನ್ನು ಕುರಿತಾದ ಎರಡು ವಿಭಿನ್ನ ಅನುಭವಗಳನ್ನು ಸಾದರಪಡಿಸುತ್ತದೆ. ಒಂದು ತರಗತಿಯ ಹಿನ್ನೆಲೆಯುಳ್ಳದ್ದಾದರೆ, ಮತ್ತೊಂದು ಮಗುವಿನೊಂದಿಗಿನ ಅನೌಪಚಾರಿಕ ಒಡನಾಟಗಳಿಗೆ ಸಂಬಂಧಿಸಿದ್ದು. ಮಕ್ಕಳು ಮತ್ತು ನಾನು, ಇಬ್ಬರೂ, ಈ ಕಥೆಗಳನ್ನು ಕೇಳಲು ತವಕಿಸುತ್ತಿದ್ದೆವು. ವಯಸ್ಕರು, ಅದು ಪೋಷಕರಾಗಿರಬಹುದು ಅಥವಾ ಶಿಕ್ಷಕರಾಗಿರಬಹುದು, ಒಡನಾಟ ಆರಂಭವಾಗುವ ಮುನ್ನವೇ ಒಡನಾಟದ ಉದ್ದೇಶಗಳನ್ನು ನಿಗದಿಪಡಿಸಲು ಪದೇಪದೇ ಪ್ರಯತ್ನಿಸುತ್ತಾರೆ. ಈ ಉದ್ದೇಶಗಳು ಸಾಮಾನ್ಯವಾಗಿ ಪೂರ್ವ ನಿರ್ಧರಿತ ಕಲಿಕೆಯ ಫಲಗಳೊಂದಿಗೆ ಹೊಂದಿಕೊಂಡಿರುತ್ತವೆ. ಕಥೆಯೊಂದನ್ನು ಓದಿದ ಬಳಿಕ ಮಕ್ಕಳು ಕ್ಲಿಷ್ಟ ಪದಗಳ ಅರ್ಥಗಳನ್ನು ಅರಿಯಲು ಸಮರ್ಥರಾಗುತ್ತಾರೆ, ಅವರು ಕಥೆಯನ್ನು ಮರು ನಿರೂಪಿಸಲು ಅಥವಾ ಕಥೆಯ ಬಗ್ಗೆ, ಕನಿಷ್ಠ ಕೆಲವು ವಾಕ್ಯಗಳನ್ನಾದರೂ ಹೇಳುತ್ತಾರೆ ಎಂಬಂತಹ ನಿರೀಕ್ಷೆಗಳು ಇದಕ್ಕೆ ಒಂದು ನಿದರ್ಶನ. ನಾನು ಇಲ್ಲಿ ವಿವರಿಸಲಿರುವ ಒಡನಾಟಗಳಲ್ಲಿ ಅಂತಹ ಉದ್ದೇಶಗಳನ್ನು ಪರಿಗಣಿಸಲಾಗಿಲ್ಲ. ನಾನು ಮಕ್ಕಳಿಗೆ ಕಥೆಗಳನ್ನು ಸುಮ್ಮನೆ ಓದಿ ಹೇಳಿದೆ. ಪ್ರಶ್ನೆಗಳು ತಲೆದೋರಿದಾಗ ನಾವು ಚರ್ಚಿಸಿದೆವು; ವಿನೋದ ಕಂಡುಬಂದಾಗ, ನಗಲು ಕಾರಣವಿದ್ದಾಗ ನಾವು ಒಟ್ಟುಗೂಡಿ ನಗುತ್ತಿದ್ದೆವು. ನಾವು ಸಂದರ್ಭೋಚಿತವಾಗಿ ನಮ್ಮ ಆಶ್ಚರ್ಯ, ಪ್ರತಿಕ್ರಿಯೆಗಳನ್ನು ಹಂಚಿಕೊಂಡಿದ್ದಲ್ಲದೆ, ಕೆಲವೊಮ್ಮೆ ನಮ್ಮಲ್ಲಿ ಮೂಡಿದ ಬೆರಗಿನ ಭಾವನೆಯನ್ನೂ ಹಂಚಿಕೊಂಡೆವು. "ಇದು ಹೇಗೆ ತಾನೆ ಸಾಧ್ಯ?", "ಇದು ನಡೆದದ್ದಾದರೂ ಹೇಗೆ?" ಅಥವಾ ಇನ್ನೂ ವಿಶೇಷವಾಗಿ ಹೇಳುವುದಾದರೆ, "ಅವರೇಕೆ (ಪಾತ್ರಗಳು) ಅದರಂತೆ ನಡೆದುಕೊಂಡರು?" ಎಂದು ಕೇಳಿಕೊಳ್ಳುತ್ತಾ, ಆ ಪಾತ್ರವು ಮಾಡಿದ್ದು ಸರಿಯಿತ್ತೋ, ಇಲ್ಲವೋ ಎಂಬಂತಹ ಇನ್ನೂ ಹಲವು ಸಂಗತಿಗಳ ವಿಷಯವಾಗಿ ಚಿಂತನೆ ನಡೆಸಿದೆವು. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಥೆ ಹೇಳುವುದು ಮುಂದುವರಿದಂತೆ, ಮಕ್ಕಳು ತಮ್ಮ ವಿಚಾರಗಳು ಹಾಗೂ ಭಾವನೆಗಳ ಕುರಿತ ಸಂಭಾಷಣೆಯನ್ನು ಆರಂಭಿಸುತ್ತಾರೆ.

## ತರಗತಿಯಲ್ಲಿ ಕಥೆ ಹೇಳುವಿಕೆ

ಅದೊಂದು ವಿಶಾಲವಾದ ಕೊಠಡಿಯಾಗಿದ್ದು, 25 ಮಂದಿ ವಿದ್ಯಾರ್ಥಿಗಳಿದ್ದರು. ಆ ವಿಶಾಲವಾದ ಕೋಣೆಗೆ ನಾಲ್ಕು ವಿಸ್ತಾರವಾದ ಕಿಟಕಿಗಳಿದ್ದು, ಮಕ್ಕಳು ಅವುಗಳ ಗೂಡುಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಶಾಲೆಯು ರಜೆಯ ಬಳಿಕ ಹದಿನೈದು ದಿನಗಳ ಹಿಂದೆಯಷ್ಟೇ ತೆರೆದಿದ್ದು, ಅದು ಶಾಲೆಯಲ್ಲಿನ ನನ್ನ ಮೊದಲ ದಿನವಾಗಿತ್ತು. ಈ ಚಿಕ್ಕ ಮಕ್ಕಳ ನಡುವೆ ಕೆಲಸ ಆರಂಭಿಸುವ ಮೊದಲು ಶಾಲೆಗೆ ಭೇಟಿ ನೀಡಿ, ಶಿಕ್ಷಕರು ಪಠ್ಯಪುಸ್ತಕಗಳಿಂದ ಪಾಠ ಹೇಳುವುದನ್ನು ಗಮನಿಸಿದ್ದ ನಾನು, ಅವರಿಗೆ ಹೇಗೆ ಮತ್ತು ಏನನ್ನು ಬೋಧಿಸುವುದರಿಂದ ಶುರು ಮಾಡಬಹುದು ಎಂಬ ಯೋಚನೆಯಲ್ಲಿ ತಲ್ಲೀನಳಾಗಿದ್ದೆ. ಆಗ ಕಥೆ ಹೇಳುವುದು ಆ ಮಕ್ಕಳೊಡನೆ ಸಂಬಂಧವೊಂದನ್ನು ಬೆಸೆಯಲು ಇರುವ ಉತ್ತಮ ವಿಚಾರ ಎಂದು ನನಗೆ ಹೊಳೆಯಿತು. ಹೀಗಾಗಿ, ಬೇರೆ ವಿಷಯಗಳತ್ತ ಸಾಗುವ ಮುನ್ನ, ಅವರಿಗೆ ಕೆಲವು ದಿನಗಳವರೆಗೆ ಕಥೆ ಹೇಳುವುದೆಂದು ನಾನು ನಿರ್ಧರಿಸಿದೆ..

ಒಂದನೇ ತರಗತಿಯ ಮಕ್ಕಳಿಗೆ ಪ್ರತಿದಿನ ಶಾಲೆಯ ಮೊದಲ ಅವಧಿಯಲ್ಲಿ ನಾನು ಅವರೊಡನೆ ನನಗೆ ಗೊತ್ತಿರುವ ಕಥೆಯೊಂದನ್ನು ಹಂಚಿಕೊಳ್ಳುವುದಾಗಿ ತಿಳಿಸಿದೆ. ನನ್ನೊಡನೆ ತಂದಿದ್ದ (ಹಲವು ಪ್ರತಿಗಳಿದ್ದ) ಎರಡು-ಮೂರು ವಿಭಿನ್ನ ಕಥೆ ಪುಸ್ತಕಗಳನ್ನು ಅವರಿಗೆ ತೋರಿಸಿದೆ. ಬಳಿಕ ನಾನು ಮಕ್ಕಳನ್ನು ಹತ್ತಿರ ಬಂದು ಕೂರಲು ಹೇಳಿದೆ. ಅವರಲ್ಲಿ ಕೆಲವರು ಒಪ್ಪಿದರೆ, ಇನ್ನು ಕೆಲವರು ಒಪ್ಪಲಿಲ್ಲ. ಕೆಲವು ಮಕ್ಕಳು ಕಿಟಕಿ ಸಂದಿಗಳಲ್ಲಿ ಕೂರುವುದನ್ನು ಮುಂದುವರಿಸಿದರು. ಪುಟ್ಟ ಹುಡುಗಿಯೊಂದು ಕಿಟಕಿ ಗೂಡಿನಲ್ಲಿ ಕುಳಿತು ನಾನು ಕಥೆ ಹೇಳುತ್ತಿದ್ದಷ್ಟು ಹೊತ್ತೂ ಕಿಟಕಿಯಿಂದ ಹೊರಗೆ ಏನನ್ನೋ ದಿಟ್ಟಿಸುತ್ತಿತ್ತು. ಕೆಲವು ಮಕ್ಕಳು ಪೆನ್ಸಿಲ್‌ಗಳೊಂದಿಗೆ ಆಡುವುದರಲ್ಲಿ ಮಗ್ನವಾಗಿದ್ದರೆ, ಕೆಲವರು, ದೇವರ ದಯೆಯಿಂದ, ನನ್ನ ಕಡೆ ನೋಡುತ್ತಿದ್ದರು. ಇದಾದ ಬಳಿಕ ನಾನು "ಕ್ಯಾ ತುಮ್ ಮೇರಿ ಅಮ್ಮಾ ಹೋ? (ನೀನು ನನ್ನ ಅಮ್ಮನಾ?) ಎಂಬ ಕಥೆಯನ್ನು ಅವರಿಗೆ ಓದಿದೆ. ಈ ಕಥೆ ಓದಿ ಮುಗಿಸಿದ ಮೇಲೆ, ಆ ಅವಧಿ ಮುಗಿಯುವಷ್ಟರಲ್ಲಿ, ಅವರಿಗೆ ಮತ್ತೊಂದು ಕಥೆ ಹೇಳಿದೆ.

ಮರುದಿನ, ಮಕ್ಕಳು ಹಿಂದಿನ ದಿನದ ಕಥೆಯನ್ನು ತಾವಾಗಿಯೇ ಮತ್ತೊಮ್ಮೆ ಹೇಳುವಂತೆ ಕೇಳಿಕೊಂಡರು. ಮಕ್ಕಳು ತರಗತಿಯಲ್ಲಿ ಕುಳಿತಿದ್ದ ವಿಧಾನ ಇಂದೂ ಕೂಡ ಹಿಂದಿನ ದಿನದಂತೆಯೇ ಮುಂದುವರಿದಿತ್ತು. ನಾನು ಅವರಿಗೆ, "ಕ್ಯಾ ತುಮ್ ಮೇರಿ ಅಮ್ಮಾ ಹೋ" ಕಥೆಯನ್ನು ಮತ್ತೊಮ್ಮೆ ಹೇಳಲಾರಂಭಿಸಿದೆ. ಆದರೆ ಈ ಬಾರಿ, ನಾನು ಕಥೆಯನ್ನು ಓದದೇ ನೆನಪಿನಲ್ಲಿದ್ದಷ್ಟು ಕಥೆಯನ್ನು ಅವರಿಗೆ ಹೇಳಲಾರಂಭಿಸಿದೆ. ಈ ಕಾರಣದಿಂದಾಗಿ, ಕಥೆಯಲ್ಲಿದ್ದ ಮರಿ ಹಕ್ಕಿಯು ಇತರ ಪ್ರಾಣಿಗಳನ್ನು ಭೇಟಿಯಾಗುವ ಕ್ರಮದಲ್ಲಿ ಏರುಪೇರಾಯಿತು. ಒಡನೆಯೇ, ಕಿಟಕಿ ಗೂಡಿನಲ್ಲಿ ಕುಳಿತಿದ್ದ ಆ ಪುಟ್ಟ ಹುಡುಗಿ, "ಇಲ್ಲ, ಮರಿ ಹಕ್ಕಿ ಮೊದಲು ಭೇಟಿಯಾಗಿದ್ದು ನಾಯಿಯನ್ನಲ್ಲ" ಎಂದಿತು. ಎರಡನೇ ಮಗು, "ಅದು ಬೆಕ್ಕನ್ನು

ಮೊದಲು ಭೇಟಿಯಾದದ್ದು, ಬಳಿಕ ಕೋಳಿಯನ್ನು. ಕೊನೆಗೆ ನಾಯಿಯನ್ನು ಭೇಟಿಯಾಯಿತು" ಎಂದು ಸೇರಿಸಿತು. ಮತ್ತೊಂದು ಮಗು, ಬೆಕ್ಕು ಮತ್ತು ನಾಯಿಗಳೆರಡೂ ಆ ಮರಿ ಹಕ್ಕಿಯನ್ನು ತಿನ್ನಲಿಲ್ಲ; ಆದ್ದರಿಂದ, ಅವೆರಡೂ ಒಳ್ಳೆಯವು ಎಂದು ವ್ಯಾಖ್ಯಾನ ಮಾಡಿತು. ಈ ರೀತಿಯ ಹಲವು ಪ್ರತಿಕ್ರಿಯೆಗಳು ಮಕ್ಕಳ ಕಡೆಯಿಂದ ಬಂದವು. ಮಕ್ಕಳು ಕಥೆಗೆ ಗಮನವಿತ್ತಿರಲಿಲ್ಲ ಎಂಬ ನನ್ನ ಭಾವನೆ ಹುಸಿಯಾದದ್ದು ಎಂದು ನನಗೆ ಅರಿವಾಯಿತು. ಅವರೆಲ್ಲರೂ ಕಥೆಯನ್ನು ಆಲಿಸುತ್ತಿದ್ದರು. ನಿಜಾಂಶವೇನೆಂದರೆ, ಅವರು ಅದೆಷ್ಟು ಎಚ್ಚರಿಕೆಯಿಂದ ಕಥೆಗೆ ಗಮನವಿತ್ತಿದ್ದರು ಎಂದರೆ, ಕಥೆಯ ಕಾಲಾನುಕ್ರಮದ ವಿಷಯವಾಗಿ ಅವರಲ್ಲಿ ಗೊಂದಲಕ್ಕೆ ಎಡೆಯೇ ಇರಲಿಲ್ಲ. ಮಕ್ಕಳು ಕಥೆಯನ್ನು ಕೇಳಿಸಿಕೊಂಡು ಅದರಲ್ಲಿನ ಪ್ರತಿ ಪಾತ್ರವನ್ನು ಹಾಗೂ ಆ ಪಾತ್ರ ಎಲ್ಲಿ ಬರುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದರು ಎಂಬುದು ಸ್ಪಷ್ಟವಾಗಿತ್ತು.

ಸುಮಾರು ಹತ್ತು ದಿನಗಳವರೆಗೆ ನಾನು ಅವರಿಗೆ ಕಥೆಗಳನ್ನು ಹೇಳಿದೆ ಹಾಗು ಪದ್ಯಗಳನ್ನು ಹೇಳಿದೆ. ದಿನಗಳೆದಂತೆ ಅವರು ಹೆಚ್ಚು ಸಲೀಸಾಗಿ, ಮುಚ್ಚುಮರೆಯಿಲ್ಲದೆ ಮಾತನಾಡಲು ಪ್ರಾರಂಭಿಸಿದರಲ್ಲದೆ, ಇನ್ನೂ ಹೆಚ್ಚು ಕಥೆಗಳನ್ನು ಕೇಳಲು ಬಯಸಿದರು. ಆದರೆ, ಪಾಠಗಳನ್ನು "ಮುಗಿಸ"ಬೇಕಿದ್ದರಿಂದ ನಾನು ಈ ಪ್ರಕ್ರಿಯೆಗೆ ಕಡಿವಾಣ ಹಾಕಬೇಕಾಯಿತು.

ನನ್ನನ್ನು ಸದಾ ಕಾಡುವ, ನನ್ನ ಮನಸ್ಸಿನಲ್ಲಿ ಪದೇಪದೇ ಸುಳಿಯುವ ವಿಚಾರವೆಂದರೆ: "ಪಾಠ ಮುಗಿಸುವುದು ಎಂದರೇನು?" ಈ ಕಥೆ ಹೇಳುವ ಪ್ರಕ್ರಿಯೆ ಪಠ್ಯಕ್ರಮಕ್ಕೆ ಸಂಬಂಧಿಸಿದ್ದಲ್ಲವೆ? ಅದು ಸಹ ಪಠ್ಯಕ್ರಮದ ಅಂಗವಾಗಿರ–ಬೇಕಲ್ಲವೆ? ಆ ಕಥಾಕಾಲಕ್ಷೇಪದ ಎಂಟು–ಹತ್ತು ದಿನಗಳಲ್ಲಿ ಆ ಮಕ್ಕಳು ಮತ್ತು ನಾನು ಒಟ್ಟಾಗಿ ಸಾಧಿಸಿದ್ದೇನೆಂದು ನನ್ನನ್ನು ನೀವೇನಾದರೂ ಕೇಳಿದರೆ, ನಮ್ಮ ಸಾಧನೆ ಪ್ರಚಂಡವಾದದ್ದು ಎಂದು ಹೇಳಿಯೇನು. ತರಗತಿಯ ಹೊರಗೂ ಸಹ ಮಕ್ಕಳು ಪದ್ಯದ ಸಾಲುಗಳನ್ನು ಗುನುಗುತ್ತಾ, ಕಥೆಗಳ ಬಗ್ಗೆ ಮಾತನಾಡುತ್ತಿದ್ದರು. ಅವರ ಈ ಸಂಭಾಷಣೆಗಳಲ್ಲಿ ಅವರ ಪ್ರಶ್ನೆಗಳು, ಆ ಪ್ರಶ್ನೆಗಳ ಕುರಿತು ಅವರ ಗ್ರಹಿಕೆ, ಅವರ ವಿಶ್ಲೇಷಣೆ ಹಾಗೂ ಒಂದು ಕಥೆ ಮತ್ತು ಮತ್ತೊಂದರ ನಡುವಿನ ಸಂಬಂಧದ ವಿಷಯವಾಗಿ ಅವರ ಗ್ರಹಿಕೆಗಳು ಒಡೆದು ತೋರುತ್ತಿದ್ದವು. ಅವರು ಎಲ್ಲಾ ರೀತಿಯ ಪ್ರಶ್ನೆಗಳನ್ನು ಕೇಳುತ್ತಿದ್ದರು: ಮೊಟ್ಟೆಯೊಡೆದು ಹೊರಬಂದ ಒಡನೆಯೇ ಮರಿ ಹಕ್ಕಿ ನಡೆಯಲು ಸಾಧ್ಯವೇ? ಮೊಟ್ಟೆಯ ಗಾತ್ರ ಎಷ್ಟಿರುತ್ತದೆ? ನಮ್ಮ ತರಗತಿಯಲ್ಲಿ ಕೆಲವು ಮಕ್ಕಳು ಮೊಟ್ಟೆ ತಿನ್ನುತ್ತಿದ್ದರೆ, ಇತರರು ತಿನ್ನುತ್ತಿರಲಿಲ್ಲ. ಮೊಟ್ಟೆ ತಿನ್ನುವುದು ಒಳ್ಳೆಯದೇ? ಯಾರ ಮನೆಯಲ್ಲಿ ಹಸು ಇದೆ? ಕರು ಹೇಗೆ ನಡೆಯುತ್ತದೆ? ಇವೇ ಮೊದಲಾದ ಹಲವಾರು ಪ್ರಶ್ನೆಗಳು. ಕೆಲವು ಮಕ್ಕಳು ಮೊದಲ ಕಥೆಯ ನಡುವೆ ಅಥವಾ ಕೊನೆಯಲ್ಲಿ ಪ್ರಶ್ನೆಗಳನ್ನು ಕೇಳಲು ಆರಂಭಿಸಿದರೆ, ಇನ್ನು ಕೆಲವು ಮಕ್ಕಳು 5–6 ದಿನಗಳ ಕಾಲ ಕಥೆ ಕೇಳಿದ ಬಳಿಕವೇ ಬಾಯಿ ತೆರೆದಿದ್ದು ಎಂಬುದನ್ನು ಇಲ್ಲಿ ನಾನು ಒತ್ತಿ ಹೇಳಲು ಬಯಸುತ್ತೇನೆ.

ಇಂದಿಗೂ, ನಾನು ಕಥೆ ಹೇಳುವುದನ್ನು ಕುರಿತು ಯೋಚಿಸಿದರೆ, ನನಗೆ ಅದು ಓದುವುದು ಅಥವಾ ಬರೆಯುವುದಕ್ಕಿಂತಲೂ ಹೆಚ್ಚು ಪ್ರಯೋಜನಕಾರಿ ಹಾಗೂ ಪರಿಣಾಮಕಾರಿಯಾಗಿ ತೋರುತ್ತದೆ. ಓರ್ವ ವ್ಯಕ್ತಿಯಾಗಿ ವಿಕಾಸಗೊಳ್ಳುವ ಮಗುವಿನ ಬೆಳವಣಿಗೆಗೆ ಇದು ನೇರವಾಗಿ ಸಂಬಂಧಿಸಿದೆ. ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಓದಲು ಕಲಿಸುವ ನಮ್ಮ ಗಡಿಬಿಡಿಯಲ್ಲಿ ನಾವು ಬಹುಶಃ ಕಥೆ ಕೇಳುವ ಮತ್ತು ಕಥೆ ಹೇಳುವ ಮೂಲಕ ಮಕ್ಕಳನ್ನು ತೊಡಗಿಸಿಕೊಳ್ಳುವ ಸಹಜ ಕಲಿಕೆಯ ಪ್ರಕ್ರಿಯೆಗೆ ಅಡ್ಡಗಾಲು ಹಾಕುತ್ತಿದ್ದೇವೆ.

## ಮಗುವಿಗೆ ಕಥೆ ಹೇಳುವುದು

ಮಕ್ಕಳು ಓದಲು, ಬರೆಯಲು ಆಸಕ್ತಿಯನ್ನು ಬೆಳೆಸಿಕೊಳ್ಳುವುದರಲ್ಲಿ ಅವರು ತಾವು ಓದಿ ಖುಷಿಪಡುವ ಪುಸ್ತಕಗಳನ್ನು ಆರಿಸಿಕೊಳ್ಳಲು ಸಮರ್ಥರಾಗುವುದು ಒಂದು ಮಹತ್ತ್ವದ ಹಂತವಾಗಿದೆ. ಆದ್ದರಿಂದ, ಚಿಕ್ಕ ಮಕ್ಕಳು ಪುಸ್ತಕಗಳನ್ನು ಹುಡುಕಿ, ತಮ್ಮ ಆಯ್ಕೆಗೆ ಅನುಗುಣವಾದ ವಿಷಯವನ್ನು ತಾವೇ ಕಂಡುಕೊಳ್ಳುವುದು ಅವರಲ್ಲಿ ಓದುವ ಪ್ರೀತಿಯನ್ನು ಹುಟ್ಟುಹಾಕುವ ಪ್ರಕ್ರಿಯೆಯ ಪ್ರಧಾನ ಅಂಗವಾಗಿದೆ. ಕಥೆಗಳ ವಿಚಾರವಾಗಿ ಮಕ್ಕಳಿಗೆ ತಮ್ಮದೇ ಆದ ಒಲವು, ಆದ್ಯತೆಗಳಿರುತ್ತವೆ. ನಾನು ಕಥೆಗಳನ್ನು ಓದಿದ ತರಗತಿಯ ಮಗು ನಾಲ್ಕು ವರ್ಷ ವಯಸ್ಸಿನದಾಗಿದ್ದು, ಪ್ರತಿ ದಿನವೂ ಒಂದು ದೊಡ್ಡದಾದ, ಹೊಚ್ಚ ಹೊಸ ಕಥೆಯೊಂದನ್ನು ಕೇಳಲು ಅದು ತವಕಿಸುತ್ತಿತ್ತು. ಹಿಂದೊಮ್ಮೆ ಈಗಾಗಲೇ ಓದಿದ್ದ ಕಥೆಯನ್ನು ಮತ್ತೆ ಕೇಳಲು ಅದು ಒಮ್ಮೆ ನಿರಾಕರಿಸಿತು. ಆ ಕಥೆಯಲ್ಲಿ ಒಂದು ಕರಡಿ ಮರಿ ಸಾಯುವ ಪ್ರಸಂಗ (ಅದಕ್ಕೆ ಮರುಜೀವ ಬರುವಂತೆ ಕೊನೆಗೆ ಮಾಡಲಾಗಿತ್ತಾದರೂ) ಬರುತ್ತಿತ್ತು; ಮಗುವಿಗೆ ಈ ವಿಷಯ ನೆನಪಿನಲ್ಲಿತ್ತು. ನಾನಿನ್ನೂ ಮೊದಲ ಸಾಲನ್ನು ಎತ್ತಿಕೊಳ್ಳುತ್ತಿದ್ದಂತೆಯೇ ಮಗು, "ಇಲ್ಲ, ಇದು ಬೇಡ. ನನಗೆ ಈ ಕಥೆ ಕೇಳಲು ಇಷ್ಟವಿಲ್ಲ. ಇದನ್ನಾಗಲೇ ಕೇಳಿಯಾಗಿದೆ; ಅದರಲ್ಲಿ ಕರಡಿ ಮರಿ ಸಾಯುತ್ತದೆ" ಎಂದು ಪ್ರತಿಕ್ರಿಯಿಸಿತು. ಈ ಪ್ರತಿಕ್ರಿಯೆಯಿಂದ ಆ ಕರಡಿ ಮರಿ ಸಾಯುವ ಘಟನೆ ಮಗುವಿನ ಮನಸ್ಸಿನಲ್ಲಿ ಇದ್ದು, ಸದಾ ತೊಂದರೆ ಕೊಡುತ್ತಿತ್ತೇನೋ ಎಂದು ನನಗೆ ಅನ್ನಿಸಿತು. ಕಥೆಗಳು ಮಕ್ಕಳಿಗೆ ತಮ್ಮ ಸುತ್ತಮುತ್ತಲಿನ ಘಟನೆಗಳೊಂದಿಗೆ ಸಂಬಂಧ ಬೆಸೆಯಲು ನೆರವಾಗುತ್ತವೆ. ನಾನು ಡೈನೋಸಾರ್‌ಗಳ ಬಗ್ಗೆ ಕಥಾ ಸರಣಿಯೊಂದನ್ನು ಅವರಿಗೆ ಓದಿದ್ದೆ. ಆಗ ಈ ಮಗುವಿಗೆ ಸುಮಾರು 5 ವರ್ಷ ವಯಸ್ಸಿರಬೇಕು. ಈ ಕಥೆಗಳು ಡೈನೋಸಾರ್‌ಗಳ ಬಗ್ಗೆ ಅವುಗಳ ಗಾತ್ರ, ಅವುಗಳ ಆಹಾರ ಶೈಲಿ, ಇತ್ಯಾದಿ ಹಲವು ವಿಷಯಗಳನ್ನು ಒಳಗೊಂಡಿದ್ದವು. ಕಥೆಗಳಲ್ಲಿ ಡೈನೋಸಾರ್ ಪಳೆಯುಳಿಕೆಗಳ ಬಗ್ಗೆ ಮಾಹಿತಿಯಿದ್ದು, ಪಳೆಯುಳಿಕೆಗಳನ್ನು ಹೇಗೆ ಹುಡುಕಿ, ಪತ್ತೆ ಹಚ್ಚುತ್ತಾರೆ ಎಂಬುದನ್ನೂ ಒಳಗೊಂಡಿತ್ತು. ಕೆಲವು ದಿನಗಳ ಬಳಿಕ, ನಮ್ಮ ಹತ್ತಿರದಲ್ಲೇ ಇದ್ದ ಉದ್ಯಾನವೊಂದನ್ನು ಪಳೆಯುಳಿಕೆಗಳ ಹುಡುಕಾಟಕ್ಕಾಗಿ ಅಗೆಯಲಾಯಿತು. ಇದು ಪಳೆಯುಳಿಕೆಗಳು ಎಂದರೇನು, ಯಾವುದರಿಂದ ಮಾಡಲ್ಪಟ್ಟಿದೆ,

ಅವು ಹೇಗೆ ರೂಪುಗೊಳ್ಳುತ್ತವೆ, ಅದಕ್ಕೆ ಹಿಡಿಯುವ ಸಮಯಾವಕಾಶ ಎಷ್ಟು ಹಾಗೂ ಅವುಗಳನ್ನು ಪತ್ತೆ ಮಾಡುವುದು ಎಷ್ಟು ಪ್ರಯಾಸದ ಕೆಲಸ ಮತ್ತು ತಾಳ್ಮೆ ಎಷ್ಟು ಬೇಕಾಗುತ್ತದೆ ಎಂಬ ವಿಷಯವಾಗಿ ಸಂಭಾಷಣೆಯೊಂದನ್ನು ಹುಟ್ಟುಹಾಕಿತು. ವೈಗೋಟ್ಸ್ಕಿ ತಮ್ಮ ಪ್ರಕಟಿತ ಲೇಖನವೊಂದರಲ್ಲಿ, 'ಕಲ್ಪನೆಯು ನಿರ್ವಾತದಲ್ಲಿ ವಿಕಾಸಗೊಳ್ಳುವುದಿಲ್ಲ ಮತ್ತು ಕಲ್ಪನೆಯು ಹಿಂದಿನ ಅನುಭವಗಳನ್ನು ಅವಲಂಬಿಸಿದೆ' ಎಂದು ಹೇಳುತ್ತಾರೆ. ಅದೊಂದು ವೈಯಕ್ತಿಕ ಅನುಭವವಾಗಿರಬಹುದು ಅಥವಾ ಕೇಳಿದ ಯಾವುದೋ ಒಂದು ವಿಷಯ ಆಗಿರಬಹುದು. ಈ ಎರಡನೇ ರೀತಿಯ ಅನುಭವವನ್ನು ಒದಗಿಸಲು ಕಥಾ ಶ್ರವಣ ಅತ್ಯುತ್ಕೃಷ್ಟ ವಿಧಾನ. ಅವು ಕಲ್ಪನೆಯ ವಿಕಾಸಕ್ಕೆ ಎಡೆಮಾಡಿಕೊಡುತ್ತವಲ್ಲದೆ, ಈ ಕಲ್ಪನೆಯು ಹಲವು ವಿಭಿನ್ನ ಹಾದಿಗಳಲ್ಲಿ ಸಂಚರಿಸಬಹುದಾಗಿದೆ. ಆದ್ದರಿಂದ, ಕಥೆಯಿಂದ ಹೊರತಾಗಿ, ಓದುಗನು ಲೇಖಕನ ಬಗ್ಗೆ ಸಹ ಯೋಚಿಸಬಹುದಾಗಿದೆ: ಕಥೆಯ ಲೇಖಕರು ಯಾರು? ಅವರು ಹೇಗಿರುತ್ತಾರೆ? ಅವರೆಲ್ಲಿ ವಾಸಿಸುತ್ತಾರೆ? ಅವರ ತಾಯ್ನುಡಿ ಯಾವುದು? ಅವರ ಬರೆವಣಿಗೆ ಹೇಗೆ ಮೂಡುತ್ತದೆ? ಅವರು ಯಾವಾಗ ಬರೆಯಲು ತೊಡಗುತ್ತಾರೆ? ಅವರಿಗೆಷ್ಟು ವಯಸ್ಸಾಗಿರಬಹುದು? ರೋಲ್ಡ್ ಡಾಲ್ ಅವರ "ಗೋಯಿಂಗ್ ಸೋಲೋ" ಕಥೆಯನ್ನು ಎಂಟು ವರ್ಷದ ಹುಡುಗನೊಬ್ಬನಿಗೆ ಓದಿದಾಗ ಆತ ಆಫ್ರಿಕಾ ಖಂಡದ ಬಗ್ಗೆ ಬಹಳಷ್ಟು ಸಂಗತಿಗಳನ್ನು ಕಲಿತುಕೊಂಡನು. ಅಲ್ಲಿನ ಕಥೆಯೊಂದರಲ್ಲಿ ಲೇಖಕರು ಯುದ್ಧ ವಿಮಾನದ ಅಪಘಾತದಲ್ಲಿ ಸಿಲುಕುತ್ತಾರೆ. ಅವರ ದೇಹದ ತುಂಬೆಲ್ಲಾ ಗಾಯಗಳಾಗಿದ್ದು, ಇಡೀ ಮುಖ ಬ್ಯಾಂಡೇಜಿನಿಂದ ಮುಚ್ಚಿಹೋಗಿರುತ್ತದೆ. ಅವರಿಗೆ ನೋಡಲು ಸಾಧ್ಯವಿರುವುದಿಲ್ಲ; ಅವರಿಗೆ ಕೇಳಲು ಮಾತ್ರ ಸಾಧ್ಯವಿರುತ್ತದೆ ಅಷ್ಟೇ. ಅವರು ತಮ್ಮ ಆರೈಕೆ ಮಾಡುತ್ತಿದ್ದ ದಾದಿಯ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದೇ ಇರುವುದರಿಂದ ಆಕೆ ಅವರಿಗೆ ತಮ್ಮ ಉತ್ತರ ಒಪ್ಪಿಗೆಯಾಗಿದ್ದರೆ ಸುಮ್ಮನೆ ತಮ್ಮ ಕೈ ಅದುಮಿ ಒಪ್ಪಿಗೆ ಸೂಚಿಸಲು ಹೇಳುತ್ತಾಳೆ. ಈ ಪುಸ್ತಕವನ್ನು ನಾನು ಯಾವ ಮಗುವಿಗೆ ಓದಿದೆನೋ, ಆ ಮಗು 3–4 ತಿಂಗಳುಗಳಲ್ಲಿ ಅನಾರೋಗ್ಯದಿಂದ ಮಲಗಿತು. ನಾನು ಆ ಮಗುವಿಗೆ ವಿಶ್ರಾಂತಿ ತೆಗೆದುಕೊಳ್ಳುವಂತೆ, ಆಯಾಸ ಮಾಡಿಕೊಳ್ಳದೇ ಇರುವಂತೆ ಹೇಳಿದೆ. ಅದಕ್ಕವನು, "ಸರಿ, ನೀವು ನಿಮ್ಮ ಕೈ ಕೊಡಿ, ನಾನೇನಾದರೂ ಹೌದು ಎಂದು ಉತ್ತರಿಸುವುದಾದರೆ ನಿಮ್ಮ ಕೈ ಅದುಮುತ್ತೇನೆ ಎಂದ". (ಅವನಿಗೆ ಹಸಿವಾಗಿದೆಯೇ ಅಥವಾ ಬಾಯಾರಿಕೆಯಾಗಿದೆಯೇ ಅಥವಾ ಶೌಚಾಲಯಕ್ಕೆ ಹೋಗುವ ಅಥವಾ ಎದ್ದು ನಿಲ್ಲುವ ಅಗತ್ಯವಿದೆಯೇ ಎಂದು ನಾನು ಕೇಳಬೇಕಾಗಬಹುದು ಎಂಬುದರ ಸೂಚನೆಯಾಗಿ ಅವನು ಇದನ್ನು ಹೇಳಿದ್ದ.)

ನಾನು ಈಗಾಗಲೇ ಹೇಳಿರುವಂತೆ, ಮೂರ್ತ ಅನುಭವಗಳೊಂದಿಗಿನ ಒಡನಾಟವು ಈ ಕಲ್ಪನೆಯ ಎಳೆಗಳನ್ನು ಇನ್ನಷ್ಟು ಬಿಗಿಗೊಳಿಸುತ್ತದೆ. ಉದಾಹರಣೆಗೆ, "ಗೋಯಿಂಗ್ ಸೋಲೋ" ಪುಸ್ತಕವನ್ನು ಜೋರಾಗಿ ಓದಿದ ಬಳಿಕ ಅದನ್ನು ಕೇಳಿದ ಮಗುವಿನ ಮನಸ್ಸಿನಲ್ಲಿ ಆಫ್ರಿಕಾ ಭಾರತಕ್ಕಿಂತ ದೊಡ್ಡದೇ? ಚೀನಾಗಿಂತಲೂ ದೊಡ್ಡದೇ? ಎಂಬಂತಹ ಹಲವು ಪ್ರಶ್ನೆಗಳೆದ್ದವು. ಆದ್ದರಿಂದ, ನಾವು ಭೂಗೋಳವೊಂದನ್ನು ತಂದು ಅದರಲ್ಲಿ ಚೀನಾ ಆಫ್ರಿಕಾಗಿಂತ ದೊಡ್ಡದಲ್ಲ ಎಂಬುದನ್ನು ಕಂಡುಕೊಂಡೆವು. ಇದಾದ ಮೇಲೆ ನೀವು ಯಾವ ಹೊಸ ಕಥೆಗಳನ್ನು ಕೇಳಬೇಕು? ಇನ್ನೇನನ್ನು ಕೇಳಿಸಿಕೊಳ್ಳಬೇಕು? ಈ ಎಲ್ಲವೂ ಮಹತ್ತ್ವದ ಚಿಂತನೆಗಳಾದವು.

## ಉಪಸಂಹಾರ

ಈ ಕಥೆಗಳನ್ನು ಹೇಳಲು ಆರಂಭಿಸಿದಾಗ ಇದರಿಂದ ಯಾವ ರೀತಿಯ ಲಾಭ ದೊರೆಯಬಹುದು ಅಥವಾ ಈ ಕಸರತ್ತಿನಿಂದ ಮಕ್ಕಳು ಏನನ್ನು ಕಲಿಯಬಹುದು ಎಂಬುದಾಗಿ ನಾನು ಯೋಚಿಸಿರಲಿಲ್ಲ. ನಾನು ಈ ಹಲವು ಸಂಗತಿಗಳನ್ನು ಬಹು ಕಾಲದ ಮೇಲೆ–ಕೆಲವೊಮ್ಮೆ ಕಥೆ ಹೇಳಿಯಾದ ತಿಂಗಳುಗಳೇ ಕಳೆದ ಮೇಲೆ–ಅರಿತುಕೊಂಡೆ.

ನಾವು ಅರ್ಥ ಮಾಡಿಕೊಳ್ಳಬೇಕು ಎಂದು ಉದ್ದೇಶಿಸುವ ರೀತಿಯಲ್ಲಿ ಪ್ರತಿ ಮಗುವೂ ಅರ್ಥ ಮಾಡಿಕೊಳ್ಳುತ್ತದೆ ಎಂಬುದರ ಅಗತ್ಯವಿಲ್ಲ. ಹಲವು ವಿದ್ವಾಂಸರು ಮತ್ತು ಶಿಕ್ಷಕರು ಈ ವಿಷಯಕ್ಕೆ ಒತ್ತು ನೀಡುತ್ತಾರೆ. ಅನಿತಾ ಧ್ಯಾನಿ ಅವರು ತಾವು ಶಾಲೆಗೆ ಹೋಗುತ್ತಿದ್ದಾಗ ಓದಿದ ಕಥೆಯ ಒಂದು ವಾಕ್ಯದ ನಿಜವಾದ ಅರ್ಥವನ್ನು ತಾವೇ ಸ್ವತಃ ಶಿಕ್ಷಕಿಯಾದಾಗ ಅರಿತಿದ್ದಾಗಿ ತಮ್ಮ ಲೇಖನದಲ್ಲಿ[1] ತಿಳಿಸುತ್ತಾರೆ. ಮಕ್ಕಳು ಕಥೆಗಳಿಂದ ತಮಗೆ ಪ್ರಸ್ತುತವಾದ ಅರ್ಥಗಳನ್ನು ಸೃಷ್ಟಿಸಿಕೊಳ್ಳಬಲ್ಲರು. ಕಥೆಯೊಂದರಿಂದ ಮಗು ಏನನ್ನು, ಹೇಗೆ ಗ್ರಹಿಸುತ್ತದೆ ಎಂಬುದನ್ನು ನಾವು ನಿಜಕ್ಕೂ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾರೆವು. ಆದಾಗ್ಯೂ, ಮಕ್ಕಳು ಕಥೆಗಳನ್ನು ಆಲಿಸುವ ಅಭ್ಯಾಸವನ್ನು ರೂಢಿಸಿಕೊಂಡರೆ ಅವು ಮಕ್ಕಳ ಮೇಲೆ ಪ್ರಭಾವ ಬೀರದೇ ಹೋಗಲಾರವು.

**ಕೊನೆ ಟಿಪ್ಪಣಿಗಳು**

1 "ವೈ ಸ್ಟೋರಿ? ಸ್ಟೋರೀಸ್ ಎಂಡ್ ಡಿಫರೆಂಟ್ ಡೈಮೆನ್ಷನ್ಸ್ ಆಫ್ ಅಂಡರ್ಸ್ಟ್ಯಾಂಡಿಂಗ್". ಅನಿತಾ ದೇಸಾಯಿ. ಪಾಠಶಾಲಾ ಭೀತರ್ ಔರ್ ಬಾಹರ್. ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ. https://anuvadasampada.azimpremjiuniversity.edu.in/2262/

**ಪರಾಮರ್ಶನಗಳು:**

Imagination and Creativity in Childhood. Lev Semenovich Vygotsky. Journal of Russian and East European Psychology, vol. 42, no. 1, January–February 2004, pp. 7–97. https://www.marxists.org/archive/vygotsky/works/1927/imagination.pdf

---



**ರಜನಿ ದ್ವಿವೇದಿ** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ "ಪಾಠ್‌ಶಾಲಾ ಭೀತರ್ ಔರ್ ಬಾಹರ್"ನ ಸಂಪಾದಕ ಮಂಡಳಿಯ ಸದಸ್ಯರಾಗಿದ್ದಾರೆ. ಅವರನ್ನು rajni.dwivedi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಕುಶಾಲ್ ಬಿ.ಎಸ್.** | ಪರಿಶೀಲನೆ: **ಲತಾ ಕೆ.ಸಿ.**

# ಕಥೆಗಳ ಮೂಲಕ ಗಣಿತದ ಪರಿಕಲ್ಪನೆಗಳನ್ನು ಕಲಿಸುವುದು

ರಂಗನಾಥ್

ಕಳೆದ ಎರಡು ವರ್ಷಗಳಿಂದ, ನಾನು ಕರ್ನಾಟಕದ ಯಾದಗಿರಿ ಜಿಲ್ಲೆಯ ಯರಗೋಳದ ಶೈಕ್ಷಣಿಕ ವಲಯದೊಳಗೆ ಓಡಾಡುತ್ತಿದ್ದೇನೆ. ಇಲ್ಲಿನ ಶಾಲೆಗಳಲ್ಲಿ ಕಥೆ ಹೇಳುವ ಚಟುವಟಿಕೆಗಳ ಮೂಲಕ ಗಣಿತವನ್ನು ಕಲಿಯುವ ಪ್ರಕ್ರಿಯೆಯು ಎಷ್ಟರಮಟ್ಟಿಗೆ ಫಲದಾಯಕವಾಗುತ್ತದೆ ಎಂಬುದನ್ನು ಗಮನಿಸುತ್ತ ಬಂದಿದ್ದೇನೆ. ಗಣಿತವನ್ನು ಕಲಿಸುವುದಕ್ಕೆ ಪೂರಕವಾಗುವ, 4 ಮತ್ತು 5ನೇ ತರಗತಿಯ ಮಕ್ಕಳ ಕಲಿಕೆಗೆ ಹೊಂದಿಕೊಳ್ಳುವಂತಹ ಕಥೆಗಳನ್ನು ಹುಡುಕುವುದು ಆರಂಭದಲ್ಲಿ ಪ್ರಯಾಸದಾಯಕವಾಗಿತ್ತು. ಆದರೆ ರೂಪಾ ಪೈಯವರ ಮುತ್ತಜ್ಜಿಗೆ ವಯಸ್ಸೆಷ್ಟು ಎಂಬ ಕಥೆಯೊಂದು ನಮಗೆ ದೊರೆಯಿತು. ಆಸಕ್ತಿಕರ ಪಾತ್ರಗಳು ಮತ್ತು ಸಂಕೀರ್ಣ ಉಪಕಥೆಗಳನ್ನು ಹೊಂದಿದ ಆ ಕಥೆಯು ವಿದ್ಯಾರ್ಥಿಗಳು ಸಮಸ್ಯೆಗಳನ್ನು ಹುಡುಕಿ ಅದಕ್ಕೆ ಪರಿಹಾರವನ್ನು ಹುಡುಕುವ ರೀತಿಯ ಸನ್ನಿವೇಶಗಳನ್ನು ಒಳಗೊಂಡಿತ್ತು.

ಆ ಕಥೆಯು ತಮ್ಮ ಮುತ್ತಜ್ಜಿಯ ನಿಜವಾದ ವಯಸ್ಸನ್ನು ಕಂಡುಕೊಳ್ಳಲು ಯತ್ನಿಸುವ ಇಬ್ಬರು ಮಕ್ಕಳ ಸಾಹಸದ ಪ್ರಯಾಣದ ಕುರಿತಾಗಿತ್ತು. ನಮ್ಮ ಸರಕಾರಿ ಶಾಲೆಯ ಮಕ್ಕಳು ಆ ಕಥೆಯಲ್ಲಿ ಕೊಟ್ಟ ಸುಳುಹುಗಳನ್ನು ಹೊರತೆಗೆದು ಸಂಕಲನ, ವ್ಯವಕಲನ ಮತ್ತು ತಾರ್ಕಿಕ ವಿವರಣೆಗಳ ಮೂಲಕ ಅದರ ಉತ್ತರವನ್ನು ಕಂಡುಕೊಳ್ಳಲು ಕಥೆ ಹೇಳುವ ಚಟುವಟಿಕೆಯು ನೆರವಾಯಿತು. ಕಥೆ ಮತ್ತು ಕಥೆಯಲ್ಲಿದ್ದ ಸಮಸ್ಯೆಗಳು ವಿದ್ಯಾರ್ಥಿಗಳಿಗೆ ಆಸಕ್ತಿಯನ್ನು ಹುಟ್ಟಿಸಿದರೂ ಮೊದಮೊದಲಿಗೆ ನಮ್ಮ ವಿದ್ಯಾರ್ಥಿಗಳು ಉತ್ತರವನ್ನು ಕಂಡುಕೊಳ್ಳಲಿಕ್ಕೆ ಯಾವ ವಿಧಾನವನ್ನು ಬಳಸಬೇಕು ಎನ್ನುವ ನೇರ ಪ್ರಶ್ನೆಗಳನ್ನು ನನ್ನ ಬಳಿ ಕೇಳಿದ್ದರು. ಸಂಭಾಷಣೆಗಳ ಮೂಲಕ, ಅಂದರೆ ಸೂಕ್ತ ಪ್ರಶ್ನೆಗಳನ್ನು ಕೇಳುವುದು ಮತ್ತು ಪರ್ಯಾಯ ಸುಳುಹುಗಳನ್ನು ನೀಡುವ ಮೂಲಕ ನಾನು ಅವರಿಗೆ ಸಹಾಯ ಮಾಡತೊಡಗಿದೆ. ಆಗ ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನು ತಮ್ಮ ನೋಟ್ಬುಕ್ಗಳಲ್ಲಿ ಸಂಕೇತಗಳ ರೂಪದಲ್ಲಿ (ಮೂರ್ತ ರೂಪದಲ್ಲಿ) ಇಡತೊಡಗಿದರು. ಅದು ಸಾಂಪ್ರದಾಯಕ ರೂಪದ ಗಣಿತ ಕಲಿಕೆಗೆ ಭಿನ್ನವಾದ ವಿಧಾನವಾಗಿತ್ತು. ಆ ಸಂಭಾಷಣೆಗಳು ಮತ್ತು ನೋಟ್ಬುಕ್ ಒಳಗೆ ಅಮೂರ್ತ ಆಲೋಚನೆಗಳನ್ನು ಸಂಕೇತಗಳ ರೂಪದಲ್ಲಿ ಮೂರ್ತಗೊಳಿಸಿದ ವಿದ್ಯಾರ್ಥಿಗಳ ಅಭ್ಯಾಸ ಚಟುವಟಿಕೆಯನ್ನು ಕೇಂದ್ರವಾಗಿರಿಸಿಕೊಂಡು ನಾನು ಈ ಲೇಖನದಲ್ಲಿ ಗಣಿತದ ಕಲಿಕೆಗೆ ಕಥೆ ಹೇಳುವ ಚಟುವಟಿಕೆಯು ಯಾವ ರೀತಿಯಾದ ಒಂದು ಪರಿಣಾಮಕಾರಿ ವಿಧಾನ ಎನ್ನುವುದನ್ನು ತೋರಿಸಲು ಯತ್ನಿಸುತ್ತೇನೆ. 5ನೇ ತರಗತಿಯಲ್ಲಿ ತರಗತಿ ಶಿಕ್ಷಕರ ಉಪಸ್ಥಿತಿಯಲ್ಲಿ ನಾನು ಕಥೆ ಪುಸ್ತಕವನ್ನು ಕುರಿತ ಒಂದು ಮೂಲ ಪರಿಚಯದ ಮೂಲಕ ಕಥೆಯನ್ನು ಆರಂಭಿಸಿದೆ. ಮುತ್ತಜ್ಜಿಯ ವಯಸ್ಸನ್ನು ಕುರಿತ ಆರಂಭದ ಮಾತುಕತೆಯಲ್ಲಿ ಮುತ್ತಜ್ಜಿಯ ವಯಸ್ಸು 200 ಎಂದು ಕಥೆಯ ಒಂದು ಪಾತ್ರವಾದ ಪುಟ್ಟನು ಹೇಳಿದ್ದನ್ನೇ ತರಗತಿಯ ಮಕ್ಕಳೂ ಪುನರುಚ್ಚರಿಸಿದರು. ತರ್ಕವನ್ನು ಅನ್ವಯಿಸದೇ ಹಾಗೆ ಅವಸರದಲ್ಲಿ ಉತ್ತರಗಳನ್ನು ನೀಡತೊಡಗಿದರೆ ನಾಲ್ಕು ಅಂಕಿಯ ಸಂಕಲನ ಮತ್ತು ವ್ಯವಕಲನವನ್ನು ಕಲಿಯುವ ಉದ್ದೇಶವು ಅಲ್ಲಿ ಸಫಲವಾಗುವುದಿಲ್ಲ ಎಂದು ನನಗೆ ಆಗ ಅನಿಸಿತು. ಅದಕ್ಕಾಗಿ ಕಥೆ ಹೇಳುವಾಗ ಅದರಲ್ಲಿ ಸಮಸ್ಯೆಯನ್ನು ಬಿಡಿಸಲು ಯಾವುದಾದರೂ ಅಂಶ ಅಥವಾ ಸನ್ನಿವೇಶವು ಮುಖ್ಯ ಎಂದೆನಿಸಿದರೆ ಅದನ್ನು ನೋಟ್ಬುಕ್ನಲ್ಲಿ ಬರೆಯಿರಿ ಎಂದು ಅವರಿಗೆ ಹೇಳಿದೆ. ಅವರು ಬರೆದಿದ್ದನ್ನು ನೋಡಿದ ಮೇಲೆ ಮಕ್ಕಳು ಬರೆಯುವಾಗ ತಮ್ಮ ಆಲೋಚನೆಗಳನ್ನು ಯಾವ ರೀತಿ ಸಂಸ್ಕರಿಸುತ್ತಾರೆ ಎನ್ನುವುದು ನನಗೆ ಅರ್ಥವಾಯಿತು.

## ವಿಧಾನ

1916ನೇ ಇಸವಿಯಲ್ಲಿ ಕನ್ನಂಬಾಡಿ ಡ್ಯಾಮ್ ಕಟ್ಟಲ್ಪಟ್ಟಿತ್ತು, ಮತ್ತು ಅದಕ್ಕೂ ಮುತ್ತಜ್ಜಿ ಹುಟ್ಟಿದ ವರ್ಷಕ್ಕೂ ಏನೋ ಸಂಬಂಧವಿದೆ ಎಂಬ ಸುಳುಹನ್ನು ಮಕ್ಕಳಿಗೆ ನೀಡಲಾಗಿತ್ತು. ಅದನ್ನು ಕಂಡುಹಿಡಿಯಲು ಯಾವ ವಿಧಾನವನ್ನು ಅನುಸರಿಸಬೇಕು ಎಂದು ಕೆಲವು ವಿದ್ಯಾರ್ಥಿಗಳು ಕೇಳಿದರು. ಒಬ್ಬ ವಿದ್ಯಾರ್ಥಿ ಈ ಕೆಳಗಿನಂತೆ (ಚಿತ್ರ 1) ಪ್ರಯತ್ನಿಸಿದ.





*Figure 1.*

ತರ್ಕವನ್ನು ಅನ್ವಯಿಸಿ ಉತ್ತರವನ್ನು ಪಡೆಯುವಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಯನ್ನು ಒಬ್ಬ ಸುಗಮಕಾರರಾಗಿ ಬಹುಶಃ ನಾವು ಗಮನಿಸಬೇಕು ಎಂದು ಆಗ ನನಗೆ ಅನ್ನಿಸಿತು. ಅವರಿಗೆ ಸುಲಭವಾಗುವಂತೆ ನಾನು ಈ ಪ್ರಶ್ನೆಯನ್ನು ಕೇಳಿದೆ: "2023ರಲ್ಲಿ ನಿಮಗೆ 12 ವರ್ಷ ಎಂದಾದರೆ 2014ರಲ್ಲಿ ನಿಮಗೆ ಎಷ್ಟು ವರ್ಷವಾಗಿತ್ತು ಎಂದು ಕಂಡುಹಿಡಿಯಲು ಏನು ಮಾಡಬೇಕು?" ಎರಡೂ ವರ್ಷಗಳನ್ನು ಕೂಡಿಸಬೇಕು, 2014ರಿಂದ 2023ರನ್ನು ಕಳೆಯಬೇಕು ಎಂದೆಲ್ಲ ಮಕ್ಕಳು ಉತ್ತರಿಸಿದರು. ಆಗ ನಾನು ಅವರ ಈಗಿನ ವಯಸ್ಸು ಮತ್ತು ಅವರು ಹುಟ್ಟಿದ ವರ್ಷ ಯಾವುದು ಎಂದು ಕೇಳಿದೆ. ಅನೇಕ ಪ್ರತಿಕ್ರಿಯೆಗಳು ಬಂದವು. ಆಮೇಲೆ ಅವರು ಹುಟ್ಟಿದ ವರ್ಷದ ನಂತರ ಒಂದು ವರ್ಷವನ್ನು ಆಯ್ದುಕೊಂಡು ನಾನು ಆಗ ಅವರಿಗೆ ಎಷ್ಟು ವರ್ಷವಾಗಿರುತ್ತದೆ ಎಂದು ಕೇಳಿದೆ. ಅದಕ್ಕೆ ಅವರು ಕೊಟ್ಟ ಉತ್ತರಗಳು ಚಿತ್ರ 2, 3, 4ರಲ್ಲಿ ಇವೆ. ಅದನ್ನು ನೋಡಿ ನನಗೆ ಆನಂದವಾಯಿತು, ಏಕೆಂದರೆ ಅಂತಹ ಸೃಜನಾತ್ಮಕತೆಯನ್ನೇ ನಾನು ನಿರೀಕ್ಷಿಸುತ್ತಿದ್ದೆ.

| | | |
|---|---|---|
| | 2023 | |
| 11 | - | 2023 |
| 10 | - | 2022 |
| 9 | - | 2021 |
| 8 | - | 2020 |
| 7 | - | 2019 |
| 6 | - | 2018 |
| 5 | - | 2017 |
| 4 | - | |

*Figure 2.*

| | | |
|---|---|---|
| 2023 | - | 10 |
| 22 | - | 9 |
| 21 | - | 8 |
| 20 | - | 7 |
| 19 | - | 6 |
| 18 | - | 5 |
| 17 | - | 4 |
| 16 | - | 3 |
| 15 | - | 2 |
| 14 | - | 1 |

*Figure 3.*

| | | | |
|---|---|---|---|
| | 2009 | - | |
| | 2010 | - | |
| | 2011 | - | |
| | 2012 | - | |
| | 2013 | - | |
| | 2014 | - | 3 |
| | 2015 | - | 4 |
| | 2016 | - | 5 |
| | 2017 | - | 6 |
| | 2018 | - | 7 |
| | 2019 | - | 6 |
| 2001 | 2020 | - | 7 |
| 2002 | 2021 | - | 8 |
| 2003 | 2022 | - | 9 |
| 2004 | 2023 | - | 10 |

*Figure 4.*

## ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದು

ಬರೆವಣಿಗೆಯ ಮೂಲಕ ಈ ಆಲೋಚನಾ ಪ್ರಕ್ರಿಯೆಯೊಂದಿಗೆ ನಿರ್ದಿಷ್ಟ ವರ್ಷವೊಂದರಲ್ಲಿ ಎಷ್ಟು ವಯಸ್ಸಾಗಿರುತ್ತದೆ ಎನ್ನುವುದನ್ನು ತಿಳಿಯಬೇಕೆಂದರೆ ಯಾವ ವರ್ಷವನ್ನು ಕುರಿತು ಕೇಳಲಾಗಿದೆಯೋ ಅಲ್ಲಿಂದ ಹುಟ್ಟಿದ ವರ್ಷದ ತನಕ ಹಿಮ್ಮುಖವಾಗಿ ಲೆಕ್ಕ ಹಾಕಬೇಕು ಎನ್ನುವುದು ಅವರಿಗೆ ಅರ್ಥವಾಯಿತು. ಇದು ಸಾಮಾನ್ಯ ಜ್ಞಾನದ ಒಂದು ಸಂಗತಿಯಾದರೂ ಅಂತಹ ಮೂಲಭೂತ ತಾರ್ಕಿಕ ಆಲೋಚನೆಯ ಕೌಶಲಗಳನ್ನು ಅವರು ಅರಿತಿಲ್ಲ ಎನ್ನುವುದು ಸ್ಥೂಲ ನೆಲೆಯಲ್ಲಿ ನಮ್ಮ ಶಿಕ್ಷಣದ ಗುಣಮಟ್ಟ ಹೇಗಿದೆ ಎನ್ನುವುದನ್ನು ತೋರಿಸಿಕೊಡುತ್ತದೆ, ಅದರಲ್ಲೂ ನಿರ್ದಿಷ್ಟವಾಗಿ ಗಣಿತಕ್ಕೆ ಸಂಬಂಧಿಸಿದ ಸಂಭಾಷಣೆಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ನಾನು ಕಥೆಯನ್ನು ಮುಂದುವರಿಸಿದೆ. ಮುಂದಿನ ಕಥೆಯಲ್ಲಿ ವಿದ್ಯಾರ್ಥಿಗಳಿಗೆ ಇನ್ನೊಂದು ಸುಳುಹುವು ಸಿಕ್ಕಿತು. 2023ರಲ್ಲಿ ಮುತ್ತಜ್ಜಿಗೆ 81 ವರ್ಷವಾಗಿರುತ್ತದೆ ಎನ್ನುವುದು ಅವರಿಗೆ ಗೊತ್ತಾಯಿತು. ಹಾಗಾದರೆ ಮುತ್ತಜ್ಜಿ ಹುಟ್ಟಿದ ವರ್ಷ ಯಾವುದು? ಅಚ್ಚರಿ ಹುಟ್ಟಿಸುವಂತೆ, ಹೆಚ್ಚಿನ ಮಕ್ಕಳು ತಮ್ಮದೇ ರೀತಿಯಲ್ಲಿ ಸರಿಯಾದ ಕ್ರಮವನ್ನು ಅನುಸರಿಸಿ ಉತ್ತರ ಕಂಡುಕೊಂಡರು. ಸುಗಮಕಾರನಾಗಿ ನನಗೆ ಅವರು ಲೆಕ್ಕ ಬಿಡಿಸಿದ್ದಕ್ಕಿಂತ ಹೆಚ್ಚಾಗಿ ಅವರು ನೋಟ್‌ಬುಕ್‌ನಲ್ಲಿ

ಉತ್ತರಗಳನ್ನು ಬರೆದಿಟ್ಟ ರೀತಿ ವಿಸ್ಮಯವನ್ನು ಉಂಟು ಮಾಡಿತ್ತು. ಅವರು ಸಂಖ್ಯೆಗಳನ್ನು ಮತ್ತು ಉತ್ತರಗಳನ್ನು ಹಚ್ಚಿಟ್ಟ ಕ್ರಮ ಗಣಿತದ ತರಗತಿಯಲ್ಲಿ ಸಾಂಪ್ರದಾಯಕವಾಗಿ ಅನುಸರಿಸುವ ಕ್ರಮವಾಗಿರಲಿಲ್ಲ. ಚಿತ್ರ 5ರಲ್ಲಿ ನಾವು ನೋಡುವಂತೆ, ಒಬ್ಬ ವಿದ್ಯಾರ್ಥಿಯು 2023ರಿಂದ 81ನ್ನು ಕಳೆಯಲು ನೋಡಿದ್ದ. ಮುತ್ತಜ್ಜಿಯ ವಯಸ್ಸನ್ನು ಕಂಡುಹಿಡಿಯುವುದು ಉದ್ದೇಶವಾದದ್ದರಿಂದ ಕೆಲವರು ಅಜ್ಜಿಯ ವಯಸ್ಸನ್ನು ಪ್ರತ್ಯೇಕವಾಗಿ ಹಚ್ಚಲಿಲ್ಲ. ಬದಲಿಗೆ ಅಮ್ಮ, ಅಜ್ಜಿ, ಮುತ್ತಜ್ಜಿಯ ಲಂಬ ವೃಕ್ಷವೊಂದನ್ನು ಬಿಡಿಸಿ ಅದರೊಳಗೆ ಸಂಖ್ಯೆಗಳನ್ನು ಹಚ್ಚಿಟ್ಟರು.

ವಿದ್ಯಾರ್ಥಿಗಳು ಉತ್ತರಗಳನ್ನು ಕಂಡುಹಿಡಿಯುವಾಗ ಪ್ರತೀ ಹೆಜ್ಜೆಯಲ್ಲಿಯೂ ಮುಂದೆ ಯಾವ ಉತ್ತರ ಬರಬಹುದು, ಅದನ್ನು ಹೇಗೆ ಮುಂದುವರಿಸುವುದು ಎಂಬ ಕುತೂಹಲದಲ್ಲಿರುತ್ತಿದ್ದರು. ನಾನು ಕತೆ ಮುಂದುವರಿಸಿದಂತೆ ಮಕ್ಕಳಿಗೆ ಮತ್ತೊಂದು ಸುಳುಹು ಸಿಕ್ಕಿತು. ಮುತ್ತಜ್ಜಿಗೆ ಅವಳ ಮದುವೆಯ ನಂತರ ಎರಡು ವರ್ಷಕ್ಕೊಮ್ಮೆ ಒಬ್ಬರಾದ ನಂತರ ಇನ್ನೊಬ್ಬರು ಹೀಗೆ 5 ಹೆಣ್ಣು ಮಕ್ಕಳು ಹುಟ್ಟಿದರು. ಆಗ ವಿದ್ಯಾರ್ಥಿಗಳು 1942ನೇ ವರ್ಷದಿಂದ ಪುನಃ ಪುನಃ 2ನ್ನು ಕಳೆಯಲು ತೊಡಗಿದರು. ಮುತ್ತಜ್ಜಿಗೆ ಐದು ಹೆಣ್ಣುಮಕ್ಕಳು ಮತ್ತು ಕೊನೆಯ ಮಗಳು (ಐದನೆಯವಳು) 1942ರಲ್ಲಿ ಹುಟ್ಟಿದ್ದಳಾದ್ದರಿಂದ ಅಜ್ಜಿಯ ಸಹೋದರಿಯರ ವಯಸ್ಸನ್ನು ಕಂಡುಹಿಡಿಯಬೇಕಾದರೆ 1942 ರಲ್ಲಿ 2ನ್ನು 4 ಸಲ ಕಳೆಯಬೇಕಾಗುತ್ತದೆ, ಏಕೆಂದರೆ ಮುತ್ತಜ್ಜಿಯ ಮಕ್ಕಳ ನಡುವೆ ತಲಾ 2 ವರ್ಷಗಳ ಅಂತರವಿದೆ ಎಂದು ಮಕ್ಕಳು ಚರ್ಚೆಯ ವೇಳೆ ತಾವಾಗಿಯೇ ವಿವರಿಸುತ್ತಿದ್ದರು. ವ್ಯವಕಲನದ ಚಿಹ್ನೆಗಳನ್ನು ಬಳಸದೆಯೇ ವಿದ್ಯಾರ್ಥಿಗಳು ಚಿತ್ರ 6ರಲ್ಲಿ ತೋರಿಸಿದಂತೆ ತಮ್ಮ ನೋಟ್‌ಬುಕ್‌ನಲ್ಲಿ ಬರೆದಿದ್ದರು. ಲೆಕ್ಕ ಮಾಡುವಾಗ ಕ್ರಮಗಳನ್ನು ಅಥವಾ ವಿಧಾನಗಳನ್ನು ಅನುಸರಿಸುವ ಕುರಿತು ನಾವು ಒತ್ತು ನೀಡುವುದೇನೋ ಸರಿ, ಆದರೆ ಕ್ರಮವನ್ನು ಕೈಬಿಟ್ಟು ಅಂತಃಪ್ರಜ್ಞೆಯ ಮೂಲಕ ಮಕ್ಕಳು ಉತ್ತರ ಪಡೆಯುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ಚಿತ್ರ 6ರಲ್ಲಿ ಮುತ್ತಜ್ಜಿಯ ಐದನೆಯ ಮಗಳು 1942ರಲ್ಲಿ ಹುಟ್ಟಿದಳು ಮತ್ತು ವಿದ್ಯಾರ್ಥಿಯು ಮೂರನೆಯ ಮಗಳ ವಯಸ್ಸು ದೊರಕುವ ತನಕ 1942ರಿಂದ 2ನ್ನು ಕಳೆಯುತ್ತಾಳೆ. ನಂತರ ಎರಡನೆಯ ಮಗಳ ಲೆಕ್ಕಾಚಾರವನ್ನು ಬಿಟ್ಟು ಮುತ್ತಜ್ಜಿಯ ವಯಸ್ಸನ್ನು ಕಂಡುಹಿಡಿಯುವುದು ಎಲ್ಲಕ್ಕಿಂತ ಮುಖ್ಯ ಎಂದು ಅವಳಿಗೆ ಅನ್ನಿಸಿದ್ದರಿಂದ ಸೀದಾ ಮೊದಲ ಮಗಳ ವಯಸ್ಸಿನ ಲೆಕ್ಕಾಚಾರಕ್ಕೆ ನಡೆಯುತ್ತಾಳೆ. ಮೊದಲ ಮಗಳು ಹುಟ್ಟಿದ್ದು 1934ರಲ್ಲಿ ಎಂದು (1942–8, ಐದು ಮಕ್ಕಳ ನಡುವೆ 2 ವರ್ಷಗಳ ಅಂತರವನ್ನು ಇಟ್ಟುಕೊಂಡರೆ) ಅವರಿಗೆ ಗೊತ್ತಾಯಿತು.

ಈಗ ಮುತ್ತಜ್ಜಿಯ ವಯಸ್ಸನ್ನು ಕಂಡುಹಿಡಿಯಲು ಏನು ಮಾಡಬೇಕು ಎಂದು ವಿದ್ಯಾರ್ಥಿಗಳನ್ನು ಕೇಳಿದೆ. 1942ರಿಂದ 8ನ್ನು ಕಳೆಯಬೇಕು ಎಂದು ಕೆಲವು ಮಕ್ಕಳು ಹೇಳಿದರು. ಒಬ್ಬ





*Figure 5.*

ವಿದ್ಯಾರ್ಥಿಯು 81ಕ್ಕೆ 8 (ವಯಸ್ಸು)ನ್ನು ಸೇರಿಸಬೇಕು ಎಂದ. ಅಂದರೆ ಮುತ್ತಜ್ಜಿಗೆ 89 ವಯಸ್ಸು ಆಗಿರುತ್ತದೆ ಎಂದು. ಈಗ ವಿದ್ಯಾರ್ಥಿಗಳು ಮುತ್ತಜ್ಜಿಯ ವಯಸ್ಸನ್ನು ಊಹಿಸಲು ತೊಡಗುತ್ತಾರೆ. ಕಥೆಯಲ್ಲಿ ಮುತ್ತಜ್ಜಿಗೆ ಬಾಲ್ಯ ವಿವಾಹ ಆಗಿರಲಿಲ್ಲ ಎನ್ನುವುದು ಬರುತ್ತದೆ ಎಂದು ಅವರು ನೆನಪಿಸಿಕೊಳ್ಳುತ್ತಾರೆ. ಆಗ ಮುತ್ತಜ್ಜಿ 16ನೇ ವರ್ಷಕ್ಕೆ (ಆ ಕಾಲಕ್ಕೆ ಮದುವೆಯ ಕನಿಷ್ಠ ಮಿತಿ 15 ವರ್ಷಗಳಾಗಿದ್ದವು) ಮದುವೆಯಾಗಿರುತ್ತಾಳೆ. ನಂತರ 89ಕ್ಕೆ 16ನ್ನು ಅವರು ಸೇರಿಸಿ ಮುತ್ತಜ್ಜಿಗೆ 105 ವರ್ಷಗಳು ಎಂದು ಹೇಳಿದರು. ಮುತ್ತಜ್ಜಿಯು ತನ್ನ ಮೊದಲ ಮಗುವನ್ನು ಹಡೆಯುವ ಮೊದಲು (1934ಕ್ಕೂ ಮೊದಲು) ಒಂದೆರಡು ವರ್ಷ ಕಾದಿರಬಹುದು ಎಂದು ಒಬ್ಬ ವಿದ್ಯಾರ್ಥಿಯು ತರ್ಕಿಸಿದ. ನಂತರ ಕೊಟ್ಟಿರುವ ಎಲ್ಲಾ ಸುಳುಹುಗಳನ್ನು ತಾಳೆ ಹಾಕಿ ಅವರೆಲ್ಲರೂ 105ಕ್ಕೆ 2 ವರ್ಷಗಳನ್ನು ಸೇರಿಸಿ ಮುತ್ತಜ್ಜಿಯ ವಯಸ್ಸು 107 ಎಂದು ನಿರ್ಧರಿಸಿರು. ಮುತ್ತಜ್ಜಿಯ ವಯಸ್ಸು 107 ಎನ್ನುವುದನ್ನು ನಾವೆಲ್ಲ ಒಪ್ಪಿಕೊಂಡೆವು. ಕೊನೆಗೆ 2023ರಿಂದ 107ನ್ನು ಕಳೆದು ಮುತ್ತಜ್ಜಿಯು ಹುಟ್ಟಿದ ವರ್ಷವನ್ನು ಕಂಡುಹಿಡಿದೆವು.

ಇಲ್ಲಿ ನೋಡಿದ ಹಾಗೆ, ವಾಸ್ತವ ಬದುಕಿನ ಸನ್ನಿವೇಶಗಳನ್ನು ಬಳಸಿ ಚರ್ಚೆಗಳು ಮತ್ತು ತಾರ್ಕಿಕ ಆಲೋಚನೆಗಳ ಮೂಲಕ ಮಕ್ಕಳನ್ನು ಕಥೆಯೊಂದರಲ್ಲಿ ತೊಡಗಿಸಿದರೆ ಅದು ಅವರ ಕುತೂಹಲವನ್ನು ಕೆರಳಿಸುವುದಲ್ಲದೆ ಗಣಿತದ ಸಮಸ್ಯೆಗಳನ್ನು ಬಿಡಿಸಲು ಪ್ರೇರಣೆಯನ್ನೂ ಒದಗಿಸುತ್ತದೆ.





*Figure 6.*

[ಗಮನಿಸಿ: ಲೇಖನದಲ್ಲಿ ಬಳಸಿಕೊಂಡ ಮಕ್ಕಳ ಲೆಕ್ಕದ ಚಿತ್ರಗಳು ಇಂಗ್ಲೀಷಿನಲ್ಲಿ ಮರುಸೃಷ್ಟಿಸಲಾದಂಥವು.]

### ಕೊನೆ ಟಿಪ್ಪಣಿಗಳು

i ಈ ಕತೆಯ ಕಾಲ 2016. ಅದು ಅದರ ಮೊದಲ ಪ್ರಕಟಣೆಯ ವರ್ಷ. ತರಗತಿಯಲ್ಲಿ ಪಾಠ ಮಾಡುವಾಗ 2023 ಕ್ಕೆ ಹೊಂದಿಸಿಕೊಂಡು ಮುತ್ತಜ್ಜಿಯ ವಯಸ್ಸನ್ನು ಬದಲಿಸಲಾಗಿದೆ.

ii ಕೃಷ್ಣರಾಜಸಾಗರ ಅಣೆಕಟ್ಟು.

### ಪರಾಮರ್ಶನಗಳು:

How Old is Muttajji? Written by Roopa Pai; Illustrated by Kaveri Gopalakrishnan. Pratham Books. https://storyweaver.org.in/stories/5699-how-old-is-*Muttajji*?mode=read



**ರಂಗನಾಥ್** ಅವರು ಕರ್ನಾಟಕದ ಯಾದಗಿರಿ ಜಿಲ್ಲೆಯ ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನ ಜಿಲ್ಲಾ ಸಂಸ್ಥೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಗಣಿತವನ್ನು ಕಥೆಗಳು, ಸಮಸ್ಯಾ–ಪರಿಹಾರದ ವಿಧಾನಗಳು ಮತ್ತು ಒಗಟುಗಳ ಮೂಲಕ ಕಲಿಸುವುದನ್ನು ಅವರು ಆನಂದಿಸುತ್ತಾರೆ. ಸಮಕಾಲೀನ ನಾನ್–ಫಿಕ್ಷನ್ ಪುಸ್ತಕಗಳನ್ನು ಓದುವುದು ಅವರ ಮೆಚ್ಚಿನ ಹವ್ಯಾಸವಾಗಿದೆ. ಅವರನ್ನು ranganath@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಪ್ರಜ್ಞಾ ಎಲ್.ಎಸ್.** | ಪರಿಶೀಲನೆ: **ಲತಾ ಕೆ.ಸಿ.**

ಮಕ್ಕಳೊಂದಿಗೆ ಓದಲು ಅಥವಾ ಚರ್ಚಿಸಲು ಪುಸ್ತಕವೊಂದನ್ನು ಆಯ್ಕೆ ಮಾಡಿಕೊಳ್ಳುವಾಗ ನಾವು ಈ ಪ್ರಶ್ನೆಯನ್ನು ಕೇಳಿಕೊಳ್ಳಲೇಬೇಕು: ‘ ಈ ಪುಸ್ತಕದಲ್ಲಿ ಮಕ್ಕಳು ತಮ್ಮ ಬದುಕಿಗೆ ಅನ್ವಯಿಸಿಕೊಳ್ಳುವಂತಹ, ಅವರಿಗೆ ಬೇರೆ ದೃಷ್ಟಿಕೋನವನ್ನು ನೀಡುವಂತಹ ಅಥವಾ ಅವರಲ್ಲಿ ಹೊಸ ಆಲೋಚನೆಗಳನ್ನು ಹುಟ್ಟಿಸುವಂತಹ ವಿಶೇಷ ಸಂಗತಿಯೇನಾದರೂ ಇದೆಯೆ?’ ಸಾಹಿತ್ಯವನ್ನು ಓದುವುದರಿಂದ ನಾವು ‘ಹೊಸ’ ಮನುಷ್ಯರಾಗುತ್ತೇವೆ; ಓದಿದ ನಂತರ ನಾವು ಮೊದಲಿನ ಆ ವ್ಯಕ್ತಿ ಅಲ್ಲವೇ ಅಲ್ಲ ಎಂಬಂತೆ ಅದು. ಯಾವುದೋ ಒಂದು ವಿಶೇಷ ಪುಸ್ತಕವು ಅವರ [ಮಕ್ಕಳ] ದೀರ್ಘಕಾಲೀನ ಸ್ಮೃತಿಯಲ್ಲಿ ಅಚ್ಚಳಿಯದಂತೆ ಊರಿಬಿಡುವ ಸಾಧ್ಯತೆ ಇರುತ್ತದೆ; ಅದನ್ನು ಮರೆಯಲು ಸಾಧ್ಯವಿಲ್ಲ ಎಂಬಂತೆ.

– ಕಮಲೇಶ ಚಂದ್ರ ಜೋಷಿ, ಲೈಟನಿಂಗ್ (ಬಿಗ್ ಬುಕ್), ಪುಟ ...

# ಬಕೆಟ್ಟಿನಲ್ಲಿ ಸಮುದ್ರ | ತರಗತಿಯಲ್ಲಿನ ಕಥೆ

ಶ್ವೇತಾ ವಿಶ್ವಕರ್ಮ

ಪ್ರಾಥಮಿಕ ಶಾಲಾ ತರಗತಿಯಲ್ಲಿ ಮಕ್ಕಳ ಭಾಷಾ ಕೌಶಲಗಳು ಸಾಕಷ್ಟು ಬೆಳವಣಿಗೆ ಕಾಣುವಲ್ಲಿ ಮಕ್ಕಳ ಸಾಹಿತ್ಯದ ಮಹತ್ವ ಏನು ಎಂಬುದರ ಕುರಿತು ನಮಗೆಲ್ಲಾ ಈಗಾಗಲೇ ಸಾಕಷ್ಟು ತಿಳಿದಿದೆ. ಮಕ್ಕಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಉತ್ತಮವಾಗಿರುವ ಪದ್ಯಗಳು, ಕಥೆಗಳು, ಸಚಿತ್ರ ವಿವರಣೆಗಳು, ಉಲ್ಲೇಖಗಳು, ವೈವಿಧ್ಯಮಯ ಪಾತ್ರಗಳು ಇತ್ಯಾದಿಗಳೆಲ್ಲವೂ ಒಂದು ಉತ್ತಮ ಮಕ್ಕಳ ಸಾಹಿತ್ಯದಲ್ಲಿ ಸೇರಿವೆ. ಇಂದಿನ ಮಕ್ಕಳ ಸಾಹಿತ್ಯವು ವೈವಿಧ್ಯದಿಂದ ಕೂಡಿದ್ದು, ಸಾಮಾಜಿಕ, ಆರ್ಥಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ಸನ್ನಿವೇಶಗಳನ್ನು ಒಳಗೊಂಡಿದೆ. ಹೀಗಾಗಿ ಮಕ್ಕಳ ಸಾಹಿತ್ಯದ ಅನ್ವಯಿಸುವಿಕೆ ನಿರ್ದಿಷ್ಟ ಉದ್ದೇಶಗಳಿಗೆ ಸೀಮಿತವಾಗಿಲ್ಲ; ಇದು ನಮಗೆ ಸಾಹಿತ್ಯವನ್ನು ವಿವಿಧ ರೀತಿಯಲ್ಲಿ ಅನ್ವಯಿಸಲು ಅನುಮತಿಸುತ್ತದೆ. ಒಂದು ರೀತಿಯಲ್ಲಿ, ಇದು ಜಗತ್ತನ್ನು ಗ್ರಹಿಸುವ ವಿಧಾನವಾಗಿದೆ.

ಪ್ರಾಥಮಿಕ ಶಾಲಾ ತರಗತಿಗಳಿಗೆ ಬೋಧಿಸುವಾಗ, ಸೃಜನಶೀಲ ಶಿಕ್ಷಕರು ಕಥೆಗಳು, ದಂತ ಕಥೆಗಳು, ಪದ್ಯಗಳು ಮತ್ತು ಸನ್ನಿವೇಶಗಳನ್ನು ಮಕ್ಕಳಿಗೆ ಆಸಕ್ತಿ ಮೂಡಿಸಲು, ಹೊಸ ವಿಷಯಗಳ ಕಲಿಕೆ ಮತ್ತು ಅನ್ವೇಷಣೆಯನ್ನು ಪ್ರೇರೇಪಿಸಲು ಮತ್ತು ಅವರ ಕುತೂಹಲವನ್ನು ಮುಂದುವರಿಸುವ ನಿಟ್ಟಿನಲ್ಲಿ ಪ್ರೋತ್ಸಾಹಿಸಲು ಬಳಸುತ್ತಾರೆ. ಆದರೆ, ಮಕ್ಕಳ ಸಾಹಿತ್ಯವನ್ನು ಕೇವಲ ಭಾಷಾ ಸಾಮರ್ಥ್ಯದ ಬೆಳವಣಿಗೆಯ ದೃಷ್ಟಿಯಿಂದ ನೋಡುವುದರಿಂದ ಅದರ ಮಹತ್ವ ಕಡಿಮೆಯಾಗುತ್ತದೆ. ತರಗತಿಯ ಬೋಧನ ಪ್ರಕ್ರಿಯೆಯಲ್ಲಿ ಯಾವುದೇ ಸಾಹಿತ್ಯ ಪ್ರಕಾರ ಅಥವಾ ಪುಸ್ತಕವನ್ನು ಸೇರಿಸಿದರೆ, ಅದು ಭಾಷಾ ಕೌಶಲಗಳ ಬೆಳವಣಿಗೆಗೆ ಮಾತ್ರವಲ್ಲದೆ ಅದರಲ್ಲಿ ಅಂತರ್ಗತವಾಗಿರುವ ಇತರ ವಿಷಯಗಳಿಗೆ ಸಂಬಂಧಿಸಿದ ಕೌಶಲಗಳ ಬೆಳವಣಿಗೆಗೂ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸುತ್ತದೆ. ಸನ್ನಿವೇಶಗಳು, ಘಟನೆಗಳು ಮತ್ತು ಯಾವುದೇ ನಿರೂಪಣೆ ಅಥವಾ ಪದ್ಯದಲ್ಲಿ ನೀಡಲಾಗಿರುವ ಪಾತ್ರವನ್ನು ಬಳಸಿಕೊಂಡು ಪರಿಸರ ಅಧ್ಯಯನ ವಿಷಯದಲ್ಲಿ (Environmental Studies - EVS) ಅಂತರ್ಗತವಾಗಿರುವ ಗುರಿಗಳ ಮತ್ತು ಸಾಮರ್ಥ್ಯಗಳ ಬೆಳವಣಿಗೆಗೆ ನಾವು ಅವಕಾಶಗಳನ್ನು ಸೃಷ್ಟಿಸಬಹುದು.

## ನಿರ್ದಿಷ್ಟ ಉದಾಹರಣೆ

ನಾನು ನನ್ನ ವಾದವನ್ನು ಅವೆಹಿ– ಅಬಾಕಸ್ ಪ್ರಾಜೆಕ್ಟ್‌ನ ಭಾಗವಾಗಿ ಏಕಲವ್ಯ ಪ್ರಕಾಶನ ಪ್ರಕಟಿಸಿದ ಪುಸ್ತಕದ ಉದಾಹರಣೆಯನ್ನು ತೆಗೆದುಕೊಂಡು ವಿವರಿಸಲು ಬಯಸುತ್ತೇನೆ. 'ಬಾಲ್ತಿ ಕೆ ಅಂದರ್ ಸಮಂದರ್' (ಬಕೆಟ್ನಲ್ಲಿ ಸಮುದ್ರ) ಎಂಬ ಶೀರ್ಷಿಕೆಯು ನೀರಿನ ವಿವಿಧ ಆಯಾಮಗಳನ್ನು ಅತೀವ ಆಸಕ್ತಿದಾಯಕ ರೀತಿಯಲ್ಲಿ ಪರಿಶೋಧಿಸುತ್ತದೆ. ಇದು ನೀರಿನ ಬಳಕೆಯನ್ನು ಮಾತ್ರವಲ್ಲ, ನೀರಿನ ಸಂಪೂರ್ಣ ಪ್ರಯಾಣವನ್ನೂ ಸಹ ಚಿತ್ರಿಸುತ್ತದೆ. ಪರಿಸರ ವಿಜ್ಞಾನ ಬೋಧನೆಯಲ್ಲಿ ಈ ಪುಸ್ತಕವು ಏಕೆ ಅಷ್ಟೊಂದು ಪ್ರಾಮುಖ್ಯ ಹೊಂದಿರುವ ಸಂಪನ್ಮೂಲವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ಇಲ್ಲಿ ನೀರಿನ ಬಗೆಗಿನ ನಿರೂಪಣೆಯು ಸೋನುವಿನ ಬಕೆಟ್ ಎಂಬ ಪಾತ್ರದೊಂದಿಗೆ ಪ್ರಾರಂಭವಾಗುತ್ತದೆ. ಇದು ಸೋನುವಿನ ಬಕೆಟ್‌ನಲ್ಲಿರುವ ನೀರು ಎಲ್ಲಿಂದ ಬರುತ್ತದೆ ಎಂಬುದರ ಅನ್ವೇಷಣೆಯೊಂದಿಗೆ ಆರಂಭಗೊಳ್ಳುತ್ತದೆ – ಇದು ಸಮುದ್ರದಿಂದ ಪ್ರಾರಂಭವಾಗಿ, ಸೂರ್ಯ, ಮೋಡಗಳು, ಪರ್ವತಗಳು, ನದಿಗಳು, ಸರೋವರಗಳು, ಪೈಪುಗಳು ಇತ್ಯಾದಿಗಳೊಂದಿಗೆ ಮುಂದುವರಿಯುತ್ತಾ ಕೊನೆಯಲ್ಲಿ ನಲ್ಲಿಯೊಂದಿಗೆ ಅಂತಿಮಗೊಳ್ಳುತ್ತದೆ. ನಂತರ, ಸೋನುವಿನ ಬಕೆಟ್ನಿಂದ ನೆಲಕ್ಕೆ ಒಸರುವ ನೀರಿನ ಮೂಲಕ ಪುನರಾರಂಭಗೊಳ್ಳುವ ನೀರಿನಚಕ್ರ ಮುಂದುವರಿಯುತ್ತ ಅಂತಿಮವಾಗಿ, ಮತ್ತೆ ಸಮುದ್ರಕ್ಕೇ ಸೇರಿಕೊಳ್ಳುತ್ತದೆ. ಸಾಮಾನ್ಯವಾಗಿ ಇಂತಹ ವಿಷಯವನ್ನು ಕಾವ್ಯಾತ್ಮಕವಾಗಿ ಮತ್ತು ಕಾಲ್ಪನಿಕ ರೀತಿಯಲ್ಲಿ ಚಿತ್ರಿಸುವುದು ಅಷ್ಟೊಂದು ಸುಲಭವಲ್ಲ. ಸಾಮಾನ್ಯವಾಗಿ, ನಮ್ಮ ತರಗತಿಗಳಲ್ಲಿ ಅಂತಹ ವಿಷಯಗಳನ್ನು ಪ್ರಸ್ತುತಪಡಿಸಲು ಒಂದು ಗೊತ್ತುಪಡಿಸಿದ ಸೂತ್ರ ಅಥವಾ ಮಾದರಿಯನ್ನು ನಿರ್ದಿಷ್ಟಪಡಿಸಲಾಗಿರುತ್ತದೆ, ಅಲ್ಲಿ ನೀಡಲಾಗಿರುವ ವಿಷಯವು ವ್ಯಾಖ್ಯಾನ, ಪ್ರಾಮುಖ್ಯ, ಪ್ರಕ್ರಿಯೆ ಮುಂತಾದ ನಿರ್ದಿಷ್ಟ ಅಂಶಗಳಿಗಷ್ಟೇ ಸೀಮಿತವಾಗಿರುತ್ತದೆ. ಆದರೆ ಹೊಸ ರೀತಿಯ ನಿರೂಪಣೆಯಲ್ಲಿ ಪುಸ್ತಕವು ವಿಭಿನ್ನವಾಗಿ ನಿಲ್ಲುತ್ತದೆ ಮತ್ತು ಆಕರ್ಷಿಸುತ್ತದೆ. ನಿರೂಪಣೆ ಮುಂದುವರಿದಂತೆ, ಇತರ ಪಾತ್ರಗಳನ್ನೂ ಪರಿಚಯಿಸಲಾಗುತ್ತದೆ. ಪುಟಗಳ ನಡುವೆ ಮತ್ತು ಸಾಲುಗಳ ಮಧ್ಯೆ ಹೊಂದಾಣಿಕೆಯೊಂದಿಗೆ ಕಥೆಯು ಸರಾಗವಾಗಿ ಸಾಗುತ್ತದೆ. ಇಲ್ಲಿ ನೀಡಿರುವ ಉದಾಹರಣೆಯೊಂದಿಗೆ ನಾವು ಅದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು:

ಇದು ನದಿ  
ಅದು ಸರೋವರಕ್ಕೆ ಹರಿಯುತ್ತದೆ,  
ಅಲ್ಲಿ ನೀರು ನಿಶ್ಚಲವಾಗಿದೆ  
ಮತ್ತು ಅದು ಪೈಪುಗಳಲ್ಲಿ ಹರಿದು  
ನಲ್ಲಿಯಿಂದ ಹನಿಗಳು ತೊಟ್ಟಿಕ್ಕುತ್ತದೆ  
ಮತ್ತು ಇದು ಸೋನುವಿನ ಬಕೆಟ್ಟನ್ನು ತುಂಬಿಸುತ್ತದೆ.

******

ಇದು ಪರ್ವತ
ಅಲ್ಲಿಂದ ನದಿಯು ಸರೋವರಕ್ಕೆ ಹರಿಯುತ್ತದೆ,
ಅದರ ನಿಶ್ಚಲ ನೀರು
ಪೈಪುಗಳ ಮೂಲಕ ಹರಿದು ನಲ್ಲಿಯಲ್ಲಿ ತೊಟ್ಟಿಕ್ಕುತ್ತದೆ
ಮತ್ತು ಇದು ಸೋನುವಿನ ಬಕೆಟ್ಟನ್ನು ತುಂಬಿಸುತ್ತದೆ.

ಈ ಅನುಕ್ರಮವು ಪದಗಳಲ್ಲಿ ಮಾತ್ರವಲ್ಲದೆ ಸಚಿತ್ರ ನಿರೂಪಣೆಗಳಲ್ಲಿಯೂ ಪ್ರತಿಫಲಿಸುತ್ತದೆ. ಅದೇ ರೀತಿ ಪಠ್ಯಪುಸ್ತಕದಲ್ಲಿ ವಿವರಣೆಗೆ ಬಳಸಲಾದ ಚಿತ್ರಗಳು ಅದು ಸೋನುವಿನ ಮನೆಯ ಚಿತ್ರವಾಗಿರಬಹುದು ಅಥವಾ ಹಲವಾರು ಸ್ಥಳಗಳಲ್ಲಿ ಹರಿಯುವ ನೀರಿನ ಹರಿವಿನ ಮಾರ್ಗವಾಗಿರಬಹುದು ವೈವಿಧ್ಯಮಯವಾಗಿದ್ದು ಮಕ್ಕಳನ್ನು ಸೆಳೆಯುವಂತಿದೆ. ಸುತ್ತಮುತ್ತಲಿನ ಪ್ರದೇಶಗಳು, ಭೂಪ್ರದೇಶದ ದೃಶ್ಯಗಳು ಮತ್ತು ಅಲ್ಲಿ ನಡೆಯುವ ಚಟುವಟಿಕೆಗಳನ್ನು ಚಿತ್ರಗಳಲ್ಲಿ ಸೂಕ್ಷ್ಮವಾಗಿ ಸೆರೆಹಿಡಿಯಲಾಗಿದೆ. ಚಿತ್ರ ಸರಣಿಯು ವಿವಿಧ ಹಿನ್ನೆಲೆಗಳಲ್ಲಿ ಜೀವನವನ್ನು ಚಿತ್ರಿಸುತ್ತದೆ. ಈ ಜೀವನ ಚಕ್ರವು ಮನುಷ್ಯರಿಗೆ ಸೀಮಿತವಾಗಿಲ್ಲ; ಪ್ರಾಣಿಗಳು, ಮರಗಳು ಮತ್ತು ಸಸ್ಯಗಳು, ಕೆಲಸಗಾರರು, ವಾಸಸ್ಥಳಗಳ ರಚನೆ ಹೀಗೆ ವಿವಿಧ ಸ್ತರಗಳನ್ನು ಸಹ ಕಾಣಬಹುದು. ಪುಸ್ತಕದಲ್ಲಿನ ಕಥೆಯ ಜೊತೆಗೆ ದೃಶ್ಯಗಳು ಸಾಗುತ್ತವೆ.

## ಪರಿಸರ ಅಧ್ಯಯನ (EVS)ಕ್ಕಾಗಿ ಪುಸ್ತಕವನ್ನು ಬಳಸುವುದು

ಈ ಹಿಂದೆ ಹೇಳಿದಂತೆ, ಈ ಪುಸ್ತಕವನ್ನು ನಾವು ಕೌಶಲ ಅಭಿವೃದ್ಧಿ ಮತ್ತು ಪರಿಸರ ಅಧ್ಯಯನದ ಬೋಧನೆಗೆ ನಿಗದಿಪಡಿಸಲಾದ ಉದ್ದೇಶಗಳ ಸಾಧನೆಗಾಗಿ ಬಳಸಿಕೊಳ್ಳಬಹುದು. ನಾವು ಇದನ್ನು ಈ ರೀತಿ ನೋಡೋಣ: ಪರಿಸರ ಅಧ್ಯಯನ ಪಠ್ಯಕ್ರಮವು ನೀರನ್ನು ಒಂದು ಪಠ್ಯವಿಷಯವಾಗಿ ಪಠ್ಯಪುಸ್ತಕದಲ್ಲಿ ಸಂಯೋಜಿಸುತ್ತದೆ. ಎನ್‌ಸಿಇಆರ್‌ಟಿ (NCERT) ಅಥವಾ ಇತರ ಯಾವುದೇ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕದಲ್ಲಿ 3ನೇ ತರಗತಿಯಿಂದ 5ನೇ ತರಗತಿಯವರೆಗೆ ನೀರಿನ ಬಗ್ಗೆ ಅನೇಕ ಪಾಠಗಳನ್ನು ಕಾಣಬಹುದು. ಈ ಪಾಠಗಳು ಒಳಗೊಂಡಿರುವ ಚಟುವಟಿಕೆಗಳು ಮತ್ತು ಅಭ್ಯಾಸಗಳು ವಿದ್ಯಾರ್ಥಿಗಳಿಗೆ ನೀರಿನ ಮೂಲಗಳು, ಉಪಯೋಗಗಳು, ಪ್ರಾಮುಖ್ಯ, ಶುಚಿತ್ವ, ಸಂರಕ್ಷಣೆ ಮತ್ತು ನೀರಿನ ಮೌಲ್ಯವನ್ನು ಪರಿಚಯಿಸುತ್ತದೆ, ಜೊತೆಗೆ ಮಕ್ಕಳು ತಮ್ಮ ಸುತ್ತಲಿರುವ ಈ ವಿಷಯಗಳಿಗೆ ಸಂವೇದನಶೀಲರಾಗುವಂತೆ ಮಾಡುತ್ತವೆ. ನಮ್ಮ ತರಗತಿಗಳಲ್ಲಿ ಮಕ್ಕಳ ಪುಸ್ತಕಗಳನ್ನು ಬಳಸುವ ಮೂಲಕ ನಾವು ಈ ಪ್ರಕ್ರಿಯೆಯನ್ನು ಬೆಂಬಲಿಸಬಹುದು. ಈ ಪುಸ್ತಕದ ಸಹಾಯದಿಂದ ನಾವು ಇದನ್ನು ಕೆಲವು ಹಂತಗಳಲ್ಲಿ ಗ್ರಹಿಸಲು ಪ್ರಯತ್ನಿಸುತ್ತೇವೆ.

## ಚರ್ಚೆ

ಶಿಕ್ಷಕರು ಪುಸ್ತಕದ ಶೀರ್ಷಿಕೆಯನ್ನು ಕೇಳುವ ಮೂಲಕ ತರಗತಿಯನ್ನು ಪ್ರಾರಂಭಿಸಬಹುದು, ಬಾಲ್ಟಿ ಕೆ ಅಂದರ್ ಸಮಂದರ್ – ಸಮುದ್ರವನ್ನು ಬಕೆಟ್‌ನಲ್ಲಿ ಹಿಡಿಸಲು ಸಾಧ್ಯವೇ? ಅನೇಕ ಮಕ್ಕಳಿಗೆ ಸಾಗರದ ಪರಿಚಯವಿಲ್ಲದಿರಬಹುದು. ಈ ವಿಷಯವನ್ನು ತರಗತಿಯಲ್ಲಿ ಚರ್ಚಿಸುವ ಮೂಲಕ ಮಕ್ಕಳು ಸಾಗರದ ಕಲ್ಪನೆಯನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಅಂತೆಯೇ, ಪುಸ್ತಕದಲ್ಲಿ ನೀಡಲಾದ ಹೊಸ ಪದಗಳನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಲು ಸಂಭಾಷಣೆಗಳಲ್ಲಿ ಅವುಗಳನ್ನು ಬಳಸಿಕೊಳ್ಳಬಹುದು. ಪುಸ್ತಕದಲ್ಲಿನ ವಿವರಣೆಗಳ ಬಗ್ಗೆ ಮಾತನಾಡುವುದು ಮಕ್ಕಳಿಗೆ ಪಠ್ಯದೊಂದಿಗೆ ಸಂಪರ್ಕವನ್ನು ಏರ್ಪಡಿಸಲು ಉಪಯುಕ್ತವಾಗಿದೆ. ಶಿಕ್ಷಕರು ಸಂಭಾಷಣೆಯನ್ನು ಮಕ್ಕಳಿಗೆ ಅರ್ಥವಾಗುವ ಸನ್ನಿವೇಶಗಳಿಗೆ ಪ್ರಸ್ತುತಪಡಿಸಲು ಪ್ರಯತ್ನಿಸಬಹುದು ಮತ್ತು ಉದಾಹರಣೆಗಳನ್ನು ಒದಗಿಸಬಹುದು ಮತ್ತು ಅವರಿಗೆ ಕಲ್ಪನೆಗೆ ಮತ್ತು ಹೊಸ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳಲು ಅವಕಾಶಗಳನ್ನು ನೀಡಬಹುದು.

## ಗಮನಿಸುವುದು ಮತ್ತು ಸಂಪರ್ಕಿಸುವುದು

ಈ ಪುಸ್ತಕವು ಕೇವಲ ನೀರಿನ ಪ್ರಯಾಣವನ್ನು ಮಾತ್ರ ವಿವರಿಸುವುದಿಲ್ಲ, ಜೊತೆಗೆ ಇದು ಇತರ ಪರಿಕಲ್ಪನೆಗಳಿಗೂ ಸಂಪರ್ಕ ಕಲ್ಪಿಸುತ್ತದೆ. ಪುಸ್ತಕವು ಪ್ರಾಣಿಗಳು, ಸಸ್ಯಗಳು, ಮರಗಳು, ಜೀವನ ವಿಧಾನಗಳು, ಚಟುವಟಿಕೆಗಳು, ಉಡುಪುಗಳು ಮುಂತಾದವುಗಳನ್ನು ಒಳಗೊಂಡಂತೆ ವ್ಯಾಪಕವಾದ ಸಚಿತ್ರ ವಿವರಣೆಗಳನ್ನು ಹೊಂದಿದೆ. ಮಕ್ಕಳಿಗೆ ಪುಸ್ತಕದಲ್ಲಿನ ಚಿತ್ರಗಳನ್ನು ನೋಡುತ್ತ ವಿವಿಧ ವಸ್ತುಗಳ ಪಟ್ಟಿಯನ್ನು ವಿಂಗಡಿಸುವ ಮತ್ತು ಹೊಸದಾಗಿ ಅದನ್ನು ರಚಿಸುವ ಚಟುವಟಿಕೆಯನ್ನು ನೀಡಬಹುದು. ಇದರೊಂದಿಗೆ ಇತರ ಪರಿಸರಗಳಲ್ಲಿನ ವ್ಯತ್ಯಾಸಗಳು ಮತ್ತು ಹೋಲಿಕೆಗಳನ್ನು ಮಕ್ಕಳೊಂದಿಗೆ ಚರ್ಚಿಸಬಹುದು.

## ಅವರ ಸುತ್ತಮುತ್ತಲಿನ ಘಟನೆಗಳಿಗೆ ಸಂಬಂಧಿಸಿದ ಘಟನೆಗಳು

ಪರಿಸರ ಅಧ್ಯಯನದ ಬೋಧನೆಯ ಪ್ರಾಥಮಿಕ ಗುರಿಗಳಲ್ಲಿ ಮುಖ್ಯವಾದುದುದು ಮಕ್ಕಳು ತಮ್ಮ ಸುತ್ತಮುತ್ತಲಿರುವ ವಿಷಯವನ್ನು ಅರ್ಥಮಾಡಿಕೊಳ್ಳುವ ಮೂಲಕ ಜಗತ್ತನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಕರು ಸಹಾಯ ಮಾಡುವುದು. ಹೊಸ ಜ್ಞಾನದತ್ತ ಸಾಗಲು ಅವರು ತಮಗೆ ಈಗಾಗಲೇ ತಿಳಿದಿರುವ ಮಾಹಿತಿಯನ್ನು ಬಳಸಿಕೊಳ್ಳಬಹುದು. ಹೀಗಾಗಿ ಈ ರೀತಿಯ ಸಂದರ್ಭಗಳಿಗೆ ಒದಗುವಂತೆ ಮಕ್ಕಳಿಗೆ ಕಲಿಸುವಾಗ, ಹೊಸ ಮಾಹಿತಿಯ ಕ್ರೋಡೀಕರಣಕ್ಕೆ ಸಹಾಯ ಮಾಡುವ ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸುವುದು ಅತ್ಯಗತ್ಯ. ಪ್ರಸ್ತುತ

ಸಂದರ್ಭದಲ್ಲಿ, ಇದು ಸಮೀಪದ ನೀರಿನ ಮೂಲಗಳನ್ನು ಅರ್ಥ ಮಾಡಿಕೊಳ್ಳುವುದು, ಅವುಗಳಲ್ಲಿ ಸಂಭವಿಸುವ ಬದಲಾವಣೆಗಳನ್ನು ಗಮನಿಸುವುದು ಮತ್ತು ಗ್ರಹಿಸುವುದು, ಹಾಗೆಯೇ ತಮ್ಮ ಪ್ರದೇಶದಲ್ಲಿ ಇಲ್ಲದ ಇತರ ಹೊಸ ನೀರಿನ ಮೂಲಗಳ ಬಗ್ಗೆ ತಿಳಿದುಕೊಳ್ಳುವುದು. ಉದಾಹರಣೆಗೆ, ಕೆರೆಗಳು ಮತ್ತು ನೀರಿನ ಟ್ಯಾಂಕ್‌ಗಳ ಮೂಲಕ ನದಿಗಳು ಮತ್ತು ಸಮುದ್ರಗಳನ್ನು ಅರ್ಥ ಮಾಡಿಕೊಳ್ಳುವುದು ಇತ್ಯಾದಿಗಳನ್ನು ಒಳಗೊಂಡಿದೆ.

## ಕಾರ್ಯಯೋಜನೆ / ಪ್ರಾಜೆಕ್ಟ್ ವರ್ಕ್

ಮಕ್ಕಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸುವ ಮೂಲಕ ಆ ಗುಂಪುಗಳಿಗೆ ಅಥವಾ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಕಾರ್ಯಯೋಜನೆಯನ್ನು ನೀಡಬಹುದು. ಉದಾಹರಣೆಗೆ, ಸಮೀಪದ ನೀರಿನ ಮೂಲಗಳನ್ನು ಶೋಧಿಸುವುದು, ಗೃಹಬಳಕೆಯಲ್ಲಿ ಮತ್ತು ಇತರ ಉದ್ದೇಶಗಳಿಗಾಗಿ ನೀರಿನ ಬಳಕೆಯ ಕುರಿತ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಅವರ ಗ್ರಾಮ, ವಾಸಿಸುವ ಪ್ರದೇಶ ಅಥವಾ ಪಟ್ಟಣಕ್ಕೆ ನೀರು ಎಲ್ಲಿಂದ ಬರುತ್ತದೆ ಎಂಬುದನ್ನು ನಿರ್ಧರಿಸುವುದು, ಅನ್ವೇಷಿಸಬಹುದಾದ ಕೆಲವು ವಿಷಯಗಳು. ಈ ಸಂಬಂಧಿತ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಶ್ನಾವಳಿ ತಯಾರಿಕೆ, ಇತರರೊಂದಿಗೆ ಸಂವಹನ ಮತ್ತು ವೀಕ್ಷಣೆಯಂತಹ ಕೌಶಲಗಳ ಬಳಕೆಯ ಕುರಿತಾಗಿ ತಿಳಿಸಬಹುದು. ಅಂತಿಮವಾಗಿ, ಮಕ್ಕಳ ಸಂಶೋಧನೆಗಳನ್ನು ದಾಖಲಿಸಬಹುದು ಮತ್ತು ತರಗತಿಯಲ್ಲಿ ಪ್ರಸ್ತುತಪಡಿಸಬಹುದು. ಈ ರೀತಿಯ ಕಾರ್ಯಯೋಜನೆಯು ಮಕ್ಕಳು ಯಾವುದೇ ವಿಷಯವನ್ನು ತಮ್ಮ ಸ್ವಂತ ಅನುಭವಗಳ ಮೂಲಕ ಅರಿತುಕೊಂಡು ವಿಷಯವನ್ನು ಗ್ರಹಿಸಲು ಅನುವು ಮಾಡಿಕೊಡುತ್ತದೆ.

## ಇತರ ಸಂಪನ್ಮೂಲಗಳು

ಇದು ಒಂದು ಪುಸ್ತಕದ ಉದಾಹರಣೆಯಾಗಿದೆ. ಇತರ ಪುಸ್ತಕಗಳು ಪರಿಸರ ಮತ್ತು ನಮ್ಮ ಸುತ್ತಲಿನ ಪ್ರಪಂಚಕ್ಕೆ ಸಂಬಂಧಿಸಿದ ಇದೇ ರೀತಿಯ ಘಟನೆಗಳು ಮತ್ತು ವಿಷಯಗಳನ್ನು ಹೆಚ್ಚು ಸಮಗ್ರ ರೀತಿಯಲ್ಲಿ ಅನ್ವೇಷಿಸುತ್ತವೆ. ಉದಾಹರಣೆಗೆ, ಬೀಜ್ ಬೋಯಾ (ಏಕಲವ್ಯ ಪ್ರಕಾಶನ), ಈ ಪುಸ್ತಕವು ಬೀಜ ಮೊಳಕೆಯೊಡೆದು, ಸಸಿ ಮರವಾಗಿ ಬೆಳೆದು ಮತ್ತು ಹಣ್ಣು ಬಿಡುವ ವಿವಿಧ ಹಂತಗಳನ್ನು ವಿವರಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಮೋರ್ ಡುಂಗ್ರಿ (ಜುಗ್ನು ಪ್ರಕಾಶನ) ಹಳ್ಳಿಗಳಿಂದ ನಗರಗಳಿಗೆ ಜನರು ವಲಸೆ ಹೋಗುವುದನ್ನು ಮತ್ತು ಮಾನವರು ಮತ್ತು ಪ್ರಾಣಿಗಳ ನಡುವಿನ ಬಾಂಧವ್ಯವನ್ನು ಅತೀವ ಸಂವೇದನೆಯೊಂದಿಗೆ ಚಿತ್ರಿಸುತ್ತದೆ. ಪಠ್ಯಪುಸ್ತಕದ ಜೊತೆಗೆ ಇಂತಹ ಸಂಪನ್ಮೂಲಗಳನ್ನು ತರಗತಿಯಲ್ಲಿ ಸೇರಿಸುವುದು ಅತ್ಯಗತ್ಯ.

**ಕೊನೆಟಿಪ್ಪಣಿಗಳು**

i AVEHI ABACUS PROJECT (AAP) aims to strengthen the quality and content of education in primary schools. http://www.avehiabacus.org/
(ಅವೇಹಿ ಅಬಾಕಸ್ ಪ್ರಾಜೆಕ್ಟ್ (ಎಎಪಿ) ಪ್ರಾಥಮಿಕ ಶಾಲೆಯ ಶಿಕ್ಷಣದಲ್ಲಿ ಗುಣಮಟ್ಟ ಮತ್ತು ವಸ್ತು/ವಿಷಯವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.)

ii Balti Ke Andar Samandar. Avehi-abacus. Illustrator: Deepa Balsawar. Eklavya. https://eklavyapitara.in/products/balti-ke-andar-samandar
(ಬಾಲ್ತಿ ಕೆ ಅಂದರ್ ಸಮಂದರ್, ಅವೇಹಿ ಅಬಾಕಸ್. ವಿವರಣೆ: ದೀಪಾ ಬಾಲ್ಸವಾರ್ ಏಕಲವ್ಯ)



**ಶ್ವೇತಾ ವಿಶ್ವಕರ್ಮ** ಮಧ್ಯಪ್ರದೇಶದ ಖಾರ್ಗೋನ್‌ನಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಛತ್ತೀಸ್‌ಗಢ ತಂಡದೊಂದಿಗೆ ಕೆಲಸ ಮಾಡುತ್ತಾರೆ. ಅವರು ಶಿಕ್ಷಕರೊಂದಿಗೆ ಕ್ಷೇತ್ರ ಮಟ್ಟದಲ್ಲಿ ತೊಡಗಿಸಿಕೊಳ್ಳುವಿಕೆಗಳು, ಭಾಷಾ ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದ ಕಲಿಕೋಪಕರಣಗಳ ಅಭಿವೃದ್ಧಿ ಪ್ರಕ್ರಿಯೆಗಳ ಭಾಗವಾಗಿದ್ದಾರೆ. ಇದಕ್ಕೂ ಮುನ್ನ ಅವರು ಭೋಪಾಲ್‌ನಲ್ಲಿ ಮುಸ್ಕಾನ್ ಸಂಸ್ಥೆಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದರು. ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರು ಮಕ್ಕಳ ಸಾಹಿತ್ಯವನ್ನು ಇಷ್ಟಪಡುತ್ತಾರೆ ಮತ್ತು ವಿವಿಧ ಸಂದರ್ಭಗಳಿಗೆ ಅನುಗುಣವಾಗಿ ಅದನ್ನು ಹೇಗೆ ರಚಿಸಲಾಗುತ್ತಿದೆ ಎಂಬುದನ್ನು ಅನ್ವೇಷಿಸಲು ಮತ್ತು ಅರ್ಥ ಮಾಡಿಕೊಳ್ಳಲು ಬಯಸುತ್ತಾರೆ. ಅವರನ್ನು anuja.venkataraman@apu.edu.in ಮೂಲಕ ಸಂಪರ್ಕಿಸಬಹುದು.

ಅನುವಾದ: **ಶೌಕತ್ ಅಲಿ** | ಪರಿಶೀಲನೆ: **ಲತಾ ಕೆ.ಸಿ.**

# ವಿಜ್ಞಾನ ತರಗತಿಯಲ್ಲಿ ಜನಪ್ರಿಯ ಕಥೆಗಳು

ವೆಂಕಟ ನಾಗ ವಿನಯ ಸುರಂ

"ಮತ್ತು ಹೀಗೆ, ಕಾಗೆ ತನ್ನ ಬಾಯಾರಿಕೆಯನ್ನು ನೀಗಿಸಿಕೊಂಡು ಸಂತಸದಿಂದ ಹಾರಿಹೋಯಿತು."

"ಮೊಲ ತನ್ನ ತಪ್ಪನ್ನು ಅರಿತುಕೊಂಡು ಆಮೆಯ ಬಳಿ ಸೋಲೊಪ್ಪಿಕೊಂಡಿತು."

"ಯುರೇಕಾ – ಯುರೇಕಾ ಎನ್ನುತ್ತಾ ಆತ ತನ್ನ ಸ್ನಾನದ ತೊಟ್ಟಿಯಿಂದ ನೇರವಾಗಿ ರಸ್ತೆಗೆ ಓಡಿದ."

ನಮ್ಮಲ್ಲಿ ಹೆಚ್ಚಿನವರಿಗೆ ಈ ಸಾಲುಗಳು ತಾವು ಬಾಲ್ಯದಲ್ಲಿ ಆಲಿಸಿದ್ದ ಅಥವಾ ಓದಿದ್ದ ಕಥೆಗಳ ಸಾಲುಗಳಾಗಿ ನೆನಪಿಗೆ ಬರುತ್ತವೆ. ನಮ್ಮಲ್ಲಿ ಹೆಚ್ಚಿನವರು ಒಳ್ಳೆಯ ಕಥೆಯನ್ನು ಆನಂದಿಸುತ್ತಾರೆ, ಆದರೆ, ಕಥೆಗಳು ಉತ್ತಮ ಶಿಕ್ಷಣ ಮೌಲ್ಯವನ್ನೂ ಹೊಂದಿವೆ, ಅದೂ ವಿಶೇಷವಾಗಿ ವಿಜ್ಞಾನದ ತರಗತಿಗಳಲ್ಲಿ. ಜಗತ್ತಿನ ವಿವಿಧ ಅಂಶಗಳ ನಡುವಿನ ಸಂಬಂಧಗಳನ್ನು ಅನ್ವೇಷಿಸುವ ಮತ್ತು ರಚಿಸುವ ಮೂಲಕ ನಾವು ನಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಮಾಡುವ ಪ್ರಯತ್ನವೆಂದು ವಿಜ್ಞಾನವನ್ನು ವ್ಯಾಖ್ಯಾನಿಸು-ವುದಾದರೆ ತರಗತಿಯಲ್ಲಿನ ವಿಜ್ಞಾನ ಬೋಧನೆಯು ಸಹ ವಿದ್ಯಾರ್ಥಿಗೆ ಪರಿಶೋಧನೆ, ದಾಖಲಿಸಿಕೊಳ್ಳುವುದು ಮತ್ತು ಅನ್ವೇಷಣೆಯನ್ನು ವಿಶ್ಲೇಷಿಸುವುದರ ಮೌಲ್ಯವನ್ನು ಅಭ್ಯಾಸ ಮಾಡಲು ಮತ್ತು ಅರಿತುಕೊಳ್ಳಲು ಮಾಡಿದ ಅವಲೋಕನಗಳು ಮತ್ತು ಒಳಗೊಂಡಿರುವ ಬಹು ಘಟಕಗಳ ನಡುವಿನ ಸಂಬಂಧಗಳನ್ನು ರಚಿಸಲು ದಾರಿ ಮಾಡಿಕೊಡಬೇಕು.

ಮಕ್ಕಳ ಆಸಕ್ತಿಯನ್ನು ಉಳಿಸಿಕೊಂಡು ಇಂತಹ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು ಕೆಲವೊಮ್ಮೆ ಸವಾಲಿನ ಕೆಲಸವಾಗಿರುತ್ತದೆ. ಅಂತಹ ಸಮಯದಲ್ಲಿ ಕೇವಲ ಚರ್ಚೆಯನ್ನು ಪ್ರಾರಂಭಿಸಲು ಮಾತ್ರವಲ್ಲದೆ, ಪ್ರಕ್ರಿಯೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲೂ ಸಹ ಉತ್ತಮ ಕಥೆಯು ನೆರವಿಗೆ ಬರಬಹುದು. ಈಗಾಗಲೇ ಅಸ್ತಿತ್ವದಲ್ಲಿರುವ ಕಲಿಕೆಗಳನ್ನು ಬಲಪಡಿಸಲು ಮತ್ತು ಮೌಲ್ಯಮಾಪನಕ್ಕೆ ಕಥೆಗಳು ಮತ್ತು ಕಥೆ ಹೇಳುವಿಕೆಯನ್ನು ಸಾಧನಗಳಾಗಿ ಬಳಸಬಹುದು. ಇದರ ಜೊತೆಗೆ, ವಿದ್ಯಾರ್ಥಿಗಳು ತಮ್ಮ ಅವಲೋಕನಗಳು ಅಥವಾ ಅನುಭವಗಳ ಸುತ್ತ ನಿರೂಪಣೆಗಳನ್ನು ಅಭಿವೃದ್ಧಿಪಡಿಸಲು ಹೇಳುವುದು ಅವರ ಸಂವಹನ ಸಾಮರ್ಥ್ಯಗಳನ್ನು ಸಮೃದ್ಧಗೊಳಿಸುತ್ತದೆ. ವೈಜ್ಞಾನಿಕ ಶಬ್ದಕೋಶಕ್ಕಿಂತಲೂ (scientific vocabulary) ಮಿಗಿಲಾಗಿ ಕಥೆಗಳು ಬಳಸುವ ಭಾಷೆ ವಿದ್ಯಾರ್ಥಿಗಳಿಗೆ ಹೆಚ್ಚು ಹತ್ತಿರವಾಗುತ್ತದೆ. ಈ ಅಂಶವನ್ನು ವಿವರಿಸಲು, ನಾನು ಕಲಿಸುವಾಗ ಕಥೆಗಳನ್ನು ಬಳಸುವ ಎರಡು ಅನುಭವಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ವಿದ್ಯಾರ್ಥಿಗಳ ವಿವಿಧ ವಯಸ್ಸಿನ ಗುಂಪುಗಳ ಭಾಗೀದಾರರೊಂದಿಗೆ ಅವರ ಅರಿವಿನ ಮಟ್ಟಕ್ಕೆ ಅನುಗುಣವಾಗಿ ಪರಿಕಲ್ಪನೆಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿಕೊಂಡು ಇವುಗಳನ್ನು ಪ್ರಯತ್ನಿಸಲಾಗಿದೆ.

## ಶಿಕ್ಷಣ ವಿಧಾನವಾಗಿ (pedagogy) ಕೆಲವು ಕಥೆಗಳು

### ಬಾಯಾರಿದ ಕಾಗೆ

ಭಿನ್ನ ಸಂದರ್ಭಗಳಲ್ಲಿ ವಸ್ತುಗಳು ಭಿನ್ನವಾಗಿ ವರ್ತಿಸುತ್ತವೆ. ಕೆಲವು ವಸ್ತುಗಳು ನೀರಿನಲ್ಲಿ ಇರಿಸಿದಾಗ (ಅಥವಾ ಯಾವುದೇ ದ್ರವದಲ್ಲಿರಿಸಿದಾಗ) ತೇಲುತ್ತವೆ, ಕೆಲವು ಮುಳುಗುತ್ತವೆ ಮತ್ತು ಕೆಲವು ಮೇಲ್ಭಾಗ ಮತ್ತು ತಳಭಾಗದ ನಡುವೆ ಜೋತಾಡುತ್ತಿರುತ್ತವೆ. ವಸ್ತುಗಳ ಈ ವರ್ತನೆಗೆ ಏನು ಕಾರಣ ಎಂಬುದನ್ನು ಸಾಪೇಕ್ಷ ಸಾಂದ್ರತೆಯ (relative density) ಮೂಲಕ ವಿವರಿಸಬಹುದು. ಸಾಪೇಕ್ಷ ಸಾಂದ್ರತೆಯನ್ನು ಅರ್ಥಮಾಡಿಕೊಳ್ಳಲು ಪರಿಮಾಣ (volume), ದ್ರವ್ಯರಾಶಿ (mass) ಮತ್ತು ಸಾಂದ್ರತೆಯ (density) ಪರಿಕಲ್ಪನೆಗಳ ಪರಿಚಯ ಬೇಕಿರುತ್ತದೆ. ಅಂತಹ ಪರಿಕಲ್ಪನೆಯ ಪರಿಣಾಮಕಾರಿ ಶಿಕ್ಷಣ ವಿಧಾನವು ವಿದ್ಯಾರ್ಥಿಗಳಿಗೆ ಸ್ವಾನುಭವ ಒದಗಿಸುವುದನ್ನು ಒಳಗೊಂಡಿರಬೇಕಾಗುತ್ತದೆ, ಇದರಲ್ಲಿ ಅವರು ನೀರಿನಲ್ಲಿ ಇರಿಸಿದಾಗ ವಿವಿಧ ವಸ್ತುಗಳ ನಡೆವಳಿಕೆಯನ್ನು ವೀಕ್ಷಿಸುತ್ತಾರೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಅನ್ವೇಷಣೆ-ಗಾಗಿಯೇ ಇರುವ ಇಂತಹ ವೇದಿಕೆಯು ವಿದ್ಯಾರ್ಥಿಗಳನ್ನು ಸಾಧ್ಯವಾದಷ್ಟು ಉತ್ಸಾಹದಿಂದ ಕಲಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಇದರಿಂದ ವಿದ್ಯಾರ್ಥಿಗಳು ವಿಚಾರಣೆಯ ಪ್ರಕ್ರಿಯೆಯನ್ನು ಅನುಭವಿಸಬಹುದು. ಬಾಯಾರಿದ ಕಾಗೆಯ ಕಥೆಯು ಕೆಲಸ ಮಾಡುವುದು ಇಲ್ಲಿಯೇ.

ಹೆಚ್ಚಿನವರಿಗೆ ಈ ಕಥೆ ಗೊತ್ತಿದೆ. ಆದರೂ, ನೆನಪಿಗೆ ತಂದುಕೊಳ್ಳಲು, ಕಥೆ ಹೀಗಿದೆ: ಬಿರುಬೇಸಗೆಯ ಒಂದು ದಿನ ನೀರಿಗಾಗಿ ಅರಸುತ್ತಿದ್ದ ಕಾಗೆಯೊಂದು ತಳದಲ್ಲಿ ಸ್ವಲ್ಪವೇ ನೀರು ಇದ್ದ ಹೂಜಿಯೊಂದನ್ನು ಕಾಣುತ್ತದೆ. ಕಾಗೆ ಅದರೊಳಕ್ಕೆ ಒಂದೊಂದೇ ಕಲ್ಲು ಹಾಕತೊಡಗುತ್ತದೆ. ಹೂಜಿಯಲ್ಲಿದ್ದ ನೀರಿನ ಮಟ್ಟ ಹೆಚ್ಚುತ್ತಾ ಹೋಗುತ್ತದೆ. ನೀರು ಮೇಲಕ್ಕೆ ಬರುವ ತನಕ ಕಾಗೆ ಕಲ್ಲುಗಳನ್ನು ಒಳಕ್ಕೆ ಹಾಕುತ್ತಲೇ ಇರುತ್ತದೆ. ಕಾಗೆ ನೀರು

ಕುಡಿದು ಸಂತಸದಿಂದ ಹಾರಿ ಹೋಗುತ್ತದೆ. ತರಗತಿಯಲ್ಲಿ ಚರ್ಚೆಯನ್ನು ಆರಂಭಿಸುವುದಕ್ಕೆ ಈ ಕಥೆಯು ಕೆಲವು ಆಸಕ್ತಿದಾಯಕ ಸಾಧ್ಯತೆಗಳನ್ನು ನಮ್ಮೆದುರಿಗಿರಿಸುತ್ತದೆ. ಇದನ್ನು ತರಗತಿಯೊಂದರಲ್ಲಿ ಪ್ರಯತ್ನಿಸಲಾಯಿತು. ಈ ಕೆಳಗಿನ ಪ್ರಶ್ನೆಗಳೊಂದಿಗೆ ಚರ್ಚೆ ಆರಂಭವಾಯಿತು:

- ಕಾಗೆ ಕಲ್ಲುಗಳನ್ನೇಕೆ ಹೆಕ್ಕಿಕೊಂಡಿತು? ಕಡ್ಡಿಯಂತಹ ಇತರ ವಸ್ತುಗಳನ್ನೇಕೆ ಎತ್ತಿಕೊಳ್ಳಲಿಲ್ಲ?
- ಆರಂಭದಲ್ಲಿ ಹೂಜಿಯಲ್ಲಿ ಎಷ್ಟು ನೀರಿತ್ತು? ಆರಂಭಿಕ ಮಟ್ಟ ಬಹಳ ಕಡಿಮೆ ಇದ್ದರೆ, ನೀರು ಮೇಲಕ್ಕೆ ಬರಬಹುದೇ?
- ನೀರು ಮೇಲಕ್ಕೆ ಏಕೆ ಏರಿತು?

ಹೆಚ್ಚಿನ ಮಕ್ಕಳು ಕಾಗೆ ಮಾಡಿದುದನ್ನೇ ಪ್ರಯತ್ನಿಸಲು ಬಯಸಿದರು. ನಾನು ಕೆಲವು ಲೋಟಗಳು, ನೀರಿನ ಮಟ್ಟವನ್ನು ಗುರುತು ಮಾಡಲು ಮಾರ್ಕರುಗಳು ಮತ್ತು ಒಂದು ಬಕೆಟು ನೀರು ಏರ್ಪಾಡು ಮಾಡಿದೆ. ತಮಗೆ ಬೇಕಾದ ವಸ್ತುಗಳನ್ನು ಎತ್ತಿಕೊಳ್ಳಲು ಅವರು ತರಗತಿಯಿಂದ ಹೊರನಡೆದರು. ಹೆಚ್ಚಿನವರು ಬೇರೆಬೇರೆ ಗಾತ್ರದ ಕಲ್ಲುಗಳನ್ನು ಎತ್ತಿಕೊಂಡರು. ಕಾಗೆ ಮಾಡಿದುದನ್ನೇ ಅವರು ಪುನರಾವರ್ತಿಸಿದರು ಮತ್ತು ಕಲ್ಲುಗಳನ್ನು ನೀರಿನೊಳಕ್ಕೆ ಹಾಕಿದಾಗ ನೀರಿನ ಮಟ್ಟದಲ್ಲಿ ಆಗುವ ಬದಲಾವಣೆಯನ್ನು ಗಮನಿಸಿದರು. ಅವರು ಈ ಚಟುವಟಿಕೆಯನ್ನು ನಡೆಸುತ್ತಿದ್ದಾಗ, ಲೋಟದಲ್ಲಿರುವ ನೀರಿನ ಮಟ್ಟದಲ್ಲೂ ವ್ಯತ್ಯಾಸ ಮಾಡುವಂತೆ ಅವರಿಗೆ ಹೇಳಿದೆ ಮತ್ತು ನಂತರ ಅವಲೋಕನಗಳನ್ನು ಹೋಲಿಸುವಂತೆ ಹೇಳಿದೆ. ಇಡೀ ತರಗತಿಯು ಎಲ್ಲಾ ರೀತಿಯ ವಿಷಯಗಳನ್ನು ಪ್ರಯತ್ನಿಸುತ್ತಿರುವ ಉತ್ಸುಕ 'ಕಾಗೆಗಳಿಂದ' ತುಂಬಿತ್ತು – ವಿವಿಧ ಮಟ್ಟಗಳಲ್ಲಿರುವ ನೀರು, ವಿವಿಧ ಗಾತ್ರದ ಕಲ್ಲುಗಳು ಮತ್ತು ವಿವಿಧ ರೀತಿಯ ವಸ್ತುಗಳು. ಅವುಗಳಲ್ಲಿ ಕೆಲವು ತೇಲುತ್ತಿದ್ದವು. ತಮ್ಮ ಅವಲೋಕನಗಳನ್ನು ಹಂಚಿಕೊಳ್ಳುವಂತೆ ನಾನು ಅವರನ್ನು ಕೇಳಿದಾಗ, ಆ ಪ್ರತಿಕ್ರಿಯೆಗಳು ಚರ್ಚೆಗೆ ವಿವಿಧ ಅಂಶಗಳನ್ನು ತಂದವು. ಅವುಗಳಲ್ಲಿ ಕೆಲವು ಪ್ರತಿಕ್ರಿಯೆಗಳನ್ನು ನಾನು ಈ ಕೆಳಗೆ ಪಟ್ಟಿ ಮಾಡಿದ್ದೇನೆ:

- ನೀರಿನ ಪ್ರಮಾಣವು ತುಂಬಾ ಕಡಿಮೆಯಾದಾಗ, ಹಲವಾರು ಕಲ್ಲುಗಳನ್ನು ಬೀಳಿಸಿದರೂ ಅದು ಲೋಟದ ಮೇಲ್ಭಾಗಕ್ಕೆ ಬರಲಿಲ್ಲ.
- ಕಲ್ಲಹರಳುಗಳು ಗಾತ್ರ ಮತ್ತು ಆಕಾರದಲ್ಲಿ ಏಕರೂಪವಾಗಿರಲಿಲ್ಲ. ಈ ಕಲ್ಲಹರಳುಗಳು ಲೋಟದೊಳಕ್ಕೆ ಹಾಕಿದಾಗ ಅದು ಸಮಸ್ಯೆಯುಂಟುಮಾಡಿತು.
- ಕಲ್ಲುಗಳ ಅನಿಯಮಿತ ಆಕಾರವು ಅವುಗಳ ನಡುವೆ ಅಂತರವನ್ನು ಉಂಟುಮಾಡಿತು. ಅವು ಪರಸ್ಪರ ಒಂದರ ಮೇಲೊಂದು ಉರುಳಿದಾಗ ಆ ಅಂತರಗಳಲ್ಲಿ ನೀರು ಹರಿಯಿತು.
- ಸಣ್ಣ ಕಲ್ಲಹರಳುಗಳು ಒಟ್ಟಾಗಿ ನೀರಿನ ಮಟ್ಟವನ್ನು ಹೆಚ್ಚಿಸುವುದಕ್ಕೆ ಪರಿಣಾಮಕಾರಿ ಕೊಡುಗೆ ನೀಡಿವೆ. ದೊಡ್ಡ ಕಲ್ಲಹರಳುಗಳು ನೀರಿನ ಮಟ್ಟವನ್ನು ಹೆಚ್ಚಿಸಿದರೂ ಕೂಡಾ ಅವುಗಳ ನಡುವಿನ ಅಂತರ ದೊಡ್ಡದಿದ್ದ ಕಾರಣ, ಅಷ್ಟು ಪರಿಣಾಮಕಾರಿಯಾಗಲಿಲ್ಲ.
- ಲೋಟದ ಆಕಾರಕ್ಕೆ ಸರಿಯಾಗಿ ಹೊಂದಿಕೊಂಡ ಒಂದೇ ಸಮನಾದ ಗಾತ್ರ ಹಾಗೂ ರೂಪ ಹೊಂದಿದ್ದ ಕಲ್ಲಹರಳುಗಳು ನೀರಿನ ಆರಂಭಿಕ ಮಟ್ಟ ಎಷ್ಟೇ ಇದ್ದರೂ ಸಹ ನೀರಿನ ಮಟ್ಟವನ್ನು ಹೆಚ್ಚಿಸುತ್ತವೆ.

ಕಾಗದದ ಚೂರುಗಳಲ್ಲಿ ಮಾಡಿದ ಚೆಂಡುಗಳು (styrofoam balls) ಮತ್ತು ಕಡ್ಡಿಗಳಂತಹ ವಸ್ತುಗಳು ನೀರಿನ ಮಟ್ಟವನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವುದಿಲ್ಲ. ಕಲ್ಲುಗಳಿಗೆ ಹೋಲಿಸಿದರೆ ನೀರಿನ ಮಟ್ಟದ ಏರಿಕೆಯು ತುಂಬ ಕಡಿಮೆಯಾಗಿರುತ್ತದೆ. ಈ ಉತ್ತರಗಳ ಸರಿತಪ್ಪನ್ನು ಚರ್ಚಿಸುವುದನ್ನು ಬದಿಗಿಟ್ಟು, ಈ ಪ್ರತಿಕ್ರಿಯೆಗಳು ಹಲವು ಅಂಶಗಳನ್ನು ಸ್ಪರ್ಶಿಸಿದವು, ಉದಾಹರಣೆಗೆ, ಕಲ್ಲಹರಳುಗಳು ಮತ್ತು ಧಾರಕದ ಆಕಾರ, ನೀರಿನ ಮಟ್ಟದ ವ್ಯತ್ಯಾಸದ ಮೇಲೆ ವಸ್ತುಗಳ ಗಾತ್ರದ ಪರಿಣಾಮ, ಏರಿಕೆಗೆ ಕೊಡುಗೆ ನೀಡಿದ ವಸ್ತುಗಳ ನಮೂನೆಗಳು, ಇತ್ಯಾದಿ. ಇವು ತರಗತಿಯೊಳಗೆ ಒಂದು ಸತ್ವಯುತ ಚರ್ಚೆಗೆ ದಾರಿ ಮಾಡಿಕೊಟ್ಟವು. ಭಾಗೀದಾರರು ಕಲಿಕೆಯ ಪ್ರಕ್ರಿಯೆ ತಮ್ಮದು ಎನ್ನುವ ಭಾವನೆ ಇರಿಸಿಕೊಂಡಂತಿತ್ತು. ಹಾಗೂ ಇದು ಭಾಗೀದಾರಿಕೆಯ ಕಲಿಕೆಯ ಪ್ರಾತಿನಿಧಿತ್ವವಾಯಿತು. ಚರ್ಚೆಯನ್ನು ಆರಂಭಿಸಲು ಮತ್ತು ವಸ್ತುಗಳ ಪ್ಲವನದ ನಿಯಮಗಳನ್ನು ಹೆಚ್ಚು ಆಳವಾಗಿ ಪರಿಶೋಧಿಸಲು ಈ ಕಥೆ ಒಂದು ವೇದಿಕೆಯನ್ನು ಕಲ್ಪಿಸಿತು.

ಇನ್ನೊಂದು ಗುಂಪಿನೊಡನೆ ಇದೇ ಚಟುವಟಿಕೆಯನ್ನು ಮಾಡುವಾಗ ಪ್ರಕ್ರಿಯೆಯನ್ನು ತುಸುವೇ ಬದಲಾಯಿಸಿದೆ. ಈ ಚಟುವಟಿಕೆಯನ್ನು ಮರುನಿರ್ಮಿಸುವುದನ್ನು ಆರಂಭಿಸುವುದಕ್ಕೆ ಬದಲಾಗಿ, ಕಥೆಯನ್ನು ಪೆನ್ಸಿಲ್‌ನಲ್ಲಿ ಚಿತ್ರಿಸುವಂತೆ ಹೇಳಿದೆ. ಅವರು ಹೂಜಿಯಲ್ಲಿನ ನೀರಿನ ಆರಂಭಿಕ ಮಟ್ಟ ಮತ್ತು ನಂತರದ ಮಟ್ಟಗಳನ್ನು ಹೇಗೆ ಪ್ರತಿನಿಧಿಸುತ್ತಾರೆಂದು ನನಗೆ ನೋಡಬೇಕಿತ್ತು. ನಂತರ ಅವರು ಚಿತ್ರದಲ್ಲಿ ತೋರಿಸಿರುವಂತಹ ಮಟ್ಟದಲ್ಲೇ ನೀರನ್ನು ತೆಗೆದುಕೊಂಡು ಚಟುವಟಿಕೆಯನ್ನು ಆರಂಭಿಸಲು ಹೇಳಿದೆ.

## ಮೊಲ ಮತ್ತು ಆಮೆ

ಒಂದು ವಿದ್ಯಮಾನವನ್ನು ಬಹು ರೂಪಗಳಲ್ಲಿ ಪ್ರತಿನಿಧಿಸಬಹುದು, ಉದಾಹರಣೆಗೆ, ವಾಹನದ ಚಲನೆಯನ್ನು ಚಿತ್ರಗಳ ರೂಪದಲ್ಲಿ ಚಿತ್ರಿಸಬಹುದು, ಸ್ಥಾನ– ಸಮಯದ (position-time) ಆಧಿತ ರೂಪದ ದಾಖಲೆಯಿರುವ ಕೋಷ್ಟಕದ ಕಾಲಂಗಳು ಮತ್ತು ಗ್ರಾಫ್‌ನ ಪರಿಭಾಷೆಯಲ್ಲಿ ವಾಹನದ ಚಲನೆಯನ್ನು ಪ್ರತಿನಿಧಿಸಬಹುದು. ಪ್ರತಿಯೊಂದು ರೂಪದ ಪ್ರಾತಿನಿಧ್ಯವು ತನ್ನದೇ ಆದ ಪ್ರಯೋಜನಗಳನ್ನು ಹೊಂದಿದೆ. ಗ್ರಾಫ್‌ನಲ್ಲಿ ವಿದ್ಯಮಾನವನ್ನು ಪ್ರತಿನಿಧಿಸುವುದು

ಅನೇಕ ಭಾಗೀದಾರರಿಗೆ ನಿರ್ಣಾಯಕ ಅಂಶವಾಗಿದೆ ಮತ್ತು ಗ್ರಾಫ್‌ಗಳ ಬಗ್ಗೆ ವಿದ್ಯಾರ್ಥಿಗಳ ತಿಳಿವಳಿಕೆಯನ್ನು ಹೆಚ್ಚಿಸಲು ನಾನು ಮೊಲ ಮತ್ತು ಆಮೆಯ ಕಥೆಯನ್ನು ಬಳಸಿದ್ದೇನೆ. ಸ್ಥಾನ– ಸಮಯದ ಗ್ರಾಫ್‌ನಲ್ಲಿ ಈ ಕಥೆಯನ್ನು ಪ್ರತಿನಿಧಿಸುವುದು ಆಸಕ್ತಿದಾಯಕ ಅಭ್ಯಾಸವಾಗಿದೆ ಹಾಗೂ ಇದು ಭಾಗವಹಿಸುವವರಿಗೆ ತಮ್ಮ ಕಲಿಕೆಯನ್ನು ಕ್ರೋಡೀಕರಿಸಲು ಮತ್ತು ಮೌಲ್ಯೀಕರಿಸಲು ಅನುವು ಮಾಡಿಕೊಡುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕಥೆ ಹೀಗಿತ್ತು: ಮೊಲ ಮತ್ತು ಆಮೆ ಓಟದಲ್ಲಿ ಸ್ಪರ್ಧಿಸುತ್ತವೆ. ಆರಂಭದಲ್ಲಿ ಮೊಲವು ವೇಗವನ್ನು ಹೆಚ್ಚಿಸುತ್ತದೆ ಮತ್ತು ಗೆಲ್ಲುವ ಆತ್ಮವಿಶ್ವಾಸದಿಂದಿದ್ದ ಅದು ವಿಶ್ರಾಂತಿ ಪಡೆಯಲು ನಿಲ್ಲುತ್ತದೆ ಹಾಗೂ ಕೊನೆಗೆ ನಿದ್ದೆಗೆ ಜಾರುತ್ತದೆ. ಮತ್ತೊಂದೆಡೆ ಆಮೆ ತನ್ನ ಸ್ಥಿರವಾದ ವೇಗವನ್ನು ಕಾಯ್ದುಕೊಳ್ಳುತ್ತದೆ ಮತ್ತು ವಿಜಯರೇಖೆಯನ್ನು ಮೊದಲು ತಲುಪುತ್ತದೆ.

ತರಗತಿಯಲ್ಲಿ ಚಟುವಟಿಕೆಯನ್ನು ನಡೆಸುವಾಗ, ಈ ಕಥೆಯನ್ನು ಪ್ರತಿನಿಧಿಸುವಂತಹ ಸ್ಥಾನ– ಸಮಯದ ಸರಳ ಗ್ರಾಫ್ ರಚಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿದೆ. ಅವರು ಗ್ರಾಫ್ ರಚನೆ ಮಾಡುತ್ತಿರುವಾಗ ತರಗತಿಯ ಸುತ್ತಲೂ ಓಡಾಡಿ ಅವಲೋಕಿಸುತ್ತಿದ್ದೆ ಮತ್ತು ಕೆಲವು ಅತ್ಯಂತ ಸಾಮಾನ್ಯವಾಗಿದ್ದ ರಚನೆಗಳನ್ನು ಗುರುತಿಸಿಕೊಂಡೆ. ಭಾಗವಹಿಸಿದವರ ಪ್ರತಿಕ್ರಿಯೆಗಳನ್ನು ಚರ್ಚೆಗೆ ಮತ್ತು ಅಂತಿಮವಾಗಿ ಗ್ರಾಫ್ ಮೇಲೆ ಕಥೆಯನ್ನು ಸೂಕ್ತವಾಗಿ ಪ್ರತಿನಿಧಿಸುವುದಕ್ಕೆ ಬಳಸಲಾಯಿತು.

- ಒಮ್ಮೆ ಅವರು ಕೆಲಸವನ್ನು ಪೂರ್ಣಗೊಳಿಸಿದ ನಂತರ, ಕಥೆಯಲ್ಲಿನ ಕೆಲವು ಪ್ರಮುಖ ಅಂಶಗಳತ್ತ ಗಮನ ಹರಿಸಲು ಮತ್ತು ಗ್ರಾಫ್ ಅದನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಖಚಿತಪಡಿಸಲು ಹೇಳಿದೆ. ಉದಾಹರಣೆಗೆ: ಓಟದ ಸ್ಪರ್ಧೆಯನ್ನು ಜಯಿಸುವುದು ಎಂದರೆ ಏನು?
- ಆಮೆ ಓಟದ ಸ್ಪರ್ಧೆಯಲ್ಲಿ ಗೆದ್ದುದನ್ನು ಹೇಗೆ ತೋರಿಸುವಿರಿ?
- ಮೊಲ ಮಲಗಿದ್ದ ಹಂತವನ್ನು ನೀವು ಹೇಗೆ ತೋರಿಸಬಹುದು?
- ಎರಡು ಬೇರೆಬೇರೆ ಗ್ರಾಫ್ ಬಿಡಿಸಬಯಸುವಿರಾ –ಆಮೆಗೆ ಒಂದು ಮತ್ತು ಮೊಲಕ್ಕೆ ಒಂದು?
- ಆಮೆಯ ಆರಂಭ ಉತ್ತಮವಾಗಿತ್ತು ಎನ್ನುವುದನ್ನು ಹೇಗೆ ತೋರಿಸುವಿರಿ?

ಈ ಅಂಶಗಳ ಮೇಲಿನ ಚರ್ಚೆಯ ಆಧಾರದಲ್ಲಿ ತರಗತಿ ತಮ್ಮ ಗ್ರಾಫ್‌ಗಳ ವಿಶ್ಲೇಷಣೆ ಮಾಡಿತು. ಗ್ರಾಫ್‌ನಲ್ಲಿ ಪ್ರತಿಯೊಂದು ಸೂಚಕವನ್ನು ಒಂದು ಪರಿಕಲ್ಪನೆಗೆ ಸಂಪರ್ಕಿಸುವುದು ಪ್ರಮುಖ ವಿಷಯವಾಗಿತ್ತು. ಉದಾಹರಣೆಗೆ, 'ಓಟದಲ್ಲಿ ಜಯ–ಶಾಲಿಯಾಗುವುದು' ಅಂದರೆ ಗ್ರಾಫ್‌ನಲ್ಲಿ ಜಯಶಾಲಿಯ ಸಮಯದ ಬೆಲೆಯು ಎದುರಾಳಿಯದಕ್ಕಿಂತ ಕಡಿಮೆ ಇರಬೇಕು. ಮತ್ತು ಮೊಲ ನಿದ್ರಿಸುತ್ತಿದ್ದ ಹಂತವು ಸಮಯದಲ್ಲಿ ಹೆಚ್ಚಳವಾಗಿದ್ದರೂ ಸ್ಥಾನದಲ್ಲಿ ವ್ಯತ್ಯಾಸವಾಗದ ಭಾಗವಾಗಿರಬೇಕು. ಭಾಗವಹಿಸಿದವರಿಗೆ ಈ ಚಟುವಟಿಕೆ ಹೆಚ್ಚು ತರ್ಕಬದ್ಧವಾಗಿ ಕಂಡಿತು ಏಕೆಂದರೆ, ಅವರಿಗೆ ಕಥೆಯ ಭಾಷೆ ಮತ್ತು ಪಠ್ಯದಲ್ಲಿನ ಗಣಿತದ ಭಾಷೆಯ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಗಣಿತದ ಪರಿಕಲ್ಪನೆಯನ್ನು ಸಾಂಪ್ರದಾಯಕ ಮಾದರಿಯಲ್ಲಿ ಚರ್ಚಿಸಿದರೆ ಇದು ಸಾಧ್ಯವಾಗದೇ ಇರಬಹುದು.

## ಯೋಚಿಸಬೇಕಾದ ಅಂಶಗಳು

ತರಗತಿಯಲ್ಲಿ ಕಥೆಯನ್ನು ಉಪಯೋಗಿಸುವಾಗ ಎದುರಿಸುವ ಪ್ರಮುಖ ಸವಾಲೆಂದರೆ ವಿದ್ಯಾರ್ಥಿಗಳಲ್ಲಿ ಕಥೆಯ ಮೇಲೆ ಆಸಕ್ತಿಯನ್ನು ಮೂಡಿಸುವುದು ಮತ್ತು ಆಯ್ದ ಪರಿಕಲ್ಪನೆಗೂ ಕಥೆಗೂ ಸಂಬಂಧ ಕಲ್ಪಿಸುವ ತನಕ ಅವರ ಉತ್ಸುಕತೆಯನ್ನು ಹಿಡಿದಿಟ್ಟುಕೊಳ್ಳುವುದು. ಅವರ ಪ್ರತಿಕ್ರಿಯೆಗಳಿಗೆ ಸೂಕ್ತ ಅವಕಾಶ ಸಿಗುವುದನ್ನು ಖಚಿತಪಡಿಸುತ್ತಲೇ, ಗಮನ ಬೇರೆಡೆಗೆ ಹರಿಯದಂತೆಯೂ ಎಚ್ಚರ ವಹಿಸಬೇಕಾಗುತ್ತದೆ. ಜೊತೆಗೆ ಸರಿಯಾದ ಕಥೆಯನ್ನು ಆಯ್ಕೆ ಮಾಡುವುದೂ ಒಂದು ಸವಾಲಾಗಿದೆ. ಸರಿಯಾದ ಕಥೆಯನ್ನು ಆರಿಸುವ ಮಾನದಂಡವು ಪರಿಕಲ್ಪನೆಗೂ ಕಥೆಗೂ ಇರುವ ಸಂಬಂಧವನ್ನು ಮಾತ್ರ ಪರಿಗಣಿಸದೆ, ಪ್ರಶ್ನೆ ಕೇಳಲು ಮತ್ತು ತನಿಖೆ ನಡೆಸಲು ಸಾಕಷ್ಟು ಕಲಿಕೆಯ ಅವಕಾಶ ಒದಗಿಸುವುದರ ಜೊತೆಗೆ, ಕಥೆ ಯಾವುದೇ ರೀತಿಯ ಪೂರ್ವಾಗ್ರಹಕ್ಕೆ ಪ್ರೋತ್ಸಾಹ ನೀಡದಿರುವುದು ಮತ್ತು ಯಾವುದೇ ಮಾದರಿಯನ್ನು ಗಟ್ಟಿಗೊಳಿಸದಂತಿರುವುದೂ ಆಗಿರುವುದನ್ನು ಗಮನದಲ್ಲಿರಿಸ–ಬೇಕು. ಕೆಲವೊಮ್ಮೆ, ನಿತ್ಯ ಜೀವನಾನುಭವಗಳ ಸುತ್ತ ಕಥಾ ನಿರೂಪಣೆ ಮಾಡುವುದೂ ಅಪೇಕ್ಷಿತ ಪರಿಣಾಮವುಂಟು–ಮಾಡುವುದಕ್ಕೆ ನೆರವಾಗುತ್ತದೆ.



**ವೆಂಕಟ ನಾಗ ವಿನಯ ಸುರಂ** 2013ರಲ್ಲಿ ರೂರ್ಕಿಯ ಐಐಟಿಯಲ್ಲಿ ಭೌತವಿಜ್ಞಾನದ ಸ್ನಾತಕೋತ್ತರ ಪದವಿಯನ್ನು ಗಳಿಸಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ಸೇರಿಕೊಂಡರು. ಇವರು ವಿದ್ಯಾರ್ಥಿಗಳಿಗೆ ವಿಜ್ಞಾನದ ಕಲಿಕೆಯು ಹೆಚ್ಚು ಅನುಭವಾಧಾರಿತವಾಗಿರುವಂತೆ ಮಾಡಲು ಸರಕಾರಿ ಶಾಲಾ ಶಿಕ್ಷಕರ ಜೊತೆಗೆ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ವಿಜ್ಞಾನದ ಪರಿಕಲ್ಪನೆಗಳ ಮೇಲೆ ಮಾಡ್ಯೂಲ್ ಅಭಿವೃದ್ಧಿ ಪಡಿಸಿ, ಬೋಧಕರು ಇದನ್ನು ತಮ್ಮೊಂದಿಗೆ ತರಗತಿಗೆ ಒಯ್ಯುವಂತೆ ಒಲವು ಮೂಡಿಸುವುದೂ ಸೇರಿದೆ. ಇವರ ಶೈಕ್ಷಣಿಕ ಆಸಕ್ತಿಯಲ್ಲಿ ಇತಿಹಾಸ, ವಿಜ್ಞಾನದ ತತ್ತ್ವಶಾಸ್ತ್ರ, ನರವಿಜ್ಞಾನ ಮತ್ತು ವಿಜ್ಞಾನ ಶಿಕ್ಷಣವೂ ಸೇರಿದೆ. ಅವರನ್ನು vinay.suram@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸ್ಮಿತಾ ಭಟ್** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

ಅಂತಿಮವಾಗಿ, ನಾವು ಕಥೆ ಹೇಳಲು ಕಲೆಯನ್ನು ಬಳಸುವಾಗ, ವಿಶೇಷವಾಗಿ ಮೌಖಿಕ ಕಥೆಯನ್ನು ಪ್ರತಿನಿಧಿಸುವುದರ ಮೂಲಕ ಹೆಚ್ಚಿನ ಕಲಿಕೆ ಮಾಡುವ ಮಕ್ಕಳ ಮನದಲ್ಲಿ ಬಲವಾದ ಪಡಿಯಚ್ಚು ಮೂಡಿಸುತ್ತದೆ. ಕಲೆಯ ಬಳಕೆ ಸಾಧ್ಯತೆಗಳಿಗೆ ಅಗಾಧವಾದ ಅವಕಾಶಗಳನ್ನು ಒದಗಿಸುವುದಲ್ಲದೆ, ಆಲೋಚನೆಗಳಿಗೆ ಬೆಂಬಲವಾಗಿ ಅಸಾಂಪ್ರದಾಯಕ ವಿವೇಚನೆಯ ನಿರ್ಮಾಣಕ್ಕೂ ಅವಕಾಶ ಮಾಡಿಕೊಡುತ್ತದೆ. ಕಲೆಯು ಸಂಸ್ಕೃತಿಯನ್ನು ಪ್ರತಿನಿಧಿಸುವುದರಿಂದ, ಮಕ್ಕಳು ಬಹುತ್ವದ ಕುರಿತು ಅರಿವು ಮೂಡಿಸಿಕೊಳ್ಳುತ್ತಾರೆ ಮತ್ತು ತಮ್ಮದೇ ಆದ ಸಾಂಸ್ಕೃತಿಕ ಅರ್ಥೈಸುವಿಕೆಯನ್ನು ಕಲಾಕೃತಿಗೆ ಅನ್ವಯಿಸುತ್ತಾರೆ.

ಅಭಿಲಾಷಾ ಅವಸ್ಥಿ, ಕಲೆಯ ಮೂಲಕ ಕಥೆ ಹೇಳುವುದು, ಪುಟ 12

# ಉತ್ತಮ ಕತೆ ಹೇಳುವವರಾಗುವುದು ಹೇಗೆ?

ರಾಜೇಶ್ ಉತ್ಸಾಹಿ

ನಾವೆಲ್ಲರೂ, ಅದರಲ್ಲೂ ವಿಶೇಷವಾಗಿ ಮಕ್ಕಳು, ಕತೆ ಕೇಳುವುದನ್ನು ಆನಂದಿಸುತ್ತೇವೆ. ನನ್ನ ಬಾಲ್ಯವನ್ನು ನೆನಪಿಸಿ–ಕೊಂಡಾಗ, ನನಗೆ ನಮ್ಮ ಅಜ್ಜಿ ಹೇಳುತ್ತಿದ್ದ ಕತೆಗಳು ನೆನಪಾಗುತ್ತವೆ. ನಮ್ಮ ಮನೆಯಲ್ಲಿ, ಚಳಿಗಾಲದಲ್ಲಿ ಬೆಚ್ಚಗಿರಿಸಿ–ಕೊಳ್ಳಲು ಕಲ್ಲಿದ್ದಲಿನ ಒಲೆಯನ್ನು ಬಳಸುತ್ತಿದ್ದೆವು. ರಾತ್ರಿ ನಾವು ಎಲ್ಲಾ ಮಕ್ಕಳು ಆ ಒಲೆಯ ಸುತ್ತಲೂ ಕುಳಿತುಕೊಂಡು ಚಳಿಗೆ ಮೈ ಕಾಯಿಸಿಕೊಳ್ಳುತ್ತಿದ್ದೆವು. ಬೇಸಿಗೆಯಲ್ಲಿ, ಮನೆಯ ಅಂಗಳದಲ್ಲಿ ಮಂಚಗಳನ್ನು ಜೋಡಿಸಿಕೊಂಡು ಮಲಗುತ್ತಿದ್ದೆವು. ಅದು ನಮ್ಮ ಅಜ್ಜಿಯಂದಿರು (ಅಮ್ಮನ ತಾಯಿ ಮತ್ತು ಅಪ್ಪನ ತಾಯಿ) ನಮಗೆ ಕತೆ ಹೇಳುತ್ತಿದ್ದ ಸಮಯವಾಗಿರುತ್ತಿತ್ತು. ಅವರಿಗೆ ಅದೆಷ್ಟೋ ಕತೆಗಳು ನೆನಪಿನಲ್ಲಿರುತ್ತಿದ್ದವು. ಕತೆ ಕೇಳುತ್ತಾ ಕೇಳುತ್ತಾ ನಾವೆಲ್ಲಾ ಹಾಗೇ ನಿದ್ರೆ ಮಾಡಿಬಿಡುತ್ತಿದ್ದೆವು. ಒಂದು ವೇಳೆ ಕತೆ ಮುಗಿಯದೇ ಇದ್ದರೆ, ಮರುದಿನ ಮತ್ತೆ ಅದೇ ಕತೆಯನ್ನು ಹೇಳುವಂತೆ ನಾವು ಒತ್ತಾಯಿಸುತ್ತಿದ್ದೆವು. ಅದು ಇನ್ನೂ ಟಿ.ವಿ.ಗಳು ಬಂದಿರದ ಕಾಲ. ಮೊಬೈಲ್ ಫೋನ್ ಎಂದರೇನು ಎಂದೇ ಆಗ ಗೊತ್ತಿರಲಿಲ್ಲ. ನಿಜ ಹೇಳಬೇಕೆಂದರೆ, ಎಲ್ಲಾ ಮನೆಗಳಲ್ಲಿ ಸ್ಥಿರ ದೂರವಾಣಿಗಳೂ ಇರುತ್ತಿರಲಿಲ್ಲ.

ಆದರೆ, ಇತ್ತೀಚಿನ ವರ್ಷಗಳಲ್ಲಿ ಇಡೀ ಚಿತ್ರಣವೇ ಬದಲಾಗಿದೆ. ಎಂದಿನ ಟಿ.ವಿ. ಕಾರ್ಯಕ್ರಮಗಳನ್ನೂ ಒಟಿಟಿ ವೇದಿಕೆಗಳು ಕಿತ್ತುಕೊಂಡಿವೆ. ಹೆಚ್ಚಿನಂಶ, ಈಗಿನ ಅಜ್ಜಿಯಂದಿರು ಕೂಡಾ ಮೊಬೈಲ್ ಫೋನ್ ಇಲ್ಲವೇ ದೂರದರ್ಶನಗಳ ನೆರವಿನಿಂದಲೇ ಕತೆಗಳನ್ನು ಹೇಳುತ್ತಿರಬಹುದೇನೋ. ಈಗ ಅಸಂಖ್ಯಾತ ವಾಹಿನಿಗಳಿವೆ, ಬ್ಲಾಗ್‌ಗಳಿವೆ, ಜಾಲತಾಣಗಳಿವೆ. ಅವುಗಳಲ್ಲಿ ವಿಡಿಯೋಗಳು, ಪಾಡ್‌ಕಾಸ್ಟ್‌ಗಳು ಮತ್ತು ಶ್ರವ್ಯ ಕತೆಗಳನ್ನು ಕಾಣಬಹುದು.

ನನ್ನ ಎರಡೂವರೆ ವರ್ಷದ ಮೊಮ್ಮಗಳು ವನ್ಯಾ ಈಗ ನನ್ನೊಂದಿಗೆ ಇದ್ದಾಳೆ. ಅವಳು ಅಂತಹ ಎಷ್ಟೊಂದು ಕತೆಗಳನ್ನು ಕೇಳುತ್ತಾಳೆ ಮತ್ತು ನೋಡುತ್ತಾಳೆ. ಮಕ್ಕಳಿಗಾಗಿಯೇ ರಚಿಸಲಾದ ಹಾಡುಗಳನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸುತ್ತಾಳೆ. ಅವಳೂ ತನ್ನ ಆದ್ಯತೆಗಳನ್ನೂ, ಯಾವುದು ಇಷ್ಟವಿಲ್ಲವೆಂದೂ ಹೇಳುತ್ತಾಳೆ.

## ಗಟ್ಟಿಯಾಗಿ ಓದುವುದರ ಮಹತ್ವ

ಮೊಬೈಲ್ ಫೋನ್‌ಗಳು ಸುಲಭವಾಗಿ ಲಭ್ಯವಾಗುತ್ತಿವೆ. ಮನೆಗಳಲ್ಲಿ ಕತೆ ಓದಲು ಅಥವಾ ಕೇಳಲು ಅನುಕೂಲವಾದ ವ್ಯವಸ್ಥೆ ಇಲ್ಲದೇ ಇರಬಹುದು. ಆದರೂ, ಇಂತಹ ಸನ್ನಿವೇಶದಲ್ಲಿ, ಶಾಲೆಗಳಲ್ಲಿ ಕತೆ ಹೇಳುವ ಮೌಲ್ಯ ಬದಲಾಗದೇ ಉಳಿದಿದೆ ಹಾಗೂ ತರಗತಿ ಕೊಠಡಿಗಳಲ್ಲಿ ಕತೆ ಹೇಳುವ ಕಲೆ ಜನಪ್ರಿಯವಾಗಿ ಬೆಳೆದುಬಂದಿದ್ದು, ಒಂದು ಅಮೂಲ್ಯ ಸಾಧನವಾಗಿ ಉಳಿದಿದೆ. ಕತೆ ಹೇಳುವುದು ಒಂದು ಪರಿಣಿತ ಕ್ಷೇತ್ರವಾಗಿ ಬೆಳೆದಿದ್ದು, ಶಾಲೆಗಳಲ್ಲಿ ಕತೆ ಹೇಳುವ ಗೋಷ್ಠಿಗಳನ್ನು ಏರ್ಪಡಿಸುವ ವೃತ್ತಿಪರ ಕತೆ ಹೇಳುವವರೂ ಇದ್ದಾರೆ. ಖ್ಯಾತ ಶಿಕ್ಷಣತಜ್ಞರಾದ ಕೃಷ್ಣ ಕುಮಾರ್ ಅವರು ಕತೆ ಹೇಳುವ ಕಲೆಯ ಕುರಿತ ಪ್ರಬಂಧವೊಂದರಲ್ಲಿ ಹೇಳುತ್ತಾರೆ – ಪ್ರಾಥಮಿಕ ಶಾಲೆಗಳಲ್ಲಿ ಪ್ರತಿದಿನವೂ ಮೊದಲ ಎರಡು ತರಗತಿಗಳನ್ನು ಕತೆ ಹೇಳಲು ಮೀಸಲಿಟ್ಟಿದ್ದರೆ ಮಕ್ಕಳನ್ನು ಶಾಲೆಯಲ್ಲಿ ಹಿಡಿದಿಡುವ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಬಗೆಹರಿಯುತ್ತಿತ್ತು. ಶಿಕ್ಷಕರು ಎಳೆಯ ಮಕ್ಕಳಿಗೆ ಕನಿಷ್ಠ ೩೦ ಸಾಂಪ್ರದಾಯಕ ಕತೆಗಳನ್ನು

"ಕತೆಗಳು ಮಕ್ಕಳ ಪ್ರಪಂಚಕ್ಕೆ ಕಿಟಕಿಗಳು. ಅವು ಮೋಡಿ ಮಾಡುವಂತೆಯೂ, ಸುಂದರವೂ, ಮಂತ್ರಮುಗ್ಧರನ್ನಾ–ಗಿಸುವಂತೆಯೂ ಇರುತ್ತವೆ!! ಕತೆ ಕೇಳುವುದು ಅತ್ಯಂತ ಮೋಜಿನ ಸಂಗತಿಯಾಗಿದ್ದು, ವಿಶೇಷವಾಗಿ ಎಳೆಯ ಮಕ್ಕಳು ಕತೆ ಕೇಳುವುದನ್ನು ಇಷ್ಟಪಡುತ್ತಾರೆ. ಭಾವನಾತ್ಮಕವಾಗಿ, ಅಭಿನಯ–ಪೂರ್ಣವಾಗಿ ಮತ್ತು ಭಾವಾಭಿವ್ಯಕ್ತಿಯಿಂದ ಹೇಳುವ ಕತೆಗಳು ಮೋಡಿ ಮಾಡುತ್ತವೆ. ಉಸಿರು ಬಿಗಿಹಿಡಿದುಕೊಳ್ಳುವಂತೆ ಮಾಡುತ್ತವೆ. ಆ ಕತೆಯಲ್ಲಿ ಪ್ರತಿ ಶಬ್ದವೂ ಒಂದೊಂದು ಅನುಭವವಾಗಿರುತ್ತದೆ. ಸಾಮಾಜಿಕ ಸಂಬಂಧಗಳನ್ನು ಮತ್ತು ನೈತಿಕ ಆಯ್ಕೆಗಳನ್ನು (ethical Choices) ಕಲಿಯಲು, ಭಾವನೆಗಳನ್ನು ಅರ್ಥೈಸಿಕೊಳ್ಳಲು ಮತ್ತು ಅನುಭವಿಸಲು ಹಾಗೂ ಜೀವನದ ಕೌಶಲಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಕತೆಗಳು ಉತ್ತಮ ಮಾಧ್ಯಮಗಳು. ಕತೆಗಳನ್ನು ಕೇಳುತ್ತಾ ಮಕ್ಕಳು ಹೊಸ ಹೊಸ ಶಬ್ದಗಳನ್ನು ಕಲಿಯುವ ಮೂಲಕ ಅವರ ಶಬ್ದ ಭಂಡಾರವೂ ಬೆಳೆಯುತ್ತದೆ. ವಾಕ್ಯ ರಚನೆ ಮತ್ತು ಸಮಸ್ಯೆಗಳನ್ನು ಬಿಡಿಸುವ ಕೌಶಲವನ್ನೂ ಅವರು ಕಲಿಯುತ್ತಾರೆ. ಸಾಮಾನ್ಯವಾಗಿ ಮಕ್ಕಳು ಹೆಚ್ಚು ಹೊತ್ತು ಗಮನ ಕೇಂದ್ರೀಕರಿಸಲಾರರು ಆದರೆ ಕತೆ ಕೇಳುವಾಗ ಎಷ್ಟು ಹೊತ್ತು ಬೇಕಾದರೂ ಗಮನ ಕೊಡಬಲ್ಲರು. ಆಯಾ ಸಾಂಸ್ಕೃತಿಕ ಸಂದರ್ಭಗಳುಳ್ಳ ಕತೆಗಳ ಮೂಲಕ ನಾವು ಅವರ ಸಂಸ್ಕೃತಿಯನ್ನು, ಸಾಮಾಜಿಕ ರೀತಿ ನೀತಿಗಳನ್ನು ಅವರಿಗೆ ಪರಿಚಯಿಸಿ, ಸುತ್ತಲಿನ ಪರಿಸರದ ಬಗ್ಗೆ ಅರಿವು ಮೂಡಿಸಲು ಸಾಧ್ಯ".

ಹೇಳುವ ದಿನವನ್ನು ತಾನು ಕಲ್ಪಿಸಿಕೊಳ್ಳುತ್ತೇನೆ. ಆ ಮೂಲಕ, ಮಕ್ಕಳು ಆ ಕತೆಗಳನ್ನು ಸುಲಭವಾಗಿ ಮತ್ತು ಆತ್ಮವಿಶ್ವಾಸದಿಂದ ನೆನಪಿಟ್ಟುಕೊಳ್ಳಲು ಸಾಧ್ಯವಾಗಬೇಕು ಎಂದು ಅವರು ವಿವರಿಸುತ್ತಾರೆ. ಸಾವಿರಾರು ಕತೆಗಳ ಪರಂಪರೆಯನ್ನು ಹೊಂದಿರುವ ಸಮಾಜದಲ್ಲಿ ಇದು ಕಷ್ಟದ ಕೆಲಸವೇನಲ್ಲ ಎಂಬುದು ಅವರ ಅಭಿಮತ. ಅಂತಹ ೩೦ ಕತೆಗಳು, ಪ್ರಾಥಮಿಕ ತರಗತಿಗಳ ಮೊದಲ ಎರಡು ಅವಧಿಗಳನ್ನು ಪರಿವರ್ತನೆ ಮಾಡಬಲ್ಲದು. ಒಟ್ಟಿನಲ್ಲಿ ಇಲ್ಲಿ ಬೇಕಾಗಿರುವುದೇನೆಂದರೆ, ಪ್ರತಿನಿತ್ಯದ ಪಠ್ಯಕ್ರಮದಲ್ಲಿ ಕತೆ ಹೇಳುವುದಕ್ಕೆ ಒಂದು ಗೌರವಯುತ ಸ್ಥಾನ. ಈ ದೃಷ್ಟಿಕೋನವನ್ನು ಕಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಅಳವಡಿಸುವ ಬಗ್ಗೆ 2022ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curriculum Framework - (NCF) 2022 ) ರಲ್ಲಿಯೂ ಎತ್ತಿತೋರಿಸಲಾಗಿದೆ.

## ತರಗತಿಯಲ್ಲಿ ಕತೆ ಹೇಳುವುದರ ಉಪಯೋಗ

ಬೋಧನ ಕಲೆಯ ನೆಲೆಯಲ್ಲಿ, ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಕತೆ ಹೇಳುವುದು ಹೆಚ್ಚು ಉಪಯುಕ್ತ. ಯಾಕೆಂದರೆ, ಆ ಮಕ್ಕಳು ತಮ್ಮ ಪಾಡಿಗೆ ಓದುವುದನ್ನು ಇನ್ನೂ ಕಲಿತಿರುವುದಿಲ್ಲ ಅಥವಾ ಈಗಷ್ಟೇ ಕಲಿಯುತ್ತಿರುತ್ತಾರೆ. ಹಾಗಾದರೂ, ಓದಲು ಬರೆಯಲು ಬಲ್ಲ ಮಕ್ಕಳೂ, ಇಷ್ಟಪಟ್ಟರೆ ಕತೆ ಕೇಳುಗರಾಗಬಹುದು.

ನೀವು ಶಿಕ್ಷಕರಾಗಿದ್ದರೆ (ಅಥವಾ ಪೋಷಕರಾಗಿದ್ದರೂ ಇಲ್ಲವೇ ಕತೆ ಹೇಳುವುದನ್ನು ಹವ್ಯಾಸವಾಗಿ ಪಳಗಿಸಿಕೊಳ್ಳಲು ಬಯಸುವಿರಾದರೆ) ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದು ಮತ್ತು ಅತ್ಯಂತ ಮುಖ್ಯವಾದುದು, ಕತೆಯನ್ನು ಯಾಕೆ ಹೇಳುತ್ತಿದ್ದೇವೆ ಮತ್ತು ಕತೆಯ ಉದ್ದೇಶ ಏನು ಎಂಬುದು. ಒಟ್ಟಾರೆಯಾಗಿ ಹೇಳುವುದಾದರೆ, ಗುರಿ ಈ ಕೆಳಗಿನಂತಿರಬಹುದು:

- ಮಕ್ಕಳಿಗೆ ಮನರಂಜನೆ ನೀಡುವುದು
- ಮಕ್ಕಳನ್ನು ಕತೆಯಲ್ಲಿ ಆಸಕ್ತರನ್ನಾಗಿಸುವುದು
- ಮಕ್ಕಳಲ್ಲಿ ಓದುವ ಆಸಕ್ತಿ ಹುಟ್ಟಿಸುವುದು
- ಮಕ್ಕಳಲ್ಲಿ ನಿರ್ದಿಷ್ಟ ಪರಿಕಲ್ಪನೆ ಅಥವಾ ಮೌಲ್ಯದ ಸಂವಹನ ಸಾಧ್ಯವಾಗಿಸುವುದು
- ಮಾತನಾಡುವ ಹಿಂಜರಿಕೆಯಿಂದ ಮಕ್ಕಳು ಹೊರಬರುವಂತೆ ಮಾಡುವುದು.
- ಪ್ರಶ್ನೆ ಕೇಳುವುದನ್ನು ಮತ್ತು ಚರ್ಚೆಯಲ್ಲಿ ಭಾಗವಹಿಸುವುದನ್ನು ಕಲಿಸುವುದು
- ಮಕ್ಕಳಲ್ಲಿ ಕಲ್ಪನೆ ಮತ್ತು ಸನ್ನಿವೇಶಗಳ ದೃಶ್ಯೀಕರಣವನ್ನು ಉತ್ತೇಜಿಸುವುದು.
- ಸಮಸ್ಯೆಗಳನ್ನು ಹೇಳಿಕೊಳ್ಳುವ ಕಲೆಯನ್ನು ಬೆಳೆಸಿಕೊಳ್ಳಲು ನೆರವಾಗುವುದು.

## ಕತೆ ಎಲ್ಲಿ ಸಿಗುತ್ತದೆ?

ಕತೆಯನ್ನು ಎಲ್ಲಿಂದಲಾದರೂ ಪಡೆದುಕೊಳ್ಳಬಹುದು. ಆದರೂ, ನೀವು ಎಲ್ಲಿಂದ ಪುಸ್ತಕ ಪಡೆಯುತ್ತೀರಿ ಎಂಬುದರ ಮೇಲೆ ನಿಮ್ಮ ಉದ್ದೇಶ ಪ್ರಭಾವ ಬೀರುತ್ತದೆ. ನಮ್ಮ ಸಾಂಪ್ರದಾಯಿಕ ಕತೆಗಳು ಅತ್ಯುತ್ತಮ ಸಂಪನ್ಮೂಲ. ಜಾನಪದವು ಹೇರಳವಾದ ಸಂಪನ್ಮೂಲದ ಭಂಡಾರ. ಜನಪದ ಕತೆಗಳ ಗುಣಲಕ್ಷಣ–ವೇನೆಂದರೆ, ಅದು ಪರಿಸರ ಮತ್ತು ಸಂಸ್ಕೃತಿಗೆ ತಕ್ಕಂತೆ (ಅನುಗುಣವಾಗಿ) ವಿಕಸನಗೊಂಡರೂ, ಮೂಲ ಪಠ್ಯ ಮಾತ್ರ ಬದಲಾಗದೇ ಉಳಿಯುತ್ತದೆ. ಪರಿಣಾಮವಾಗಿ, ನೆನಪಿನಲ್ಲಿಟ್ಟುಕೊಳ್ಳುವುದೂ ಸುಲಭ. ಅಲ್ಲದೆ ಅದು ಯಾವುದೇ ಸಿದ್ಧ ಮಾದರಿಯನ್ನು ಅನುಸರಿಸುವುದಿಲ್ಲ. ಪಂಚತಂತ್ರದಂತಹ ಸಂಪನ್ಮೂಲಗಳು ಮತ್ತು ಜಾತಕ ಕತೆಗಳು ಅತ್ಯುತ್ತಮ–ವಾದವುಗಳು. ಅದೇನೇ ಇದ್ದರೂ, ಯಾವುದನ್ನು ಆಯ್ಕೆ ಮಾಡಿಕೊಳ್ಳಬಾರದು ಎಂಬುದು ಕೂಡಾ ಅಷ್ಟೇ ಮುಖ್ಯ. ಬೇರೆಯವರನ್ನು ಗೇಲಿ ಮಾಡುವ ವಸ್ತುವುಳ್ಳ, ನೈತಿಕ ಪಾಠ ಹೇಳುವ, ಭೂತಪ್ರೇತ ಮತ್ತು ಮೂಢನಂಬಿಕೆಗಳನ್ನು ಪ್ರೇರೇಪಿಸುವ ಅಥವಾ ಸಾಂವಿಧಾನಿಕ ಮೌಲ್ಯಗಳನ್ನು ಧಿಕ್ಕರಿಸುವ ಕತೆಗಳ ಆಯ್ಕೆಯನ್ನು ತಪ್ಪಿಸಬೇಕು.

## ಎಲ್ಲಿಂದ ಆರಂಭಿಸಬೇಕು?

- ಯಾರೋ ಹೇಳಿದ ಅಥವಾ ಎಲ್ಲೋ ಓದಿದ ಕತೆಯನ್ನು ಮಕ್ಕಳಿಗೆ ಹೇಳುವಲ್ಲಿಂದ ಶುರು ಮಾಡಿ. ಆ ಕತೆಗೆ ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ಗಮನಿಸಿ, ಅದಕ್ಕೆ ಅನುಗುಣವಾದ ಕತೆಗಳನ್ನು ಆರಿಸಿಕೊಳ್ಳಬಹುದು.
- ಪುಸ್ತಕದಿಂದ ಒಂದು ಕತೆಯನ್ನು ಓದಿರಿ.
- ಮಕ್ಕಳೊಂದಿಗೆ ಸಮಾಲೋಚಿಸಿ. ಅವರಿಗೆ ಯಾವುದಾದರೂ ಕತೆ ನೆನಪಿದ್ದರೆ ಅವರೇ ಅದನ್ನು ವಿವರಿಸಲಿ.
- ಅವರು ಶಾಲೆಗೆ ಬರುವಾಗ ಏನನ್ನು ನೋಡಿದರು ಎಂದು ವಿಚಾರಿಸಿ ಅಥವಾ ಹಿಂದಿನ ದಿನ ನಡೆದ ಘಟನೆಯನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ತಿಳಿಸಿ. ಈ ರೀತಿಯ ಚಟುವಟಿಕೆ ಮಕ್ಕಳಲ್ಲಿ ಅಭಿವ್ಯಕ್ತಿಪಡಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ.

## ಅಭ್ಯಾಸದಿಂದಲೇ ಪರಿಪೂರ್ಣತೆ

ಕತೆ ಹೇಳುವುದು ಒಂದು ಕಲೆ. ಕತೆ ಹೇಳುವ ಸಾಮರ್ಥ್ಯವನ್ನು ನೀವು ಕ್ರಮೇಣ ಹೆಚ್ಚಿಸಿಕೊಳ್ಳಬಹುದು. ಕತೆಯ ಪಾತ್ರಗಳಿಗೆ ಅನುಗುಣವಾಗಿ ನಿಮ್ಮ ಧ್ವನಿಯಲ್ಲಿ ಏರುಪೇರು ಮತ್ತು ಬದಲಾವಣೆ ಮಾಡಿಕೊಳ್ಳಬಹುದು. ನಿಮ್ಮದೇ ಆದ ಮುಖಭಾವವನ್ನು ಸೃಷ್ಟಿಸಬಹುದು. ತರಗತಿಯಲ್ಲಿ ಸ್ಥಳಾವಕಾಶವಿದ್ದರೆ ಓಡಾಡುತ್ತಾ ಕತೆ ಹೇಳಬಹುದು. ನಿಮ್ಮ ಭಂಗಿ ಅಥವಾ ಮಾಡುವ ಸದ್ದು ಮಕ್ಕಳನ್ನು ಹೆದರಿಸುವಂತೆ ಇರದಂತೆ ನೋಡಿಕೊಳ್ಳಿ. ಕತೆ ಆಸಕ್ತಿದಾಯಕವಾಗಿದ್ದರೆ ಮಕ್ಕಳು ಅದಕ್ಕೆ ಸಂಪೂರ್ಣ ಗಮನ ಕೊಡುತ್ತಾರೆ. ಒಂದು ವೇಳೆ ಅವರಿಗೆ ಕತೆ ಆಸಕ್ತಿದಾಯಕವಾಗಿಲ್ಲ ಎಂದು ಕಂಡುಬಂದರೆ, ನೀವು ಹೊಸ

ತಂತ್ರವನ್ನು ಕಂಡುಕೊಳ್ಳಬೇಕಾಗುತ್ತದೆ. ಮಕ್ಕಳನ್ನು ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಶೈಲಿಯಲ್ಲಿ ಕತೆಯನ್ನು ನಿರೂಪಣೆ ಮಾಡುವುದು ಕೂಡಾ ಒಂದು ವಿಧಾನವಾಗಿದೆ. ಕತೆಯಲ್ಲಿ ಮುಂದೇನಾಗುತ್ತದೆ ಎಂದು ಮಕ್ಕಳನ್ನು ಕೇಳಿ. ಮಕ್ಕಳ ದೈನಂದಿನ ಬದುಕಿಗೆ ಮತ್ತು ಅವರ ಪರಿಸರಕ್ಕೆ ಹೊಂದುವಂತೆ ಕತೆಯನ್ನು ಬೆಸೆಯುವುದು ಇನ್ನೊಂದು ವಿಧಾನ. ಕೆಲವು ಕತೆಗಳನ್ನು ಮಕ್ಕಳು ಮತ್ತೆ ಮತ್ತೆ ಕೇಳಲು ಇಚ್ಛಿಸುವುದುಂಟು. ಅಂತಹ ಕತೆಗಳನ್ನು ಹೇಳುವುದು ಸುಲಭ. ಪ್ರತಿ ಬಾರಿಯೂ, ಕತೆಯನ್ನು ವಿಭಿನ್ನ ನೆಲೆಯಲ್ಲಿ ನೀವು ಹೇಳಬಹುದು. ನಿಮ್ಮದೇ ಆದ ಅಂಶಗಳು ಮತ್ತು ಸನ್ನಿವೇಶಗಳೊಂದಿಗೆ ನೀವು ಕತೆಯನ್ನು ವಿಸ್ತರಿಸಬಹುದು. ಈ ನಿಟ್ಟಿನಲ್ಲಿ, ನಾನು ನನ್ನದೊಂದು ಅನುಭವವನ್ನು ಹಂಚಿಕೊಳ್ಳಲು ಬಯಸುತ್ತೇನೆ,

ನನಗೆ ಇಬ್ಬರು ಗಂಡು ಮಕ್ಕಳು. ಅವರು ಸಣ್ಣವರಿರುವಾಗ ನನ್ನ ತಂದೆ ಅವರಿಗಾಗಿ ಕತೆಗಳನ್ನು ಹೆಣೆಯುತ್ತಿದ್ದರು. ಅವರು ಲಾತ್ ಸಾಹೇಬ್ ಎಂಬ ಪಾತ್ರವನ್ನು ಸೃಷ್ಟಿಸಿದ್ದರು. ಪ್ರತಿ ಸಲವೂ ಆ ಪಾತ್ರವನ್ನು ಹೊಸ ಸ್ವರೂಪದೊಂದಿಗೆ ನಿರೂಪಿಸುತ್ತಿದ್ದರು. ಆಸಕ್ತಿಯ ಸಂಗತಿ ಏನೆಂದರೆ, ಅವರ ಶ್ರೋತೃಗಳು, ಅಂದರೆ ನನ್ನ ಮಕ್ಕಳು, ಮಧ್ಯೆ ಮಧ್ಯೆ ತಮ್ಮದೇ ಆದ ಅಂಶಗಳನ್ನೂ ಸೇರಿಸುತ್ತಿದ್ದರು. ಅಂದರೆ, ಲಾತ್ ಸಾಹೇಬ್ ಎಂಬ ವ್ಯಕ್ತಿತ್ವಕ್ಕೆ ಅವರು ತಮ್ಮದೇ ಆದ ಕಲ್ಪನೆಗಳನ್ನು ಸೇರಿಸುತ್ತಿದ್ದರು. ಮಕ್ಕಳಿಗೆ ಇಂತಹ ಸಾಧ್ಯತೆಯನ್ನೂ ನೀವು ಒದಗಿಸಬಹುದು.

ಅದರ ಹೊರತಾಗಿ, ಪ್ರತಿ ಕತೆಗೂ ಒಂದು ಪೂರ್ವ ನಿರ್ಧರಿತ ಅಂತ್ಯ ಎಂಬುದು ಇದ್ದರೂ, ನೀವು ಅದಕ್ಕೇ ಅಂಟಿಕೊಳ್ಳಬೇಕಾದ (ಅನುಸರಿಸಬೇಕಾದ) ಅಗತ್ಯವಿಲ್ಲ. ಕತೆಯ ಅಂತ್ಯವನ್ನು ಹೇಳದೆಯೇ, ಅದನ್ನು ಮಕ್ಕಳ ಊಹೆಗೇ ಬಿಡಬಹುದು. ಇಲ್ಲವೇ, ಕತೆಗೆ ಬೇರೆಬೇರೆ ರೀತಿಯ ಅಂತ್ಯವನ್ನು ಊಹಿಸಿ ಹೇಳುವಂತೆ ಮಕ್ಕಳನ್ನು ಆಹ್ವಾನಿಸಬಹುದು. ಅವರು ಆ ಕ್ಷಣವೇ ಅದನ್ನು ಮಾಡಬೇಕಾಗಿಲ್ಲ; ನೀವು ಅವರಿಗೆ ಸ್ವಲ್ಪ ಕಾಲಾವಕಾಶ ಕೊಡಬಹುದು ಅಥವಾ ಮರುದಿನ ಹೊಸ ಉಪಾಯಗಳೊಂದಿಗೆ ಬರುವಂತೆ ತಿಳಿಸಬಹುದು. "ಈ ಕತೆಯ ನೀತಿ ಏನು?' ಅಥವಾ "ನಮಗೆ ಕತೆ ಏನು ತಿಳಿಸಿತು?" ಎಂದೋ ಕೇಳುವುದನ್ನು ತಪ್ಪಿಸಿ. ಕತೆಯಲ್ಲಿ ಆ ಬಗ್ಗೆ ಏನಾದರೂ ಪ್ರಸ್ತಾವಿಸಲ್ಪಟ್ಟಿದ್ದರೂ, ಮಕ್ಕಳಿಗೆ ತಮ್ಮದೇ ಕಲ್ಪನೆಯನ್ನು ಮಾಡಿಕೊಳ್ಳುವ ಅನುಭವ ಸಿಗಲಿ. ಕತೆ ಹೇಳಲು ಒಮ್ಮೆ ಶುರು ಮಾಡಿದರೆ, ಮಕ್ಕಳ ಪ್ರತಿಕ್ರಿಯೆಯಿಂದಲೇ ನಿಮಗೆ ಮುಂದಿನ ಸಲ ಯಾವ ಕತೆ ಹೇಳಬೇಕು ಎಂಬ ಸೂಕ್ಷ್ಮತೆ ಅರಿವಾಗುತ್ತದೆ. ಇದೇ ವೇಳೆ, ಉತ್ತಮ ಕತೆಯನ್ನು ಆರಿಸಬೇಕಾದರೆ ನೀವೂ ಕತೆಗಳನ್ನು ಓದುತ್ತಲೇ ಇರಬೇಕಾಗುತ್ತದೆ. ಇಷ್ಟಾದರೂ, ಇವೆಲ್ಲವೂ ಕೆಲವು ಆರಂಭಿಕ ಅಂಶಗಳಷ್ಟೇ. ಒಬ್ಬ ಒಳ್ಳೆಯ ಕತೆ ಹೇಳುವವನಾಗಬೇಕಾದರೆ ನೀವೂ ಅಭ್ಯಾಸ ಮಾಡುತ್ತಲೇ ಇರಬೇಕು, ಕಲಿಯುತ್ತಲೇ ಇರಬೇಕು ಮತ್ತು ಹೊಸ ಹೊಸ ವಿಧಾನಗಳ ಪ್ರಯೋಗಗಳನ್ನು ಮಾಡುತ್ತಲೇ ಇರಬೇಕಾಗುತ್ತದೆ.



**ರಾಜೇಶ್ ಉತ್ಸಾಹಿ** ಅವರು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅನುವಾದ ಉಪಕ್ರಮವಾದ `ಅನುವಾದ ಸಂಪದ'ದಲ್ಲಿ ಹಿರಿಯ ಹಿಂದಿ ಸಂಪಾದಕರಾಗಿದ್ದಾರೆ. ವಿಶ್ವವಿದ್ಯಾಲಯದ ನಿಯತಕಾಲಿಕ 'ಲರ್ನಿಂಗ್ ಕರ್ವ್' ಮತ್ತು 'ಐ ವಂಡರ್'ನ ಹಿಂದಿ ಅನುವಾದಿತ ಸಂಚಿಕೆಗಳನ್ನು ಅವರು ಸಂಪಾದನೆ ಮಾಡುತ್ತಾರೆ. ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಟೀಚರ್ಸ್ ಆಫ್ ಇಂಡಿಯಾ ಪೋರ್ಟಲ್‌ನಲ್ಲಿ ಅವರು ಬಹುತೇಕ ಹನ್ನೆರಡು ವರ್ಷ ಹಿಂದಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅದಕ್ಕೂ ಮೊದಲು, ಮಕ್ಕಳ ವಿಜ್ಞಾನ ನಿಯತಕಾಲಿಕ 'ಚಕ್ಮಕ್'ನಲ್ಲಿ 17 ವರ್ಷ ಸಂಪಾದಕೀಯ ವಿಭಾಗದಲ್ಲಿ ಕೆಲಸ ಮಾಡಿದ್ದೂ ಸೇರಿದಂತೆ, ಸುಮಾರು 27 ವರ್ಷ 'ಏಕಲವ್ಯ'ದಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅವರನ್ನು utsahi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

ಶಿಕ್ಷಕರು ತಮ್ಮ ಪ್ರದೇಶದ ಕತೆಗಳನ್ನು ಹಂಚಿಕೊಳ್ಳಬೇಕು. ಅಂತಹ ಹೆಚ್ಚು ಕತೆಗಳನ್ನು ಕಲೆಹಾಕಲು, ಮಕ್ಕಳು ತಮ್ಮ ಪೋಷಕರಲ್ಲಿ ತಮ್ಮ ಪ್ರದೇಶದ ಕತೆ ಹೇಳುವಂತೆ ತಿಳಿಸಬಹುದು. ಕುಟುಂಬಗಳ ಕತೆ ಹೇಳುವ ಸಂಪ್ರದಾಯ ಸಂಪೂರ್ಣವಾಗಿ ನಶಿಸಿಹೋಗುವ ಮುನ್ನ ಗುರುತಿಸುವ ಮತ್ತು ಪ್ರೋತ್ಸಾಹಿಸುವ ಅಗತ್ಯವಿದೆ. ಉತ್ತಮ ಸಾಹಿತ್ಯದ ಕೊರತೆಯಿಂದಾಗಿ ಉಂಟಾದ ಅಂತರವನ್ನು, ಟಿ.ವಿ ಮತ್ತು ಫೋನ್‌ಗಳಲ್ಲಿ ನಿರಂತರವಾಗಿ ಸ್ಫೋಟಗೊಳ್ಳುತ್ತಿರುವ 'ಸುದ್ದಿ ಕತೆಗಳು' ತುಂಬುತ್ತಿರುವುದು ದುರದೃಷ್ಟಕರ ಸಂಗತಿ.

– ವ್ಯಾಲೆಂಟಿನಾ ತ್ರಿವೇದಿ, ಕತೆಗಳು ಮಕ್ಕಳನ್ನು ಕತೆಗಳು ಹೇಗೆ  ಪೋಷಿಸುತ್ತವೆ, ಪುಟ 3

# ಭಾಷಾ ಕಲಿಕೆಯಲ್ಲಿ ಕಥೆಗಳ ಶಕ್ತಿ

ಶರೂನ್ ಸನ್ನಿ

ನಾವು ಕಥೆಗಳನ್ನು ಕೇಳುತ್ತಿರುವಾಗ ನಮ್ಮ ಮೆದುಳು ಅದರಲ್ಲಿ ಹೆಚ್ಚುಹೆಚ್ಚು ತೊಡಗಿಸಿಕೊಳ್ಳುತ್ತದೆ ಎಂಬ ಅಂಶವು ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿದೆ ಮತ್ತು ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ಆದರೂ ಇದೊಂದು ಪ್ರಶ್ನೆ ಇನ್ನೂ ಉಳಿದಿದೆ– ಘಟನೆಗಳು ಅನುಕ್ರಮವಾಗಿ ತೆರೆದುಕೊಳ್ಳುತ್ತ ಸಾಗುವ ಕಥೆಯ ನಿರೂಪಣಾ ವಿನ್ಯಾಸವು ನಮ್ಮ ಕಲಿಕೆಯ ಮೇಲೆ ಅಂತಹ ಆಳವಾದ ಪ್ರಭಾವವನ್ನು ಏಕೆ ಬೀರುತ್ತದೆ?

ಉತ್ತರವು ತುಂಬಾ ನಿಖರವಾಗಿದೆ: ನಮ್ಮ ಮೆದುಳು ಸ್ವಾಭಾವಿಕವಾಗಿ ಕಥೆಗಳಿಗೆ ಸಂಪರ್ಕ ಹೊಂದಿರುತ್ತದೆ – ಹೇಳುವುದು ಮತ್ತು ಕೇಳುವುದು. ಪ್ರತಿಯೊಂದು ಕಥೆಯೂ ಆಂತರ್ಯದಲ್ಲಿ ಕಾರಣ ಮತ್ತು ಪರಿಣಾಮದ ಸಂಪರ್ಕಗಳ ಸರಣಿಯಾಗಿದೆ, ಇದು ನಾವು ಸ್ವಾಭಾವಿಕವಾಗಿ ಮಾಹಿತಿಯನ್ನು ಹೇಗೆ ಪ್ರಕ್ರಿಯೆಗೆ ಒಳಪಡಿಸುತ್ತೇವೆ ಎಂಬುದರ ಮೇಲೆ ಆಧಾರವಾಗಿರುವ ಅನುಕ್ರಮ ಚಿಂತನೆಯ ಪ್ರಕಾರವಾಗಿದೆ. ನಾವು ದೈನಂದಿನ ಕೆಲಸಗಳನ್ನು ನಿರ್ವಹಿಸುತ್ತಿರಲಿ, ಕೆಲಸ ಮಾಡುತ್ತಿರಲಿ ಅಥವಾ ನಮ್ಮ ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುತ್ತಿರಲಿ, ನಮ್ಮ ಕ್ರಿಯೆಗಳು ಮತ್ತು ಪರಸ್ಪರ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ನಾವು ಸಂಕ್ಷಿಪ್ತವಾಗಿಯಾದರೂ ನಮ್ಮ ಮನಸ್ಸಿನಲ್ಲಿ ನಿರಂತರವಾಗಿ ಕಥೆಗಳನ್ನು ಕಟ್ಟುತ್ತಿರುತ್ತೇವೆ. ನಮ್ಮ ಸ್ವಾಭಾವಿಕ ಪ್ರವೃತ್ತಿಯಾದ ಅನುಕ್ರಮ ಚಿಂತನೆಯನ್ನು ಕಥೆ ಹೇಳುವಿಕೆಯು ಬಳಸುತ್ತದೆ ಮತ್ತು ಮಾಹಿತಿಯನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಪ್ರಕ್ರಿಯೆಗೆ ಒಳಪಡಿಸಲು ಮತ್ತು ಉಳಿಸಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಇದು ವಿಶೇಷವಾಗಿ ಚಿಕ್ಕ ಮಕ್ಕಳ ವಿಷಯದಲ್ಲಿ ಸತ್ಯವಾಗಿದೆ, ಅವರ ಮೆದುಳು ಇನ್ನೂ ಅಭಿವೃದ್ಧಿ ಹೊಂದುತ್ತಿರುತ್ತದೆ ಮತ್ತು ಹೊಸ ಮಾಹಿತಿ ಮತ್ತು ಅನುಭವಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಗ್ರಹಿಸುತ್ತದೆ. ಇದು ಅವರನ್ನು ಹೊಸ ಆಲೋಚನೆಗಳು, ಪರಿಕಲ್ಪನೆಗಳು ಮತ್ತು ಅನುಭವಗಳಿಗೆ ಒಡ್ಡುತ್ತದೆ ಮತ್ತು ಇದರಿಂದಾಗಿ ಅವರು ಕಾರಣ ಮತ್ತು ಪರಿಣಾಮದ ಸಂಬಂಧಗಳು, ಸಮಸ್ಯೆ– ಪರಿಹರಿಸುವ ತಂತ್ರಗಳು ಮತ್ತು ಕ್ರಿಯೆಗಳ ಪರಿಣಾಮಗಳ ಬಗ್ಗೆ ಕಲಿಯುತ್ತಾರೆ. ಅವರು ಭಾಷಾ ಕೌಶಲಗಳು, ಶಬ್ದಕೋಶವನ್ನು ಅಭಿವೃದ್ಧಿಪಡಿಸುತ್ತಾರೆ (ಇದು ಕಲಿಕೆಯಲ್ಲಿ ತೊಡಗಿಸಿಕೊಂಡಿರುವವರು ಹೊಸ ಪದಗಳನ್ನು ನೆನಪಿಸಿಕೊಳ್ಳುವ ಮತ್ತು ಸಂದರ್ಭಕ್ಕೆ ಸರಿಯಾಗಿ ಹೊಸ ಪದಗಳನ್ನು ಬಳಸುವ ಸಾಮರ್ಥ್ಯವನ್ನು ಸುಧಾರಿಸುತ್ತದೆ), ಮತ್ತು ಭಾವನೆಗಳು ಮತ್ತು ಪರಾನುಭೂತಿಯ ಕುರಿತ ಆಳವಾದ ತಿಳಿವಳಿಕೆಯನ್ನು ಸಹ ಅಭಿವೃದ್ಧಿಪಡಿಸುತ್ತದೆ.

ಈ ಲೇಖನವು ವಿದ್ಯಾರ್ಥಿಗಳಲ್ಲಿ ಭಾಷಾ ಬೆಳವಣಿಗೆಯನ್ನು ಬೆಂಬಲಿಸುವ ಮೂಲಕ ಕಲಿಕೆಯನ್ನು ಹೆಚ್ಚಿಸುವ ಅಮೂಲ್ಯವಾದ ಸಾಧನವಾಗಿರುವ ಕಾರಣ ಕತೆ ಹೇಳುವಿಕೆಯನ್ನು ತರಗತಿಯ ದೈನಂದಿನ ಚಟುವಟಿಕೆಗಳಲ್ಲಿ ಯಾವುದೇ ವಿಷಯವನ್ನು ಕಲಿಸಲು ಸಂಯೋಜಿಸಲಾಗುತ್ತದೆ ಎಂದು ಕಥೆ ಹೇಳುವಿಕೆಯ ಮಹತ್ವವನ್ನು ಅರ್ಥಮಾಡಿಸುವ ಕಡೆಗೆ ಕೇಂದ್ರೀಕರಿಸುತ್ತದೆ. ಎಳೆಯರಿಗೆ ಕಥೆ ಹೇಳುವಿಕೆಯು ಏಕೆ ಮುಖ್ಯವಾಗಿತ್ತು ಮತ್ತು ಮುಖ್ಯವಾಗಿದೆ ಎಂಬುದರ ವಿವರಣೆಗೆ ಆಳವಾಗಿ ಹೋಗುವ ಮೊದಲು, ಕಥೆ ಹೇಳುವಿಕೆಯ ವ್ಯಾಖ್ಯಾನವು ಆವಶ್ಯಕವಾಗಿದೆ ಏಕೆಂದರೆ ಇದು ಕಥೆಯನ್ನು ಗಟ್ಟಿಯಾಗಿ ಓದುವುದು ಅಥವಾ ಇತರ ರೀತಿಯ ಓದುವಿಕೆಗಿಂತ ಭಿನ್ನವಾಗಿರುತ್ತದೆ. ಈ ಕುರಿತಾಗಿ ವಿಪುಲವಾದ ವ್ಯಾಖ್ಯಾನಗಳಿವೆ, ಆದರೆ ಅವುಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಂಡುಬರುವ ಒಂದು ವ್ಯಾಖ್ಯಾನವನ್ನು ರೋನಿ (1983) ಸೂಚಿಸುತ್ತಾರೆ 'ಅದರ ಮೂಲ ರೂಪದಲ್ಲಿ, ಕಥೆ ಹೇಳುವಿಕೆಯು ಒಂದು ಪ್ರಕ್ರಿಯೆ ಅಲ್ಲಿ ಒಬ್ಬ ವ್ಯಕ್ತಿಯು (ಹೇಳುವವನು), ಮನಸ್ಸಿನಲ್ಲಿ ಮೂಡುವ ಕಲ್ಪನೆಗಳು, ನಿರೂಪಣಾ ವಿನ್ಯಾಸ ಮತ್ತು ಧ್ವನಿಯನ್ನು ಬಳಸುವ ಪ್ರಕ್ರಿಯೆ ಅಥವಾ ಹಾಡುವುದರ ಮೂಲಕ, ಇತರ ವ್ಯಕ್ತಿಗಳೊಂದಿಗೆ (ಪ್ರೇಕ್ಷಕರು) ಸಂವಹನ ನಡೆಸುತ್ತಾನೆ ಮತ್ತು ಪ್ರತಿಯಾಗಿ ಕೇಳುಗರು ತಮ್ಮ ಮನಸ್ಸಿನಲ್ಲಿ ಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ ಮತ್ತು, ಕಥೆ ಹೇಳುವವರಿಗೆ ತಮ್ಮ ದೇಹ ಭಾಷೆ ಮತ್ತು ಮುಖದ ಅಭಿವ್ಯಕ್ತಿಗಳ ಮೂಲಕ ಪ್ರತಿಕ್ರಿಯೆ ನೀಡುತ್ತ ಸಂವಹನ ನಡೆಸುತ್ತಾರೆ, ಇದು ಕಥೆಯ ಸಹ–ಸೃಷ್ಟಿಗೆ ಕಾರಣವಾಗುತ್ತದೆ.
ಪ್ರಾಥಮಿಕ ಭಾಷಾ ತರಗತಿಗಳಲ್ಲಿ, ಕಥೆ ಹೇಳುವಿಕೆಯು ಕ್ರಿಯಾಶೀಲ ಮತ್ತು ಅನೇಕ ಪ್ರಯೋಜನಗಳನ್ನು ಒಳಗೊಂಡಿರುವ ಅಭ್ಯಾಸವಾಗಿದ್ದು ಅದು ಸಾಮಾನ್ಯವಾಗಿ ಮೂರು ವಿಭಿನ್ನ ಹಂತಗಳಲ್ಲಿ ತೆರೆದುಕೊಳ್ಳುತ್ತದೆ.

ಈ ಹಂತಗಳ ಮೂಲಕ, ಮಕ್ಕಳು ವಿವಿಧ ಸ್ಥಿತಿಗಳನ್ನು ಮತ್ತು ವಿಷಯದ ಪರಿಷ್ಕರಣೆಯ ಪ್ರಕ್ರಿಯೆಯನ್ನು ಹಾದು ಹೋಗುತ್ತಿರುತ್ತಾರೆ. ಇದು ಕೇವಲ ವಸ್ತುವನ್ನು ಮಾತ್ರವಲ್ಲದೆ, ಅನೇಕ ವಿಧಗಳಲ್ಲಿ, ಕಥೆ ಹೇಳುವಿಕೆಯು ಭಾಷೆಯ ಆಳವಾದ ತಿಳಿವಳಿಕೆಯನ್ನು ಬೆಳೆಸುವ, ಅವರ ಶಬ್ದಕೋಶವನ್ನು ವಿಸ್ತರಿಸುವ ಮತ್ತು ವಿಮರ್ಶಾತ್ಮಕ ಚಿಂತನೆಯ ಕೌಶಲಗಳನ್ನು ಅಭಿವೃದ್ಧಿಪಡಿಸುವ ಒಂದು ಸಮಗ್ರ ವಿಧಾನವಾಗಿದೆ. ಕೆಲವೊಮ್ಮೆ ಶಿಕ್ಷಕರು ಪೂರ್ವನಿಯೋಜಿತವಾಗಿ, ತಮ್ಮ ತರಗತಿಗಳು ಭಾಷೆಯನ್ನು ಸಮೃದ್ಧವಾಗಿ ಬಳಸಲು ಮತ್ತು ಕೇಳಲು ಅವಕಾಶಗಳನ್ನು ಒದಗಿಸುತ್ತವೆ ಎಂದು ಊಹಿಸುತ್ತಾರೆ. ಇದು

## ಕಥೆ ಹೇಳುವ ಹಂತಗಳು

ಮೊದಲನೆಯದಾಗಿ, ಕಥಾ- ಪೂರ್ವ ಹಂತದಲ್ಲಿ ನಡೆಸಲಾಗುವ ಚಟುವಟಿಕೆಗಳು ಮಕ್ಕಳನ್ನು ಆಕರ್ಷಿಸುತ್ತವೆ ಮತ್ತು ಕಥೆಯಲ್ಲಿ ತೊಡಗಿಸಿ-ಕೊಳ್ಳುವಂತೆ ಮಾಡುತ್ತವೆ ಮತ್ತು ಇದಕ್ಕೆ ಸಂಬಂಧಿಸಿದ ಭಾಷೆ ಮತ್ತು ಶಬ್ದಕೋಶವನ್ನು ಪರಿಚಯಿಸುತ್ತವೆ ಅಥವಾ ಬಲಪಡಿಸುತ್ತವೆ. ನಂತರ, ಈ ಚಟುವಟಿಕೆಗಳು ಕಥೆಯ ಸಮಯದಲ್ಲಿ ಮಕ್ಕಳ ಗಮನ ಕಥೆಯ ಕಡೆಗೇ ಇರುವಂತೆ ನೋಡಿಕೊಳ್ಳುತ್ತವೆ, ಮತ್ತು ಅವರ ಗ್ರಹಿಕೆಗೆ ಮಾರ್ಗ-ದರ್ಶನ ಮತ್ತು ಬೆಂಬಲ ನೀಡುತ್ತವೆ. ಅಂತಿಮವಾಗಿ, ಕಥೆಯ ನಂತರದ ಚಟುವಟಿಕೆಗಳು ಕಥೆಯ ಭಾಷೆಯನ್ನು ಸಕ್ರಿಯವಾಗಿ ಬಳಸಿಕೊಳ್ಳಲು ಮತ್ತು ವೈಯಕ್ತಿಕ ಪ್ರತಿಕ್ರಿಯೆಗಳನ್ನು ಹಂಚಿಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸುತ್ತವೆ.

ಯಾವಾಗಲೂ ನಿಜವಲ್ಲ. ಅಕ್ಷರ ಕಲಿಕೆಗೆ ಸಂಬಂಧಿಸಿದಂತೆ ಭಾಷೆಯನ್ನು ಸಂಯೋಜಿಸುವ ಉದ್ದೇಶಪೂರ್ವಕ ಯೋಜನೆಗಳನ್ನು ಶಿಕ್ಷಕರು ಮಾಡಬೇಕಾಗುತ್ತದೆ (ಫ್ಲಿನ್, 2016), ಮತ್ತು ಕಥೆ ಹೇಳುವುದು ಅಂತಹ ಒಂದು ಚಟುವಟಿಕೆಯಾಗಿದೆ. ಸ್ಟೋರಿ ಸರ್ಕಲ್ ಚಟುವಟಿಕೆಗಳ ಸಮಯದಲ್ಲಿ, ಶಿಕ್ಷಕರಿಗೆ, ಪದಗಳ ಆಟ, ಪ್ರಾಸಶಬ್ದಗಳು, ಆನ್‌ಸೆಟ್ ಆಂಡ್ ರಿಮ್ (ಪದದ ಆರಂಭಿಕ ಮತ್ತು ಕೊನೆಯ ಉಚ್ಚಾರಣ ಶಬ್ದಗಳು), ಮತ್ತು ಕೊಟ್ಟಿರುವ ಪದದಲ್ಲಿ ವಿವಿಧ ಶಬ್ದಗಳನ್ನು ಪ್ರತ್ಯೇಕಿಸುವಂತಹ ಚಟುವಟಿಕೆಗಳನ್ನು ಉತ್ತೇಜಿಸಲು ಅವಕಾಶವಿದೆ. ಇದು ಮಗುವಿನ ಧ್ವನಿರಚನೆಯ (phonemic) ಅರಿವನ್ನು ಉತ್ತಮವಾಗಿಸಲು, ಮತ್ತು ಅಂತಿಮವಾಗಿ ಉಚ್ಚಾರಣೆಗಳನ್ನು ಕಲಿಯಲು ಮತ್ತು ಕಲಿಕೆಯನ್ನು ಅರ್ಥೈಸಿಕೊಳ್ಳುವಂತಹ ಉತ್ತಮ ಸಾಮರ್ಥ್ಯಗಳಿಗೆ ಕಾರಣವಾಗುತ್ತದೆ (ಸೋಡರ್ಮನ್ ಮತ್ತು ಇತರರು, 2013).ಮಗುವು ಒಮ್ಮೆ ಸುಮಾರು 50-100 ಪದಗಳ ಮೇಲೆ ಹಿಡಿತ ಸಾಧಿಸಿದ ನಂತರ, ಭಾಷೆ ತ್ವರಿತವಾಗಿ ಅಭಿವೃದ್ಧಿಗೊಳ್ಳುತ್ತದೆ (ಸೋಡರ್ಮನ್ ಮತ್ತು ಇತರರು, 2013) ಮಕ್ಕಳು ನಾಲ್ಕು ಅಥವಾ ಐದು ವರ್ಷ ವಯಸ್ಸಿನ ವೇಳೆಗೆ, ಹೆಚ್ಚಿನ ಪ್ರಮಾಣದಲ್ಲಿ ನಿರರ್ಗಳವಾಗಿ ಮಾತನಾಡುವುದನ್ನು ಕಾಣ-ಬಹುದು (ಬ್ರೈನ್, 1996; ಕ್ಯಾಂಬೋರ್ನ್, 1986). ಮಾತನಾಡುವುದು ಮಗುವಿನ ಅದಮ್ಯ ಇಚ್ಛೆಯಾಗಿರುತ್ತದೆ, ಆದರೆ ಸಂವಹನದಲ್ಲಿ ಬಳಸುವ ಭಾಷೆ ಶೈಕ್ಷಣಿಕ ಉದ್ದೇಶಗಳಿಗೆ ಬಳಸುವ ಭಾಷೆಗಿಂತ ಹೆಚ್ಚು ಕ್ರಿಯಾತ್ಮಕವಾಗಿರುತ್ತದೆ. ಅವರು ಭಾಷೆಯನ್ನು ವಿಶ್ಲೇಷಿಸುವುದಕ್ಕಿಂತ ಹೆಚ್ಚಾಗಿ ಬಳಸುತ್ತಾರೆ. ಸಾಮಾನ್ಯವಾಗಿ, ಕಥೆ ಹೇಳುವಿಕೆಯು ಈ ಕಲ್ಪನೆಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ ಏಕೆಂದರೆ ಇದು ಪ್ರಾಥಮಿಕವಾಗಿ ಮೌಖಿಕ-ಭಾಷೆಯನ್ನು ಆಧರಿಸಿದೆ. ಇದು ಮಗುವಿನ ಮೌಖಿಕ ಭಾಷಾ ಪರಿಣತಿಯನ್ನು ಶೈಕ್ಷಣಿಕ ರೀತಿಗೆ ಬದಲಾಗಿ ಕ್ರಿಯಾತ್ಮಕವಾಗಿ ಬಳಸಿಕೊಳ್ಳುತ್ತದೆ ಮತ್ತು ಆದ್ದರಿಂದ, ಪ್ರತಿ ಮಗುವಿಗೂ ಇದರಲ್ಲಿ ಪ್ರವೇಶ ದೊರಕುತ್ತದೆ.

ಕಲಿಕೆಯ ಸಾಧನವಾಗಿ, ಪಠ್ಯಕ್ರಮದ ಎಲ್ಲಾ ಕ್ಷೇತ್ರಗಳಲ್ಲಿ ವಿಷಯವನ್ನು ಹಂಚಿಕೊಳ್ಳಲು ಕಥೆ ಹೇಳುವಿಕೆಯನ್ನು ಬಳಸಬಹುದು, ಆದರೆ ಇದು ಹೆಚ್ಚಾಗಿ ಮುದ್ರಣ ಸಾಹಿತ್ಯದ ಮೇಲೆ ಹೆಚ್ಚಿನ ಒತ್ತು ನೀಡುವುದರಿಂದ ವಿಶೇಷವಾಗಿ ಇದು ಇಂಗ್ಲಿಷ್ ಭಾಷಾ ತರಗತಿಯಲ್ಲಿ ಹೆಚ್ಚಿನ ಮೌಲ್ಯವನ್ನು ಹೊಂದಿದೆ. ಕಥಾ ಸಮಯದಲ್ಲಿ, ಶಿಕ್ಷಕರು ಪುಸ್ತಕದ ಪುಟಗಳ ಉದ್ದಕ್ಕೂ ಓದುವ ಶಬ್ದಗಳ ಮೇಲೆ ಬೆರಳನ್ನು ಇಡುತ್ತಾ ಒಂದು ಶಬ್ದದಿಂದ ಇನ್ನೊಂದು ಶಬ್ದಕ್ಕೆ ಬೆರಳನ್ನು ಚಲಿಸುವ ಮೂಲಕ ನಿಧಾನವಾಗಿ ಓದುವುದನ್ನು ಮಕ್ಕಳು ಅನುಸರಿಸುತ್ತಾರೆ. ಪದಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ತಿಳಿದುಕೊಳ್ಳಬೇಕಾಗಿರುವ ಮೊದಲ ಹಂತವೆಂದರೆ ಪುಟದಲ್ಲಿನ ಪಠ್ಯವು ಸಾಮಾನ್ಯವಾಗಿ ಎಡದಿಂದ ಬಲಕ್ಕೆ ಚಲಿಸುತ್ತದೆ ಎಂದು ಅರ್ಥ ಮಾಡಿಕೊಳ್ಳುವುದು. ಕಥೆ ಹೇಳುವ ಪ್ರಕ್ರಿಯೆಯಲ್ಲಿ ಸಹ-ಸೃಷ್ಟಿಕರ್ತರಾಗಲು ಮಕ್ಕಳನ್ನು ಸಹ ಆಹ್ವಾನಿಸಬಹುದು.

ಕಥೆ ಹೇಳುವಿಕೆಯು ಭಾಷೆಯ ಸಮೃದ್ಧತೆಗೆ ಅವಕಾಶ ನೀಡುತ್ತದೆ. ವಿದ್ಯಾರ್ಥಿಗಳಿಗೆ ವಿಸ್ತೃತ ತಿರುವುಗಳಲ್ಲಿ ಭಾಷೆಯನ್ನು ಬಳಸಲು (ವಯಸ್ಕ ಮತ್ತು ಮಗುವಿನ ನಡುವಿನ ಪುನಃ ಪುನಃ ನಡೆಸುವ ಸಂಭಾಷಣೆ) ಮತ್ತು ವಿಚಾರಗಳನ್ನು ವಿವರಿಸಲು ಇದು ಅವಕಾಶಗಳನ್ನು ನೀಡುತ್ತದೆ. ಉದಾಹರಣೆಗೆ, ಮಗುವಿನ ಅತಿ ಸಮೀಪದ ಕಲಿಕಾ ಪರಿಸರದಲ್ಲಿರುವ ವಯಸ್ಕರು ದೀರ್ಘವಾದ, ಹೆಚ್ಚು ಸಂಕೀರ್ಣವಾದ ವಾಕ್ಯ ಮತ್ತು ವಾಕ್ಯರಚನೆಯಲ್ಲಿ ಸಂಕೀರ್ಣ/ಜಟಿಲ ಭಾಷೆಯನ್ನು ಬಳಸಿದಾಗ, ಮಕ್ಕಳು ವಿವರವಾಗಿ ಮತ್ತು ಹೆಚ್ಚು ಮಾತನಾಡುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ ಮತ್ತು ಅವರ ಉಚ್ಚಾರ ಮತ್ತು ವಾಕ್ಯರಚನೆಯು ವ್ಯಾಕರಣ ಬದ್ಧವಾಗಿರುತ್ತದೆ. ಮಕ್ಕಳಿಗೆ ಈ ರೀತಿಯ ಕಲಿಕೆಯು ಮುಖ್ಯವಾಗಿದೆ ಏಕೆಂದರೆ ಮಕ್ಕಳು ಹೊಸ ಪದಗಳನ್ನು ಕಲಿಯಲು ವಾಕ್ಯ ರಚನಾಕ್ರಮದಲ್ಲಿ ಸೂಚಿಸಲಾಗಿರುವ ಸೂಚನೆಗಳನ್ನು ಒಳಗೊಂಡಂತೆ ಸಾಂದರ್ಭಿಕ ಸೂಚನೆಗಳನ್ನು ಬಳಸುತ್ತಾರೆ. ವೈವಿಧ್ಯಮಯ ಹಾಗೂ ವ್ಯಾಕರಣಬದ್ಧ ವಾಕ್ಯರಚನೆಯ ರೂಪಗಳ ಅರಿವು ಭಾಷೆಯ ಸಮಗ್ರ ಗ್ರಹಿಕೆಗೆ ಮತ್ತು ಅಂತಿಮವಾಗಿ ಓದಿನ ಗ್ರಹಿಕೆಗೆ ಸಂಬಂಧಿಸಿದೆ.

ಇದನ್ನು ಗಳಿಸಿದ ಬಳಿಕ ಕ್ರಿಯೆಯ ಕ್ರಿಯಾಪದಗಳು ಮತ್ತು ಸರಳ ರೂಪದ ಪದಪುಂಜಗಳನ್ನು ಸೇರಿಸಲಾಗುತ್ತದೆ (ನನಗೆ ಬೇಕು, ಅದನ್ನು ನಿಲ್ಲಿಸಿ, ಅದನ್ನು ಬಯಸುವುದಿಲ್ಲ, ದಯವಿಟ್ಟು). ಒಂದೊಮ್ಮೆ ಮಕ್ಕಳ ಹೆಚ್ಚಿನ ಗ್ರಹಿಕೆಗೆ ಸಾಧ್ಯವಾಗಬಲ್ಲ ಶಬ್ದಕೋಶ ಲಭ್ಯವಿದೆ ಮತ್ತು ಇತರರೊಂದಿಗಿನ ಸಂವಹನವು ಅತ್ಯಂತ ಸಹಜ ರೂಪದಲ್ಲಿ ಸಂಭವಿಸುತ್ತಿದೆ ಎಂಬುದಕ್ಕೆ ಪುರಾವೆಗಳಿದ್ದರೆ ಮತ್ತು ಅದರ ಮುಂದುವರಿದ ಅಭ್ಯಾಸಕ್ಕೆ ಪ್ರೋತ್ಸಾಹ ಮತ್ತು ಅವಕಾಶಗಳು ಇದ್ದಲ್ಲಿ, ಸಾಮಾನ್ಯವಾಗಿ ಮಕ್ಕಳ ಪ್ರಗತಿಯ ಹಾದಿ ತ್ವರಿತವಾಗಿ ಸಾಗುತ್ತಿದೆ ಎಂದರ್ಥ (Kostelnik, Soderman, & Whiren, 2013).

## ಪರಿಚಿತ ಹಾದಿ

ಈ ಆರಂಭಿಕ ಹಂತಗಳಲ್ಲಿ ಮಕ್ಕಳು ಪರಿಚಿತವಾದುದರ ಬಗ್ಗೆ ಕೇಳುತ್ತಾರೆ, ನೋಡುತ್ತಾರೆ ಮತ್ತು ಓದುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಶಿಕ್ಷಕರಿಗೆ ಬಹಳ ಮುಖ್ಯವಾಗಿದೆ. ಉದಾಹರಣೆಯಾಗಿ, ತರಗತಿಯಲ್ಲಿ, ಕಥೆಯ ರೂಪದಲ್ಲಿ ಓದುವ ವಿಷಯವು ಮಕ್ಕಳೆಲ್ಲರೂ ವೃತ್ತಾಕಾರದಲ್ಲಿ ಕುಳಿತುಕೊಂಡು ಗುಂಪಿನಲ್ಲಿ ಚಟುವಟಿಕೆ ನಡೆಸುವ ಸಮಯದಲ್ಲಿ ಅಥವಾ ಅವರು ಸಣ್ಣಸಣ್ಣ ಗುಂಪುಗಳಾಗಿ ಸಂವಹನ ನಡೆಸುವ ಸಮಯದಲ್ಲಿ ಚರ್ಚಿಸಲ್ಪಡುವುದನ್ನು ಸಹ ಬೆಂಬಲಿಸಬೇಕು. ಕೆಳಗಿನ ರೀತಿಯ ಕಥೆಯನ್ನೇ ತೆಗೆದುಕೊಳ್ಳಿ:

ಒಂದು ಶುಭ್ರ ಮುಂಜಾನೆ, ಸೂರ್ಯನ ಬೆಳಕು ಭೂಮಿಯ ಮೇಲೆ ಬೀಳುತ್ತಿದ್ದಂತೆ, ಮೀನಾ ತನ್ನ ತೋಟದಲ್ಲಿ ನೆಟ್ಟಿದ್ದ ಒಂದು ಚಿಕ್ಕ ಬೀಜಕ್ಕೆ ಜೀವ ಬರುತ್ತದೆ. ಸಸಿಯ ಸಣ್ಣ ಎಲೆಗಳು ಕಪ್ಪು ಮಣ್ಣಿನಿಂದ ಹೊರಗೆ ಆಗಾಗ ತಳ್ಳಲ್ಪಡುತ್ತಿದ್ದವು, ಮತ್ತು ಹಾಗೆಯೇ ತಳ್ಳಲ್ಪಟ್ಟು ಒಂದು ದಿನ, ಆ ಬೀಜಗಳಿಂದ ಎರಡು ಹಸಿರು ಎಲೆಗಳು ಹೊರಬಂದವು. ಮೀನಾ ಅದಕ್ಕೆ ಪ್ರತಿದಿನ ನೀರು ಹಾಕುತ್ತಿದ್ದಳು ಮತ್ತು ಶೀಘ್ರದಲ್ಲೇ ಆ ಸಸಿ ಗಿಡವಾಯಿತು. ಸಸ್ಯವು ಬೆಳೆದಂತೆ, ಅವಳು ಸಸ್ಯದ ತುದಿಯಲ್ಲಿ ಒಂದು ಸಣ್ಣ ಮೊಗ್ಗನ್ನು ಗಮನಿಸಿದಳು. ದಿನಗಳು ಕಳೆದಂತೆ, ಮೊಗ್ಗು ನಿಧಾನವಾಗಿ ತೆರೆದುಕೊಳ್ಳಲು ಪ್ರಾರಂಭಿಸಿತು, ಮತ್ತು ಒಂದು ದಿನ ಬೆಳಗ್ಗೆ, ಪ್ರಕಾಶಮಾನವಾದ ಹಳದಿ ಸೂರ್ಯಕಾಂತಿ ಮೀನಾಳನ್ನು ಸ್ವಾಗತಿಸಿತು.

ಈ ಕಥೆಯನ್ನು ಕೇವಲ ಯಾವುದೇ ವಿಷಯವನ್ನು ಮಾತ್ರವಲ್ಲದೆ ಭಾಷೆಯನ್ನು ಕಲಿಸಲು ಸಹ ಬಳಸಬಹುದು. ನಾವು ಆಟ್ರಿಬ್ಯೂಟ್ ಚಾರ್ಟ್‌ಒಂದನ್ನು (Attribute charts) ರಚಿಸಬಹುದು. ಆಟ್ರಿಬ್ಯೂಟ್ ಚಾರ್ಟ್‌ಗಳು ಪರಿಣಾಮಕಾರಿ ಸಾಧನಗಳಾಗಿವೆ, ಅವು ಮಕ್ಕಳಿಗೆ ಅಭಿವ್ಯಕ್ತಿಶೀಲ ಶಬ್ದಕೋಶವನ್ನು (expressive vocabulary) ನಿರ್ಮಿಸಲು ಮತ್ತು ಅವರು ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುವ ಭಾಷೆಯಲ್ಲಿ ಪದಗಳನ್ನು ಕಲಿಯಲು ಸಹಾಯ ಮಾಡುತ್ತವೆ. ಮೇಲಿನ ಕಥೆಯಲ್ಲಿ, ಶಿಕ್ಷಕರು ವಿದ್ಯಾರ್ಥಿಗಳಿಗೆ ನಿಜವಾದ ಸೂರ್ಯಕಾಂತಿಯನ್ನು ತೋರಿಸಬಹುದು, ವಿದ್ಯಾರ್ಥಿಗಳು ತಾವೇ ಸ್ವತಃ ಬೀಜಗಳನ್ನು ನೆಟ್ಟು ಮತ್ತು ಅವರು ಅದನ್ನು ಬೆಳೆಯುವುದನ್ನು ವೀಕ್ಷಿಸಬಹುದು. ಇದೆಲ್ಲವನ್ನೂ ಕಥಾ ವಿಧಾನದ ಮೂಲಕ ಮಾಡಬಹುದು. ಆಟ್ರಿಬ್ಯೂಟ್ ಚಾರ್ಟ್ ಮೂಲಕ, ಶಿಕ್ಷಕರು ವಿಜ್ಞಾನಕ್ಕೆ ಸಂಬಂಧಿಸಿದ ಪದಗಳನ್ನು ಮಾತ್ರವಲ್ಲದೆ ಹೂವನ್ನು ವಿವರಿಸುವ ಪದಗಳಾದ 'ಸುಂದರ', 'ಹಳದಿ', 'ಪ್ರಕಾಶಮಾನವಾದ' ಮತ್ತು ಮುಂತಾದ ಶಬ್ದಗಳನ್ನೂ ಪರಿಚಯಿಸಬಹುದು. ಸಾಮಾನ್ಯವಾಗಿ, ಒಂದು ಕಥೆಯು ಕಲಿಕೆಗಾಗಿ ತನ್ನನ್ನು ತಾನೇ ಸಂಪೂರ್ಣವಾಗಿ ಮೀಸಲಿಡಬಹುದಾದ ಹಲವಾರು ಮಾರ್ಗಗಳಿವೆ.

ಎಳೆಪ್ರಾಯದ ಮಕ್ಕಳಿಗೆ ಇಂಗ್ಲಿಷ್ ಕಲಿಸುವಲ್ಲಿ ಕಥೆಗಳು ಮತ್ತು ಕಥೆ ಹೇಳುವಿಕೆಯು ವಿಶೇಷವಾಗಿ ಪರಿಣಾಮಕಾರಿಯಾಗಿದೆ ಏಕೆಂದರೆ ಅವು ನಿಜ ಜೀವನದ ಸಂದರ್ಭಗಳಿಗೆ ಅಗತ್ಯವಿರುವ ಸ್ಪಷ್ಟ ಮತ್ತು ನಿಸ್ಸಂದಿಗ್ಧವಾದ ಭಾಷೆಯನ್ನು ಒದಗಿಸುತ್ತವೆ. ಇದರೊಂದಿಗೆ, ಕಥೆಗಳು ಮಕ್ಕಳ ಕಲ್ಪನೆಯನ್ನು ಉದ್ದೀಪನಗೊಳಿಸುತ್ತವೆ ಮತ್ತು ಪ್ರೇರೇಪಿಸುತ್ತವೆ, ವಿವಿಧ ವಿಷಯಗಳ ನಡುವೆ ಸಂಪರ್ಕ ಕಲ್ಪಿಸಲು ಅವರಿಗೆ ಅನುವು ಮಾಡಿಕೊಡುತ್ತದೆ. ಕಥೆಗಳನ್ನು ಬಳಸಿ ಕಲಿಯುವಾಗ, ಕಲಿಯುವವರು ಸಂದರ್ಭೋಚಿತ ಭಾಷೆಯನ್ನು ಸುಲಭವಾಗಿ ಪ್ರವೇಶಿಸಬಹುದು ಏಕೆಂದರೆ ಇದನ್ನು ಪರಿಚಿತ ಸನ್ನಿವೇಶದಲ್ಲಿ ಪ್ರಸ್ತುತಪಡಿಸಲಾಗಿರುತ್ತದೆ, ಜೊತೆಗೆ ಇದು ಸಹಾಯಕ್ಕಾಗಿ ವಿವರಣೆಗಳು ಮತ್ತು ರೇಖಾಚಿತ್ರಗಳನ್ನೂ ಒಳಗೊಂಡಿರುತ್ತದೆ. ನಿರ್ದಿಷ್ಟ ಸನ್ನಿವೇಶದಲ್ಲಿ ಭಾಷೆಯನ್ನು ಇರಿಸುವ ಮೂಲಕ, ಕಲಿಯುವವರು ಬಳಸಿದ ಭಾಷೆಯ ಅರ್ಥ ಮತ್ತು ಸಂದರ್ಭವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಇಂಗ್ಲಿಷ್ ಕಲಿಸುವ ಈ ವಿಧಾನವು ಹೆಚ್ಚು ವ್ಯವಸ್ಥಿತವಾದ ಕಲಿಕೆಯ ಅನುಭವವನ್ನು ಸೃಷ್ಟಿಸುತ್ತದೆ ಅದು ವಿದ್ಯಾರ್ಥಿಗಳು ತಮ್ಮ ದೈನಂದಿನ ಜೀವನಕ್ಕೆ ಅಗತ್ಯವಿರುವ ಭಾಷೆಯ ಸಂಪರ್ಕಕ್ಕೆ ಬರಲು ಸಹಾಯ ಮಾಡುತ್ತದೆ.

ಎಳೆಪ್ರಾಯದವರು ಕಲಿಯುವಿಕೆಯಲ್ಲಿ ಸಾಮಾನ್ಯವಾಗಿ ಸ್ವಾಭಾವಿಕವಾಗಿ ಅಭಿವೃದ್ಧಿ ಪಡಿಸಿಕೊಳ್ಳಬೇಕಾದ ಒಂದು ಅಗತ್ಯ ಕೌಶಲ ಎಂದರೆ ಅದು ಆಲಿಸುವುದು, ಆದರೆ ಇದರಲ್ಲಿ ಸ್ಪಷ್ಟವಾಗಿ ಸೂಚನೆಯನ್ನು ಸ್ವೀಕರಿಸದೇ ಇರಬಹುದಾದ ಸಾಧ್ಯತೆಯೂ ಇದೆ. ಕೇಳುವಿಕೆಯು ಎಳೆಪ್ರಾಯದ ಮಕ್ಕಳು ಅಗತ್ಯವಾಗಿ ಬೆಳೆಸಿಕೊಳ್ಳಬೇಕಾಗಿರುವ ಅತ್ಯಂತ ನಿರ್ಣಾಯಕ ಕೌಶಲವಾಗಿದೆ. ಮಕ್ಕಳು ತರಗತಿಗೆ ಪ್ರವೇಶಿಸುವ ಮೊದಲೇ ಈ ವಿಶೇಷ ಕೌಶಲವನ್ನು ಪಡೆದುಕೊಂಡಿರುತ್ತಾರೆ, ಏಕೆಂದರೆ ಆಲಿಸುವುದು ಸಂವಹನಕ್ಕೆ ಸಂಬಂಧಿಸಿದ ಕಲಿಕೆಯ ಮೂಲಭೂತ ಅಂಶ. ಮಕ್ಕಳಲ್ಲಿ ಈಗಾಗಲೇ ಸ್ಥಾಪಿತವಾದ ಆಲಿಸುವ ಸಾಮರ್ಥ್ಯಗಳನ್ನು ಬಂಡವಾಳ ಮಾಡಿಕೊಳ್ಳಲು ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಅದನ್ನು ಸಂಯೋಜಿಸಲು ಕಥೆ ಹೇಳುವಿಕೆಯು ಪರಿಣಾಮಕಾರಿ ಮಾರ್ಗವಾಗಿದೆ. ಶಿಕ್ಷಕರು ಇದರಿಂದಾಗಿ ಸಾಕಷ್ಟು ಪ್ರಯೋಜನಗಳನ್ನು ಪಡೆಯುತ್ತಾರೆ, ಏಕೆಂದರೆ ಅವರು ವಿದ್ಯಾರ್ಥಿಗಳು ಈಗಾಗಲೇ ಏನನ್ನು

ಕಲಿತಿದ್ದಾರೆಯೋ ಅದರ ಪ್ರಗತಿಯತ್ತ ಗಮನಹರಿಸಲು ಸಾಧ್ಯವಾಗುತ್ತದೆ. ಆದರೆ ಇದು ಓದುವ ಮತ್ತು ಬರೆಯುವ ಕೌಶಲಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಈ ಕೌಶಲಗಳನ್ನು ಪಡೆಯಲು ಔಪಚಾರಿಕ ಸೂಚನೆಗಳು ಮತ್ತು ಸಾಕಷ್ಟು ಇತರ ಮಧ್ಯಸ್ಥಿಕೆಗಳ ಅಗತ್ಯ ಇರುತ್ತದೆ.

ಕಥೆ ಹೇಳುವಿಕೆಯು ಭಾಷಾ ಕಲಿಕೆಯನ್ನು ಬೆಂಬಲಿಸುವ ಒಂದು ಪ್ರಮುಖ ಸಾಧನವಾಗಿದೆ ಮತ್ತು ಶಿಕ್ಷಕರು ಈ ಸಮಯಾತೀತ ಸಾಧನದ ಬಳಕೆಯನ್ನು ಮುಂದುವರಿಸುವುದನ್ನು ಪ್ರೋತ್ಸಾಹಿಸಲಾಗಿದೆ. ಕಥೆ ಹೇಳಲು ಅತ್ಯಾಧುನಿಕ ತಂತ್ರಜ್ಞಾನ ಅಥವಾ ದುಬಾರಿ ಕಥೆಪುಸ್ತಕಗಳ ಅಗತ್ಯವಿಲ್ಲ. ಬದಲಾಗಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಮೃದ್ಧವಾದ ಕಲಿಕೆಯ ವಾತಾವರಣವನ್ನು ಸೃಷ್ಟಿಸಲು ತಮ್ಮ ದೈನಂದಿನ ಅನುಭವಗಳಿಂದ ಕಥೆಗಳನ್ನು ಕಟ್ಟಬಹುದು ಅಥವಾ ಕಥೆಗಳನ್ನು ಸಂಗ್ರಹಿಸಬಹುದು.

ಆಲಿಸುವುದು ನಿಷ್ಕ್ರಿಯ ಚಟುವಟಿಕೆಯಲ್ಲ; ಇದು ಗಮನಾರ್ಹವಾದ ಜಾಗೃತ ಪ್ರಕ್ರಿಯೆಯನ್ನು ಬಯಸುತ್ತದೆ. ಮಕ್ಕಳು ಕಥೆಯನ್ನು ಕೇಳುವಾಗ, ಅವರು ಕೇಳುವುದನ್ನು ಮತ್ತು ನೋಡುವುದನ್ನು ಪರಿಶೀಲಿಸಬೇಕು, ಜೊತೆಗೆ ಭಾಷೆ ಮತ್ತು ವಿಷಯವನ್ನು ಹೇಗೆ ಪ್ರಸ್ತುತಪಡಿಸಲಾಗುತ್ತಿದೆ ಎಂಬುದನ್ನು ಹಾಗೆಯೇ ಗ್ರಹಿಸಬೇಕು. ಮಕ್ಕಳಿಗೆ ಕಥೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಲು, ಶಿಕ್ಷಕರು 'ಚಿಂತನೆಯ ಸಮಯ' (ಯೋಚಿಸುವ ಸಮಯ)ವನ್ನು ಅನುಮತಿಸಬೇಕು, ಇದರಿಂದಾಗಿ ಅವರು ಕಥೆಯ ಸಂಕೀರ್ಣ ಭಾಷೆ ಮತ್ತು ಅದನ್ನು ಅರಿತುಕೊಳ್ಳುವ ಪ್ರಕ್ರಿಯೆಯನ್ನು ಕೈಗೊಳ್ಳಲು ಅಗತ್ಯವಿರುವ ಸಮಯವನ್ನು ಪಡೆಯುತ್ತಾರೆ.

ವಿವಿಧ ವಯೋಮಾನದವರಿಗಾಗಿ ನೈಸರ್ಗಿಕ ಜಗತ್ತಿನ ವಿಷಯಾಧಾರಿತ ಕೆಲವು ಕಥೆ ಪುಸ್ತಕಗಳ ಶಿಫಾರಸುಗಳು ಇಲ್ಲಿವೆ: ತೇಜಸ್ವಿನಿ ಆಪ್ಟೆ ಮತ್ತು ಸುಜಾತಾ ಪದ್ಮನಾಭ ಕಲ್ಪವೃಕ್ಷ ಅವರ ಪೂಪ್ ಬುಕ್ (Poop Book)

ತಾನ್ಯಾ ಮಜುಂದಾರ್ ಕಲ್ಪವೃಕ್ಷ ರವರ 'ದ ಮೋನ್‌ಸ್ಟರ್ ಹು ಕುಡ್ ನಾಟ್ ಕ್ಲೈಂಬ್ ಅ ಟ್ರೀ (The Monster Who Could not Climb a Tree)

ಕರಡಿ ಟೇಲ್ಸ್ ಅವರಿಂದ ಆರ್ತಿ ಮುತ್ತಣ್ಣ ಸಿಂಗ್ ಮತ್ತು ಮಮತಾ ನೈನಿ ಅವರ ವತ್ಸಲಾ ಲವ್ಸ್ ಸ್ನೇಕ್ಸ್, (Vatsala Loves Snakes)

ಕರಡಿ ಟೇಲ್ಸ್ ಅವರಿಂದ ಶೋಭಾ ವಿಶ್ವನಾಥ್ ಅವರ ದ ಇನ್ಸೆಕ್ಟ್ ಬಾಯ್ (The insect Boy)

ಕರಡಿ ಟೇಲ್ಸ್ ಅವರಿಂದ ಅಂಶುಮನ್ನಿ ರುದ್ರಾರ ದೋರ್ಜೀಸ್ ಸ್ಟ್ರಿಪ್ಸ್ (Doorjee's Strips)

**ಅಂತಿಮ ಟಿಪ್ಪಣಿ**

i Onset-rime /ಆನ್ಸೆಟ್–ರಿಮ್ ಪದಗಳನ್ನು ಬೇರ್ಪಡಿಸುವ ಅಥವಾ ಇಬ್ಭಾಗವಾಗಿಸುವ ಕ್ರಿಯೆ. ಆನ್ಸೆಟ್ ಎನ್ನುವುದು ಯಾವುದೇ ಪದದ ಉಚ್ಚಾರಣೆಯ ಪೂರ್ವಾರ್ಧ ಭಾಗ, ಮತ್ತು ರಿಮ್ ಅದನ್ನು ಅನುಕರಿಸುವ ಉಚ್ಚಾರಣೆಯ ಉಳಿದ ಭಾಗ. ರಿಮ್ ಸಾಮಾನ್ಯವಾಗಿ ಸ್ವರಾಕ್ಷರವನ್ನು ಮತ್ತು ಅಂತಿಮವಾಗಿ ವ್ಯಂಜನವನ್ನು ಒಳಗೊಂಡಿರುತ್ತದೆ.

https://www.ektaraindia.in/ektarashop/ Lightning?search=Big%20Book&description=true

**ಪರಾಮರ್ಶನಗಳು:**

Bryen, D N (1982). *Inquiries into Child Language*. Boston, MA: Allyn and Bacon

Cambourne, B (1986). "Rediscovering Natural Literacy Learning: Old Wine in a New Bottle." Paper presented at the E.S.L. Conference, Singapore

Flynn, E E (2016). Language-Rich Early Childhood Classroom: Simple but Powerful Beginnings. *The Reading Teacher*, 70(2), 159–166

http://www.jstor.org/stable/44001420

Roney, R C (2009). A Case for Storytelling in the K-12 Language Arts Curriculum. *Storytelling, Self, Society*, 5(1), 45–54. http://www.jstor.org/stable/41943299

Soderman, A K, Clevenger, K. G., & Kent, I. G. (2013). Using Stories to Extinguish the Hot Spots in Second Language Acquisition, Preschool to Grade 1. YC *Young Children*, 68(1), 34–41. http://www.jstor.org/stable/42731300

---



**ಶರೂನ್ ಸನ್ನಿ** ಅವರು ಇಂಗ್ಲಿಷ್ ಭಾಷಾ ಶಿಕ್ಷಕಿ ಮತ್ತು ಶಿಕ್ಷಕ ಶಿಕ್ಷಕಿ. ಸೃಜನಶೀಲತೆಯ ಸಂಶೋಧಕಿಯಾಗಿ ಮತ್ತು ಬರವಣಿಗೆಯ ಶಿಕ್ಷಕಿಯಾಗಿ, ಅವರು ಸೃಜನಶೀಲತೆ, ಸೊಬಗು ಮತ್ತು ಸರಳತೆಗಳನ್ನು ಒಟ್ಟು ಸೇರಿಸುವುದಕ್ಕೆ ಪ್ರಯತ್ನಿಸುತ್ತಾರೆ. ಅವರು ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಲ್ಲಿ ಶಿಕ್ಷಕರಾಗಿದ್ದು, ಅವರನ್ನು Sharoon.sunny@apu.edu.in ಅಲ್ಲಿ ಸಂಪರ್ಕಿಸಬಹುದು.

ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

# ಕಥಾವನ | ಕಥೆಗಳು ಮತ್ತು ಕಥೆ ಹೇಳುವಿಕೆಗೆ ಒಂದು ಅವಕಾಶದ ನಿರ್ಮಾಣ

ಸೋನಿಕಾ ಪರಾಶರ್

ಮಕ್ಕಳ ಸಾಹಿತ್ಯಕ್ಕೆ – ಮೌಖಿಕ, ಪ್ರದರ್ಶನಾತ್ಮಕ ಮತ್ತು ಲಿಖಿತ – ಹೀಗೆ ಬಹು ಆಯಾಮಗಳಿವೆ ಮಕ್ಕಳನ್ನು ಸಂತೋಷ, ಕಲ್ಪನೆ, ಭಾವನೆಗಳು, ಸೃಜನಶೀಲತೆ, ಕುತೂಹಲ, ವಿವಿಧ ಸಂಸ್ಕೃತಿಗಳು, ಭಾಷೆಯೊಡನೆ ಆಟ, ಮನುಷ್ಯ ಜೀವಗಳ ಬಗ್ಗೆ ಪರಾನುಭೂತಿ ಮತ್ತು ತನ್ನನ್ನು ತಾನೇ ಅರ್ಥಮಾಡಿಕೊಳ್ಳುವ ಒಂದು ಜಗತ್ತಿಗೆ ಕರೆದೊಯ್ಯುವ ಶಕ್ತಿ ಇದೆ.

## ಕಥಾವನ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, 2023

ಮಕ್ಕಳು ದೊಡ್ಡ ಗುಂಪಲ್ಲಿ ಬಂದರು, ನಾನು ಅವರಿಗೆ ನನಗೆ ಎದುರಾಗಿ ಅರೆ ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ಹೇಳಿದೆ. ಅವರ ಚುರುಕಾದ ಹೊಳೆಯುವ ಕಣ್ಣುಗಳು ನಿರೀಕ್ಷೆಯಿಂದ ನನ್ನತ್ತಲೇ ನೆಟ್ಟಿದ್ದವು. ನಾನು ಬೆನ್ನಹಿಂದೆ ಅಡಗಿಸಿಟ್ಟುಕೊಂಡಿದ್ದ ಪುಸ್ತಕವನ್ನು ಮೆಲ್ಲನೆ ಹೊರತೆಗೆದೆ. ಮುಖಪುಟವನ್ನು ಅವರಿಗೆ ತೋರಿಸುತ್ತ, ನಾಟಕೀಯ ಹಾವಭಾವದೊಂದಿಗೆ ಕೂಗಿಯೇ ಬಿಟ್ಟೆ "ಆ ಮೊಸಳೆಯನ್ನು ಹಿಡಿಯಿರಿ!". ನನ್ನ ಮುಂದಿದ್ದ ಗುಂಪು ಗೊಳ್ಳನೆ ನಕ್ಕಿತು. ಪ್ರದರ್ಶನ ಶುರುವಾಯಿತೆಂದು ನನಗೆ ಅಂದಾಜಾಯಿತು.

ನಮ್ಮ ಮಕ್ಕಳ ವಾರ್ಷಿಕ ಸಾಹಿತ್ಯ ಮೇಳವಾದ 'ಕಥಾವನ'ದ ಅಂಗವಾಗಿ, ಜೋರಾಗಿ ಓದುವ ಚಟುವಟಿಕೆಯುಳ್ಳ ಕಥೆ ಓದುವ ಅಂಗಡಿಯೊಂದನ್ನು ತೆರೆದಿದ್ದೆ. ಈ ಮಕ್ಕಳು ಕನ್ನಡ ಮಾತಾಡುವವರಾಗಿದ್ದರು, ನನಗೆ ಹಿಂದಿ ಮತ್ತು ಇಂಗ್ಲಿಷ್ ಇವೆರಡಷ್ಟೇ ಗೊತ್ತಿತ್ತು. ಆದ್ದರಿಂದ ನನ್ನ ಸಹೋದ್ಯೋಗಿಯೊಬ್ಬರ ಸಹಾಯದಿಂದ ನಾನು ಇಂಗ್ಲೀಷಿನಲ್ಲಿ ಓದಿದ್ದನ್ನು ಕನ್ನಡಕ್ಕೆ ಭಾಷಾಂತರ ಮಾಡುವ ವ್ಯವಸ್ಥೆಯಾಯಿತು. ಭಾಷೆಯ ಅಂತರದ ಮಧ್ಯೆಯೂ, ಜೋರಾಗಿ – ಓದುವಿಕೆಯ ಚಟುವಟಿಕೆಯು ಸೂಕ್ತ ಹಾವಭಾವ, ಭಾವನೆಗಳ ಅಭಿನಯ, ಧ್ವನಿಯ ಏರಿಳಿತ ಹಾಗೂ ಇತರ ಅರೆಭಾಷಾಶಾಸ್ತ್ರದ ಗುಣಲಕ್ಷಣಗಳಿಂದ ಕೂಡಿದ್ದು, ಮಕ್ಕಳಿಂದ ಸಮರ್ಪಕ ಗ್ರಹಿಕೆ, ಚಿಂತನಪೂರ್ಣ ಮತ್ತು ಉತ್ಸಾಹಭರಿತ ಪ್ರತಿಕ್ರಿಯೆಗಳಿಗೆ ಕಾರಣವಾಯಿತು, ಅವರ ಅಪ್ರಯತ್ನಿತ ಗಾಬರಿಯ ಪ್ರತಿಕ್ರಿಯೆಗಳು, ಆಶ್ಚರ್ಯ, ನಗು ಮತ್ತು ಉತ್ಸಾಹಭರಿತ ನಿರೀಕ್ಷೆಗಳು ಆ ಗೋಷ್ಠಿಯ ಸ್ವಾರಸ್ಯಕರ ಅಂಶಗಳಾಗಿದ್ದವು.

## ಕಥಾವನ ಎಂದರೇನು?

ಕಥಾವನ ಒಂದು ವಾರ್ಷಿಕ, ದ್ವಿಭಾಷೀಯ, ಮಕ್ಕಳ ಸಾಹಿತ್ಯ ಸಮ್ಮೇಳನವಾಗಿದ್ದು, ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನ ಕರ್ನಾಟಕದ ಕ್ಷೇತ್ರ ಸಂಸ್ಥೆಗಳ (Field Institutes) ಸಹಕಾರದಲ್ಲಿ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯವು ಇದನ್ನು ಆಯೋಜಿಸುತ್ತದೆ. ಸರ್ಕಾರಿ ಮತ್ತು ಕಡಿಮೆ ಶುಲ್ಕವುಳ್ಳ ಖಾಸಗಿ ಶಾಲೆಗಳ ಜೊತೆ ಸೇರಿ ವಿವಿಧ ಸಾಂಸ್ಕೃತಿಕ, ಸಮಾಜೋ–ಆರ್ಥಿಕ ಮತ್ತು ಭಾಷಿಕ ಹಿನ್ನೆಲೆಯಿಂದ ಬಂದ ಮಕ್ಕಳಿಗೆ ಸಾಹಿತ್ಯದ ಅನುಕೂಲಗಳನ್ನು ದೊರಕಿಸಿಕೊಡುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ.



ಚಿತ್ರ 1. ಕಥಾವನದ ಮಕ್ಕಳ ವಾರ್ಷಿಕ ದ್ವಿಭಾಷಾ ಸಾಹಿತ್ಯ ಸಮ್ಮೇಳನದಲ್ಲಿ ಮಕ್ಕಳು

ಕಥಾವನದ ಪ್ರತೀ ಆವೃತ್ತಿಯು ಒಂದು ವಿಷಯ ವಸ್ತುವಿನ ಸುತ್ತ ಇರುತ್ತದೆ. ಕಾರ್ಯಾಗಾರಗಳು, ಚರ್ಚೆಗಳು, ಮೌಖಿಕ ಕಥೆಗಾರಿಕೆ, ಜೋರಾಗಿ ಓದುವುದು, ಗೊಂಬೆಯಾಟ, ಚಿತ್ರಕಾರರನ್ನು ಭೇಟಿ ಮಾಡುವುದು ಮತ್ತು ಇತರ ಕಾರ್ಯಕ್ರಮಗಳು ಹೀಗೆ ಎಲ್ಲವೂ ಈ ವಿಷಯ ವಸ್ತುವಿನ ಸುತ್ತಲೇ ಇರುತ್ತವೆ. ಹಳೆಯ ಕೆಲವು ವಿಷಯವಸ್ತುಗಳು ಇಂತಿವೆ, "ಸಾಹಿತ್ಯದಲ್ಲಿ ಮಕ್ಕಳ ಧ್ವನಿ","ಓದುಗರಾಗಿ ಶಿಕ್ಷಕರು" ಮತ್ತು " ಮಕ್ಕಳ ಸಾಹಿತ್ಯ–ಸ್ಪಂದನೆಯನ್ನು ಪೋಷಿಸುವುದು". ಎಂಬ ಶಿರ್ಷಿಕೆಗಳಡಿಯಲ್ಲಿ ಈ ಸಮ್ಮೇಳನವು ಮಕ್ಕಳ ಸಾಹಿತ್ಯವು ಮಕ್ಕಳಿಗೆ ಲಭಿಸುವಂತೆ ಮಾಡುವುದಲ್ಲದೆ ಅದರಲ್ಲಿ ಅವರು ತೊಡಗಿಸಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಅವರು ತರಗತಿಗಳಿಗೆ ಮರಳಿದಾಗಲೂ ಸಾಹಿತ್ಯವನ್ನು ಅನ್ವೇಷಿಸಲು ಪ್ರೇರೇಪಿಸುತ್ತದೆ. ಇದರಲ್ಲಿ ಶಿಕ್ಷಕರು ಅವಲೋಕಿಸಿ ತರಗತಿಗಳಿಗೆ ಸಾಹಿತ್ಯವನ್ನು ತರಲು ಹಲವಾರು ಉಪಾಯಗಳನ್ನು ಕಂಡುಕೊಂಡು ಹೋಗುತ್ತಾರೆ.

## ಏಕೆ ಕಥೆ ಹೇಳುವುದು?

ಮಾನವ ಭಾಷೆ ಅಸ್ತಿತ್ವಕ್ಕೆ ಬಂದಾಗಿನಿಂದಲೂ ದಸ್ತನ್ ಗೋಯಿ, ಹರಿಕಥಾ ಕಲಾಕ್ಷೇಪ, ಯಕ್ಷಗಾನ, ಕಾವಡ್, ಬುರ‍್ರ ಕಥಾ, ಕಟ್ ಪುತಲೀ, ರಬ್ಬ ಛಾಯಾ, ತೊಗಲು ಬೊಂಬೆಯಾಟ ಮೊದಲಾದ ವಿವಿಧ ಮೌಖಿಕ ಹಾಗೂ ಪ್ರದರ್ಶನಾತ್ಮಕ ಸಂಪ್ರದಾಯಗಳ ಮೂಲಕ ಕಥೆ ಹೇಳುವ ಸಂಪ್ರದಾಯ ಮನುಷ್ಯ ಜೀವನದ ಪ್ರಮುಖ ಭಾಗವಾಗಿದೆ. ಈ ಮೌಖಿಕ ಮತ್ತು ಪ್ರದರ್ಶನಾತ್ಮಕ ಸಂಪ್ರದಾಯಗಳನ್ನು ಈಗ ಸೂಕ್ತವಾಗಿ, ಸಾಹಿತ್ಯ ಎಂದು ಪರಿಗಣಿಸಲಾಗುತ್ತದೆ, ಮತ್ತು ಮಕ್ಕಳನ್ನು ಪ್ರೇಕ್ಷಕರಾಗಿಸುವ ಸಾಹಿತ್ಯ ಪ್ರದರ್ಶನಗಳನ್ನು ಮಕ್ಕಳ ಸಾಹಿತ್ಯ ಎಂದು ಕರೆಯಲಾಗುತ್ತದೆ.

ಕಥೆಗಳನ್ನು ಮತ್ತು ತರಗತಿಗಳಲ್ಲಿ ಕಥೆ ಹೇಳುವುದನ್ನು ಬಳಸುವುದರ ಮಹತ್ವವನ್ನು ಹಲವಾರು ಕಾರಣಗಳು ವಿವರಿಸುತ್ತವೆ. ಅದಕ್ಕಾಗಿಯೇ ಅವು ಕಥಾವನದ ಮುಖ್ಯ ಅಂಗಗಳಾಗಿವೆ. ಅಂತಹ ಕೆಲವು ಕಾರಣಗಳು ಈ ಕೆಳಗಿನಂತಿವೆ: ಸ್ವತಃ ತಮ್ಮ ಬಗ್ಗೆ ಹಾಗು ಜಗತ್ತಿನ ಬಗ್ಗೆ ಕಲಿಯುವುದು.

ಕಥೆ ಹೇಳುವುದು ಮಕ್ಕಳಿಗೆ ತಮ್ಮೊಳಗೆ ಹಾಗು ಹೊರಗೆ ನೋಡಲು ಅನುವು ಮಾಡಿಕೊಡುತ್ತ, ಆ ಪ್ರಕ್ರಿಯೆಯಲ್ಲಿ ಪಾತ್ರಗಳು ಹಾಗು ಘಟನೆಗಳ ಜೊತೆ ಪರಾನುಭೂತಿ ಹೊಂದಲು ಅವಕಾಶ ಮಾಡಿಕೊಡುತ್ತವೆ. ಮಕ್ಕಳು ತಮ್ಮ ಭಾವನೆಗಳು, ಪ್ರತಿಕ್ರಿಯೆಗಳು, ಆಸಕ್ತಿಗಳು ಮತ್ತು ತಮ್ಮ ಕ್ರಿಯೆಗಳ ಹಿಂದಿನ ಪ್ರೇರಣೆಗಳ ಬಗ್ಗೆ ಪ್ರಜ್ಞಾಶೀಲರಾಗುತ್ತಾರೆ ಹಾಗು ವಿವಿಧ ಸಂಸ್ಕೃತಿಗಳ ಬಗ್ಗೆ, ತಮ್ಮಂತೆಯೇ ಇರುವ ಹಾಗು ತಮಗಿಂತ ಭಿನ್ನವಾಗಿರುವ ಜನರ ಬಗ್ಗೆ ಹೆಚ್ಚು ಪರಿಚಿತರಾಗುತ್ತಾರೆ. ಕಥೆಗಳು ಮಕ್ಕಳಿಗೆ ಬರಿಯ ಕಲ್ಪನಾಲೋಕಕ್ಕೆ ಜಿಗಿಯಲು ಸಹಾಯ ಮಾಡುವ ಚಿಮ್ಮುಹಲಗೆಗಳಷ್ಟೇ ಅಲ್ಲ ಬದಲಾಗಿ ಆ ಕಲ್ಪನಾಲೋಕಕ್ಕೂ ವಾಸ್ತವ ಜಗತ್ತಿಗೂ ಸಂಬಂಧ ಕಲ್ಪಿಸಲು ಕೂಡ ಸಹಾಯ ಮಾಡುತ್ತವೆ. ಕಥೆ ಹೇಳುವಿಕೆಯು ಅವರಿಗೆ ಮುಖ್ಯವಾದ ವಿಷಯಗಳ ಬಗ್ಗೆ ಯೋಚಿಸಿ ಮಂಥಿಸುವುದಕ್ಕೆ ಸೂಕ್ತ ವೇದಿಕೆಯನ್ನು ಕಲ್ಪಿಸುವುದಲ್ಲದೆ ಮಾನವತೆಗೆ ಸಾರ್ವತ್ರಿಕವಾದ ವಿಷಯಗಳನ್ನು ನಿಭಾಯಿಸಲೂ ಸಹಕರಿಸುತ್ತದೆ. ಇದೆಲ್ಲಕ್ಕಿಂತ ಮೇಲಾಗಿ ತರಗತಿಯಲ್ಲಿ ಕಥೆ ಹೇಳುವ ಚಟುವಟಿಕೆ ಒಂದು ಹಂಚಿಕೊಂಡಂತಹ ಸಾಮಾಜಿಕ ಅನುಭವವಾಗುತ್ತದೆ, ಇದರಿಂದ ಮಕ್ಕಳು ನಕ್ಕು ನಲಿದು, ಉದ್ವೇಗಭರಿತರಾಗಿ, ದುಃಖಪಟ್ಟು, ನಿರೀಕ್ಷಿಸಿ ಇಂಥ ಹಲವು ಭಾವನೆಗಳನ್ನು ಗುಂಪಲ್ಲಿ ಒಟ್ಟಾಗಿ ಅನುಭವಿಸುತ್ತಾರೆ. ಇದರ ಮೂಲಕ ಮಕ್ಕಳ ಸಾಮಾಜಿಕ– ಭಾವನಾತ್ಮಕ ಬೆಳವಣಿಗೆ, ತನ್ಮೂಲಕ ಸಮುದಾಯವೊಂದರ ಬೆಳವಣಿಗೆ ಉಂಟಾಗುತ್ತದೆ.
ಯೋಚಿಸಲು ಕಲಿಯುವುದು

ಕಥೆ ಹೇಳುವ ಚಟುವಟಿಕೆಯು ಮಕ್ಕಳಿಗೆ ಆಲಿಸುವ, ಯೋಜಿಸುವ, ಊಹನೆ ಮಾಡುವ, ಮುಂದೆ ನಡೆಯಬಹುದಾದ್ದನ್ನು ಲೆಕ್ಕಾಚಾರ ಹಾಕುವ, ವಿನ್ಯಾಸ ಮಾದರಿಗಳನ್ನು ಗುರುತಿಸುವ ಹಾಗೂ ಲಕ್ಷ್ಯವನ್ನು ಕೇಂದ್ರೀಕರಿಸುವ ತಂತ್ರಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಅವರು ದೃಶ್ಯ ಹಾಗೂ ಶ್ರವ್ಯ ಸೂಚನೆಗಳನ್ನು, ಭಾಷೆ ಹಾಗೂ ಜಗತ್ತಿನ ಬಗೆಗೆ ಅವರಿಗೆ ಈಗಾಗಲೇ ಇರುವ ಜ್ಞಾನವನ್ನು ಅರ್ಥನಿರ್ಮಾಣಕ್ಕೆ ನಿಸ್ಸಂದಿಗ್ಧವಾಗಿ ಬಳಸಲು ಪ್ರಾರಂಭಿಸುತ್ತಾರೆ.

## ಭಾಷೆಯನ್ನು ಕಲಿಯುವುದು

ಕಥೆಗಳಲ್ಲಿ ಪದೇಪದೇ ಬರುವ ಪುನರಾವರ್ತನೆಗಳು ಹಾಗೂ ಭಾಷೆಯ ಸಮಾನ ವಿನ್ಯಾಸಗಳಿಗೆ ಮತ್ತು ಮಕ್ಕಳನ್ನು ಮಾತನಾಡುವ ಹಾಗೂ ನಿರೂಪಣೆಯ ಸಂವಾದವೊಂದಕ್ಕೆ ತೆರೆದುಕೊಳ್ಳುವಂತೆ ಮಾಡಿ, ಸಾಕ್ಷರತೆ ಹಾಗೂ ಭಾಷಾ ಕೌಶಲದ ಬೆಳವಣಿಗೆಗೆ ಕೇಂದ್ರವಾದ ಮೌಖಿಕ ಭಾಷೆಯ ಬೆಳವಣಿಗೆಯಾಗುವಂತೆ ಮಾಡುತ್ತವೆ. ಪದಸಂಪತ್ತು, ವಾಕ್ಯ ರಚನೆಗಳು, ವ್ಯಾಕರಣ ನಿಯಮಗಳು, ಉಚ್ಚಾರ, ಲಯ, ಧ್ವನಿಯ ಏರಿಳಿತ, ಜ್ಞಾನಗ್ರಹಣ ಮತ್ತು ನಿರ್ದಿಷ್ಟ ಪ್ರಸಂಗಗಳಲ್ಲಿನ ಭಾಷೆಯ ಬಳಕೆ ಇವೆಲ್ಲವನ್ನೂ ಕೂಡ ಪರಿಚಯಿಸಿ ಅವನ್ನು ಬಲಗೊಳಿಸಬಹುದು.

## ಬೋಧನಶಾಸ್ತ್ರದ ಸಾಧನವಾಗಿ

ಕಥೆ ಹೇಳುವಿಕೆಯು ಗಣಿತ, ವಿಜ್ಞಾನ, ಕಲೆ, ತಂತ್ರಜ್ಞಾನ ಮತ್ತು ಸಮಾಜ ವಿಜ್ಞಾನದ ಪಠ್ಯಕ್ರಮದ ಕ್ಷೇತ್ರಗಳ ಉದ್ದಗಲಕ್ಕೂ ವಿವಿಧ ಪರಿಕಲ್ಪನೆಗಳನ್ನು ಪರಿಚಯಿಸಿ ಬಲಪಡಿಸುವ ಸಂದರ್ಭಗಳನ್ನು ಒದಗಿಸುತ್ತದೆ ಮತ್ತು ಶಿಕ್ಷಕರಿಗೆ ಇವು ಉಪಯುಕ್ತ ಬೋಧನಶಾಸ್ತ್ರದ ಸಾಧನಗಳಾಗಿ ಒದಗಿ ಬರುತ್ತವೆ. ಮಕ್ಕಳಿಗೂ ದೊಡ್ಡವರಿಗೂ ಕಥೆಗಳನ್ನು ಕೇಳುವುದು ಸಂತೋಷ ಹಾಗೂ ವಿನೋದವನ್ನುಂಟು ಮಾಡುತ್ತದೆ ಎಂಬ ವಿಷಯ

ಕಂಡುಬಂದಿದೆ. ಕಥೆ ಹೇಳುವಿಕೆಯು ಶಿಕ್ಷಕರಿಗೆ ತರಗತಿಯಲ್ಲಿ ಮಕ್ಕಳ ಆಸಕ್ತಿ ಹಾಗೂ ಪ್ರೇರಣೆಗಳಿಗೆ ಅನುಗುಣವಾಗಿ ಅವರ ಭಾಗವಹಿಸುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಯೋಜಿಸಲು ಅನುಕೂಲ ಮಾಡಿಕೊಡುತ್ತವೆ. ಇದು ತರಗತಿಯಲ್ಲಿ ವೈಯಕ್ತಿಕ ಭಿನ್ನತೆ, ಅಗತ್ಯಗಳು ಮತ್ತು ವೈವಿಧ್ಯಗಳಿಗೆ ಸ್ಥಳಾವಕಾಶ ಮಾಡಿಕೊಟ್ಟು ಶಿಕ್ಷಕರು ಈ ಅಂಶಗಳಿಗೆ ಸ್ಪಂದಿಸಲು ಸಹಾಯ ಮಾಡುತ್ತವೆ.

## ತರಗತಿಗಳಲ್ಲಿ ಕಥೆ ಹೇಳುವಿಕೆ ಏಕೆ ಮಾಯವಾಗಿದೆ?

ಕಥೆ ಹೇಳುವಿಕೆಯ ಶೈಕ್ಷಣಿಕ ಮೌಲ್ಯದ ಹೊರತಾಗಿಯೂ, ಶಿಕ್ಷಕರಿಂದ ಅದಕ್ಕೆ ಪ್ರತಿರೋಧ ವ್ಯಕ್ತವಾಗುತ್ತದೆ. ಏಕೆಂದರೆ ಅವರಲ್ಲಿ ಬಹುತೇಕರಿಗೆ ಮಕ್ಕಳ ಬದುಕು ಹಾಗೂ ಕಲಿಕೆಯಲ್ಲಿ ಅದರ ನಿಜವಾದ ಮೌಲ್ಯದ ಅರಿವು ಇರುವುದಿಲ್ಲ. ಅವರಿಗೆ ಒಂದು ವೇಳೆ ಅದರ ಪ್ರಾಮುಖ್ಯ ಅರ್ಥವಾದರೂ, ಕಥೆ ಹೇಳುವಿಕೆಯನ್ನು ಅವರ ತರಗತಿ ಹಾಗೂ ಕಲಿಸುವಿಕೆ– ಕಲಿಯುವಿಕೆಯ ಭಾಗವನ್ನಾಗಿಸುವ ರೀತಿಗಳನ್ನು ಗುರುತಿಸಲು ಕಷ್ಟಪಡುತ್ತಾರೆ. ಈ ಕಷ್ಟಪಡುವಿಕೆ ಪಾಠವೊಂದನ್ನು ಯೋಜಿಸುವಲ್ಲಿ, ಸಮಯವನ್ನು ನಿಭಾಯಿಸುವುದರಲ್ಲಿ, ಪಠ್ಯಕ್ರಮವೊಂದರ ನಿರ್ಬಂಧಗಳಲ್ಲಿ ಅಥವಾ ವಯಸ್ಸು ಮತ್ತು ಕಲಿಕೆಯ ಮಟ್ಟಕ್ಕೆ ಅನುಗುಣವಾಗಿ ಕಥೆ ಹೇಳಲು ಸೂಕ್ತ ರೀತಿಯ ಪುಸ್ತಕ ಅಥವಾ ಸಂಪ್ರದಾಯಗಳನ್ನು ಗುರುತಿಸುವಲ್ಲಿ, ಈ ಯಾವುದರ ಸುತ್ತ ಬೇಕಾದರೂ ಇರಬಹುದು. ಕೆಲವು ಶಿಕ್ಷಕರು ತಮ್ಮ ಕಥೆ ಹೇಳುವ ಅಥವಾ ಅವುಗಳನ್ನು ಜೋರಾಗಿ ಓದುವ ಸಾಮರ್ಥ್ಯಗಳಲ್ಲಿ ವಿಶ್ವಾಸ ಹೊಂದಿಲ್ಲದೆ ಇರುವ ಕಾರಣಕ್ಕೂ ಕಥೆ ಹೇಳುವುದನ್ನು ತಪ್ಪಿಸುತ್ತಾರೆ.

## ಕಥಾವನ ಹೇಗೆ ಸಹಾಯ ಮಾಡಿದೆ

ಕಥಾವನವು ವೃತ್ತಿಪರ ಬೆಳವಣಿಗೆ ಕಾರ್ಯಾಗಾರಗಳು ಮತ್ತು ಚರ್ಚೆಗಳ ಮೂಲಕ ಸೇವಾ–ನಿರತ ಹಾಗೂ ಸೇವಾ–ಪೂರ್ವ ಶಿಕ್ಷಕರ ಜೊತೆ ಸುಸಂಗತವಾಗಿ ಕೆಲಸ ಮಾಡುತ್ತ ಬಂದಿದೆ. ಸಿದ್ಧಾಂತ–ಕಾರ್ಯರೂಪದ ಸಂಬಂಧದ (theory-practice connect) ಅನುಕೂಲವನ್ನು ಬಳಸಿಕೊಂಡು, ಮಕ್ಕಳ ಸಾಹಿತ್ಯವನ್ನು ತರಗತಿಗಳಿಗೆ ವಿಶೇಷವಾಗಿ ಕಥೆ ಹೇಳುವುದರ ಮೂಲಕ ಪರಿಚಯಿಸುವುದರ ವಿವಿಧ ರೀತಿಗಳನ್ನು ಶಿಕ್ಷಕರಿಗೆ ವ್ಯವಸ್ಥಿತವಾಗಿ ಪರಿಚಯಿಸಲಾಗುತ್ತದೆ. ಶಿಕ್ಷಕರಿಗೆ ಲಭಿಸಬಲ್ಲ ಕೆಲವು ಹೊಳಹುಗಳು ಇಂತಿವೆ ;

## ಕಲಿಯುವಿಕೆ ಮತ್ತು ಮಗು-ಕೇಂದ್ರಿತ ವಿಧಾನ

ಸಾಹಿತ್ಯದೊಡನೆ ಮಕ್ಕಳ ತೊಡಗಿಸಿಕೊಳ್ಳುವಿಕೆ –ಶಿಕ್ಷಕರು ಕಥೆ ಹೇಳುವುದು, ಅದನ್ನು ಅನುವಾದ ಅಥವಾ ಸಾರಾಂಶದ ಮೂಲಕ ವಿವರಿಸಿ ಅದರ 'ನೀತಿ'ಯನ್ನು ಹೇಳುವುದು, ಹೀಗೆ ಜಡವಾಗಿರಬಾರದು. ಅದಕ್ಕೆ ಬದಲಾಗಿ ಮಕ್ಕಳು ಸಾಹಿತ್ಯದೊಡನೆ ಸಕ್ರಿಯವಾಗಿ ತೊಡಗಿಸಿಕೊಂಡು ಅವರದ್ದೇ ಅರ್ಥಗಳನ್ನು ಹುಟ್ಟುಹಾಕಬೇಕು, ಅರ್ಥಕಲ್ಪನೆಗಳನ್ನು, ಭವಿಷ್ಯದ ಅಂದಾಜುಗಳನ್ನು, ಮತ್ತು ಭಾವನೆಗಳನ್ನು ಹಂಚಿಕೊಂಡು, ವಿವಿಧ ಸೃಜನಶೀಲ ರೀತಿಗಳಲ್ಲಿ ಸಾಹಿತ್ಯಕ್ಕೆ ಸ್ಪಂದಿಸಬೇಕು. ಇದು ಆಗಬೇಕೆಂದರೆ, ಶಿಕ್ಷಕರು ವಿವಿಧ ಅರ್ಥ ಮತ್ತು ಅರ್ಥ ವ್ಯಾಖ್ಯಾನಗಳುಳ್ಳ, ಮನೋರಂಜಕ ಅರ್ಥಗಳುಳ್ಳ, ಮಕ್ಕಳ ಬದುಕಿಗೆ ಮತ್ತು ಅನುಭವಗಳಿಗೆ ಹೊಂದಿಕೊಂಡಂತಹ, ಮಕ್ಕಳಿಗೆ ಪ್ರಸಕ್ತವಾದ, ಅವರ ಆಸಕ್ತಿ ಅಗತ್ಯಗಳಿಗೆ ಸ್ಪಂದಿಸುವಂತಹ, ವಯಸ್ಸಿಗೆ ಸೂಕ್ತವಾದ ಹಾಗೂ ವೈಯಕ್ತಿಕ ಆಧಾರಿತ ಕಲಿಕೆಯ ಮಟ್ಟಗಳಿಗೆ ಅನುವು ಮಾಡಿಕೊಡುವಂತಹ ಕಥೆಗಳನ್ನು ಆರಿಸುವ ಮೂಲಕ ಗೋಷ್ಠಿಗಳು ಸಂವಾದಪೂರ್ಣವಾಗಿದ್ದು ಮಕ್ಕಳ ಯೋಚನೆ ಹಾಗೂ ಕಲ್ಪನೆಗಳನ್ನು ಬರಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ, ಈ ರೀತಿಯ ಒಂದು ಗೋಷ್ಠಿಯಲ್ಲಿ, ಕಥೆಗಾರ್ತಿ ಮೈತ್ರಿ ವಾಸುದೇವ್ ಅವರು ಹೀಬ್ರೂ ಭಾಷೆಯಿಂದ ಈಶ್ವರಚಂದ್ರರು ಕನ್ನಡಕ್ಕೆ ಭಾಷಾಂತರಿಸಿದ ಉರಿ ಒರ್ಲೆವ್ ಅವರು ಬರೆದ ಅಜ್ಜಿ ಹೆಣೆಯುತ್ತಾಳೆ ಎಂಬ ಕಥೆಯನ್ನು ಜೋರಾಗಿ ಓದಿದರು. ಮಕ್ಕಳಿಗೆ ಕಲ್ಪಿಸಿಕೊಳ್ಳಲು, ಕಥೆಯ ಜೊತೆ ತಮ್ಮ ಬದುಕಿನ ಸಂಬಂಧ ಕಲ್ಪಿಸಲು, ಯೋಚಿಸಿ, ಮಂಥಿಸಿ, ತಮ್ಮ ಅರ್ಥಗಳ ಮೂಲಕ ಸ್ಪಂದಿಸಲು ಅನುಕೂಲವಾಗಲೆಂದು, ಆಕೆ ಪ್ರಶ್ನೆಗಳುಳ್ಳ ಒಂದು ಚರ್ಚೆಯನ್ನು ಹುಟ್ಟುಹಾಕಿದರು. 'ತನ್ನ ಮೊಮ್ಮಕ್ಕಳು ಒಬ್ಬರು ಮತ್ತೊಬ್ಬರ ಉಣ್ಣೆಯ ದಾರಗಳನ್ನು ಹಿಡಿದು ಎಳೆದಾಡಿದಾಗ ಅಜ್ಜಿಗೆ ಏನನ್ನಿಸಿತು? ನೀವು ಮನೆಯಲ್ಲಿ ಏನಾದರೂ ಮುರಿದುಹಾಕಿದಾಗ ನಿಮ್ಮ ಅಪ್ಪ ಅಮ್ಮ/ಅಜ್ಜ ಅಜ್ಜಿ ಏನು ಮಾಡುತ್ತಾರೆ? ಅಜ್ಜಿ ಕಥೆಯಲ್ಲಿ ಪ್ರತಿಕ್ರಿಯಿಸಿದ ಹಾಗೆಯೇ ನಿಮ್ಮ ಮನೆಯಲ್ಲಿ ಕೂಡ ಪ್ರತಿಕ್ರಿಯಿಸುತ್ತಾರೆಯೇ? ಅಥವಾ ಬೇರೆ ರೀತಿ ಪ್ರತಿಕ್ರಿಯಿಸುತ್ತಾರೆಯೇ? ನಿಮಗೆ ಕೋಪ ಬಂದಾಗ ನೀವೇನು ಮಾಡುತ್ತೀರಾ? ನಿಮ್ಮ ಕೋಪ ಕೂಡ ಅಜ್ಜಿಯಂತೆಯೇ, ಮೆಲ್ಲಗೆ ದೊಡ್ಡದಾಗುವ ಬಲೂನಿನಂತೆ ನಿಧಾನವಾಗಿ ಏರುತ್ತದೆಯೇ? ಅಥವಾ ಅದು ಒಮ್ಮೆಗೇ ಸಿಡಿಯುವ ಬಲೂನಿನಂತೆ ಸಿಡಿದುಬಿಡುತ್ತದೆಯೋ? ಇತ್ಯಾದಿ.

## ಪಠ್ಯಕ್ರಮದ ಪರಿಕಲ್ಪನೆಗಳ ವಿಸ್ತರಣೆ ಮತ್ತು ಸಂಯೋಜನೆ

ಕಥೆ ಹೇಳುವಿಕೆಯು ಇತರ ಚಟುವಟಿಕೆಗಳಿಗೆ ದಾರಿ ಮಾಡಿಕೊಡುತ್ತದೆ, ವಿಷಯವಸ್ತುವನ್ನು ಪರಿಚಯಿಸುತ್ತದೆ ಮತ್ತು ಇತರ ಪಠ್ಯಕ್ರಮದ ಕ್ಷೇತ್ರಗಳ ಪರಿಕಲ್ಪನೆಗಳನ್ನು ಪರಿಚಯಿಸುತ್ತದೆ. ಕಥೆಗಾರ್ತಿ ವನಿತಾ ಅವರು ಕಥೆಯೊಂದನ್ನು ಪರಿಚಯಿಸಿ ಅದನ್ನು ಮಕ್ಕಳು ತಮ್ಮದೇ ಕಥೆ ಕಟ್ಟಿ ಪೂರಕ ಚಿತ್ರಗಳೊಂದಿಗೆ ಚೆನ್ನಾಗಿ ಕಾಣುವಂತೆ ಸುರುಳಿಯಾಕಾರದಲ್ಲಿ (accordion book) ಮಾದರಿಯಲ್ಲಿ ಕಥೆಪುಸ್ತಕವನ್ನು ನಿರ್ಮಿಸುವ ಆರಂಭದ ಹಂತವನ್ನಾಗಿ ಬಳಸಿಕೊಂಡರು. ಮತ್ತೊಬ್ಬ ಕಥೆಗಾರ್ತಿ, ಪ್ರಿಯ ಮುತ್ತುಕುಮಾರ್ ಅವರು, ಹಕೀಮನ ಬಿಕ್ಕಳಿಕೆ, ಬಿಸಿಬೇಳೆಬಾತ್ ಮಡಕೆ ಮತ್ತು ಬೆಕ್ಕು ಮತ್ತು

ನೋಣದಂತಹ (Hakeem's Hiccups, Bisibelebath Pot and The Cat and the Fly) ಕಥೆಗಳನ್ನು ಬಳಸಿಕೊಂಡು ಸಮಾಜಸೇವಕರ ಬಗ್ಗೆ, ವಿವಿಧ ಪ್ರಾಂತ್ಯಗಳ ಆಹಾರ, ನಿಸರ್ಗ ಮತ್ತು ಪ್ರಾಣಿಗಳ ನಡೆವಳಿಕೆಯ ವಿಷಯಗಳ ಬಗ್ಗೆ ಮಾತನಾಡಿದರು.

## ಬಹುರೂಪತೆಯ ಬಳಕೆ

ಕಥೆ ಹೇಳುವುದಕ್ಕೆ ಬಹುರೂಪತೆಯ ಆಯಾಮವಿದೆ, ಅದರಲ್ಲಿ ಪಾತ್ರ ನಿರ್ವಹಣೆ, ರಂಗಪರಿಕರ ಮತ್ತು ನಾಟಕವನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ. ಅದು ಹಾವಭಾವ ಮತ್ತು ಆಂಗಿಕ ಅಭಿನಯದ ಮೇಲೆ ತುಂಬಾ ಅವಲಂಬಿತವಾಗಿರಬೇಕೆಂದೇನೂ ಇಲ್ಲ. ರಂಗ ಪರಿಕರ ಮತ್ತು ಸಾಮಗ್ರಿಗಳನ್ನು ಧ್ವನಿಯ ಏರಿಳಿತ ಮತ್ತು ಭಾವನೆಗಳನ್ನು ಹಿಡಿದೆತ್ತಲು ಬಳಸಬಹುದು. ಉದಾಹರಣೆಗೆ, ಕೆಲವು ಕಥೆಗಾರರು ( ಉಮಾಶಂಕರ್ ಪೆರಿಯೋಡಿ, ಗಗನ್ ಯೆಯ್ಯಾಡಿ ಮತ್ತು ಅನ್ವಿತಾ ಪ್ರಕಾಶ್) ತೊಗಲು ಗೊಂಬೆಗಳನ್ನು ಇತರ ಪರಿಕರಗಳೊಂದಿಗೆ – ದುಪಟ್ಟಾಗಳು, ಪೀಠೋಪಕರಣಗಳು, ಸಂಗೀತ ವಾದ್ಯಗಳನ್ನು ಬಳಸಿಕೊಂಡು ಕಥೆ ಹೇಳಿದರು. ಇದು ಮಕ್ಕಳಿಗೆ ತಮ್ಮದೇ ತೊಗಲುಗೊಂಬೆಗಳನ್ನು ಮಾಡಿ ಅವುಗಳ ಮೂಲಕ ನೇರವಾಗಿ ಅಥವಾ ಅವುಗಳನ್ನು ಪರಿಕರಗಳನ್ನಾಗಿ ಬಳಸಿಕೊಂಡು ಕಥೆ ಹೇಳಲು ಪ್ರೇರೇಪಿಸಿತು.

## ಬಹುಭಾಷಾ/ದ್ವಿಭಾಷಾ ತರಗತಿಗಳ ನಿರ್ಮಾಣ

ಶಿಕ್ಷಕರು ಬಹುಭಾಷಾ ತರಗತಿಗಳನ್ನು ವಾಸ್ತವಗೊಳಿಸಲು ದಾರಿಗಳನ್ನು ಹುಡುಕಲು ಶುರುಮಾಡಿದ್ದಾರೆ. ದ್ವಿಭಾಷಾ ಕಥಾವನವು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳೆರಡೂ ಹೇಗೆ ಒಂದರೊಳಗೊಂದು ಬೆಸೆದ ಸಂವಾದದ ಭಾಗವಾಗಬಹುದು ಎಂದು ತೋರಿಸಿಕೊಡುತ್ತದೆ. ನಮ್ಮಲ್ಲಿ ಕನ್ನಡದ ಜೊತೆ ಹಿಂದಿ ಅಥವಾ ಉರ್ದುವಿನಲ್ಲಿ ಉತ್ತಮ ಕೌಶಲ್ಯ ಹೊಂದಿದವರು, ಹಾಗೂ ಆರಂಭಿಕ ಹಂತದ ಇಂಗ್ಲೀಷ್ ಭಾಷೆ ಗೊತ್ತಿರುವವರು, ಹೀಗೆ ಎರಡಕ್ಕಿಂತ ಹೆಚ್ಚು ಭಾಷೆಗಳನ್ನು ಸರಾಗವಾಗಿ ಮಾತಾಡಬಲ್ಲ ವಿದ್ಯಾರ್ಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಇದ್ದದ್ದಿದೆ. ಗೋಷ್ಠಿಗಳಲ್ಲಿ ಮೇಲೆ ತಿಳಿಸಿದ ಯಾವುದಾದರೂ ಒಂದು ಅಥವಾ ಎಲ್ಲಾ ಭಾಷೆಗಳಲ್ಲಿ ಸಂವಾದ ನಡೆಸಲು ಉತ್ತೇಜಿಸಲಾಗುತ್ತದೆ. ಉದಾಹರಣೆಗೆ, ಶುರುವಿನಲ್ಲಿ ನಾನು ಹೇಳಿದ ಉದಾಹರಣೆಯು ನಮ್ಮ ಬಹುಭಾಷಾ ಸಾಮರ್ಥ್ಯಕ್ಕೆ ಇಂಬು ಕೊಡುವಂತಿತ್ತು. ಆ ಜೋರಾಗಿ–ಓದುವ ಗೋಷ್ಠಿಯಲ್ಲಿ ವಿದ್ಯಾರ್ಥಿಗಳು ನನ್ನ ಸಂವಾದಾತ್ಮಕ ಪ್ರಶ್ನೆಗಳಿಗೆ ಕನ್ನಡ, ಇಂಗ್ಲೀಷ್ ಮತ್ತು ಉರ್ದು ಎಲ್ಲಾ ಬೆರೆತ ಭಾಷೆಯಲ್ಲಿ ಉತ್ತರಿಸಿದ್ದರು. ಹಾವಭಾವ ಮತ್ತು ಭಾವನೆಗಳ ಮೂಲಕ ಅರ್ಥ ಮತ್ತು ವಿಷಯಗ್ರಹಣವನ್ನು ಮಾಡಲು ನಮಗೆ ಸಾಧ್ಯವಾಗಿತ್ತು. ಇಲ್ಲಿ ಭಾಷೆಯ ಶುದ್ಧತೆ, ಸರಾಗತೆ ಅಥವಾ ನಿಖರತೆಗೆ ಪ್ರಾಮುಖ್ಯ ಕೊಟ್ಟಿರಲಿಲ್ಲ. ಬದಲಾಗಿ, ಮಕ್ಕಳು ತಮ್ಮ ಅರ್ಥವಿವರಣೆ, ಭಾವನೆ ಹಾಗೂ ವಿಚಾರಗಳನ್ನು ಭಾಷೆಯ ಯಾವುದೇ ನಿರ್ಬಂಧವಿಲ್ಲದೆ ಹಂಚಿಕೊಳ್ಳುವುದಕ್ಕೆ ಪ್ರಾಶಸ್ತ್ಯ ನೀಡಲಾಗಿತ್ತು. ಭಾಷೆಯ ಯಾಂತ್ರಿಕತೆಗೆ ಬದಲಾಗಿ ಮಕ್ಕಳ ಯೋಚನೆ ಹಾಗೂ ಅವರ ಭಾಷೆಗೆ ಹೆಚ್ಚು ಆದ್ಯತೆ ನೀಡಲಾಗಿತ್ತು. ಮತ್ತೊಬ್ಬ ಕಥೆಗಾರ್ತಿಯಾದ ಅಶ್ರುತಿ ಸೆವೆಂತ್ರ ಅವರು ತಮ್ಮ ಇಂಗ್ಲಿಷ್ ಭಾಷೆಯ ಜೋರಾಗಿ–ಓದುವ ಚಟುವಟಿಕೆಯಲ್ಲಿ ಆ ಪುಸ್ತಕದ ಕನ್ನಡದ ಅವತರಣಿಕೆಯನ್ನು ಪ್ರೊಜೆಕ್ಟರ್ ಮೂಲಕ ಬಿತ್ತರಿಸಿದ್ದರು. ಅದರ ಅನುಸರಣೆಕೆಯ ಚಟುವಟಿಕೆಯಾಗಿ ಮಕ್ಕಳಿಗೆ ಆ ಕಥೆಯನ್ನು ಆಧರಿಸಿ ಚಿತ್ರ ಬಿಡಿಸಲು ಹೇಳಲಾಗಿತ್ತು. ವಿದ್ಯಾರ್ಥಿಗಳು ಚರ್ಚೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ವೇಳೆಯಷ್ಟೇ ಅಲ್ಲ ತಮ್ಮ ಚಿತ್ರಗಳ ತಲೆಬರಹಕ್ಕೂ ಬೇರೆ ಬೇರೆ ಭಾಷೆಗಳನ್ನು ಬಳಸಿದ್ದರು.

## ಭಾಷೆಯ ಬೆಳವಣಿಗೆ

ಒಂದು ನಿರ್ದಿಷ್ಟ ಪದಸಂಪತ್ತಿನ ಬಳಕೆ; ಉಚ್ಚಾರ ಮತ್ತು ವಾಚಿಸುವುದರ ಮಾದರಿಯನ್ನು ರೂಪಿಸಿ ಅದನ್ನು ಅಭ್ಯಾಸ ಮಾಡುವುದು; ವಿಶೇಷವಾಗಿ ನಾಟಕ ಮತ್ತು ಪಾತ್ರಾಭಿನಯದ ಪ್ರಸ್ತುತಿಯ ಮೂಲಕ ಆಗುವ ಮೌಖಿಕ ಭಾಷೆಯ ಬೆಳವಣಿಗೆಯು ಕಥೆ ಹೇಳುವ ಗೋಷ್ಠಿಗಳ ಜೊತೆ ಬೆಸೆದುಕೊಂಡ ಭಾಷಾ ಕೌಶಲಗಳಾದ ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವ ಕೌಶಲಗಳ ಬೆಳವಣಿಗೆಗೆ ಸಹಾಯಕವಾಗಿದೆ. ಇದನ್ನು ಅಳವಡಿಸಿಕೊಳ್ಳುವ ಕೆಲವು ದಾರಿಗಳೆಂದರೆ, ಮಕ್ಕಳು ಕಥೆಗಳಿಗೆ ತಮ್ಮದೇ ಅಂತ್ಯವನ್ನು ಕಂಡುಕೊಳ್ಳುವಂತೆ ಹೇಳುವುದು, ಕಥೆಯನ್ನು ಆಧರಿಸಿ ಗೊಂಬೆಗಳನ್ನು ಮಾಡುವುದು, ಮತ್ತು ಕಥೆ ಕೇಳಿದ ನಂತರ ಅದರ ಭಾಗಗಳನ್ನು ಬರೆದು ಅಭಿನಯಿಸುವುದು.

## ಸ್ಥಳೀಯ ಸಂಪ್ರದಾಯಗಳೊಡನೆ ಇರುವ ಸಂಬಂಧವನ್ನು ಅನ್ವೇಷಿಸುವುದು.

ಕಥಾವನವು ಸದಾ ನಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆ ಮತ್ತು ಮೌಖಿಕ ಹಾಗೂ ಪ್ರದರ್ಶನಾತ್ಮಕ ಸಾಹಿತ್ಯದ ಸಂಪ್ರದಾಯಗಳಿಗೆ ಬಹಳ ಮಾನ್ಯತೆಯನ್ನು ನೀಡುತ್ತಾ ಬಂದಿದೆ. ಈ ಕಾರ್ಯಕ್ರಮವು ಕರ್ನಾಟಕವನ್ನು ಹಿನ್ನೆಲೆಯಾಗಿಟ್ಟು–ಕೊಂಡಿದೆಯಾದ್ದರಿಂದ, ಭಾಗವಹಿಸುವವರಿಗೆ ಯಕ್ಷಗಾನವನ್ನು ನೋಡುವ ಅವಕಾಶ ಸಿಗುತ್ತದೆ. ನೋಡುಗರು ಅದನ್ನು ಒಂದು ಮೌಖಿಕ ಹಾಗೂ ಪ್ರದರ್ಶನಾತ್ಮಕ ಸಂಪ್ರದಾಯವನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ತಮ್ಮ ಸ್ಥಳೀಯ ಸಾಂಸ್ಕೃತಿಕ ಸಂಪ್ರದಾಯಗಳಾದ ರಾಗಿಣಿ, ಹರಿಕಥೆ, ಪಟ್ಟಚಿತ್ರ, ಬ್ಲವೇಲಿ ಓದುವಿಕೆ, ಕಾವಡ್, ಪಾವಕಥಕ್ಕಳಿ ಮುಂತಾದವುಗಳಿಗೂ ತರಗತಿಗಳಲ್ಲಿ ಮಾನ್ಯತೆ ಸಿಗಬೇಕು ಎಂಬ ವಿಷಯವನ್ನು ಅರಿತುಕೊಳ್ಳಲು ಶಿಕ್ಷಕರಿಗೆ ಸಾಧ್ಯವಾಗಿದೆ. ಹೀಗೆ ಮಾಡುವುದರಿಂದ ಮಕ್ಕಳು ತಮ್ಮ ಸಮುದಾಯ ಮತ್ತು ಸಂಸ್ಕೃತಿಯ ಜೊತೆ ಒಂದು ಬಲವಾದ ಸಂಬಂಧವನ್ನು ಹೊಂದಿ

ತಮ್ಮ ಶಾಲೆಯ ಒಳಗಿನ ಬದುಕಿಗೂ ಹೊರಗಿನ ಬದುಕಿಗೂ ಸಂಪರ್ಕ ಕಲ್ಪಿಸಲು ಸಾಧ್ಯವಾಗುತ್ತದೆ.

## ಕೊನೆಯದಾಗಿ

ಕಥಾವನದಿಂದ ಶಿಕ್ಷಕರು ಪಡೆದುಕೊಳ್ಳುವ ಬಹು ದೊಡ್ಡ ಪ್ರಯೋಜನ ಬಹುಶಃ ಮಕ್ಕಳು ಸಾಹಿತ್ಯದೊಡನೆ ತೊಡಗಿಸಿಕೊಳ್ಳುವುದನ್ನು ಬಹಳ ಇಷ್ಟಪಡುತ್ತಾರೆ ಎಂಬುದೇ ಆಗಿದೆ. ಮಕ್ಕಳು ಪುಸ್ತಕಗಳನ್ನು ಅನ್ವೇಷಿಸಿ ಸಂವಾದಾತ್ಮಕವಾದ ಜೋರಾಗಿ ಓದುವ ಚಟುವಟಿಕೆಗೆ ಸ್ಪಂದಿಸುವ ಮೂಲಕ ಗೋಷ್ಠಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ; ನಾಟಕ, ಗೊಂಬೆಯಾಟ ಮತ್ತು ಯಕ್ಷಗಾನದ ಮೂಲಕ ಕಥೆ ಹೇಳಿದ್ದಾರೆ; ಕವನಗಳು, ಕಥೆಗಳನ್ನು ರಚಿಸಿದ್ದಾರೆ; ಚಿತ್ರ ಬಿಡಿಸಿ, ಪಾತ್ರಾಭಿನಯವನ್ನು ಮಾಡಿದ್ದಾರೆ.

ಮಕ್ಕಳು ಗೋಷ್ಠಿಗಳ ನಂತರವೂ ಶಾಲೆ ಅಥವಾ ತರಗತಿಗಳ ಪುಸ್ತಕಭಂಡಾರಗಳಿಂದ ಪುಸ್ತಕಗಳನ್ನು ಎರವಲು ಪಡೆಯುವುದರ ಮೂಲಕ ಈ ತೊಡಗಿಸಿಕೊಳ್ಳುವಿಕೆಯನ್ನು ಮುಂದುವರಿಸಿದರು. ಮಕ್ಕಳ ಈ ಸಂಪೂರ್ಣ ಆಸಕ್ತಿ ಹಾಗೂ ಅವರಲ್ಲಿ ಅಡಗಿದ್ದ ಪ್ರತಿಭೆಗಳನ್ನು ಕಂಡು ಶಿಕ್ಷಕರು ನಿಬ್ಬೆರಗಾದರು. ಇದರಿಂದ ಶಿಕ್ಷಕರಿಗೆ ಮಕ್ಕಳ ಅಗತ್ಯ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ತಮ್ಮ ಶಿಕ್ಷಣ ಸಾಮಗ್ರಿ ಮತ್ತು ಚಟುವಟಿಕೆಗಳನ್ನು ರೂಪಿಸಿಕೊಂಡು ಸಾಹಿತ್ಯವನ್ನು ಭಾಷಾ ಪಠ್ಯಕ್ರಮ ಹಾಗೂ ತರಗತಿಗಳೊಳಗೆ ಬರಮಾಡಿಕೊಳ್ಳಲು ಸಹಾಯಕವಾಯಿತು. ಸಾಮಾಜಿಕ– ಆರ್ಥಿಕ ಹಿನ್ನೆಲೆ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳ ಹೊರತಾಗಿ ಮಕ್ಕಳಿಗೆ ಸಾಹಿತ್ಯ ಲಭ್ಯವಾಗುವಂತೆ ಮಾಡಲು ಕಥಾವನದಂತಹ ಮಕ್ಕಳ ಸಾಹಿತ್ಯ ಸಮ್ಮೇಳನಗಳನ್ನು ದೇಶದಾದ್ಯಂತ ಬೇರೆಬೇರೆ ಭಾಷೆಗಳಲ್ಲಿ ಹೆಚ್ಚು ಹೆಚ್ಚಾಗಿ ನಡೆಸುವ ಅಗತ್ಯವಿದೆ. ಮಕ್ಕಳ ಬದುಕಿನಲ್ಲಿ ಮಕ್ಕಳ ಸಾಹಿತ್ಯ ಮತ್ತು ಕಥೆ ಹೇಳುವಿಕೆಯು ವಹಿಸುವ ಪ್ರಸ್ತುತತೆಯನ್ನು ನಾವು ಗುರುತಿಸುವ ಅಗತ್ಯವಿದೆ. ಹಾಗೂ ಅವುಗಳನ್ನು ಭಾಷಾ ಪಠ್ಯಕ್ರಮ ಮತ್ತು ಬೋಧನಶಾಸ್ತ್ರದ ವಿನ್ಯಾಸದ ಅವಿಭಾಜ್ಯ ಅಂಗಗಳನ್ನಾಗಿಸಲು ಪ್ರಯತ್ನಗಳನ್ನು ಮಾಡಬೇಕಿದೆ.



**ಚಿತ್ರಗಳು 2-3: ಮಕ್ಕಳು ಕಥಾವನದಲ್ಲಿ ಓದು ಮತ್ತು ಇತರ ಚಟುವಟಿಕೆಗಳಲ್ಲಿ ತಲ್ಲೀನರಾಗಿರುವುದು.**


**ಪರಾಮರ್ಶನಗಳು:**

Azim Premji University. (2023). KathaVana: Annual bilingual children's literature festival. https://azimpremjiuniversity.edu.in/kathavana

Barone, D. M. (2011). Children's literature in the classroom. The Guilford Press

Bennett, S. V., Gunn, A. A. & Peterson, B. J. (2021). Access to multicultural children's literature during COVID-19. The Reading Teacher, 74(6), 785-796

Ellis, G. & Brewster J. (2014). Tell it again! The storytelling handbook for primary English language teachers. British Council

Huus, H. (1972). The role of literature in children's education. Educational Horizons, 50(3), 139-145

Williamson, P. M. (1981). Literature Goals and Activities for Young Children. Young Children, 36 (4), 24-30





**ಸೋನಿಕಾ ಪರಾಶರ್** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಲ್ಲಿ ಶಿಕ್ಷಕ–ಶಿಕ್ಷಕರು. ಅವರು ಭಾಷಾ ಶಿಕ್ಷಣ ಮತ್ತು ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳ ಕುರಿತಾದ ವಿಷಯಗಳನ್ನು ಬೋಧಿಸುತ್ತಾರೆ. ಅವರು ಸೇವಾ ಪೂರ್ವ ಶಿಕ್ಷಕರ ಶಿಕ್ಷಣ, ಪಠ್ಯಕ್ರಮ ಅಭಿವೃದ್ಧಿ, ಶಿಕ್ಷಣದಲ್ಲಿ ಭಾಷೆ, ಮಕ್ಕಳ ಸಾಹಿತ್ಯ, ಹಲವು ಪಠ್ಯಕ್ಷೇತ್ರಗಳ ಬೋಧನಾ ವಿಧಾನ ಮತ್ತು ಅವುಗಳ integration, ಶಿಕ್ಷಣದಲ್ಲಿ ಕಲೆ, ನಿರ್ದಿಷ್ಟ ಅವಶ್ಯಕತೆಗಳಿರುವ ಮಕ್ಕಳಿಗೆ ಬೋಧಿಸುವುದು, ಮತ್ತು ಮಾರ್ಗದರ್ಶನ – ಇವು ಅವರ ಅನುಭವದ ಮತ್ತು ಆಸಕ್ತಿಯ ಕ್ಷೇತ್ರಗಳು. ಅವರನ್ನು Sonika.parashar@azimpremjifoundation.org ಅಲ್ಲಿ ಸಂಪರ್ಕಿಸಬಹುದು.

ಅನುವಾದ: **ಸ್ವಯಂಪ್ರಭಾ ಹೆಗಡೆ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

# ಕತೆಗಳ ಮೂಲಕ ವಿಜ್ಞಾನವನ್ನು ಮಾನವೀಯಗೊಳಿಸುವುದು

ವೀಣಾ ಪ್ರಸಾದ್

ತರಗತಿ ಕೊಠಡಿಯಲ್ಲಿ ಶಿಕ್ಷಕರು ಏಕಕಾಲದಲ್ಲಿ ಅನೇಕ ವಿಧದ ವ್ಯಕ್ತಿತ್ವಗಳೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದರಲ್ಲೂ ನಿರ್ದಿಷ್ಟವಾಗಿ ವಿಜ್ಞಾನದ ತರಗತಿಯೊಂದರಲ್ಲಿ ಎದುರಾಗುವ ಸವಾಲುಗಳು ಅನನ್ಯವಾಗಿರುತ್ತವೆ. ಕೆಲವು ವಿದ್ಯಾರ್ಥಿಗಳು ವಿಜ್ಞಾನದಲ್ಲಿ ಅದಾಗಲೇ ಒಲವು ಮೂಡಿಸಿಕೊಂಡಿರುತ್ತಾರೆ ಮತ್ತು ಪಠ್ಯಕ್ರಮದಿಂದ ಸಿಗುವ ಎಲ್ಲಾ ಜ್ಞಾನವನ್ನೂ ಬಾಚಿಕೊಳ್ಳಲು ಉತ್ಸುಕರಾಗಿರುತ್ತಾರೆ. ಕೆಲವರು ಮಾನವೀಯ ವಿಭಾಗದ ವಿಷಯಗಳಲ್ಲಿ ಆಸಕ್ತರಾಗಿರುತ್ತಾರೆ, ಅವರಿಗೆ ವೈಜ್ಞಾನಿಕ ಸತ್ಯಗಳು ಮತ್ತು ಅಂಕಿಅಂಶಗಳು ಬೇಸರವನ್ನುಂಟು ಮಾಡಬಹುದು. ಮತ್ತೆ ಕೆಲವರು ಕಲಿಯಲು ಆಸಕ್ತರಿದ್ದರೂ ಚಂಚಲಚಿತ್ತರಿರುತ್ತಾರೆ ಹಾಗೂ ಕೆಲವರು ತರಗತಿಗೆ ಬರುವ ಮೊದಲೇ ವೈಜ್ಞಾನಿಕ ಪರಿಕಲ್ಪನೆಗಳನ್ನು ಕಲಿತುಬಿಟ್ಟಿರುತ್ತಾರೆ, ಅವರಿಗೆ ಕಲಿತದ್ದನ್ನೇ ಕಲಿಯಲು ಬೇಸರವಾಗಬಹುದು.

ಒಬ್ಬ ವಿಜ್ಞಾನ ಲೇಖಕಿಯಾಗಿ ಒಂದು ವೈಜ್ಞಾನಿಕ ಪರಿಕಲ್ಪನೆಯನ್ನು ವಿವರಿಸುವಾಗ ಕತೆಗಳನ್ನು ಬಳಸಿ-ಕೊಳ್ಳುವುದರಿಂದ, ಹಾಗೂ ವಿಜ್ಞಾನಿಗಳು ಆ ಪರಿಕಲ್ಪನೆಯನ್ನು ಹೇಗೆ ರೂಪಿಸಿದರು ಎನ್ನುವುದನ್ನು ಕುರಿತ ಇತಿಹಾಸವನ್ನು ಸಹ ಬಳಸಿಕೊಳ್ಳುವುದರಿಂದ ಸ್ವತಃ ಲೇಖಕರಿಗೂ, ಮತ್ತು ಅದರ ಓದುಗರಿಗೂ ಉತ್ತಮ ಅನುಭವ ಸಿಗುತ್ತದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅದನ್ನೇ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೂ ಅನ್ವಯಿಸಬಹುದು. ರಂಜಕದ (phosphorus) ಉದಾಹರಣೆಯನ್ನೇ ತೆಗೆದುಕೊಳ್ಳಿ. ವಿಜ್ಞಾನ ಪುಸ್ತಕವು ಅದರ ಪರಮಾಣು ಸಂಖ್ಯೆ, ಅದನ್ನು ಕಂಡು ಹಿಡಿದವರು ಯಾರು ಮತ್ತು ಯಾವಾಗ ಕಂಡುಹಿಡಿದರು ಮತ್ತು ಅದರ ಮುಖ್ಯ ಉಪಯೋಗಗಳು ಹಾಗೂ ಪ್ರತಿಕ್ರಿಯೆಗಳನ್ನೊಳಗೊಂಡ ಕೆಲವು ಸತ್ಯವಾದ ವಿವರಗಳನ್ನು ನೀಡಬಹುದು. ಆದರೆ ಅದನ್ನು ಹೇಗೆ ಕಂಡುಹಿಡಿಯಲಾಯಿತು ಎನ್ನುವುದನ್ನು ಕತೆಯ ರೂಪದಲ್ಲಿ ಹೇಳಿದರೆ ಹೇಗಿರುತ್ತದೆ ಎಂದು ಯೋಚಿಸಿ.

ಹೆನ್ನಿಗ್ ಬ್ರಾಂಡ್ (Hennig Brand) ಎನ್ನುವ ರಸಾಯನ-ಶಾಸ್ತ್ರಜ್ಞನು ತನ್ನ ಪ್ರಯೋಗಾಲಯದಲ್ಲಿ ಚಿನ್ನವನ್ನು ತಯಾರಿಸಲು ಬಹಳ ಪ್ರಯತ್ನಪಡುತ್ತಿದ್ದ. ಆ ಪ್ರಯತ್ನದ ಭಾಗವಾಗಿ ಅವನು 'ತತ್ವಶಾಸ್ತ್ರಜ್ಞನ ಕಲ್ಲ'ನ್ನು (philosopher's stone) ಹುಡುಕುವ ಯತ್ನದಲ್ಲಿದ್ದ. ಹಲವು ಪ್ರಯೋಗಗಳನ್ನು ನಡೆಸಿ ವಿಫಲನಾದ ಮೇಲೆ ಅವನಿಗೆ ಮೂತ್ರವನ್ನು ಕುದಿಸುತ್ತ ಇದ್ದರೆ ಅದು ಚಿನ್ನವಾಗಿ ಬದಲಾಗಬಹುದು ಎಂಬ ವಿಲಕ್ಷಣ ಚಿಂತನೆ ಹೊಳೆಯಿತು (ಅದರ ಬಣ್ಣದಿಂದಾಗಿ ಈ ಯೋಚನೆ ಅವನಿಗೆ ಹೊಳೆದಿರಬಹುದೇನೋ). ಅದರ ಪ್ರಕಾರ ಅವನು ಹಲವು ಪಾತ್ರೆಗಳಲ್ಲಿ ಮೂತ್ರವನ್ನು ಕುದಿಯಲು ಇಟ್ಟ. ಬಹಳ ಹೊತ್ತಿನವರೆಗೆ ಕುದಿಸಿದ ನಂತರ ಮೂತ್ರದ ದ್ರವಾಂಶವು ಪೂರ್ತಿಯಾಗಿ ಆವಿಯಾಯಿತು. ನಂತರ ಪಾತ್ರೆಯಲ್ಲಿ ಮೇಣದಂತಹ ಪದಾರ್ಥವೊಂದು ಉಳಿದುಕೊಂಡಿತ್ತು. ಅದನ್ನು ಗಾಳಿಗೆ ಬಿಟ್ಟಾಗ ಅಕಸ್ಮಾತ್ತಾಗಿ ಅದು ಹೊತ್ತಿ ಉರಿಯಿತು. ಅದೇ ಮುಂದೆ ರಂಜಕವೆಂದು ಕರೆಯಲ್ಪಟ್ಟಿತು. ಇಂಗ್ಲೀಷಿನಲ್ಲಿ ಅದಕ್ಕೆ ಫಾಸ್ಫರಸ್ ಎನ್ನುತ್ತಾರೆ. ಗ್ರೀಕ್ ಭಾಷೆಯಲ್ಲಿ ಅದರ ಅರ್ಥ 'ಬೆಳಕನ್ನು ಕೊಡುವ' ಪದಾರ್ಥ ಎಂದಾಗುತ್ತದೆ. ಹೀಗೆ ಹೆನ್ನಿಗ್ ಬ್ರಾಂಡ್ ಈ ಧಾತುವನ್ನು ಮೊದಲ ಬಾರಿ ಕಂಡುಹಿಡಿದವನು ಎಂಬ ಕೀರ್ತಿಗೆ ಪಾತ್ರನಾದ.

ಈ ಕತೆ ನನಗೆ ಬಹಳ ಕಾರಣಗಳಿಗೆ ಇಷ್ಟವಾಗುತ್ತದೆ. ಮೊದಲನೆಯದಾಗಿ, ಧಾತುವೊಂದರ ಪರಿಕಲ್ಪನೆಯನ್ನು ಕಲಿಸುವ ಮೊದಲು ಮಕ್ಕಳ ಗಮನವನ್ನು ಹಿಡಿದಿಡಲು ಇದು ಒಂದು ಉತ್ತಮ ವಿಧಾನವಾಗಿದೆ. ಅವರ ಆಸಕ್ತಿ ಅದಾಗಲೇ ಕೆರಳಿರುತ್ತದೆ. ಅವರ ಮನಸ್ಸಿನ ತುಂಬಾ ಪ್ರಶ್ನೆಗಳೆದ್ದಿರುತ್ತವೆ: ಧಾತುವೆಂದರೆ (element) ಏನು? ಅದನ್ನು ಹೇಗೆ ಅನ್ವೇಷಿಸುತ್ತಾರೆ? ಅದನ್ನು ಪ್ರತ್ಯೇಕಿಸುವ ವಿಧಾನಗಳನ್ನು ವಿಜ್ಞಾನಿಗಳು ಹೇಗೆ ಬಲ್ಲರು? ಈ ವಿಧಾನಗಳನ್ನು ಯಾವುದೋ ನಿರ್ದಿಷ್ಟ ಧಾತುವನ್ನು ಪ್ರತ್ಯೇಕಿಸುವ ಉದ್ದೇಶದಿಂದಲೇ ಸಿದ್ಧಪಡಿಸಿದ್ದರೇ? ಹಾಗೆ ಪ್ರತ್ಯೇಕಿಸಿದ ನಂತರ ಪ್ರತ್ಯೇಕಿಸಲ್ಪಟ್ಟ ಧಾತುವು ತನ್ನ ಉದ್ದೇಶವನ್ನು ಸಾಧಿಸಿತೇ? (ನಾವು ದಿನನಿತ್ಯ ಬಳಸುವ ಬೆಂಕಿಕಡ್ಡಿಯ ಆವಿಷ್ಕಾರದಲ್ಲಿ ರಂಜಕವು ಬಹುಮುಖ್ಯವಾದ ಒಂದು ಅಂಶವಾಗಿದೆ).

ಇನ್ನೊಂದು ಕಾರಣವೆಂದರೆ ವಿಜ್ಞಾನಿ, ಅಥವಾ 'ಅನ್ವೇಷಕ' ಇಲ್ಲಿ ಮಾನವೀಯಗೊಳ್ಳುತ್ತಾನೆ. ಒಬ್ಬ ವ್ಯಕ್ತಿ ಏನನ್ನೋ ಸಾಧಿಸುವ ಒಂದು ಕಲ್ಪನೆ ಇಟ್ಟುಕೊಂಡು, ಅದನ್ನು ಸಾಧಿಸುವ ವಿಧಾನಗಳನ್ನು ಯೋಚಿಸಿ, ಅದಕ್ಕೊಂದು ಕಾರ್ಯವಿಧಾನವನ್ನು ರೂಪಿಸಿಕೊಂಡು, ತನ್ನ ವಿಚಾರಗಳನ್ನು ಕ್ರಿಯೆಯಾಗಿ ಪರಿವರ್ತಿಸಲು ಪ್ರಯೋಗಾಲಯವೊಂದನ್ನು ಸಜ್ಜುಗೊಳಿಸಿ, ಪ್ರಯೋಗಗಳನ್ನು ನಡೆಸಿ, ಫಲಿತಗಳನ್ನು ಪರಿಶೀಲಿಸಿ, ಅದು ವಿಫಲವಾದರೆ ಮರು ಪ್ರಯೋಗಗಳನ್ನು ಮಾಡಿ, ಫಲಿತಾಂಶಗಳಿಗೆ ಅಗತ್ಯವಾದರೆ ಕಾರ್ಯವಿಧಾನಗಳನ್ನು ಬದಲಿಸಿ, ಈ ಎಲ್ಲ ಯತ್ನಗಳ ಕೊನೆಗೆ ಒಂದು ದಿನ ತನ್ನ ಮೂಲ ಗುರಿಗಿಂತ ಸಂಪೂರ್ಣವಾಗಿ ಭಿನ್ನವಾದ ಮತ್ತೇನನ್ನೋ ಕಂಡುಕೊಳ್ಳುತ್ತಾನೆ. ನೀವು ಪ್ರಯೋಗ ಮಾಡುತ್ತೀರಿ, ಫಲಿತಾಂಶಗಳನ್ನು ಗಮನಿಸಿ ಟಿಪ್ಪಣಿ ಮಾಡಿಕೊಳ್ಳುತ್ತೀರಿ,

ಫಲಿತಾಂಶಗಳು ತೋರಿಸಿದ ಹಾದಿಯಲ್ಲಿ ಮುಂದುವರಿಯುತ್ತೀರಿ. ಆ ಹಾದಿಯಲ್ಲಿ ನೀವು ಮೊದಲು ಊಹಿಸಿದ್ದಕ್ಕಿಂತ ಬೇರೆಯದೇ ಆದ ಅನಿರೀಕ್ಷಿತ ಫಲಿತಗಳು ಎದುರಾಗಬಹುದು, ಆದರೂ, ಸತ್ಯಾಂಶಗಳು ಮತ್ತು ಅಂತರ್ಬೋಧೆ ಇವೆರಡೂ ಒಟ್ಟಾಗಿ ತೋರಿಸಿದ ದಿಕ್ಕಿನಲ್ಲಿ, ಬಗೆಹರಿಸಲು ನೋಡುತ್ತಿರುವ ಸಮಸ್ಯೆಯ ಸ್ವರೂಪವನ್ನು ನಿರ್ಧರಿಸಲು ಛಲ ಬಿಡದ ತ್ರಿವಿಕ್ರಮನಂತೆ ನೀವು ಮುಂದುವರಿಯುತ್ತೀರಿ – ಇದೇ ವಿಜ್ಞಾನದ ಮೂಲಸತ್ವ. ವಿಜ್ಞಾನಿಗಳನ್ನು ಮಾನವೀಯಗೊಳಿಸುವ ಮೂಲಕ ಅವರು ಮಾಡಿದ ಕೆಲಸಗಳನ್ನು ವಿದ್ಯಾರ್ಥಿಗಳು ತಮ್ಮ ಬದುಕಿಗೆ ಸಮೀಕರಿಸಲು ನೆರವಾಗುತ್ತೇವೆ. ವೈಜ್ಞಾನಿಕ ಸತ್ಯಗಳನ್ನು ನೀರಸ ರೀತಿಯಲ್ಲಿ ತುರುಕುವುದಕ್ಕೆ ಹೋಲಿಸಿದರೆ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳು ಸಮಗ್ರವಾಗಿ ಅರ್ಥೈಸಿಕೊಳ್ಳಲು ಈ ವಿಧಾನವು ಹೆಚ್ಚು ಸಹಕಾರಿಯಾಗುತ್ತದೆ. ತಾವೂ ವಿಜ್ಞಾನಿಗಳಾಗಬೇಕು ಎಂಬ ಪ್ರೇರಣೆಯನ್ನೂ ಅದು ನೀಡಬಹುದು! ಕೊಟ್ಟ ಕೊನೆಗೆ, ಮೂತ್ರದ ಪ್ರಯೋಗದಲ್ಲಿನ 'ಹಾಸ್ಯಕ್ಕೆ' ಅವರು ನಗಬಹುದು, ಅದು ಹೇಗಿದ್ದರೂ ಒಂದು ಚಾರಿತ್ರಿಕ ಸತ್ಯವಾಗಿದೆ.

ಈ ಘಟನೆ ಹೇಳಿದ್ದರಿಂದ ಯಾವುದೇ ರೀತಿಯ ಚಾರಿತ್ರಿಕ ದಾಖಲೆಗಳು ಇಲ್ಲದಿರುವಂತಹ ವಿಜ್ಞಾನದ ಕುರಿತ ಕಥೆಗಳೂ ಕೂಡಾ ಇವೆ ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ. ಕೆಲವು ಅನ್ವೇಷಣೆಗಳು ನಿಜಕ್ಕೂ ಹೇಗಾದವು ಎಂಬುದು ಯಾರಿಗೂ ತಿಳಿದಿಲ್ಲ. ಬೆಂಕಿ, ಚಕ್ರಗಳು, ಮಣ್ಣಿನ ಮಡಕೆಗಳು, ನೇಯುವುದು ಎಲ್ಲ ಈ ವರ್ಗಕ್ಕೆ ಸೇರಿದ ಅನ್ವೇಷಣೆಗಳು.

## ಕಾಲ್ಪನಿಕ ಚರಿತ್ರೆ

ಕತೆಗಾರಳಾಗಿ ನೋಡಿದರೆ, ದಾಖಲೆಗಳಿಲ್ಲದ ಈ ಪ್ರಾಚೀನ ಅನ್ವೇಷಣೆಗಳ ಲಾಭವನ್ನು ಪಡೆದು ನಾನು ಇಡೀ ಅನ್ವೇಷಣೆಯ ಹಾದಿಯನ್ನು ಕಾಲ್ಪನಿಕವಾಗಿ ಮರುಸೃಷ್ಟಿಸಬಹುದು. ನನ್ನದೇ ಪಾತ್ರಗಳನ್ನು ಸೃಷ್ಟಿಸಿಕೊಳ್ಳಬಹುದು, ಅವರ ಮೂಲಕ ನನ್ನದೇ ಸಂಭಾಷಣೆಗಳನ್ನು ಹೇಳಿಸಬಹುದು, ಅವರು ಆಸಕ್ತಿದಾಯಕ ರೀತಿಗಳಲ್ಲಿ ತಮ್ಮ ಲೋಕದೊಂದಿಗೆ ತೊಡಗಿಕೊಂಡು ರೋಮಾಂಚಕ ಫಲಿತವನ್ನು ತಲುಪುವಂತೆ ಮಾಡಬಹುದು.

ಆದರೆ, ಈ ಅನ್ವೇಷಣೆಗಳು ಹೇಗೆ ಆಗಿರಬಹುದು ಎಂಬುದನ್ನು ಕುರಿತು ವಿಜ್ಞಾನಿಗಳು ಅನೇಕ ರೀತಿಯ ಸೈದ್ಧಾಂತಿಕ ಊಹೆಗಳನ್ನು ಮಾಡಿರುವುದರ ಬಗೆಗೂ ನನಗೆ ಅರಿವಿದೆ. ಈ ಊಹೆಗಳೇ ನಮ್ಮ ಕತೆಗೆ ಮೂಲಾಧಾರವಾಗಿ ಪರಿಣಮಿಸಬಹುದು.

ಉದಾಹರಣೆಗೆ ಮಿಂಚಿನಿಂದ ಉಂಟಾದ ಬೆಂಕಿಯು ಮೊದಲಿನ ಮಾನವರ ಗಮನವನ್ನು ಸೆಳೆದು ಅದನ್ನು ಕುರಿತು ಮತ್ತಷ್ಟು ಶೋಧಿಸಲು ಮತ್ತು ಆ ಶಕ್ತಿಯನ್ನು ಬಳಸಿಕೊಳ್ಳುವ ವಿಧಗಳನ್ನು ಹುಡುಕಲು ಪ್ರೇರಣೆಯಾಗಿರುವ ಸಾಧ್ಯತೆ ಇದೆ. ಮೊತ್ತ ಮೊದಲ ಬಾರಿಗೆ ಬೆಂಕಿಯನ್ನು ಕಂಡ ಗುಹಾ ಮಾನವರಂತೆ ತಮ್ಮನ್ನು ತಾವು ಕಲ್ಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಹೇಳಬಹುದು. ಅವರ ಪ್ರತಿಕ್ರಿಯೆ ಹೇಗಿರಬಹುದು? ಅವರಿಗೆ ಭಯವಾಗಬಹುದೇ? ಉತ್ಸುಕರಾಗಬಹುದೇ? ಅಡವಿಯಲ್ಲಿ ಉರಿಯುತ್ತಿರುವ ಕೆಂಡವನ್ನು ನೋಡಿ ಅವರ ಪ್ರತಿಕ್ರಿಯೆ ಹೇಗಿರುತ್ತದೆ? ಅದನ್ನವರು ಕೈಯ್ಯಿಂದ ಮುಟ್ಟಬಹುದೇ? ಅದು ಸುಡುತ್ತದೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬಲ್ಲರೇ? ಪ್ರಾಣಿಗಳಿಗೆ ಬೆಂಕಿ ಕಂಡರೆ ಭಯ, ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಬೆಂಕಿಯನ್ನು ಬಳಸಿ– ಕೊಳ್ಳಬಹುದು ಎನ್ನುವುದನ್ನು ಅವರು ಯಾವಾಗ ಅರಿತರು? ಅದು ಅರ್ಥವಾದ ನಂತರ ಬೆಂಕಿಯನ್ನು ಮಾಡಲು ಮತ್ತು ಅದನ್ನು ಸುರಕ್ಷಿತವಾಗಿ ಉರಿಯುತ್ತಿರುವಂತೆ ನೋಡಿಕೊಳ್ಳಲು ಯಾವಾಗ ಕಲಿತರು? ಪ್ರಯೋಗಗಳನ್ನು ಮಾಡಿ ತಪ್ಪುಗಳಿಂದ ಕಲಿಯುವ ಪ್ರಕ್ರಿಯೆಗಳು ಅಲ್ಲಿ ನಡೆದವೇ? ಎಂಬಂತಹ ಪ್ರಶ್ನೆಗಳನ್ನು ಅಲ್ಲಿ ಕೇಳಬಹುದು. ನಂತರ ಶಿಕ್ಷಕರು ಬೆಂಕಿಯನ್ನು ಮಾಡಲು ಮತ್ತು ಅದು ಉರಿಯುತ್ತಿರುವಂತೆ ನೋಡಿಕೊಳ್ಳಲು ಬೇಕಾಗುವ –ಆಮ್ಲಜನಕ, ಇಂಧನ ಮತ್ತು ಕಿಡಿ ಈ ಮೂರು ಮುಖ್ಯ ಘಟಕಗಳನ್ನು ಒಳಗೊಂಡ 'ಬೆಂಕಿಯ ತ್ರಿಕೋನ'ವನ್ನು ಅವರಿಗೆ ಪರಿಚಯಿಸಬಹುದು. ಈ ಮೂರರಲ್ಲಿ ಒಂದು ಘಟಕ ಇಲ್ಲದಿದ್ದರೂ ಬೆಂಕಿ ನಂದಿ ಹೋಗುತ್ತದೆ.

ಸಾಂಪ್ರದಾಯಕವಾಗಿ ಸೀದಾ ಬೆಂಕಿಯ ತ್ರಿಕೋನದೊಂದಿಗೆ ಕಲಿಕೆ ಆರಂಭವಾಗುತ್ತದೆ ಎನ್ನುವುದನ್ನು ಗಮನಿಸಬಹುದು. ತನ್ನ ಸೃಜನಶೀಲ ಕ್ಷಣದಲ್ಲಿ ವಿಶಿಷ್ಟವಾಗಿ ಮಾನವೀಯ ಎನ್ನಿಸುವ ಆ ಕ್ಷಣದ ಅನ್ವೇಷಣೆಯ ವಿಸ್ಮಯ ಮತ್ತು ಭಾವವನ್ನು ಪೂರ್ತಿ ಗ್ರಹಿಸದೆ ಸುಮ್ಮನೆ ಉರುಹೊಡೆಯುವುದರೊಂದಿಗೆ ಅದು ಪರ್ಯಾವಸಾನಗೊಳ್ಳಬಹುದು.

## ಕಥನದ ಶಕ್ತಿ

ಇಲ್ಲಿ ಕೊಟ್ಟ ಎರಡೂ ಉದಾಹರಣೆಗಳಲ್ಲಿ ನೀವು ಗಮನಿಸಿದ ಹಾಗೆ ಎರಡು ಬಗೆಯ ಕಥಾ ಕಲ್ಪನೆಗಳನ್ನು ಬಳಸಲಾಗಿದೆ ಎನ್ನುವುದು ನಿಮ್ಮ ಗಮನಕ್ಕೆ ಬಂದಿರಬಹುದು. ಮೊದಲನೆಯ ಉದಾಹರಣೆಯಲ್ಲಿ ವಿದ್ಯಾರ್ಥಿಗಳಿಗೆ ರಂಜಕದ ಅನ್ವೇಷಣೆಯ ಹಿಂದಿನ ಕತೆಯನ್ನು ವಿವರಿಸಲಾಗಿದೆ, ಮತ್ತು ಎರಡನೆಯದರಲ್ಲಿ ಮಾನವರು ಮೊತ್ತ ಮೊದಲ ಬಾರಿಗೆ ಬೆಂಕಿಯನ್ನು ಕಂಡಾಗ ಆದ ಅನುಭವವನ್ನು, ಅಥವಾ ಆ ದೃಶ್ಯವನ್ನು ಕಲ್ಪಿಸಿಕೊಂಡು ತಮ್ಮದೇ ಸ್ವಂತದ ಕತೆಗಳನ್ನು ಸೃಜಿಸಿಕೊಳ್ಳಲು ಪ್ರೋತ್ಸಾಹಿಸಲಾಗಿದೆ. ಇವೆರಡೂ ಕಥನಗಳು ವಿದ್ಯಾರ್ಥಿಗಳ ಮನಸ್ಸನ್ನು ತೆರೆದು ಅವರ ಕುತೂಹಲವನ್ನು ಕೆರಳಿಸುವಲ್ಲಿ ಯಶಸ್ವಿಯಾಗುತ್ತವೆ. ಅದರ ಪ್ರಭಾವವು ಪರಿಣಾಮಕಾರಿಯಾಗ– ಬೇಕೆಂದರೆ ಕತೆಯನ್ನು ಹೇಗೆ ಕಟ್ಟುತ್ತೇವೆ ಎನ್ನುವುದು ಬಹಳ ಮುಖ್ಯವಾಗುತ್ತದೆ.

ಕತೆಯೊಂದರ 'ಸಜ್ಜಿಕೆ' ಮತ್ತು 'ಪಾತ್ರ ಚಿತ್ರಣ' ಕಥನದ ಎರಡು ಮುಖ್ಯ ಅಂಶಗಳು. ಸಜ್ಜಿಕೆಯು ಕತೆಯೊಂದರ ಸ್ಥಳ, ಅಂದರೆ

ಕತೆಯು ಎಲ್ಲಿ ನಡೆಯುತ್ತದೆ ಎನ್ನುವುದಕ್ಕೆ ಸಂಬಂಧಿಸಿದೆ. ರಂಜಕದ ಕತೆಯಲ್ಲಿ ಪ್ರಯೋಗಾಲಯವು ಸಜ್ಜಿಕೆಯಾಗಿದೆ. ಪಾತ್ರ ಚಿತ್ರಣವೆಂದರೆ ಆ ಕತೆಯೊಳಗೆ ಬರುವ ಜನರು, ಅವರ ಪ್ರೇರಣೆಗಳು, ಅವರ ವ್ಯಕ್ತಿತ್ವಕ್ಕೆ ಸಂಬಂಧಿಸಿದೆ. ರಂಜಕದ ಕತೆಯಲ್ಲಿ ಬರುವ ಹೆನ್ನಿಗ್ ಬ್ರಾಂಡ್‌ನ ವ್ಯಕ್ತಿತ್ವವನ್ನು ಸ್ವಲ್ಪ ಹಾಸ್ಯಭರಿತವಾಗಿದ್ದರೂ ಬಹಳ ಛಲವಂತ ಎಂಬಂತೆ ಚಿತ್ರಿಸಲಾಗಿದೆ. ಬೆಂಕಿಯ ಅನ್ವೇಷಣೆಯ ಕತೆಯಲ್ಲಿ ಮೊದಲ ಬಾರಿ ಬೆಂಕಿಯನ್ನು ಮುಟ್ಟಿದ ಮನುಷ್ಯನನ್ನು ಬಹಳ ಧೈರ್ಯವಂತ ಎಂಬಂತೆ, ಹಾಗೂ ಆ ಅನುಭವದಿಂದ ಪಾಠ ಕಲಿತವನನ್ನು ವಿವೇಕಿ ಎಂಬಂತೆಯೂ ಚಿತ್ರಿಸಬಹುದು.

ಸಮುದ್ರದ ಉಬ್ಬರವಿಳಿತಗಳ ಪರಿಕಲ್ಪನೆಯನ್ನು ವಿವರಿಸುವ ಕತೆಗೆ ಸಮುದ್ರ ತೀರಕ್ಕೆ ಭೇಟಿ ನೀಡುವ ಸನ್ನಿವೇಶವು ಒಂದು ಉತ್ತಮ ಸಜ್ಜಿಕೆಯಾಗುತ್ತದೆ. ಕಡಲ ತೀರದಲ್ಲಿ ಆಡುತ್ತಿರುವ ಸೂಕ್ಷ್ಮಗ್ರಾಹಿ ಮಕ್ಕಳ ಗುಂಪೊಂದು ಆ ಕತೆಯ ಪಾತ್ರಗಳಾಗಬಹುದು. ಸೂರ್ಯ ಬಾನಂಚಿನಲ್ಲಿ ಇಳಿಯುತ್ತಿದ್ದಂತೆ ತೀರದಲ್ಲಿ ಅಲೆಗಳು ಮುಂದೆ ಬರುತ್ತಿರುವುದನ್ನು ಮಕ್ಕಳು ಗಮನಿಸಬಹುದು. ನೀರು ಮೊದಲು ಒಣಗಿದ್ದ ಪ್ರದೇಶವನ್ನೆಲ್ಲ ಆಕ್ರಮಿಸಿಕೊಳ್ಳುತ್ತಿರುವುದನ್ನು ಅವರು ಗಮನಿಸಬಹುದು. ಹಿಂದೆ ಬನ್ನಿ ಎಂದು ತಂದೆತಾಯಿಯರು ಮಕ್ಕಳನ್ನು ಎಚ್ಚರಿಸುತ್ತಿರಬಹುದು. ಮರುದಿನ ಕಡಲ ನೀರು ಹಿಂದೆ ಸರಿದ ಮೇಲೆ ಮತ್ತೆ ಭೇಟಿ ನೀಡಬಹುದು. ಅಲೆಗಳು ಯಾಕೆ ಹಿಂದೆ ಸರಿದವು? ಸ್ವಲ್ಪ ಹೊತ್ತಿನ ನಂತರ ಮರಳಿ ತೀರದತ್ತ ಯಾಕೆ ಬರುತ್ತವೆ? ಎಂಬ ಪ್ರಶ್ನೆಗಳನ್ನು ಕೇಳಬಹುದು.

ಇದೇ ಸಜ್ಜಿಕೆಯನ್ನು ರಸಾಯನಶಾಸ್ತ್ರದ ತರಗತಿಯಲ್ಲಿ ಸಮುದ್ರದ ನೀರಿನಿಂದ ಉಪ್ಪನ್ನು ಹೇಗೆ ತಯಾರಿಸಲಾಗುತ್ತದೆ ಎನ್ನುವುದನ್ನು ವಿವರಿಸಲು ಬಳಸಬಹುದು; ಭೌತಶಾಸ್ತ್ರದ ತರಗತಿಯಲ್ಲಿ ಸಮುದ್ರದ ಮಟ್ಟ ಮತ್ತು ಎತ್ತರವನ್ನು ವಿವರಿಸಲು ಬಳಸಬಹುದು ಮತ್ತು ಜೀವಶಾಸ್ತ್ರದ ತರಗತಿಯಲ್ಲಿ ಸಮುದ್ರದಲ್ಲಿ ವಾಸಿಸುವ ಮೃದ್ವಂಗಿಗಳನ್ನು (crustaceans) ಪರಿಚಯಿಸಲೂ ಬಳಸಬಹುದು. ಕತೆಯಲ್ಲಿ ಹೀಗೆ ಸಂದರ್ಭಕ್ಕೆ ತಕ್ಕಂತೆ ಮಕ್ಕಳ ಗಮನಿಸುವಿಕೆ ಹಾಗೂ ಮಕ್ಕಳ ಪೋಷಕರು ಮಾಹಿತಿಯನ್ನು ಒದಗಿಸುವುದು ಅಥವಾ ಎಚ್ಚರಿಕೆಯನ್ನು ನೀಡುವುದು ಹೀಗೆ ಈ ಅಂಶಗಳು ಪುನರಾವರ್ತನೆಯಾಗ–ಬಹುದು. ಮಕ್ಕಳಿಗೆ ಅದು ಅಚ್ಚರಿಯನ್ನುಂಟು ಮಾಡುತ್ತದೆ. ಮಕ್ಕಳಿಗೆ ಪರಿಚಿತವಿರುವ ದೃಶ್ಯವನ್ನು ಸೃಷ್ಟಿಸುವ ಮೂಲಕ ಮತ್ತು ಒಂದು ಪರಿಚಿತ ಘಟನೆಯತ್ತ ಅವರ ಗಮನವನ್ನು ಸೆಳೆಯುವ ಮೂಲಕ ನಾವು ಅವರ ಕುತೂಹಲವನ್ನು ಕೆರಳಿಸುತ್ತೇವೆ.

ಹೀಗೆ ಅವರು "ಹೀಗಾಗುವುದಕ್ಕೆ ಏನೋ ಕಾರಣವಿದೆ, ಇದು ಅದರ ಹಿಂದಿರುವ ವಿಜ್ಞಾನ" – ಎಂಬ ರೀತಿಯ ವಿಚಾರಗಳನ್ನು ಮಾಡಲು ನಾವು ಅನುವು ಮಾಡಿಕೊಡುತ್ತೇವೆ. ಅದೇ ಸಂದರ್ಭವನ್ನು ಬಳಸಿಕೊಂಡು ಶಿಕ್ಷಕರು ಆ ಪರಿಕಲ್ಪನೆಗಳ ವೈಜ್ಞಾನಿಕ ವಿವರಣೆಯನ್ನು ಮಕ್ಕಳಿಗೆ ಕಲಿಸಲು ಆರಂಭಿಸಬಹುದು. ಅಧ್ಯಾಯ ಅಲ್ಲಿಗೆ ಮುಗಿಯುತ್ತದೆ!

ಈ ಕಥನವನ್ನು ವರ್ಷವಿಡೀ ಮುಂದುವರಿಸಿಕೊಂಡು ಹೋಗುವುದು ಬೋಧನೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬಹುದು. ತರಗತಿಯು ಬೇಸರಗೊಂಡಾಗ, ಅಥವಾ ಅವರ ಗಮನ ಎಲ್ಲೆಲ್ಲಿಗೋ ಹೋದಾಗ ಶಿಕ್ಷಕರು ಈ ಕತೆಯನ್ನು ಬೇರೆ ಸಜ್ಜಿಕೆಯೊಂದಿಗೆ ಮರಳಿ ಪ್ರಸ್ತಾವಿಸಿ ಮಕ್ಕಳ ಗಮನವನ್ನು ಪಾಠದತ್ತ ಸೆಳೆಯಬಹುದು.

## ಕಥನ ಸೂತ್ರಗಳು

ತರಗತಿ ನಡೆಯುತ್ತಿರುವಾಗ ಶಿಕ್ಷಕರು ತಕ್ಷಣಕ್ಕೆ ಕತೆಗಳನ್ನು ಸೃಜಿಸಲು ಅನುಕೂಲವಾಗುವಂತೆ ಕೆಲವು ತಂತ್ರಗಳನ್ನು ಕೆಳಗೆ ನೀಡಲಾಗಿದೆ. ಅದರ ಜೊತೆಗೆ ಹೆಚ್ಚಿನ ಕತೆಗಳು ಬೇಕಾದರೆ ಈ ಲೇಖನದ ಕೊನೆಯಲ್ಲಿ ಕೆಲವು ಸಂಪನ್ಮೂಲಗಳನ್ನೂ ನೀಡಲಾಗಿದೆ.

1. ಕತೆಗೆ ಒಂದು ಮುಖ್ಯ ಪಾತ್ರ ಬೇಕಾಗುತ್ತದೆ, ಕಥಾನಾಯಕನ ರೀತಿಯಲ್ಲಿ. ಅದರ ಜೊತೆಗೆ ಅಗತ್ಯವಿದ್ದರೆ ಕೆಲವು ಪೋಷಕ ಪಾತ್ರಗಳನ್ನೂ ಸೇರಿಸಿಕೊಳ್ಳಬಹುದು. ಆದರೆ ಎರಡಕ್ಕಿಂತ ಹೆಚ್ಚಿನ ಪಾತ್ರಗಳು ಬೇಡ.
2. ಕತೆಯ ಆದಿ, ಅಂತ್ಯ ಮತ್ತು ಮಧ್ಯಭಾಗಗಳ ರೂಪರೇಖೆಯನ್ನು ನಿರ್ಧರಿಸಿಕೊಳ್ಳಿರಿ.

ಅ. ಆದಿಯು ಈ ಕೆಳಗಿನ ಎರಡರಲ್ಲಿ ಯಾವುದಾದರೂ ಆಗಬಹುದು.

1. ನಾಯಕ ಎದುರಿಸುವ ಒಂದು ಸಮಸ್ಯೆ.
2. ನಾಯಕ ಒಂದು ವಿಚಿತ್ರವೆನ್ನಿಸಿದ, ಆದರೆ ಸ್ವಾಭಾವಿಕವಾಗಿ ಘಟಿಸಿದ ವಿದ್ಯಮಾನವೊಂದನ್ನು ನೋಡುತ್ತಾನೆ/ಳೆ. ನಂತರ ಅದು ಏನಿರಬಹುದು ಎಂದು ಅಚ್ಚರಿ ಪಡುತ್ತಾನೆ/ಳೆ.

ಬ. ಮಧ್ಯಭಾಗವು ಈ ಎರಡರಲ್ಲಿ ಯಾವುದಾದರೂ ಒಂದು ಆಗಬಹುದು.

1. ನಾಯಕ ಆ ಸಮಸ್ಯೆಯನ್ನು ಪರಿಹರಿಸಲು ನೋಡಬಹುದು.
2. ಆ ವಿಚಿತ್ರ ವಿದ್ಯಮಾನಕ್ಕೆ ಇರಬಹುದಾದ ವಿವರಣೆಗಳನ್ನು ಕುರಿತು ನಾಯಕ ಯೋಚಿಸಬಹುದು. ಜೊತೆಗೆ, ಅದನ್ನು ಕುರಿತು ಪ್ರಯೋಗಗಳನ್ನು ಮಾಡಬಹುದು, ನಂತರ ಅವನ ವಿಚಾರಗಳನ್ನು ಇನ್ನಷ್ಟು ಬೆಳೆಸಬಹುದು.

ಕ. ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ಕೊನೆಯಾಗಬಹುದು. ಪರಿಹಾರವು ಮೊದಲಿದ್ದ ಸಮಸ್ಯೆಗೇ ಸಿಗಬಹುದು, ಅಥವಾ ಭಿನ್ನವಾದ, ಹೊಸತೇ ಆದ ಇನ್ನೊಂದು ಉತ್ಸುಕ ರೀತಿಯಲ್ಲಿ ಪರಿಹಾರ ಸಿಗಬಹುದು. ಸಾರಾಂಶ ರೂಪದಲ್ಲಿ ಹೇಳುವುದಾದರೆ, ಕತೆ ಹೇಳುವ ವಿಧಾನವು ವಿಜ್ಞಾನ ತರಗತಿಯ ಬೋಧನೆಗೆ ಈ ಕೆಳಗಿನ ರೀತಿಯಲ್ಲಿ ಲಾಭವನ್ನುಂಟುಮಾಡುತ್ತದೆ:

- ಕಲಿತದ್ದನ್ನು ನೆನಪಿಟ್ಟುಕೊಳ್ಳಲು ಮತ್ತು ಮರುನೆನಪಿಸಿ–ಕೊಳ್ಳಲು ಸಹಾಯ ಮಾಡುತ್ತದೆ.
- ಸತ್ಯ ಸಂಗತಿಗಳನ್ನು ಇನ್ನಷ್ಟು ಅರ್ಥಪೂರ್ಣವಾಗಿ ಬದುಕಿಗೆ ಅನ್ವಯಿಸಿಕೊಳ್ಳಲು ಸಹಾಯ ಮಾಡುತ್ತದೆ.
- ಸಿದ್ಧಾಂತ ಮತ್ತು ವಾಸ್ತವದ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ.
- ಕಲ್ಪನೆಗೆ ಗ್ರಾಸವಾಗುತ್ತದೆ ಮತ್ತು ಸ್ವಂತದ ವಿಚಾರಶಕ್ತಿಗೆ ಪ್ರೋತ್ಸಾಹವನ್ನು ಒದಗಿಸುತ್ತದೆ.
- ಪ್ರಾಯಃ, ಭವಿಷ್ಯದ ವಿಜ್ಞಾನಿಗಳ ಸೃಷ್ಟಿಗೆ ಕಿಡಿಯನ್ನು ಹೊತ್ತಿಸುತ್ತದೆ!

ತರಗತಿಯಲ್ಲಿ ನಾವು ಕಲಿಸುವ ಪ್ರತೀ ಪರಿಕಲ್ಪನೆಗೂ ಒಂದೊಂದು ಕತೆಯನ್ನು ಹೇಳುವುದು ಪ್ರಾಯೋಗಿಕವಾಗಿ ಆಗದ ಮಾತು. ಅಲ್ಲಿ ಸಂತುಲನವನ್ನು ಕಾಯ್ದುಕೊಳ್ಳುವುದು ಅವಶ್ಯ. ಬಹುಶಃ ಪಠ್ಯಪುಸ್ತಕದ ಒಂದು ಮುಖ್ಯವಾದ ಅಧ್ಯಾಯವನ್ನು ಬೇಕಾದರೆ ಕತೆಯ ಮೂಲಕ ಆರಂಭಿಸಬಹುದು, ಒಮ್ಮೆ ಮಕ್ಕಳ ಗಮನ ಪಾಠದ ಮೇಲೆ ಕೇಂದ್ರಿತವಾಯಿತು ಎನ್ನಿಸಿದರೆ, ಅದೇ ಸಂದರ್ಭದ ಲಾಭ ಪಡೆದು ನಂತರದ ಪರಿಕಲ್ಪನೆಗಳನ್ನು ಕಲಿಸುತ್ತ ಹೋಗಬಹುದು. ಕೆಲವು ತರಗತಿಗಳ ನಂತರ ತರಗತಿಯನ್ನು ಪುನಃಚೇತನ–ಗೊಳಿಸಲು ಮತ್ತೊಂದು ಕತೆಯನ್ನು ಪರಿಚಯಿಸ–ಬಹುದು. ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಭಿನ್ನ ಕಥನಗಳನ್ನು ಸೇರಿಸಿ ಅದೇ ಕತೆಯನ್ನೇ ಇನ್ನೂ ಹಲವು ಬಗೆಯ ಪರಿಕಲ್ಪನೆಗಳನ್ನು ಕಲಿಸಲು ಬಳಸಬಹುದು.


**ಪರಾಮರ್ಶನಗಳು:**

*A Brief History of Nearly Everything* by Bill Bryson

*The Story of Science* series by Joy Hakim

*The Disappearing Spoon* by Sam Kean

*Teaching Science With Stories*. UTA Online.
https://academicpartnerships.uta.edu/articles/education/teaching-science-with-stories.aspx

*The Story Behind the Science*. How Science Works.
https://www.storybehindthescience.org/how-science-works


i ಲೇಖಕರು The Spark That Changed Everything ನಲ್ಲಿ ಇವುಗಳನ್ನು ಇನ್ನಷ್ಟು ಶೋಧಿಸಿದ್ದಾರೆ.




**ವೀಣಾ ಪ್ರಸಾದ್** ಅವರು CrowdANALYTIX ಸಂಸ್ಥೆಯಲ್ಲಿ ಕಂಟೆಂಟ್ ಮತ್ತು ಕಮ್ಯುನಿಕೇಷನ್ಸ್‌ನ ನಿರ್ದೇಶಕರಾಗಿದ್ದಾರೆ. ಮೂಲತಃ ವಿಜ್ಞಾನ, ತಂತ್ರಜ್ಞಾನ, ಗಣಿತ, ಇಂಜಿನಿಯರಿಂಗ್ ಕ್ಷೇತ್ರದ ಬರೆಹಗಾರರಾಗಿರುವ ವೀಣಾ ಪ್ರಸಾದ್ ಅವರ ಆಸಕ್ತಿ, ಕಾದಂಬರಿ, ಜೀವನಕಥನಗಳು ಮತ್ತು ಕೆಲವೊಮ್ಮೆ ಗೀತರಚನೆ ಕ್ಷೇತ್ರಕ್ಕೂ ಹರಡಿಕೊಂಡಿದೆ. ಸಂಕೀರ್ಣವಾದ ವಿಷಯಗಳ ಬರೆವಣಿಗೆಯಲ್ಲಿ ವೀಣಾ ಅವರಿಗೆ ಆಸಕ್ತಿಯಿದ್ದು, ಅವನ್ನು ಅವರು ಸರಳವಾದ ಹೃದ್ಯ ಗದ್ಯದಲ್ಲಿ ಮಂಡಿಸುತ್ತಾರೆ. The Spark That Changed Everything ಎನ್ನುವುದು ಇತಿಹಾಸ ಮತ್ತು ವಿಜ್ಞಾನದ ಜೀವಂತಿಕೆ ಉಳಿಸುವಂತೆ ಬರೆದ ವಾಸ್ತವ ಮತ್ತು ಕಾಲ್ಪನಿಕತೆಯ ಸಂಯೋಜಿತ ಕೃತಿಯಾಗಿದೆ. ವೀಣಾ ಅವರು ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್‌ನಲ್ಲಿ ಸ್ನಾತಕ ಪದವಿ ಮತ್ತು ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರನ್ನು veena.rp@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಪ್ರಜ್ಞಾ ಎಲ್ ಎಸ್** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

ಈ ಹಿಂದಿನ ಲರ್ನಿಂಗ್ ಕರ್ವ್ ಸಂಚಿಕೆಗಳು ಈ ಕೆಳಗಿನ ಲಿಂಕ್‌ನಲ್ಲಿ ಲಭ್ಯವಿದೆ
https://azimpremjiuniversity.edu.in/learning-curve

ಹಿಂದಿ ಮತ್ತು ಕನ್ನಡ ಸಂಚಿಕೆಗಳಿಗಾಗಿ ಈ ಕೆಳಗಿನ ಲಿಂಕ್ ನೋಡಿರಿ
https://anuvadasampada.azimpremjiuniversity.edu.in/

ಲರ್ನಿಂಗ್ ಕರ್ವ್ ಚಂದಾದಾರರಾಗಲು ಈ ಕೆಳಗಿನ ಲಿಂಕ್‌ನಲ್ಲಿರುವ ಅರ್ಜಿಯನ್ನು ತುಂಬಿ
https://bit.ly/3SS3kNG

ಸಲಹೆ, ಅಭಿಪ್ರಾಯ ಹಾಗೂ ನಿಮ್ಮ ಅನುಭವ ಹಂಚಿಕೊಳ್ಳಲು, ನಮಗೆ ಬರೆಯಿರಿ
learningcurve@apu.edu.in

**ಮುದ್ರಣ ಮತ್ತು ಪ್ರಕಟನೆ: ಮನೋಜ್ ಪಿ, ಅಜೀಂ ಪ್ರೇಮ್‌ಜಿ ಫೌಂಡೇಷನ್ ಫಾರ್ ಡೆವಲಪ್‌ಮೆಂಟ್ ಪರವಾಗಿ**
**ಮುದ್ರಣ**: ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು – 560018. ಕರ್ನಾಟಕ
**ಪ್ರಕಟಣೆ:** ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ, ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125

**ಪ್ರೇಮಾ ರಘುನಾಥ್**, ಮುಖ್ಯ ಸಂಪಾದಕಿ, ಲರ್ನಿಂಗ್ ಕರ್ವ್

Azim Premji University

# Anuvada Sampada

# ಅನುವಾದ ಸಂಪದ

## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಪನ್ಮೂಲಗಳ ಸಂಗ್ರಹ

ಇಂಗ್ಲಿಷ್‌ನಿಂದ ಕನ್ನಡ ಮತ್ತು ಹಿಂದಿ ಭಾಷೆಗಳಿಗೆ ಅನುವಾದಗೊಂಡಿರುವ 2000ಕ್ಕೂ ಹೆಚ್ಚು ಉನ್ನತ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಮುಕ್ತ ಮತ್ತು ವಿನೂತನವಾದ ಆನ್‌ಲೈನ್ ಸಂಪದ. ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಮಾನವಿಕ, ಶಿಕ್ಷಣ ಮತ್ತು ಭಾಷಾ ವಿಷಯಗಳ ಪರಿಕಲ್ಪನೆಗಳು ಮತ್ತು ಚಿಂತನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪಾಲಿನ ಕಣಜ.






ಕನ್ನಡ ಮತ್ತು ಹಿಂದಿಯಲ್ಲಿ ಉಚಿತವಾಗಿ ಹಾಗೂ ಮುಕ್ತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ವೆಬ್‌ಸೈಟ್.

- ಪುಸ್ತಕಗಳು ಮತ್ತು ಪುಸ್ತಕದ ಅಧ್ಯಾಯಗಳು
- ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು ಮತ್ತು ಲೇಖನಗಳು
- ಸಂಪಾದಿತ ವಾಚಿಕೆಗಳು ಮತ್ತು ವಿಚಾರಗೋಷ್ಠಿಗಳ ಬರಹಗಳು

**ಅನುವಾದ ಸಂಪದಕ್ಕೆ ಭೇಟಿ ಕೊಡಿ:**

**https://anuvadasampada.azimpremjiuniversity.edu.in/**

Faculty Positions

Azim Premji University

# Understanding children and their development is critical to Education Practice.



APPLY NOW

We invite applications for faculty positions in **Child Development & Learning** for our **M.A. in Education** programme

Azim Premji University, Bhopal

**To know more, visit** https://azimpremjiuniversity.edu.in/jobs/faculty-positions-in-education

# Azim Premji University Publications

Download Free




Visit: https://azimpremjiuniversity.edu.in/publications

ಮುಂದಿನ ಸಂಚಿಕೆಯಲ್ಲಿ
ನಿರೀಕ್ಷಿಸಿ

# ಕಲಿಕೆಯನ್ನು ಬಲಪಡಿಸುವುದು

**ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ**
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು–562125

ದೂರವಾಣಿ: 080-66144900
www.azimpremjiuniversity.edu.in

ಫೇಸ್‌ಬುಕ್: /azimpremjiuniversity
ಇನ್‌ಸ್ಟಾಗ್ರಾಂ: @azimpremjiuniv
ಟ್ವಿಟರ್: @azimpremjiuniv